ಮಂಗಳೂರು
ಗುರುವಾರ, 21 ಮೇ 2026
ಸಂಪುಟ 48, ಸಂಚಿಕೆ 63 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

₹19 ಕೋಟಿ ಮೌಲ್ಯದ ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ

• ಪುಟ ೨

ಇಟಲಿ: ಸನಾತನ ಧರ್ಮ ಸಂಘಕ್ಕೆ ಮಾನ್ಯತೆ | ೦೨

ಸಿಲ್ವರ್‌ಲೈನ್‌ಗೆ ಕೇರಳ ತಡೆ | ೦೨

ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಉಭಯ ರಾಷ್ಟ್ರಗಳ ಮೈತ್ರಿ

ಭಾರತ-ಇಟಲಿ ಬಲಿಷ್ಠ ಬಂಧ



- ವೆಲ್ಕಮ್ ಟು ರೋಮ್ ಮೈ ಫ್ರೆಂಡ್ ಎಂದು ಸ್ವಾಗತ ಕೋರಿದ ಮೆಲೋನಿ
- ಮೆಲೋನಿಗೆ ಮೆಲೋಡಿ ಟಾಫಿಗಳ ಪ್ಯಾಕೆಟ್ ಗಿಫ್ಟ್ ಕೊಟ್ಟ ಮೋದಿ
- ರೋಮ್‌ಗೆ ಆಗಮಿಸಿದ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ

ರೋಮ್: ಪ್ರಧಾನಿ ನರೇಂದ್ರ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆಯ ಬೆನ್ನಲ್ಲೇ ಭಾರತ ಮತ್ತು ಇಟಲಿ ದೇಶಗಳು ತಮ್ಮ ರಾಜತಾಂತ್ರಿಕ ಬಾಂಧವ್ಯವನ್ನು ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಕೊಂಡೊಯ್ಯಲು ನಿರ್ಧರಿಸಿವೆ.



ತಮ್ಮ ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ ರೋಮ್‌ಗೆ ಆಗಮಿಸಿದ ಪ್ರಧಾನಿ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ ಸಿಕ್ಕಿತು. ಇದರ ಬೆನ್ನಲ್ಲೇ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ವ್ಯಾಪಾರ, ಹೂಡಿಕೆ ಹಾಗೂ ನೂತನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸಲು ಉಭಯ ನಾಯಕರು ಒಪ್ಪಂದ ಮಾಡಿಕೊಂಡರು. ➡ಪುಟ ೪

ಸಿಎಂ ಸಿದ್ದರಾಮಯ್ಯ ಮಾಹಿತಿ

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು



ಬೆಂಗಳೂರು: ಜೂ.1ರಂದು ಶಿವಮೊಗ್ಗದಲ್ಲಿ ಕೆಪಿಎಸ್ ಯೋಜನೆಗೆ ಅಧಿಕೃತ ಚಾಲನೆ ನೀಡುತ್ತಿದ್ದು, ಒಂದು ಕೆಪಿಎಸ್‌ನಲ್ಲಿ ಸುಮಾರು 1,200 ಮಕ್ಕಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜೂ.1ರಂದು ಶಿವಮೊಗ್ಗದಲ್ಲಿ ಚಾಲನೆ

ಗೃಹ ಕಚೇರಿ ಕೃಷ್ಣಾದಲ್ಲಿ ಬುಧವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕೆಪಿಎಸ್ ಶಾಲೆಯಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಒಂದೇ ಆವರಣದಲ್ಲಿ ಶಿಕ್ಷಣ ದೊರೆಯಲಿದೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ 800 ಕೆಪಿಎಸ್‌ಗಳು ಸಂಪೂರ್ಣವಾಗಿ ಸಿದ್ಧವಾಗಬೇಕು ಎಂದು ಸಿಎಂ ಸೂಚಿಸಿದರು.

ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಯೋಜನೆಯನ್ನು ವೇಗವಾಗಿ ಜಾರಿಗೊಳಿಸಬೇಕು. ➡ಪುಟ ೪

ಕಲ್ಯಾಣ ಕರ್ನಾಟಕದಲ್ಲಿ ಉತ್ತಮ ಸಾಧನೆ

ರಾಜ್ಯಾದ್ಯಂತ ಪೋಷಕರು, ಶಿಕ್ಷಕರ ಸಭೆ ನಡೆಸುವುದು, ಅತಿಥಿ ಶಿಕ್ಷಕರ ನೇಮಕ, ಪಠ್ಯ ಆಧಾರಿತ ಅಧ್ಯಯನ ಕ್ರಮ ಜಾರಿ, ಪೂರ್ವಭಾವಿ ಪರೀಕ್ಷೆ ಆಯೋಜನೆ, ಶಿಕ್ಷಕರಿಗೆ ನಿರಂತರ ತರಬೇತಿ ಉತ್ತಮ ಫಲಿತಾಂಶಕ್ಕೆ ಕಾರಣವಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಪರಿಣಾಮ ಉತ್ತಮ ಸಾಧನೆ ಸಾಧ್ಯವಾಗಿದೆ ಎಂದು ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಮತ್ತೆ ಗಡುವು ಮುಂದೂಡಿಕೆ ಇಲ್ಲ: ಸುಪ್ರೀಂ

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

- ಜಿಬಿಎ ಪಂಚಪಾಲಿಕೆ ಚುನಾವಣೆಗೆ ಆ.31ರವರೆಗೆ ಗಡುವು ವಿಸ್ತರಣೆ
- ಈ ಹಿಂದೆ ಜೂ.30ರವರೆಗೆ ಸಮಯ ನೀಡಿದ್ದ ಸುಪ್ರೀಂಕೋರ್ಟ್
- ಸರ್ಕಾರ, ಚುನಾವಣಾ ಆಯೋಗ ಮನವಿ ಹಿನ್ನೆಲೆ ಸಮಯಾವಕಾಶ
- ಅಂತಿಮ ಗಡುವು ಎಂದು ಎಚ್ಚರಿಸಿದ ಸರ್ವೋಚ್ಚ ನ್ಯಾಯಾಲಯ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ಪಾಲಿಕೆಗಳ ಚುನಾವಣೆಯನ್ನು ಆಗಸ್ಟ್ 31ರೊಳಗೆ ನಡೆಸುವಂತೆ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದು ಕೊನೆಯ ಅವಕಾಶ ಎಂದು ಖಡಕ್ ಸೂಚನೆ ನೀಡಿರುವ ಸುಪ್ರೀಂ ಕೋರ್ಟ್, ಚುನಾವಣೆ ಮುಂದೂಡುವ ಸಂಬಂಧ ಸಲ್ಲಿಕೆಯಾಗಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ.



ಚುನಾವಣೆ ಮುಂದೂಡಲು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ಬುಧವಾರ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರ ತ್ರಿಸದಸ್ಯ ಪೀಠ ನಡೆಸಿತು. ಈ ಪ್ರಕರಣ ವನ್ನು ನೋಡಿದರೆ ರಾಜ್ಯ ಸರ್ಕಾರವು ಚುನಾವಣೆ ವಿಳಂಬಗೊಳಿಸಲು ಯತ್ನಿಸುತ್ತಿರುವಂತೆ ಕಾಣುತ್ತಿದೆ ಎಂದ ಸರ್ವೋಚ್ಚ ನ್ಯಾಯಾಲಯ, ಎಸ್‌ಐಆರ್, ಜನಗಣತಿ ಹಿನ್ನೆಲೆ ಆ.31 ವರೆಗೆ ಸಮಯ ವಿಸ್ತರಿಸಲಾಗಿದೆ ಎಂದು ಹೇಳಿದೆ. ➡ಪುಟ ೪

ಇರಾನ್ ವಿರುದ್ಧದ ಯುದ್ಧದಲ್ಲಿ ಭಾರೀ ನಷ್ಟ

ಯುಎಸ್ 42 ಯುದ್ಧ ವಿಮಾನಗಳು ನಾಶ!

ವಾಷಿಂಗ್ಟನ್ ಡಿಸಿ: ಇರಾನ್‌ವಿರುದ್ಧದ ಸಂಘರ್ಷದಲ್ಲಿ 42 ಯುದ್ಧ ವಿಮಾನ ಸೇರಿ ಯುನೈಟೆಡ್ ಸ್ಟೇಟ್ಸ್‌ಗೆ ಭಾರೀ ನಷ್ಟ ಉಂಟಾಗಿದೆ ಎಂಬ ಮಾಹಿತಿ ಅಮೆರಿಕ ಕಾಂಗ್ರೆಸ್ ವರದಿಯಿಂದ ಬಹಿರಂಗವಾಗಿದೆ. ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಸುಮಾರು 40 ದಿನ ಜಂಟಿ ದಾಳಿ ನಡೆಸಿದ ವೇಳೆ ಒಟ್ಟು 42 ಯುದ್ಧ ವಿಮಾನಗಳು ಹಾಗೂ ಡ್ರೋನ್‌ಗಳು ನಾಶವಾಗಿವೆ ಅಥವಾ ಗಂಭೀರ ಹಾನಿಗೊಳಗಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಷ್ಟಕ್ಕೊಳಗಾದ ವಿಮಾನಗಳಲ್ಲಿ 4 ಎಫ್-15ಇ ಸ್ಟ್ರೈಕ್ ಈಗಲ್ ಯುದ್ಧ ವಿಮಾನಗಳು, 1 ಎಫ್-35ಎ ಲೈಟ್ನಿಂಗ್-II, ಒಂದು ಎ-10 ಥಂಡರ್‌ಬೋಲ್ಟ್-II. ➡ಪುಟ ೪



ಮೇ 23ಕ್ಕೆ ಬೆಂಗಳೂರಿಗೆ ನಿತಿನ್

ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ. ಅವರು ಮೇ 23ರಂದು ರಾತ್ರಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. • ವಿವರ ಪುಟ ೫





ರೋಮ್‌ಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಜತೆ ಇಟಲಿ ಪ್ರಧಾನಿ ಮೆಲೋನಿ.

ಇಟಲಿ ಸಂಸತ್ತಿನಲ್ಲಿ ಐತಿಹಾಸಿಕ ವಿದ್ಯಮಾನ

ಸನಾತನ ಧರ್ಮ ಸಂಘಕ್ಕೆ ಮಾನ್ಯತೆ

ರೋಮ್: ಪ್ರಧಾನಿ ನರೇಂದ್ರ ಮೋದಿ ತಮ್ಮ ಪಂಚ ರಾಷ್ಟ್ರ ಪ್ರವಾಸದ ಮುಕ್ತಾಯ ಹಂತದಲ್ಲಿ ರೋಮ್‌ಗೆ ಬಂದಿಳಿಯುತ್ತಿದ್ದಂತೆ, ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ (ಇಟಲಿಯ ಹಿಂದು ಸಂಘಟನೆ) ವಿಧ್ಯುಕ್ತವಾಗಿ ಅಧಿಕೃತ ಮಾನ್ಯತೆ ನೀಡಿದ ಐತಿಹಾಸಿಕ ವಿದ್ಯಮಾನ ಘಟಿಸಿದೆ.

ಸನಾತನ ಧರ್ಮ ಸಂಘವು ಇಟಲಿಯಲ್ಲಿ ವಾಸವಿರುವ ಎಲ್ಲಾ ಹಿಂದುಗಳನ್ನು ಪ್ರತಿನಿಧಿಸುತ್ತದೆ. ಇಟಲಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹಿಂದು ಸಹಿತ ಭಾರತ ಸಂಜಾತ ಸಮುದಾಯಗಳ ಪಾಲಿಗೆ ಇದೊಂದು ಮಹತ್ವದ ಶಾಸಕಾಂಗ ವಿಜಯವಾಗಿದೆ. ಸನಾತನ ಧರ್ಮ ಸಂಘ ಪರ ಇಟಲಿ ಸಂಸತ್ತಿನಲ್ಲಾದ ಘೋಷಣೆಯು, ಚಾರಿತ್ರಿಕವಾಗಿ ಕ್ಯಾಥೋಲಿಕ್ ಚರ್ಚ್ ಅಧಿಪತ್ಯದಲ್ಲಿರುವ ರಾಷ್ಟ್ರದಲ್ಲಿ ಪ್ರಾಚೀನ ಪೌರ್ವಾತ್ಯ ಆಧ್ಯಾತ್ಮಿಕ ಪರಂಪರೆಗೆ ರಚನಾತ್ಮಕವಾದ ಕಾನೂನು ಸುರಕ್ಷೆಗಳ ಒದಗಿಸುವುದು, ಸಂಘವನ್ನು ಆಡಳಿತಾತ್ಮಕವಾಗಿ ಸಾಂಸ್ಥೀಕರಿಸುವುದು ಮತ್ತು ಸಂಘಕ್ಕೆ ಇಟಲಿ ಸರ್ಕಾರದ ಮಾನ್ಯತೆ ನೀಡಲಿದೆ.

ಮೋದಿ ಭೇಟಿ ವೇಳೆ ಚಾರಿತ್ರಿಕ ವಿದ್ಯಮಾನ: ಇಟಲಿಯ ಭಾರತೀಯ ಸಮುದಾಯವು ಅತ್ಯಂತ ಸಂಭ್ರಮೋಲ್ಲಾಸದೊಂದಿಗೆ ಮತ್ತು ಅತಿ ವೈಭವೋಪೇತವಾಗಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರೋಮ್‌ಗೆ ಸ್ವಾಗತಿಸುತ್ತಿದ್ದ ಘಳಿಗೆಯಲ್ಲೇ ಮಂಗಳವಾರ ಸೂರ್ಯಾಸ್ತಕ್ಕೆ ಸ್ವಲ್ಪ ಮುನ್ನ ಈ ಐತಿಹಾಸಿಕ ವಿದ್ಯಮಾನ ಘಟಿಸಿದೆ. ಇಟಲಿಯಲ್ಲಿ ಸನಾತನ ಧರ್ಮ ಸಂಘವನ್ನು ಪ್ರತಿನಿಧಿಸುತ್ತಿರುವ ಖ್ಯಾತ ಆಧ್ಯಾತ್ಮಿಕ ಗುರುಗಳಾದ ಸ್ವಾಮಿ ಶುದ್ಧಾನಂದ ಗಿರಿ ಅವರು, ಪ್ರಧಾನಿ ಮೋದಿ ತಂಗಿದ ಹೋಟೆಲ್‌ಗೆ ತೆರಳಿ, ಇಟಲಿ ಸಂಸತ್ತಿನ ಮಹತ್ವದ ಘೋಷಣೆಯನ್ನು ಪ್ರಧಾನಿಗೆ ಅರುಹಿ, ಸನಾತನ ಸಮುದಾಯದ ತುಂಬು ಕೃತಜ್ಞತೆಯನ್ನು ಅವರಿಗೆ ಸಲ್ಲಿಸಿದರು.

ಮೋದಿ ಪ್ರೋತ್ಸಾಹಕ್ಕೆ ಆಭಾರಿ: ದ್ವಿತೀಯ ಬಾರಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಸಂವಾದ ನಡೆಸಿದ್ದೇನೆ, ತುಂಬು ಖುಷಿಯಾಯಿತು.

ವೇದಮಂತ್ರ ಘೋಷ, ರಾಗತಾಳ ಮಧ್ಯೆ ಸ್ವಾಗತ

ಪ್ರಧಾನಿ ಮೋದಿ ಅವರನ್ನು ಮಾಮೂಲಾಗಿ ಅಧಿಕೃತವಾಗಿ ಸ್ವಾಗತಿಸುವ ಬದಲು ವೇದಮಂತ್ರ ಪಠಣ, ರಾಗ-ತಾಳಗಳ ಮುಖೇನ ಭಾರತೀಯ ಸಂಪ್ರದಾಯದಲ್ಲೇ ಸ್ವಾಗತಿಸಿದ್ದು, ಭಾರತ-ಇಟಲಿ ನಡುವಣ ಬಾಂಧವ್ಯದ ಗಹನತೆಯನ್ನು ಪ್ರತಿಫಲಿಸಿತು. ಭಾರತದ ಸಾಂಸ್ಕೃತಿಕ ಪರಂಪರೆಗಳು ಇಟಲಿ ಮೇಲೆ ಪರಿಣಾಮ ಬೀರಿರುವುದು, ತನ್ಮೂಲಕ ಉಭಯ ರಾಷ್ಟ್ರಗಳ ನಡುವಣ ಕಲಾತ್ಮಕ ವಿನಿಮಯಗಳನ್ನು ಸಾಂಕೇತಿಸಿದವು. ಇಟಲಿಯ ಶಾಸ್ತ್ರೀಯ ಸಂಗೀತ ಕಲಾವಿದರ ತಂಡವೊಂದು ಭಾರತದ ಹಸಿದ್ದ ರಾಗಕ್ಕೆ ಅನುಗುಣವಾಗಿ ಪಾಶ್ಚಿಮಾತ್ಯ ಸಂಗೀತವಾದ್ಯ ನುಡಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು ಮತ್ತು ಸಮಸ್ತರ ಮನಸೂರೆಗೊಂಡಿತು.

ಈ ಹಿಂದೆ 2021ರಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತ್ತು ಎಂದು ಸ್ವಾಮಿನಿ ಶುದ್ಧಾನಂದ ಗಿರಿ ಸುದ್ದಿಗಾರರಲ್ಲಿ ಸಂತಸ ಹಂಚಿಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ನಮ್ಮ ಆಧ್ಯಾತ್ಮಿಕ ಮಿಷನ್‌ಗೆ ನಿರಂತರವಾಗಿ ಪ್ರೋತ್ಸಾಹವಿತ್ತು ಪೋಷಿಸುತ್ತಿದ್ದಾರೆ. ಇದೀಗ ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ ಅಧಿಕೃತ ಧರ್ಮದ ಮಾನ್ಯತೆ ನೀಡಿದೆ ಎಂದವರು ಆನಂದ ವ್ಯಕ್ತಪಡಿಸಿದರು.

ರೋಮ್‌ನಲ್ಲಿ ಕಾಶಿಯ ಝಲಕ್: ಸುಮಾರು ನಾಲ್ಕು ದಶಕಗಳಿಂದ ವೇದಿಕ್ ಸಂಸ್ಕೃತಿ ಅಥವಾ ವೇದಾಭ್ಯಾಸದಲ್ಲಿ ನಿರತ ಚಿತ್ರಕಲಾವಿದ ಜಿಯಾಂಪೌಲೊ ತೊಮಸ್ಸೆಟ್ಟಿ ಅವರು ಸ್ವಯಂ ಪೈಂಟ್ ಮಾಡಿದ, ವಾರಾಣಸಿಯ ಪ್ರಸಿದ್ಧ ಆಧ್ಯಾತ್ಮಿಕ ಘಾಟ್‌ಗಳ ಪೈಂಟಿಂಗ್‌ನ್ನು ಮೋದಿ ಅವರಿಗೆ ಸಮರ್ಪಿಸಿದರು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಮ್ಮ ದಕ್ಷಿಣ ಕೊರಿಯಾದ ಸಹವರ್ತಿ ಅಹ್ನ್ ಗ್ಯು-ಬ್ಯಾಕ್ ಅವರೊಂದಿಗೆ ಉನ್ನತ ಮಟ್ಟದ ಮಾತುಕತೆ ನಡೆಸಲು ಸಿಯೋಲ್‌ಗೆ ಭೇಟಿ ನೀಡಿದ್ದು, ಇತ್ತೀಚಿನ ಪ್ರಮುಖ ಬೆಳವಣಿಗೆಗಳೊಂದಿಗೆ ಉಭಯ ದೇಶಗಳ ನಡುವಿನ ಕಾರ್ಯತಂತ್ರದ ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದ್ದಾರೆ.

ಸುದ್ದಿ ಸಮಗ್ರ

ಭಾರತ-ದ.ಕೊರಿಯಾ ರಕ್ಷಣಾ ಸಹಕಾರ ವೃದ್ಧಿ

ತನ್ನ ಸಹವರ್ತಿ ಅಹ್ನ್ ಗ್ಯು-ಬ್ಯಾಕ್ ಜತೆ ರಾಜನಾಥ್ ದ್ವಿಪಕ್ಷೀಯ ಮಾತುಕತೆ

ರಕ್ಷಣಾ ಕಾರ್ಯಕ್ರಮಗಳು

ಉಭಯ ದೇಶಗಳ ಪ್ರಸ್ತುತ ರಕ್ಷಣಾ ಸಹಕಾರದಲ್ಲಿ ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಬರುವ ಕೆ9 ವಜ್ರ-ಟಿ ಫಿರಂಗಿ ಕಾರ್ಯಕ್ರಮ ಅತ್ಯಂತ ಪ್ರಮುಖ ಕೇಂದ್ರಬಿಂದುವಾಗಿದೆ. ಲಾರ್ಸೆನ್ ಆ್ಯಂಡ್ ಟೂಬ್ರೊ(ಎಲ್ ಆ್ಯಂಡ್ ಟಿ) ಸಂಸ್ಥೆಯಿಂದ ಭಾರತದಲ್ಲಿ ಉತ್ಪಾದನೆಗೊಳ್ಳುವ ಈ ಕೆ9 ವಜ್ರವನ್ನು, ದಕ್ಷಿಣ ಕೊರಿಯಾದ ಹನ್ವಾ ಏರೋಸ್ಪೇಸ್ ಸಂಸ್ಥೆ ತನ್ನ ಕೆ9 ಥಂಡರ್ ಪ್ಲಾಟ್‌ಫಾರ್ಮ್ ಆಧಾರದ ಮೇಲೆ ಅಭಿವೃದ್ಧಿಪಡಿಸಿದೆ.ಆರಂಭದಲ್ಲಿ ಈ ಫಿರಂಗಿಯ ಶೇ.50 ರಷ್ಟು ಬಿಡಿಭಾಗಗಳನ್ನು ಭಾರತದಲ್ಲೇ ತಯಾರಿಸಲಾಗುತ್ತಿತ್ತು, ಪ್ರಸ್ತುತ ಇದು ಶೇ.60ಕ್ಕೆ ಏರಿಕೆಯಾಗಿದೆ. ಭಾರತ ಮೊದಲು 2017ರಲ್ಲಿ 4,500 ಕೋಟಿ ರೂ. ವೆಚ್ಚದಲ್ಲಿ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿತ್ತು. ಇವುಗಳನ್ನು ಮರುಭೂಮಿ ಪ್ರದೇಶಕ್ಕಾಗಿ ವಿನ್ಯಾಸಗೊಳಿಸಲಾಗಿದ್ದರೂ, ಭಾರತ-ಚೀನಾ ಗಡಿ ಬಿಕ್ಕಟ್ಟಿನ ಸಂದರ್ಭದಲ್ಲಿ ಲಡಾಖ್‌ನಂತಹ ಎತ್ತರದ ಪ್ರದೇಶಗಳಲ್ಲಿ ಯಶಸ್ವಿಯಾಗಿ ನಿಯೋಜಿಸಲಾಯಿತು. ಈ ಯಶಸ್ಸಿನ ನಂತರ, ಭಾರತ, 7,628.7 ಕೋಟಿ ರೂ. ವೆಚ್ಚದಲ್ಲಿ ಮತ್ತೆ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿದ್ದು, ಪ್ರಸ್ತುತ ಉಭಯ ದೇಶಗಳು ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚಿನ ತಂತ್ರಜ್ಞಾನ ವರ್ಗಾವಣೆಗೆ ಮುಂದಾಗುತ್ತಿವೆ.

ಪ್ರಸ್ತುತ ರಾಜತಾಂತ್ರಿಕ ಬೆಳವಣಿಗೆಗಳು

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಸಿಯೋಲ್ ಭೇಟಿ, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್ ಕಳೆದ ಏಪ್ರಿಲ್‌ನಲ್ಲಿ ಹೊಸದಿಲ್ಲಿಗೆ ನೀಡಿದ ಭೇಟಿಯ ಬೆನ್ನಲ್ಲೇ ನಡೆದಿದೆ.



ಇದು ಕಳೆದ ಸುಮಾರು ಒಂದು ದಶಕದಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷರು ಭಾರತಕ್ಕೆ ನೀಡಿದ ಮೊದಲ ಅಧಿಕೃತ ಭೇಟಿಯಾಗಿತ್ತು. ಪ್ರಸ್ತುತ ಪ್ರವಾಸದಲ್ಲಿ ರಾಜನಾಥ್ ಸಿಂಗ್, ರಕ್ಷಣಾ ಸ್ವಾಧೀನ ಕಾರ್ಯಕ್ರಮ ಆಡಳಿತದ (ಡಿಎಪಿಎ) ಸಚಿವ ಲೀ ಯೋಂಗ್-ಚಿಯೋಲ್ ಅವರನ್ನು ಭೇಟಿಯಾಗಲಿದ್ದು, ಭಾರತ-ಕೊರಿಯಾ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಬುಧವಾರ ಅವರು ದಕ್ಷಿಣ ಕೊರಿಯಾದ ದೇಶಭಕ್ತರು ಮತ್ತು ಮಾಜಿ ಸೇನಾನಿಗಳ ವ್ಯವಹಾರಗಳ ಸಚಿವ ಕ್ವಾನ್ ಓಹ್-ಯುಲ್ ಅವರೊಂದಿಗೆ ಜಂಟಿಯಾಗಿ ಭಾರತೀಯ ಯುದ್ಧ ಸ್ಮಾರಕವನ್ನು ಉದ್ಘಾಟಿಸಲಿದ್ದಾರೆ.

ಐತಿಹಾಸಿಕ ರಕ್ಷಣಾ ಸಂಬಂಧಗಳ ಹಿನ್ನೆಲೆ

ಭಾರತ ಮತ್ತು ದಕ್ಷಿಣ ಕೊರಿಯಾ ನಡುವೆ 1962ರಲ್ಲಿ ಕೌನ್ಸಿಲರ್ ಸಂಬಂಧಗಳು ಮತ್ತು 1973ರಲ್ಲಿ ರಾಜತಾಂತ್ರಿಕ ಸಂಬಂಧಗಳು ಚಾಲನೆ ಪಡೆದಿದ್ದವು. ಬಳಿಕ 2010ರಲ್ಲಿ ಕಾರ್ಯತಂತ್ರದ ಪಾಲುದಾರಿಕೆ ಏರ್ಪಟ್ಟಿತು. ನಂತರ 2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಿಯೋಲ್ ಭೇಟಿಯ ಸಂದರ್ಭದಲ್ಲಿ ಇದನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಗೆ ವಿಸ್ತರಿಸಲಾಯಿತು. ಅಂದಿನಿಂದ ರಕ್ಷಣಾ ಸಚಿವರುಗಳು ನಿಯಮಿತವಾಗಿ ಭೇಟಿಯಾಗುತ್ತಿದ್ದು, ವಾರ್ಷಿಕವಾಗಿ ಮೂರೂ ಸಶಸ್ತ್ರ ಪಡೆಗಳ ಮಟ್ಟದ ಮಾತುಕತೆಗಳು ನಡೆಯುತ್ತಿವೆ.

ಭವಿಷ್ಯದ ಹೈ-ಟೆಕ್ ಯೋಜನೆಗಳು

ಕೆ9 ವಜ್ರ ಕಾರ್ಯಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕ್ವೆಂಡ್-ಎಕ್ಸ್ ರಕ್ಷಣಾ ಯೋಜನೆಯತ್ತ ಉಭಯ ದೇಶಗಳು ಗಮನಹರಿಸಿವೆ. ಈ ಯೋಜನೆ, ಸ್ವಾಯತ್ತ ಶಸ್ತ್ರಾಸ್ತ್ರಗಳು, ಕೃತಕ ಬುದ್ಧಿಮತ್ತೆ ಆಧಾರಿತ ಮಿಲಿಟರಿ ತಂತ್ರಜ್ಞಾನ, ಮುಂದಿನ ಪೀಳಿಗೆಯ ಕ್ಷಿಪಣಿ ರಕ್ಷಣೆ ಮತ್ತು ಸೈಬರ್ ಭದ್ರತೆ ಸೇರಿದಂತೆ ಹೈ-ಟೆಕ್ ವ್ಯವಸ್ಥೆಗಳನ್ನು ಜಂಟಿಯಾಗಿ ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಇದರೊಂದಿಗೆ, ಹನ್ವಾ ಡಿಫೆನ್ಸ್ ಸಂಸ್ಥೆಯ ಕೆ30 ಬಿಹೋ ಸ್ವಯಂ-ಚಾಲಿತ ವಿಮಾನ ವಿರೋಧಿ ವ್ಯವಸ್ಥೆಯ ಮೇಲೆಯೂ ಭಾರತ ಕಣ್ಣಿಟ್ಟಿದೆ. ಗುಡ್ಡಗಾಡು ಮತ್ತು ಎತ್ತರದ ಪ್ರದೇಶಗಳ ಕಾರ್ಯಾಚರಣೆಗಾಗಿ ಈ ಲಘು ಟ್ಯಾಂಕ್ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಲು ಹನ್ವಾ ಸಂಸ್ಥೆ, ಲಾರ್ಸೆನ್ ಆ್ಯಂಡ್ ಟೂಬ್ರೊ ಜತೆ ಸೇರಿ ಕಾರ್ಯನಿರ್ವಹಿಸುವ ಪ್ರಸ್ತಾಪವಿದೆ. ಸಿಯೋಲ್ ಹೊಂದಿರುವ ಸಾಂಪ್ರದಾಯಿಕ ಜಲಾಂತರ್ಗಾಮಿ ತಂತ್ರಜ್ಞಾನ, ಲಿಥಿಯಂ-ಐಯಾನ್ ಬ್ಯಾಟರಿ ವ್ಯವಸ್ಥೆಗಳು ಮತ್ತು ವಾಯು-ಸ್ವತಂತ್ರ ಪ್ರೊಪಲ್ಷನ್ ತಂತ್ರಜ್ಞಾನಗಳ ಪರಿಣತಿ ಜಲಾಂತರ್ಗಾಮಿ ಕ್ಷೇತ್ರದಲ್ಲಿ ಸಹಕಾರಕ್ಕೆ ದಾರಿ ಮಾಡಿಕೊಟ್ಟಿದೆ. ದಕ್ಷಿಣ ಕೊರಿಯಾದ ಮುನ್ನಡೆ ಸಾಧಿಸಿರುವ ಕೆಎಫ್-21 ಫೈಟರ್ ಪ್ರೋಗ್ರಾಂ ಮತ್ತು ಎಫ್‌ಎ-50 ಲಘು ಯುದ್ಧ ವಿಮಾನಗಳು, ವಾಯು ರಕ್ಷಣಾ ವಲಯದಲ್ಲಿ ಭಾರತಕ್ಕೆ ಜಂಟಿ ಪಾಲುದಾರಿಕೆಯ ಹೊಸ ಅವಕಾಶ ಒದಗಿಸಿವೆ.

ದ್ವಿಪಕ್ಷೀಯ ವ್ಯಾಪಾರ ಮತ್ತು ಆರ್ಥಿಕ ಗುರಿಗಳು

ಕಳೆದ ಏಪ್ರಿಲ್‌ನಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಅವರ ಭಾರತ ಭೇಟಿಯ ಸಂದರ್ಭದಲ್ಲಿ, ಜಂಟಿ ಬೆಳವಣಿಗೆಗೆ ಹೊಸ ಆರ್ಥಿಕ ಸಹಕಾರದ ಚೌಕಟ್ಟನ್ನು ನವೀಕರಿಸಲು ನಿರ್ಧರಿಸಲಾಯಿತು. ಈ ವೇಳೆ ಅವರೊಂದಿಗೆ ಸುಮಾರು ದಕ್ಷಿಣ ಕೊರಿಯಾದ 200 ಉದ್ಯಮಿಗಳ ನಿಯೋಗ ಆಗಮಿಸಿತ್ತು. ಭಾರತ ಮತ್ತು ದಕ್ಷಿಣ ಕೊರಿಯಾ ಪ್ರಸ್ತುತ ಇರುವ 27 ಬಿಲಿಯನ್ ಡಾಲರ್ (2.61 ಲಕ್ಷ ಕೋಟಿ ರೂ.) ದ್ವಿಪಕ್ಷೀಯ ವ್ಯಾಪಾರವನ್ನು 2030ರ ವೇಳೆಗೆ 54 ಬಿಲಿಯನ್ ಡಾಲರ್‌ಗೆ(5.23 ಲಕ್ಷ ಕೋಟಿ ರೂ.) ದ್ವಿಗುಣಗೊಳಿಸುವ ಗುರಿಯನ್ನು ಘೋಷಿಸಿವೆ. ಭಾರತ, ಖನಿಜ ಇಂಧನಗಳು, ತೈಲ ಭಟ್ಟಿ ಇಳಿಸುವಿಕೆಗಳು(ಮುಖ್ಯವಾಗಿ ನಾಫ್ತಾ), ಧಾನ್ಯಗಳು, ಕಬ್ಬಿಣ ಮತ್ತು ಉಕ್ಕನ್ನು ಸಿಯೋಲ್‌ಗೆ ರಫ್ತು ಮಾಡುತ್ತದೆ. ಪ್ರತಿಯಾಗಿ ದಕ್ಷಿಣ ಕೊರಿಯಾ, ಆಟೋಮೊಬೈಲ್ ಬಿಡಿಭಾಗಗಳು, ದೂರಸಂಪರ್ಕ ಉಪಕರಣಗಳು, ಹಾಟ್-ರೋಲ್ಡ್ ಕಬ್ಬಿಣದ ಉತ್ಪನ್ನಗಳು, ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು, ಮೂಲ ಲೂಬ್ರಿಕೇಟಿಂಗ್ ಆಯಿಲ್ಸ್, ಯಾಂತ್ರಿಕ ಉಪಕರಣಗಳು ಮತ್ತು ಎಲೆಕ್ಟ್ರಿಕಲ್ ಯಂತ್ರೋಪಕರಣಗಳನ್ನು ಭಾರತಕ್ಕೆ ಕಳುಹಿಸುತ್ತದೆ.

ಕಿರುಸುದ್ದಿ

ವಿವಾದಿತ ಸಿಲ್ವರ್ ಲೈನ್ ಯೋಜನೆಗೆ ತಡೆ: ಸಿಎಂ

ತಿರುವನಂತಪುರಂ: ಕೇರಳದಲ್ಲಿ ಹಿಂದಿನ ಎಲ್‌ಡಿಎಫ್ ಸರ್ಕಾರದ ವಿವಾದಿತ ಪ್ರಮುಖ ಮೂಲಸೌಕರ್ಯ ಯೋಜನೆಯನ್ನು ನೂತನ ಸರ್ಕಾರ ಕೊನೆಗೊಳಿಸಿದ್ದು, ವಿವಾದಾತ್ಮಕ ಸಿಲ್ವರ್ ಲೈನ್ ಸೆಮಿ ಹೈಸ್ಪೀಡ್ ರೈಲು ಯೋಜನೆಯನ್ನು ತಮ್ಮ ಸರ್ಕಾರ ರದ್ದುಗೊಳಿಸಿದೆ ಎಂದು ಕೇರಳ ಮುಖ್ಯಮಂತ್ರಿ ವಿ. ಡಿ. ಸತೀಶನ್ ಬುಧವಾರ ಘೋಷಿಸಿದ್ದಾರೆ. ಭೂಸ್ವಾಧೀನ, ಪರಿಸರ ಕಾಳಜಿ ಮತ್ತು ಸ್ಥಳಾಂತರದ ಮೇಲಿನ ಪ್ರತಿಭಟನೆಗಳು ರಾಜ್ಯದಾದ್ಯಂತ ಸಾರ್ವಜನಿಕ ಆಕ್ರೋಶವನ್ನು ಹೆಚ್ಚಿಸಿದವು.

59 ವರ್ಷಗಳ ನಂತರ ಸಂಪುಟಕ್ಕೆ ಕೈ ಸೇರ್ಪಡೆ

ಹೊಸದಿಲ್ಲಿ: 59 ವರ್ಷಗಳ ನಂತರ ಕಾಂಗ್ರೆಸ್ ತಮಿಳುನಾಡು ಸಚಿವ ಸಂಪುಟದ ಭಾಗವಾಗಲಿದೆ. ಕಾಂಗ್ರೆಸ್‌ನ ಇಬ್ಬರು ಶಾಸಕರಾದ ರಾಜೇಶ್ ಕುಮಾರ್ ಮತ್ತು ಪಿ ವಿಶ್ವನಾಥನ್ ಅವರು ಗುರುವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹೆಣ್ಣುಮಕ್ಕಳನ್ನ ದಂಧೆಗೆ ತಳ್ಳುವ ಕಳ್ಳಸಾಗಣೆ ಜಾಲ

ಕೊಚ್ಚಿ: ಕೇರಳದಿಂದ ಹೆಣ್ಣುಮಕ್ಕಳನ್ನು ಮಾಡೆಲಿಂಗ್, ಬ್ಯೂಟಿಷಿಯನ್, ಫ್ಯಾಷನ್ ಇಂಡಸ್ಟ್ರಿ ಅವಕಾಶಗಳನ್ನು ಒದಗಿಸುವ ಭರವಸೆ ನೀಡಿ ದುಬೈಗೆ ಕಳುಹಿಸಿ ಬಳಿಕ ಅವರನ್ನು ಬ್ಲಾಕ್ ಮೇಲ್‌ಗೊಳಪಡಿಸಿ ಅನೈತಿಕ ಜಾಲಕ್ಕೆ ತಳ್ಳಿ ಶೋಷಿಸುವ ಬೃಹತ್ ಅಂತಾರಾಷ್ಟ್ರೀಯ ಮಾನವ ಕಳ್ಳಸಾಗಣೆ ಜಾಲವೊಂದನ್ನು ಕೊಚ್ಚಿ ನಗರ ಪೊಲೀಸರು ಬಯಲಿಗೆಳೆದಿದ್ದಾರೆ.

ಈ ಜಾಲಕ್ಕೆ ಸಿಲುಕಿದ ಇಬ್ಬರು ಸಂತ್ರಸ್ತ ಹೆಣ್ಣುಮಕ್ಕಳು ಹೇಗೋ ಪಾರಾಗಿ ಕೇರಳಕ್ಕೆ ಮರಳಿ, ಈ ಕರಾಳದ ಜಾಲದ ಕುಕೃತ್ಯಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಜಾಲದ ಮೂವರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಇವರೆಲ್ಲರೂ ಮಹಿಳೆಯರೇ ಆಗಿದ್ದು, ಹೆಣ್ಣುಮಕ್ಕಳಿಗೆ ವಿದೇಶಗಳಲ್ಲಿ ಕೆಲಸದ ಆಮಿಷ ತೋರಿಸಿ ಬಳಿಕ ತಮ್ಮ ವಂಚನಾಜಾಲಕ್ಕೆ ಸಿಲುಕಿಸಿ ಮಾದಕದ್ರವ್ಯ ಸೇವನೆ, ದೈಹಿಕ ಹಿಂಸೆ, ಅಕ್ರಮ ಬಂಧನ, ವ್ಯವಸ್ಥಿತ ಲೈಂಗಿಕ ದೌರ್ಜನ್ಯಗಳನ್ನು ನಡೆಸಲಾಗುತ್ತಿದ್ದ ಬಗ್ಗೆ ಈ ಹೆಣ್ಣುಮಕ್ಕಳು ಬಹಿರಂಗಪಡಿಸಿದ್ದರು.

ಈ ಜಾಲದ ವ್ಯಾಪಕತೆ ಮತ್ತು ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಕೊಚ್ಚಿ ಪೊಲೀಸರು, ಈ ದುಷ್ಟ ಜಾಲದ ಹಿನ್ನೆಲೆ, ವಿದೇಶಿ ಸಂಪರ್ಕಗಳ ಬಗ್ಗೆ ತನಿಖೆ ನಡೆಸಲು ಉಪಪೊಲೀಸ್ ಆಯುಕ್ತ(ಡಿಸಿಪಿ) ಅಶ್ವತಿ ಜಿಜಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು(ಎಸ್ ಐಟಿ) ರಚಿಸಿದ್ದಾರೆ. ಮಾರಾಡುನಲ್ಲಿನ ಫ್ಲ್ಯಾಟ್ ಒಂದರ ಮೂಲಕ ಈ ಮಾನವ ಕಳ್ಳಸಾಗಣೆ ಜಾಲ ಕಾರ್ಯಾಚರಿಸುತ್ತಿತ್ತು. ಆರೋಪಿಗಳನ್ನು ಟಾಯ್ಸಿ, ತಿರುವನಂತಪುರಂನ ಪೊಂಗುವಿಲಾದ ಮಾಡೆಲ್ ಅಲೀನಾ ಅಬ್ರಹಾಂ, ಪೊನ್ನಾಣಿಯ ಮಂಜಿಮಾ ಎಂದು ಗುರುತಿಸಲಾಗಿದೆ.

ಮೋದಿ ವಿರುದ್ಧ ರಾಗಾ ಹೇಳಿಕೆಗೆ ಬಿಜೆಪಿ ಕಿಡಿ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶದ್ರೋಹಿ ಎಂದು ಕರೆಯುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅರಾಜಕ ಮನೋಭಾವವನ್ನು ಪ್ರದರ್ಶಿಸಿದ್ದಾರೆ ಎಂದು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರು, ರಾಹುಲ್ ಗಾಂಧಿಯವರ ಹೇಳಿಕೆ 140 ಕೋಟಿ ಭಾರತೀಯರಿಗೆ ಮಾಡಿದ ಅವಮಾನವಾಗಿದೆ. ಈ ಕುರಿತು ಅವರು ದೇಶದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ರಾಯಬರೇಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ, ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ದೇಶದ್ರೋಹಿಗಳು ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ತಿರುಗೇಟು ನೀಡಿದ ಬಿಜೆಪಿ, ಕಾಂಗ್ರೆಸ್ ನಾಯಕನ ಮಾತುಗಳು ನಿರಾಶೆ ಹಾಗೂ ಚುನಾವಣಾ ಸೋಲಿನ ಹತಾಶೆಯಿಂದ ಬಂದಿವೆ ಎಂದು ಟೀಕಿಸಿತು.

ಭಯೋತ್ಪಾದನೆಯನ್ನು ನಿಯಂತ್ರಿಸಿದ, ನಕ್ಸಲ್‌ವಾದವನ್ನು ಕೊನೆಗಾಣಿಸಲು ಕ್ರಮ ಕೈಗೊಂಡ, ತ್ರಿವರ್ಣ ಧ್ವಜದ ಗೌರವವನ್ನು ಹೆಚ್ಚಿಸಿದ ವ್ಯಕ್ತಿಯ ಬಗ್ಗೆ ಇಂತಹ ಪದಗಳನ್ನು ಬಳಸುವುದು ದುಃಖಕರ ಎಂದು ನವೀನ್ ಹೇಳಿದರು. ಇದೇ ವೇಳೆ ರಾಹುಲ್ ಗಾಂಧಿಯನ್ನು ಭಾರತೀಯ ರಾಜಕೀಯದ ರಾಹು ಎಂದು ವ್ಯಂಗ್ಯವಾಡಿದರು.

ಇನ್ನೊಂದೆಡೆ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ರಾಹುಲ್ ಗಾಂಧಿಯವರ ಹೇಳಿಕೆ ಅರ್ಬನ್ ನಕ್ಸಲ್ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಆರೋಪಿಸಿದರು.

ನಾರ್ವೆ ಪ್ರತಿಕೆಯಲ್ಲಿ ಪ್ರಧಾನಿಗೆ ಅವಮಾನ

ಹೊಸದಿಲ್ಲಿ: ನಾರ್ವೆಯ ಪ್ರಮುಖ ಪತ್ರಿಕೆ ಆಫ್ಟನ್ ಪೋಸ್ಟನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾವಾಡಿಗನಂತೆ ಚಿತ್ರಿಸಿದ ವ್ಯಂಗ್ಯಚಿತ್ರ ಪ್ರಕಟಿಸಿರುವುದು ಭಾರೀ ವಿವಾದಕ್ಕೆ ಕಾರಣವಾಗಿದೆ. ಮೋದಿ ಅವರು ಓಸ್ಲೋ ಭೇಟಿ ನೀಡುವ ಮುನ್ನ ಪ್ರಕಟವಾದ ಈ ಕಾರ್ಟೂನ್ ನಲ್ಲಿ, ಹಾವಿನ ಬದಲು ಪೆಟ್ರೋಲ್ ಪೈಪ್ ನಿಯಂತ್ರಿಸುತ್ತಿರುವಂತೆ ಚಿತ್ರಿಸಲಾಗಿತ್ತು. ಜೊತೆಗೆ "A clever and slightly annoying man" ಎಂಬ ಶೀರ್ಷಿಕೆಯೂ ನೀಡಲಾಗಿತ್ತು. ಈ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಅನೇಕ ಭಾರತೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಾಶ್ಚಿಮಾತ್ಯ ಮಾಧ್ಯಮಗಳು ಇನ್ನೂ ಭಾರತವನ್ನು ಹಳೆಯ ವಸಾಹತುಶಾಹಿ ದೃಷ್ಟಿಕೋನದಿಂದಲೇ ನೋಡುತ್ತಿವೆ ಎಂದು ನೆಟ್ಟಿಗರು ಟೀಕಿಸಿದ್ದಾರೆ. ಇದೇ ವೇಳೆ, ನಾರ್ವೆ ಭೇಟಿಯ ಸಂದರ್ಭ ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಕುರಿತು ಕೇಳಲಾದ ಪ್ರಶ್ನೆಗಳೂ ಚರ್ಚೆಗೆ ಕಾರಣವಾದವು. ಇದರ ಹಿಂದೆ ಕೆಲವು ಮತೀಯ ಹಾಗೂ ಎಡಪಂಥೀಯ ಶಕ್ತಿಗಳಿವೆ ಎನ್ನಲಾಗಿದೆ.ಈ ಕುರಿತು ಪ್ರತಿಕ್ರಿಯಿಸಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಸಿ.ಬಿ.ಜಾರ್ಜ್, ಭಾರತವು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಇಲ್ಲಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಪೂರ್ಣ ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.

ಭಾರತದ ಪ್ರಮಾಣ, ವೈವಿಧ್ಯತೆ ಹಾಗೂ ಪ್ರಜಾಪ್ರಭುತ್ವದ ಬಲದ ಬಗ್ಗೆ ಹಲವರಿಗೆ ಸಮರ್ಪಕ ಅರಿವಿಲ್ಲ. ದಿಲ್ಲಿಯಲ್ಲಿ ನೂರಾರು ಟಿವಿ ಚಾನೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಕೆಲ ಎನ್‌ಜಿಒ ವರದಿಗಳನ್ನು ಓದಿ ಭಾರತ ಕುರಿತು ತೀರ್ಮಾನಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಉ. ಭಾರತದಲ್ಲಿ ಬಿಸಿಗಾಳಿ ಅಬ್ಬರ

ಹೊಸದಿಲ್ಲಿ: ಉತ್ತರ ಭಾರತದ ಬಾಂದಾ ಜಿಲ್ಲೆಯಲ್ಲಿ ಬುಧವಾರ 48 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 4.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದು, ಭಾರೀ ಆತಂಕಕ್ಕೀಡು ಮಾಡಿದೆ. ದಿಲ್ಲಿಯ ರಿಡ್ಜ್ ಬೇಸ್ ಸ್ಟೇಷನ್ 45.8 ಡಿಗ್ರಿ ಗರಿಷ್ಠ ತಾಪಮಾನವನ್ನು ದಾಖಲಿಸಿದ್ದು, ಇದು ರಾಷ್ಟ್ರ ರಾಜಧಾನಿಯ ಅತ್ಯಂತ ಬಿಸಿಯಾದ ಸ್ಥಳವಾಗಿ ಹೊರಹೊಮ್ಮಿದೆ. ಆಯಾನಗರ್, ಪಾಲಮ್ ಮತ್ತು ಲೋಧಿ ರಸ್ತೆಯಲ್ಲಿ ಕ್ರಮವಾಗಿ 45 ಡಿಗ್ರಿ, 44.9 ಡಿಗ್ರಿ ಮತ್ತು 44.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಪ್ರಾದೇಶಿಕ ಹವಾಮಾನ ಇಲಾಖೆಯು ಮುಂದಿನ ವಾರ ಹಲವಾರು ಸ್ಥಳಗಳಲ್ಲಿ ತೀವ್ರ ಶಾಖದ ಅಲೆಯ ಎಚ್ಚರಿಕೆ ನೀಡಿದೆ. ಶಾಖದ ಅಲೆಯಿಂದ ಹಿಡಿದು ತೀವ್ರ ಶಾಖದ ಅಲೆಯ ಪರಿಸ್ಥಿತಿಗಳು ಮತ್ತು ಬೆಚ್ಚಗಿನ ರಾತ್ರಿಗಳ ದೃಷ್ಟಿಯಿಂದ ಹವಾಮಾನ ಕಚೇರಿಯು ಮುಂದಿನ ಮೂರು ದಿನಗಳವರೆಗೆ ಯೆಲ್ಲೋ ಅಲರ್ಟ್ ಮತ್ತು ನಂತರ ಕಿತ್ತಳೆ ಎಚ್ಚರಿಕೆಯನ್ನು ನೀಡಿದೆ.

43 ವರ್ಷಗಳ ಹಿಂದೆ ಕಳುವಾಗಿದ್ದ ಕಂಚಿನ ಪ್ರತಿಮೆ ವಾಪಸ್ ನೀಡಲು ಅಮೆರಿಕ ಒಪ್ಪಿಗೆ

ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ

ರಾಯ್ಪುರ: ಛತ್ತೀಸ್‌ಗಢದ ಸಾಂಸ್ಕೃತಿಕ ಪರಂಪರೆ ಪಾಲಿಗೆ ಮಹತ್ವದ ಅಧ್ಯಾಯವೊಂದು ತೆರೆದುಕೊಳ್ಳುತ್ತಿದೆ. ಇಲ್ಲಿನ ರಾಯ್ಪುರದ ಮಹಂತ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಿಂದ ಕಳವಾಗಿ ಅಮೆರಿಕ ತಲುಪಿದ್ದ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 19 ಕೋಟಿ ರೂ. ಬೆಲೆಬಾಳುವ, ಭಗವಾನ್ ಅವಲೋಕಿತೇಶ್ವರನ ಕಂಚಿನ ಪ್ರತಿಮೆಯನ್ನು ಅಮೆರಿಕ ಕೊನೆಗೂ ಭಾರತಕ್ಕೆ ಮರಳಿಸುತ್ತಿದೆ.

ಭಾರತಕ್ಕೆ ವಿಗ್ರಹ ಸಾಗಣೆ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ . ವಿಗ್ರಹ ಭಾರತ ತಲುಪಿದ ಕೂಡಲೇ, ಇದನ್ನು ರಾಯ್ಪುರಕ್ಕೆ ತಂದು ಅದರ ಮೂಲಸ್ಥಾನ ಘಾಸಿದಾಸ್ ಮ್ಯೂಸಿಯಂನಲ್ಲಿ ಮರುಅಳವಡಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ಛತ್ತೀಸ್ ಗಢ ಸರಕಾರ ಚಾಲನೆ ನೀಡಲಿದೆ ಎಂದು ಛತ್ತೀಸ್ ಗಢ ಸಾಂಸ್ಕೃತಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.ಭಾರತಕ್ಕೆ ಸೇರಿದ ಸುಮಾರು 14



ಮಿಲಿಯನ್ ಡಾಲರ್ ಮೌಲ್ಯದ 657 ಪ್ರಾಚೀನ ಮತ್ತು ಐತಿಹಾಸಿಕ ವಿಗ್ರಹಗಳನ್ನು ಅಮೆರಿಕ ಈಗಾಗಲೆ ಭಾರತಕ್ಕೆ ಮರಳಿಸಿದೆ. ಭಾರತದಿಂದ ಕಳವಾದ ವಿಗ್ರಹಗಳ ವಾಪಸಾತಿ ಪ್ರಯತ್ನಗಳ ಭಾಗವಾಗಿ ಅಮೆರಿಕ ಪ್ರಸ್ತುತ 19 ಕೋಟಿ ರೂ. ಮೌಲ್ಯದ ಅವಲೋಕಿತೇಶ್ವರ ವಿಗ್ರಹವನ್ನು ಕೂಡ ದೇಶಕ್ಕೆ ಮರಳಿಸುತ್ತಿದೆ. ಅವಲೋಕಿತೇಶ್ವರ ವಿಗ್ರಹದ ವಾಪಸಾತಿಯು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪಾಲಿನ ವಿಜಯವಾಗಿದೆ.

1939ರ ಉತ್ಖನನ ವೇಳೆ ಸಿಕ್ಕಿತ್ತು ವಿಗ್ರಹ

ಛತ್ತೀಸ್‌ಗಢದ ಮಹಾಸಮುಂದ್ ಜಿಲ್ಲೆಯಲ್ಲಿ , ಪ್ರಾಚ್ಯವಸ್ತುಗಳಿಗೆ ಹೆಸರಾಂತ ಈಗಿನ ಸಿರ್‌ಪುರ ಅಥವಾ ಹಿಂದೆ ಶ್ರೀಪುರವೆಂದು ಅಭಿದಾನಿತ ಗ್ರಾಮದಲ್ಲಿನ, ಖ್ಯಾತ ಲಕ್ಷ್ಮಣ ದೇವಾಲಯ ಸಂಕೀರ್ಣ ಬಳಿ 1939ರಲ್ಲಿ ಈ ಕಂಚಿನ ವಿಗ್ರಹ ಪತ್ತೆಯಾಗಿತ್ತು. ವಲಯದಲ್ಲಿ ಉತ್ಖನನ ವೇಳೆ ಪತ್ತೆಯಾಗಿದ್ದ ಅಪಾರ ವಿಗ್ರಹಗಳಲ್ಲಿ ಅವಲೋಕಿತೇಶ್ವರ ವಿಗ್ರಹವೂ ಒಂದು. ವಿಗ್ರಹದ ಸಂರಕ್ಷಣೆ ದೃಷ್ಟಿಯಿಂದ ಆಗ ಇದನ್ನು ರಾಯ್ಪುರದ ಮಹಂತ್ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಲ್ಲಿರಿಸಲಾಗಿತ್ತು. ಅಲ್ಲಿಂದ ಕಳವಾಗಿದ್ದ ಈ ವಿಗ್ರಹ ಅಂತಾರಾಷ್ಟ್ರೀಯ ಕಾಳಸಂತೆಗೆ ತಲುಪಿತ್ತು. ನಂತರದ ದಿನಗಳಲ್ಲಿ ಅಮೆರಿಕಗೆ ರವಾನೆಯಾಗಿತ್ತು. ಛತ್ತೀಸ್‌ಗಢದ ಸಂಪನ್ನ ಬೌದ್ಧ ಪರಂಪರೆಗಳು, ಪ್ರಾಚೀನ ಕರಕುಶಲತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಜೀವಂತ ದ್ಯೋತಕವಾಗಿದೆ ಅವಲೋಕಿತೇಶ್ವರ ವಿಗ್ರಹ. ಪ್ರಾಚೀನ ಭಾರತದಲ್ಲಿ ಬೌದ್ಧ ಸಂಸ್ಕೃತಿ, ವಾಸ್ತುಶಿಲ್ಪ ಮತ್ತು ಕಲೆಗಳಿಗೆ ಅತ್ಯಂತ ಹೆಸರಾದ ಊರಾಗಿತ್ತು ಈಗಿನ ಸಿರ್‌ಪುರ ಅಥವಾ ಆಗಿನ ಶ್ರೀಪುರ.

ಆರ್‌ಬಿಐನಿಂದ ಕರಡು ಪ್ರಸ್ತಾವನೆ | ಅಕ್ಟೋಬರ್ 1ರಿಂದ ಜಾರಿಗೆ

ಸಾಲ ಕಟ್ಟದಿದ್ದರೆ ಮೊಬೈಲ್ ಬಂದ್

ಮುಂಬೈ: ಬಾಕಿ ಇರುವ ಸಾಲ ವಸೂಲಾತಿ ವೇಳೆಯಲ್ಲಿ ಬ್ಯಾಂಕುಗಳು ಮತ್ತು ಸಾಲ ವಸೂಲಾತಿ ಏಜೆಂಟ್‌ಗಳ ದಬ್ಬಾಳಿಕೆಗೆ ಕಡಿವಾಣ ಹಾಕಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೆಲವು ಪ್ರಸ್ತಾವನೆಗಳನ್ನು ಸಿದ್ಧಪಡಿಸಿದೆ. ವೈಯಕ್ತಿಕ, ವಾಹನ ಹಾಗೂ ಗೃಹ ಸಾಲ ಮರುಪಾವತಿಯಲ್ಲಿ ಡೀಫಾಲ್ಟ್ ಆಗಿರುವ ಗ್ರಾಹಕರ ಮೊಬೈಲ್ ಫೋನ್‌ಗಳನ್ನು ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಒಂದು ವೇಳೆ, ಮೊಬೈಲ್ ಮೇಲೆಯೇ ಸಾಲ ತೆಗೆದುಕೊಂಡು, ಅದನ್ನು ಕಟ್ಟದಿದ್ದರೆ ಮಾತ್ರ ಅವುಗಳನ್ನು ಬಂದ್ ಮಾಡಲು ಅವಕಾಶ ನೀಡಿದೆ. ಆದರೆ, ಇಲ್ಲಿ ಕೆಲವು ಸುರಕ್ಷಾ ಕ್ರಮಗಳ ಜತೆಗೆ ಇಂಥ ಕ್ರಮ ತೆಗೆದುಕೊಳ್ಳಬಹುದು ಎಂದಿದೆ. ಈ ಕ್ರಮಗಳು ಅ.1ರಿಂದ ಜಾರಿಗೆ ಬರಲಿವೆ. ಬುಧವಾರ ಬಿಡುಗಡೆಗೊಂಡ ಪರಿಷ್ಕೃತ ಕರಡು ಮಾರ್ಗಸೂಚಿಯಲ್ಲಿ, ಸಾಲ ವಸೂಲಿಗೆ ಬ್ಯಾಂಕ್‌ಗಳು ತಂತ್ರಜ್ಞಾನ ಆಧಾರಿತ ಒತ್ತಡದ ಕ್ರಮಗಳನ್ನು ಬಳಸಬಾರದು ಎಂದು ಹೇಳಲಾಗಿದೆ. ಆದರೆ, ಬ್ಯಾಂಕ್ ಸಾಲದ ಮೂಲಕವೇ ಖರೀದಿಸಿದ ಮೊಬೈಲ್ ಅಥವಾ ಸಾಧನಗಳ ವಿಷಯದಲ್ಲಿ ಮಾತ್ರ ಕೆಲವು ನಿರ್ಬಂಧ ಹೇರಲು ಅವಕಾಶ ನೀಡಲಾಗಿದೆ. ಅಂಥ ಸಂದರ್ಭದಲ್ಲಿಯೂ ಸಾಲ ಬಾಕಿ 90 ದಿನಗಳಿಗಿಂತ ಹೆಚ್ಚಿರಬೇಕು. ನೋಟಿಸ್ ನೀಡಿದ ಬಳಿಕವೂ ಸಾಲಗಾರ ಪಾವತಿ ಮಾಡದಿದ್ದರೆ ಮಾತ್ರ ಕ್ರಮ ಕೈಗೊಳ್ಳಬಹುದು ಎಂದು ಕರಡು ನಿಯಮ ಹೇಳಿದೆ.


ಇನ್ನೊಂದೆಡೆ, ತುರ್ತು ಸೇವೆಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಯಾವುದೇ ಕಾರಣಕ್ಕೂ ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ತಿಳಿಸಿದೆ. ಇಂಟರ್‌ನೆಟ್ ಪ್ರವೇಶ, ಇನ್‌ಕಮಿಂಗ್ ಕರೆಗಳು, ಎಸ್‌ಒಎಸ್ ಸೌಲಭ್ಯ ಹಾಗೂ ಸರ್ಕಾರದ ತುರ್ತು ಸುರಕ್ಷತಾ ಸಂದೇಶಗಳನ್ನು ನಿರ್ಬಂಧಿಸಲು ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸಾಲಗಾರರು ಬಾಕಿ ಹಣ ಪಾವತಿಸಿದ ತಕ್ಷಣ ಗರಿಷ್ಠ ಒಂದು ಗಂಟೆಯೊಳಗೆ ಎಲ್ಲಾ ನಿರ್ಬಂಧಗಳನ್ನು ತೆರವುಗೊಳಿಸಬೇಕು. ತಪ್ಪಾಗಿ ನಿರ್ಬಂಧ ಹೇರಿದರೆ ಅಥವಾ ತೆರವುಗೊಳಿಸುವಲ್ಲಿ ವಿಳಂಬವಾದರೆ ಬ್ಯಾಂಕ್‌ಗಳು ಪ್ರತಿ ಗಂಟೆಗೆ 250 ಪರಿಹಾರ ನೀಡಬೇಕಾಗುತ್ತದೆ ಎಂದು ಕರಡು ಸೂಚನೆ ತಿಳಿಸಿದೆ.

ಸಾಲ ವಸೂಲಾತಿ ವೇಳೆ ಬ್ಯಾಂಕ್ ಸಿಬ್ಬಂದಿ ಅಥವಾ ಏಜೆಂಟ್‌ಗಳು ಬೆದರಿಕೆ, ನಿಂದನಾತ್ಮಕ ಭಾಷೆ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಅವಮಾನಕಾರಿ ಕ್ರಮಗಳನ್ನು ಕೈಗೊಳ್ಳಬಾರದು ಎಂದು ಆರ್‌ಬಿಐ ಕಠಿಣ ಎಚ್ಚರಿಕೆ ನೀಡಿದೆ.

ಮೇ 23: ಪಾಲೆಮಾರ್ 4 ಸಭಾಭವನಗಳ ಲೋಕಾರ್ಪಣೆ

ಇದು ಸಾಮಾಜಿಕ ಕ್ರಾಂತಿ





• **ಮಂಗಳೂರು:** ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್, ಕರಾವಳಿ ಭಾಗದಲ್ಲಿ ಕಳೆದ 45 ವರ್ಷಗಳಿಂದ ತನ್ನ ಪ್ರಾಮಾಣಿಕ ಮತ್ತು ಯಶಸ್ವಿ ಉದ್ಯಮದ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನು ಗಳಿಸಿದೆ. ಈ ಸುದೀರ್ಘ ಯಶಸ್ವಿ ಹಾದಿಯ ಸವಿನೆನಪಿಗಾಗಿ ಸಂಸ್ಥೆಯು ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ ನಾಲ್ಕು ಭವ್ಯ ಸಭಾಭವನಗಳನ್ನು ಏಕಕಾಲದಲ್ಲಿ ಲೋಕಾರ್ಪಣೆ ಮಾಡಲಾಗುತ್ತಿದೆ ಎಂದು ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಅಧ್ಯಕ್ಷ ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು.

ಮೇರಿಹಿಲ್‌ನಲ್ಲಿ ಉದ್ಘಾಟನೆಗೆ ಸಿದ್ಧಗೊಂಡಿರುವ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 23ರಂದು ಪೂರ್ವಾಹ್ನ 10 ಗಂಟೆಗೆ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಆಂಧ್ರ ಪ್ರದೇಶದ ರಾಜ್ಯಪಾಲ ಜಸ್ಟಿಸ್ ಎಸ್. ಅಬ್ದುಲ್ ನಜೀರ್ ಅವರು ನಾಲ್ಕೂ ಸಭಾಂಗಣಗಳನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ಸಮಾರಂಭದಲ್ಲಿ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಸ್ಪೀಕರ್ ಯು.ಟಿ.ಖಾದರ್, ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಉಮಾನಾಥ ಕೋಟ್ಯಾನ್ ಹಾಗೂ ವಿಧಾನ ಪರಿಷತ್ತಿನ ಸದಸ್ಯ ಐವನ್ ಡಿಸೋಜ ಸೇರಿದಂತೆ ಹಲವು ಮಂದಿ ಗಣ್ಯರು ಪಾಲ್ಗೊಳ್ಳುವರು ಎಂದು ಪಾಲೆಮಾರ್ ತಿಳಿಸಿದರು.

ಕೈಗೆಟಕುವ ದರದಲ್ಲಿ ಹಾಲ್‌ಗಳು ಲಭ್ಯ

ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ಮೂಲ ಉದ್ದೇಶವಾಗಿದೆ. ಈ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ ಪಾಲೆಮಾರ್ ವಿವರಿಸಿದರು.

ಈ ಸಭಾಭವನಗಳನ್ನು ಲಾಭದ ದೃಷ್ಟಿಯಿಂದ ನಿರ್ಮಿಸಿದ್ದಲ್ಲ. ಕರಾವಳಿಯ ಜನತೆ ಕಳೆದ 45 ವರ್ಷಗಳಿಂದ ನಮಗೆ ನೀಡಿದ ಪ್ರೀತಿ ಮತ್ತು ಬೆಂಬಲಕ್ಕೆ ಪ್ರತಿಯಾಗಿ, ಸಮಾಜಕ್ಕೆ ಏನಾದರೂ ಕೊಡುಗೆಯನ್ನು ನೀಡಬೇಕು ಎಂಬ ಸದುದ್ದೇಶದಿಂದ ಇವುಗಳನ್ನು ರೂಪಿಸಿದ್ದೇನೆ. ಬಡ ಕುಟುಂಬಗಳ ಸಾಮೂಹಿಕ ವಿವಾಹದಂತಹ ಸಂದರ್ಭದಲ್ಲಿ ಹೆತ್ತವರ ಕಣ್ಣಲ್ಲಿ ಕಾಣುವ ಸಾರ್ಥಕತೆ ಮತ್ತು ನೆಮ್ಮದಿಯ ಭಾವವೇ ನನಗೆ ನಿಜವಾದ ಸಂಪತ್ತು ಎಂದವರು ಹೇಳಿದರು.

ಶೈಕ್ಷಣಿಕ ಸಾಧಕರಿಗೆ ಗೌರವ

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿರುವ ವಿಕಾಸ್ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಶೈಕ್ಷಣಿಕ ಸಾಧಕರನ್ನು ಗೌರವಿಸಲಾಗುವುದು ಎಂದವರು ತಿಳಿಸಿದರು.

ಅದ್ದೂರಿತನ ಮತ್ತು ಸಾಂಪ್ರದಾಯಿಕತೆಯ ಅದ್ಭುತ ಸಮ್ಮಿಲನವೇ ಮೇರಿಹಿಲ್‌ನಲ್ಲಿರುವ ಪಾಲೆಮಾರ್ ಕನ್ವೆನ್ಷನ್ ಸೆಂಟರ್. ನೋಡುಗರ ಕಣ್ಣು ಸೆಳೆಯುವ ಮರದ ಕರಕುಶಲತೆಯಿಂದ ಕೂಡಿದ ಭವ್ಯ ಒಳಾಂಗಣ ವಿನ್ಯಾಸ ಇದರ ಪ್ರಮುಖ ಆಕರ್ಷಣೆಯಾಗಿದೆ.

ಪಾಲೆಮಾರ್ ಗಾರ್ಡನ್

ನಗರದ ಮೋರ್ಗನ್ಸ್ ಗೇಟ್‌ನಲ್ಲಿ ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವಂತೆ ಈ ಭವ್ಯ ಗಾರ್ಡನ್ ನಿರ್ಮಿಸಲಾಗಿದೆ.

ಸುರತ್ಕಲ್ ಸಮೀಪ 20 ಎಕರೆ ವಿಶಾಲವಾದ ಜಾಗದಲ್ಲಿ ಈ ಪಾಲೆಮಾರ್ ಫಾರ್ಮ್ಸ್ ಸಭಾಭವನ ಸಿದ್ಧಗೊಂಡಿದೆ. ಕಡೆಕಾರ್, ಜೆಪ್ಪಿನಮೊಗರುವಿನಲ್ಲಿರುವ ನೇತ್ರಾವತಿ ಸಭಾಭವನ ವಿವಾಹ ಕಾರ್ಯಕ್ರಮಗಳು, ಧಾರ್ಮಿಕ ಕಾರ್ಯಕ್ರಮಗಳು, ಸಂಗೀತ ಕಛೇರಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅತ್ಯಂತ ಪ್ರಶಸ್ತವಾಗಿದೆ ಎಂದು ಪಾಲೆಮಾರ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಉಪಾಧ್ಯಕ್ಷ ಪ್ರದೀಪ್ ಪಾಲೆಮಾರ್, ಟ್ರಸ್ಟಿಗಳಾದ ಕೊರಗಪ್ಪ, ಜೆ.ಕೆ.ರಾವ್, ಸೂರಜ್ ಕಲ್ಯ, ಜೆ.ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

> **ಇದು ಕೇವಲ ಕಟ್ಟಡಗಳ ಉದ್ಘಾಟನೆಯಲ್ಲ, ಮದುವೆ ಮತ್ತು ಸಾಮಾಜಿಕ ಕಾರ್ಯಕ್ರಮಗಳ ಕ್ಷೇತ್ರದಲ್ಲಿ ಹೊಸ ಚಿಂತನೆ ಹಾಗೂ ಸಮಾನತೆಯನ್ನು ಪರಿಚಯಿಸುವ ಐತಿಹಾಸಿಕ ಸಾಮಾಜಿಕ ಚಳವಳಿಯಾಗಿದೆ.**
> ■ **ಕೃಷ್ಣಜೆ ಪಾಲೆಮಾರ್,**
> **ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ಅಧ್ಯಕ್ಷರು**

ಸಾಮೂಹಿಕ ವಿವಾಹ, ಶಿಬಿರಗಳಿಗೆ ಉಚಿತ

ಸಾಮಾಜಿಕ ಬದ್ಧತೆ ಮತ್ತು ಉಚಿತ ಸೇವೆ ಲ್ಯಾಂಡ್ ಲಿಂಕ್ಸ್ ಸಂಸ್ಥೆಯು ಸದಾ ಸಾಮಾಜಿಕ ಕಳಕಳಿಗೆ ಹೆಸರುವಾಸಿಯಾಗಿದೆ. ಜಾತಿ, ಧರ್ಮ, ಬಡವ-ಬಲ್ಲಿದ ಎಂಬ ಯಾವುದೇ ಭೇದಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವುದು ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ಈ ಸಾಮಾಜಿಕ ಬದ್ಧತೆಯ ಭಾಗವಾಗಿ, ಸಮಾಜದ ಒಳಿತಿಗಾಗಿ ಆಯೋಜಿಸುವ ಸಾಮೂಹಿಕ ವಿವಾಹಗಳು ಹಾಗೂ ಸದುದ್ದೇಶದ ಉದಾತ್ತ ಸಾರ್ವಜನಿಕ ಕಾರ್ಯಕ್ರಮಗಳಿಗೆ ಈ ಎಲ್ಲಾ ಸಭಾಂಗಣಗಳನ್ನು ನಿಯಮಾನುಸಾರವಾಗಿ ಉಚಿತವಾಗಿ ನೀಡಲು ನಿರ್ಧರಿಸಲಾಗಿದೆ ಎಂದು ಪಾಲೆಮಾರ್ ತಿಳಿಸಿದರು.

ಶೀಘ್ರದಲ್ಲೇ ಲಭ್ಯ

ಅತೀ ಶೀಘ್ರದಲ್ಲಿಯೇ ಮಂಗಳೂರಿನ ಕಡಲ ತೀರದಲ್ಲಿ ತೆರೆದ ಸಭಾಂಗಣ
ಇದೇ ಮೊದಲ ಬಾರಿಗೆ, ಕಡಲ ನಗರಿ ಮಂಗಳೂರಿನ ಸಮುದ್ರ ತೀರದಲ್ಲಿ ಅದ್ದೂರಿ, ಭವ್ಯ ಸಮಾರಂಭಗಳನ್ನು ನಡೆಸಲು ಸುಸಜ್ಜಿತ ತೆರೆದ ಸಭಾಂಗಣ ಸಿದ್ಧಗೊಳ್ಳುತ್ತಿದೆ. ಶೀಘ್ರದಲ್ಲೇ ಈ ಸಭಾಂಗಣವೂ ಸಾರ್ವಜನಿಕರಿಗಾಗಿ ಲಭ್ಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 7411394759, 7483574759, 9148435759
ಭೇಟಿ ನೀಡಿ: ಅಧಿಕೃತ ವೆಬ್‌ಸೈಟ್: www.palemar.com

ಸರ್ವಧರ್ಮ ಸಮನ್ವಯ

ಯಾವುದೇ ಒಂದು ವರ್ಗಕ್ಕೆ ಸೀಮಿತವಾಗದೇ ಎಲ್ಲಾ ಧರ್ಮ, ಜಾತಿ, ಸಮುದಾಯ ಹಾಗೂ ಎಲ್ಲಾ ಆರ್ಥಿಕ ಹಂತದ ಕುಟುಂಬಗಳಿಗೆ ಇಲ್ಲಿ ಸಮಾನ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸುವ ಮಹತ್ವಾಕಾಂಕ್ಷಿ ಉದ್ದೇಶ ಈ ಎಲ್ಲಾ ಸಭಾಭವನಗಳ ಹಿಂದಿದೆ. ಸರ್ವಧರ್ಮದವರೂ ತಮ್ಮ ಇಷ್ಟದ ಶೈಲಿಯಲ್ಲಿ ಅತ್ಯಂತ ಆರಾಮದಾಯಕವಾಗಿ ಕಾರ್ಯಕ್ರಮಗಳನ್ನು ನಡೆಸುವಂತೆ ವಿನ್ಯಾಸಗೊಳಿಸಲಾಗಿದೆ.

ಮೇ 24 ರಂದು ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ದೃಢ ಸಂಪ್ರೋಕ್ಷಣೆ

• **ಮುಲ್ಕಿ:** ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮೇ 24ರಂದು ದೃಢ ಸಂಪ್ರೋಕ್ಷಣೆ ಹಾಗೂ ನಾಗದೇವರಿಗೆ ವಾರ್ಷಿಕ ಆಶ್ಲೇಷಾಬಲಿ ಸೇವೆ ನಡೆಯಲಿದೆ ಮೇ 23 ಸಂಜೆ 5ರಿಂದ ವಾಸ್ತು ಹೋಮ, ವಾಸ್ತುಪೂಜೆ, ರಾಕ್ಷೋಘ್ನ ಪ್ರಾಕಾರ ಬಲಿ, ಮೇ 24ರಂದು ಬೆಳಗ್ಗೆ 8ಕ್ಕೆ ಶ್ರೀ ಭಗವತಿಯ ಸನ್ನಿಧಿಯಲ್ಲಿ ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ಪಂಚವಿಂಶತಿ ಕಲಶ, ಪ್ರಧಾನ ಹೋಮ, ಕಲಶಾಭಿಷೇಕ, ಪ್ರಸನ್ನ ಪೂಜೆ, ಮಹಾಮಂತ್ರಾಕ್ಷತೆ, ನಾಗ ಸನ್ನಿಧಿಯಲ್ಲಿ ನವಕ ಕಲಶ, ಪ್ರಧಾನ ಹೋಮ, ಪಂಚಾಮೃತ ಅಭಿಷೇಕ, ಆಶ್ಲೇಷಾ ಬಲಿ, ಪ್ರಸನ್ನಪೂಜೆ ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ಬ್ರಹ್ಮ ಕಲಶೋತ್ಸವ, ಜೀರ್ಣೋದ್ಧಾರ ಹಾಗೂ ಆಡಳಿತ ಸಮಿತಿಯ ಪ್ರಕಟಣೆ ತಿಳಿಸಿದೆ.

ಮೇ 24: ಅಂಚೆ ಜನ ಸಂಪರ್ಕ ಅಭಿಯಾನ

• **ಮಂಗಳೂರು:** ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್ ಮತ್ತು ಭಾರತೀಯ ಅಂಚೆ ಇಲಾಖೆ ಮಂಗಳೂರು ವಿಭಾಗದ ಸಹಯೋಗದಲ್ಲಿ ಮೇ 24ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ನಗರದ ಉರ್ವದ ಕಬಡ್ಡಿ ಒಳಾಂಗಣ ಕ್ರೀಡಾಂಗಣದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ, ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರ ನಡೆಯಲಿದೆ.

ಕರ್ನಾಟಕ ಅಮೆಚೂರು ಕಬಡ್ಡಿ ಅಸೋಸಿಯೇಶನ್ ಅಧ್ಯಕ್ಷ ರಾಕೇಶ್ ಮಲ್ಲಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್‌ನ ಅಧ್ಯಕ್ಷ ದಿನಕರ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜ, ಜಿಲ್ಲಾ ಅಮೆಚೂರು ಕಬಡ್ಡಿ ಅಸೋಸಿಯೇಶನ್‌ನ ಗೌರವ ಸಲಹೆಗಾರರಾದ ಪುರುಷೋತ್ತಮ್ ಪೂಜಾರಿ ಮತ್ತು ರತನ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಅಶೋಕನಗರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಜಿ ಯುವತಿಯ ಕೊಲೆ ಯತ್ನ ಪ್ರಕರಣ ಬೇಧಿಸಿದ ಪೊಲೀಸರು: ಮಹಿಳೆಯ ಸೆರೆ

• **ಮಣಿಪಾಲ:** ಮಣಿಪಾಲ-ಅಲೆವೂರು ರಸ್ತೆಯ ಶಾಂತಿನಗರದ ಮಹಿಳಾ ಪಿಜಿಯಲ್ಲಿ ವಾರಗಳ ಹಿಂದೆ ನಡೆದಿದ್ದ ಅಂಕೋಲಾ ಮೂಲದ ಯೋಗಿತಾ ಎಂಬಾಕೆಯ ಕೊಲೆ ಯತ್ನ ಪ್ರಕರಣವನ್ನು ಮಣಿಪಾಲ ಪೊಲೀಸರು ಯಶಸ್ವಿಯಾಗಿ ಬೇಧಿಸಿದ್ದಾರೆ. ಯೋಗಿತಾಳ ಚಿನ್ನದ ಸರ ಮತ್ತು ಕಿವಿಯೋಲೆಗಾಗಿ ಆಕೆಯ ತಲೆಗೆ ಸಿಮೆಂಟ್ ಇಟ್ಟಿಗೆಯಿಂದ ಹೊಡೆದು ಮಾರಣಾಂತಿಕ ದಾಳಿ ನಡೆಸಿದ್ದ ಅದೇ ಪಿಜಿಯ ಪಕ್ಕದ ರೂಮಿನ ನಿವಾಸಿ ಸುಷ್ಮಾ ನಾಯ್ಕ (30) ಎಂಬಾಕೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಉತ್ತರ ಕನ್ನಡ ಜಿಲ್ಲೆಯ ವಿಚ್ಛೇದಿತೆಯಾಗಿರುವ ಆರೋಪಿ ಸುಷ್ಮಾ ನಾಯ್ಕ, ಮಣಿಪಾಲದ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಕುಡಿತದ ಚಟ ಹಾಗೂ ಹಣದ ವ್ಯವಹಾರಗಳಿಂದ ತೀವ್ರ ಆರ್ಥಿಕ ಮುಗ್ಗಟ್ಟು ಅನುಭವಿಸುತ್ತಿದ್ದ ಈಕೆ, ಚಿನ್ನದ ಆಭರಣಗಳಿಗಾಗಿಯೇ ಯೋಗಿತಾಳ ಕೊಲೆಗೆ ಹಲವು ದಿನಗಳಿಂದ ಸ್ಕೆಚ್ ಹಾಕಿದ್ದಳು. ಇದಕ್ಕಾಗಿ ಆನ್‌ಲೈನ್‌ನಲ್ಲಿ ಚಾಕುವನ್ನು ಸಹ ತರಿಸಿಕೊಂಡಿದ್ದಳು. ಮೇ 12 ರಂದು ರಾತ್ರಿ ಯೋಗಿತಾಳ ರೂಮಿನಲ್ಲೇ ಮಲಗಿದ್ದ ಸುಷ್ಮಾ, ಮುಂಜಾನೆ ಯೋಗಿತಾ ಗಾಢ ನಿದ್ದೆಗೆ ಜಾರಿದ್ದನ್ನು ಖಾತ್ರಿಪಡಿಸಿಕೊಂಡು ಮೊದಲೇ ತಂದಿಟ್ಟಿದ್ದ ಸಿಮೆಂಟ್ ಇಟ್ಟಿಗೆಯನ್ನು ಆಕೆಯ ತಲೆಗೆ ಹಾಕಿ ಆಭರಣ ದೋಚಿದ್ದಳು. ಸದ್ಯ ಗಂಭೀರವಾಗಿ ಗಾಯಗೊಂಡಿರುವ ಯೋಗಿತಾ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಆರೋಪಿಯನ್ನು ಬಂಧಿಸಿ, ನ್ಯಾಯಾಲಯ ಹಾಜರು

ಮಣಿಪಾಲ ಪೊಲೀಸ್ ನಿರೀಕ್ಷಕ ಮಹೇಶ್ ಪ್ರಸಾದ್ ನೇತೃತ್ವದ ಪೊಲೀಸರ ಜಂಟಿ ತಂಡವು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಸುಷ್ಮಾಳಿಂದ ಕಳವು ಮಾಡಲಾಗಿದ್ದ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದ್ದು, ಆಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ.

‘ಅಮ್ಮ’ನ ಭೇಟಿಗೆ ಬರುವ ಊರ ಪರವೂರ ಭಕ್ತಾದಿಗಳಿಗೆ ಇನ್ನಷ್ಟು ಸೌಲಭ್ಯ

ಶೌಚಾಲಯ, ಸ್ನಾನಗೃಹಗಳ ನಿರ್ಮಾಣ



• **ಮಂಗಳೂರು:** ಮಾತಾ ಅಮೃತಾನಂದಮಯಿ ದೇವಿಯವರು ಸಮಾಜಕ್ಕೆ ಧಾರ್ಮಿಕ ಮಾರ್ಗದರ್ಶನ ಮಾತ್ರವಲ್ಲದೆ ಸಂಸ್ಕೃತಿ, ಶಿಕ್ಷಣ ಮತ್ತು ಜನಪರವಾದ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಸಲ್ಲಿಸುತ್ತಿರುವ ಸೇವೆ ಒಂದು ಅತ್ಯುತ್ತಮ ಮಾದರಿಯಾಗಿದೆ ಎಂದು ಮಂಗಳೂರು ದಕ್ಷಿಣ ಶಾಸಕ ಡಿ.ವೇದವ್ಯಾಸ ಕಾಮತ್ ಹೇಳಿದರು.

ಮೇ 28 ಹಾಗೂ 29ರಂದು ಅಮ್ಮನವರ ಮಂಗಳೂರು ಭೇಟಿಯ ಸಂದರ್ಭದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಬೋಳೂರಿನಲ್ಲಿ ನಿರ್ಮಿಸಲಾದ ಹತ್ತು ಸ್ನಾನಗೃಹ ಮತ್ತು ಶೌಚಾಲಯಗಳನ್ನು ಉದ್ಘಾಟಿಸಿ ಅವರು ಮಾತಾಡಿದರು.



ಮಂಗಳೂರಿನ ಅಮ್ಮನವರ ಆಶ್ರಮಕ್ಕೆ ಹಾಗೂ ದೇವಸ್ಥಾನಕ್ಕೆ ಮತ್ತು ಆಶ್ರಮದ ಸೇವಾ ಚಟುವಟಿಕೆಗಳ ಸಂದರ್ಭದಲ್ಲಿ ಭಕ್ತರು ಹಾಗೂ ಸಾರ್ವಜನಿಕರು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದರೆ ಹಿಂದುಳಿದ ಈ ಪ್ರದೇಶದಲ್ಲಿ ಸೂಕ್ತವಾದ ಶೌಚಾಲಯ ವ್ಯವಸ್ಥೆ ಇಲ್ಲ. ಇದನ್ನು ಮನಗಂಡು ಸಾರ್ವಜನಿಕರ ಒತ್ತಾಯದ ಮೇರೆಗೆ ಜನರ ಉಪಯೋಗಕ್ಕಾಗಿ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಾಣ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಅವರು ಶಾಸಕರನ್ನು ಗೌರವಿಸಿದರು. ಗುತ್ತಿಗೆದಾರ ಅಜಯ್ ಮತ್ತು ಉಸ್ತುವಾರಿ ಪ್ರಸನ್ನ ಅವರನ್ನು ಶಾಸಕರು ಸನ್ಮಾನಿಸಿದರು. ಸೇವಾ ಸಮಿತಿಯ ಗೌರವಾಧ್ಯಕ್ಷ ಡಾ.ವಸಂತ ಕುಮಾರ ಪೆರ್ಲ, ಕೋಶಾಧಿಕಾರಿ ಸಿ ಎ ರಾಮನಾಥ್ ನಾಯಕ್, ಮುಂಬೈ ಭಕ್ತಿ ಸಂಪದದ ಬಾಲಕೃಷ್ಣ ಕುಂದರ್, ಶಿವರಾಮ್ ಏನೆಕಲ್, ವಕೀಲರಾದ ಪುಷ್ಪಲತಾ ಗಟ್ಟಿ, ಮಾಜಿ ಮೇಯರ್ ಗಣೇಶ್ ಹೊಸಬೆಟ್ಟು, ಡಾ.ಸುಚಿತ್ರಾ ರಾವ್, ಸೇವಾ ಸಮಿತಿಯ ಪದಾಧಿಕಾರಿಗಳಾದ ವಾಮನ್ ಮೈಂದನ್, ಗಣೇಶ್ ಕೆ, ಅಮೃತ ವಿದ್ಯಾಲಯಂ ಪ್ರಾಂಶುಪಾಲೆ ಮಧುಲಿಖಾ ರಾವ್, ಉಪ ಪ್ರಾಂಶುಪಾಲೆ ರೇಖಾ ಕಾಮತ್, ಶಿಕ್ಷಕರು, ಸಿಬ್ಬಂದಿವರ್ಗ ಹಾಗೂ ಅಮ್ಮನ ಭಕ್ತರು ಭಾಗವಹಿಸಿದ್ದರು.

ವೈದ್ಯಕೀಯ ಪ್ರಕೋಷ್ಠದ ಡಾ.ದೇವದಾಸ ಪುತ್ರನ್ ಕಾರ್ಯಕ್ರಮ ನಿರೂಪಿಸಿದರು.

ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಬೆಂಗಳೂರು: ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಕರೆ ನೀಡಿದ್ದ ರಾಜ್ಯಾದ್ಯಂತ ಔಷಧಿ ಮಳಿಗೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಆದರಲ್ಲೂ ಬೆಂಗಳೂರಿನಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಶೇ.90ರಷ್ಟು ಔಷಧಿ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿತ್ತು, ಬಹುತೇಕ ವರ್ತಕರು ಕಪ್ಪು ಪಟ್ಟಿ ಧರಿಸಿ ಮಳಿಗೆ ತೆರೆದು ವ್ಯಾಪಾರ ಮಾಡಿದರು. ಸರ್ಕಾರಿ ಆಸ್ಪತ್ರೆಗಳಲ್ಲಿನ ಔಷಧ ಮಳಿಗೆಗಳು, ಜನೌಷಧಿ ಕೇಂದ್ರ, ಆನ್‌ಲೈನ್ ಔಷಧ ಮಾರಾಟ ವ್ಯವಸ್ಥೆಗಳನ್ನು ಹೊಂದಿ ರುವ ಕಾರ್ಪೋರೆಟ್ ಹಾಗೂ ಫಾರ್ಮಾ ಕಂಪನಿಗಳು ಹಾಗೂ ಹಲವು ಖಾಸಗಿ ಔಷಧ ಮಳಿಗೆಗಳು ತೆರೆದಿದ್ದವು.



ಹೀಗಾಗಿ ನಗರದಲ್ಲಿ ಅಂತಹ ಸಮಸ್ಯೆ ಕಂಡುಬಂದಿಲ್ಲ. ಜತೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಬಂದ್ ಆಗಲಿದ್ದ ಕುರಿತು ಮಳಿಗೆಗಳ ಮಾಲೀಕರು ಗ್ರಾಹಕರಿಗೆ ತಿಳಿಸಿದ್ದರಿಂದ ಹಲವರು ಮುಂಜಾಗ್ರತೆಯಿಂದ ಔಷಧ ಖರೀದಿ ಮಾಡಿದ್ದರು. ಇದರಿಂದಾಗಿ ತೊಂದರೆ ತಪ್ಪಿದೆ ಎಂದು ಔಷಧ ವ್ಯಾಪಾರಗಳ ಸಂಘ ತಿಳಿಸಿದೆ.

ಕರ್ನಾಟಕ ಫಾರ್ಮಾ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಅಧ್ಯಕ್ಷ ಸಿ.ಜಯರಾಮ್ ಮಾತನಾಡಿ, ರಾಜ್ಯದಲ್ಲಿ ಶೇ. 99ರಷ್ಟು ಮಳಿಗೆಗಳು ತೆರೆದಿದ್ದವು. ರಾಜಧಾನಿ ಬೆಂಗಳೂರಿನಲ್ಲೂ ಮಳಿಗೆಗಳು ಬಂದ್ ಮಾಡಿರಲಿಲ್ಲ. ಮಳಿಗೆಗಳನ್ನು ಬಂದ್ ಮಾಡಿದರೆ ಆನ್‌ಲೈನ್ ವ್ಯಾಪಾರ ಹೆಚ್ಚಾಗುವ ಅಪಾಯವೇ ಹೆಚ್ಚು, ಹೀಗಾಗಿ ನಾವು ಇ ಫಾರ್ಮಸಿ ವಿರುದ್ಧ ಭಿನ್ನ ಹೋರಾಟ ನಡೆಸಲಿದ್ದೇವೆ ಎಂದು ತಿಳಿಸಿದರು.

ರಾಮ ಬಾಣ



ಪ್ರತ್ಯೇಕ ಪಾಲಿಕೆ ಅನುಮೋದನೆಗೆ ರಾಜ್ಯಪಾಲರಿಗೆ ಲಾಡ್ ಮನವಿ



ಬೆಂಗಳೂರು: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ಅನುಮೋದನೆ ನೀಡಬೇಕು ಎಂದು ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಧಾರವಾಡ ಶಾಸಕರ ನಿಯೋಗವು ರಾಜ್ಯಪಾಲರನ್ನು ಭೇಟಿ ಮಾಡಿ ಸಚಿವರು ಮನವಿ ಸಲ್ಲಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಲಾಡ್ ಅವರು, ಪ್ರತ್ಯೇಕ ಧಾರವಾಡ ಪಾಲಿಕೆ ಆಗಬೇಕು ಎಂದು ಹಲವು ವರ್ಷಗಳ ಬೇಡಿಕೆ ಇತ್ತು. ಹೋರಾಟವೂ ನಡೆದಿತ್ತು. ನಮ್ಮ ಸರ್ಕಾರ ಬಂದ ನಂತರ ಪ್ರತ್ಯೇಕ ಪಾಲಿಕೆ ಬೇಡಿಕೆಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳಿಸಲಾಗಿತ್ತು. ಒಂದು ವರ್ಷದಿಂದ ರಾಜ್ಯಪಾಲರಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ಇದೀಗ ಪ್ರತ್ಯೇಕ ಪಾಲಿಕೆ ಹೋರಾಟ ಸಮಿತಿಯವರು ಒತ್ತಡ ಹಾಕಲು ಆರಂಭಿಸಿದರು. ಸರ್ಕಾರದ ಪ್ರಸ್ತಾವನೆಯನ್ನು ಅಂಗೀಕರಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ ಎಂದರು. ಈ ವೇಳೆ ಶಾಸಕರಾದ ಪ್ರಸಾದ್ ಅಬ್ಬಯ್ಯ, ಎನ್.ಎಚ್ ಕೋನರಡ್ಡಿ, ಹೋರಾಟ ಸಮಿತಿ ಮುಖಂಡರಾದ ಬಿ.ಡಿ. ಹಿರೇಮಠ, ಹೂಡಾ ಮಾಜಿ ಅಧ್ಯಕ್ಷ ದಾನಪ್ಪ ಕಬ್ಬೇರ, ಪಾಲಿಕೆಯ ಮಾಜಿ ಸದಸ್ಯ ನಾಗರಾಜ್ ಗೌರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪುಷ್ಯ

ದಿನದ ಮಾತು

ವಿವೇಕಿಗಳು ಕೆಲಸವನ್ನು ಯಾವಾಗ ಮಾಡಬೇಕಾಗಿದೆಯೋ ಆಗಲೇ ಮಾಡುತ್ತಾರೆ.

▲ ನೀತಿಮಂಜರಿ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಜಗತ್ತಿಗೇ ಜೀವನ ಪಾಠವನ್ನು ಹೇಳಿರುವ ಹಿಂದೂ ಧರ್ಮವನ್ನು ವಿಶ್ವವೇ ಒಪ್ಪಿಕೊಂಡಿದೆ.ಇಂತಹ ಧರ್ಮದಲ್ಲಿ ಹುಟ್ಟಿದ್ದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕು – ಕನ್ಯಾಡಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ

– ವಿಶ್ವವೇ ಒಪ್ಪಿದರೂ ಜಾತ್ಯತೀತರು, ಬುದ್ಧಿ ಜೀವಿಗಳು , ಪ್ರಗತಿಪರರು ಒಪ್ಪುವ ವಿಶ್ವಾಸವಿಲ್ಲ, ಒಪ್ಪಿಕೊಂಡರೆ ಅವರಿಗೆ ಬದುಕಲು ಉದ್ಯೋಗವಿಲ್ಲ ಅಂತ ಆದೀತು!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಸವಾಲಿನ ದಿನ. ಹೆಚ್ಚು ಹೊಣೆ. ಆತ್ಮೀಯ ಸಂಬಂಧಕ್ಕೆ ಧಕ್ಕೆ. ಆಪ್ತ ಜತೆ ಮನಸ್ತಾಪ. ಧನವ್ಯಯ.

ವೃಷಭ ಈಡೇರಿಸಲು ಕಷ್ಟವಾದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ಟೀಕೆಗೆ ಎರವಾಗದಂತೆ ವರ್ತಿಸಿ. ಬಂಧುಗಳ ಜತೆ ನಯವಿನಯವಿರಲಿ.

ಮಿಥುನ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ ಹೊಸತನಕ್ಕೆ ಯತ್ನಿಸುವಿರಿ. ಬೇಸರ ಕಳೆಯಲು ಅದು ಒಳಿತು. ಮನಸ್ಸು ಉಲ್ಲಸಿತ ಗೊಳಿಸುವ ಪ್ರಸಂಗ. ಪ್ರೀತಿಸಾಫಲ್ಯ.

ಸಿಂಹ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿ ಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಕನ್ಯಾ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ.

ತುಲಾ ನಿಮ್ಮ ಕಠಿಣ ದುಡಿಮೆಗೆ ಉತ್ತಮ ಪ್ರತಿಫಲ. ಆದರೆ ಬೇಸರ ತರುವ ಕೆಲವು ಪ್ರಸಂಗ ಉಂಟಾದೀತು. ಸಂಬಂಧ ಹಳಸಬಹುದು.

ವೃಶ್ಚಿಕ ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಆದರೆ ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯವೂ ಮನಸ್ಸು ಕೆಡಿಸಬಹುದು.

ಧನು ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ವಿವೇಕದಿಂದ ಚಿಂತಿಸಿ. ಹಿರಿಯರ ಸಲಹೆ ಕೇಳಿರಿ. ಆರ್ಥಿಕ ಒತ್ತಡ ಹೆಚ್ಚು.

ಮಕರ ಮಾನಸಿಕ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಮನಸ್ಸು ದೃಢವಾಗಿರಲಿ.

ಕುಂಭ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಮೀನ ಒಳಿತು, ಕೆಡಕು ಎರಡನ್ನೂ ಇಂದು ಕಾಣುವಿರಿ. ಉದ್ವಿಗ್ನ ಸ್ಥಿತಿ ಎದುರಿಸಿದರೂ ಪರಿಹಾರದ ನಿರಾಳತೆ ಕೂಡಾ ಸಿಗಲಿದೆ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 1,8,3,6

ವಿವಿಗಳಲ್ಲಿ ಗೌರವ ಡಾಕ್ಟರೇಟ್, ಪಠ್ಯಕ್ರಮ ಸಮಗ್ರ ಪರಿಶೀಲನೆ

ವಸ್ತ್ರಸಂಹಿತೆ ವರದಿಗೆ ಸಮಿತಿ

ಬೆಂಗಳೂರು: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ, ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ, ಗೌರವ ಡಾಕ್ಟರೇಟ್ ಪ್ರದಾನ ಕುರಿತಂತೆ ಸಮಗ್ರ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಮೂರು ಪ್ರತ್ಯೇಕ ಉಪ ಸಮಿತಿಗಳನ್ನು ರಚಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ ಮತ್ತು ಪರಿಷ್ಕರಣೆ ಕುರಿತಂತೆ ಪರಿಶೀಲನೆ ನಡೆಸಲು ರಚಿಸಲಾದ ಪಠ್ಯಕ್ರಮ ಸಮಿತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಬಿ. ತಿಮ್ಮೇಗೌಡ ಅವರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸಮಿತಿಯ ಸದಸ್ಯರಾಗಿ ಮಹಾರಾಜ ಛತ್ರಸಾಲ್ ಬುಂದೇಲ್ಖಂಡ್ ವಿವಿ ಮಾಜಿ ಕುಲಪತಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಮಂಗಳೂರು ವಿವಿ ಕುಲಪತಿ ಡಾ. ಪಿ.ಎಲ್. ಧರ್ಮ ಅವರನ್ನು ನೇಮಿಸಲಾಗಿದೆ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.ಟಿ

ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಹಾಗೂ ಏಕರೂಪದ ವಸ್ತ್ರಸಂಹಿತೆ ರೂಪಿಸುವ ಕುರಿತು ಪರಿಶೀಲನೆ ನಡೆಸಲು ಜನಪದ ವಿವಿ ಮಾಜಿ ಕುಲಪತಿ ಡಾ. ಅಂಬಳಿಕೆ ಹಿರಿಯಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಎ. ಮುರುಗಪ್ಪ ಅವರನ್ನು ನೇಮಿಸಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಈ ಸಮಿತಿಯ ಸಂಚಾಲಕರಾಗಿರುತ್ತಾರೆ.

ಗೌರವ ಡಾಕ್ಟರೇಟ್ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನಕ್ಕೆ ಸಂಬಂಧಿಸಿದ ನಿಯಮಾವಳಿ ಹಾಗೂ ಮಾರ್ಗಸೂಚಿಗಳ ಕುರಿತು ಪರಿಶೀಲನೆ ನಡೆಸಲು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಟಿ.ಡಿ. ಕೆಂಪರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಜಯಕರ ಎಸ್.ಎಂ. ಅವರನ್ನು ನೇಮಕ ಮಾಡಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಈ ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.



ಸರ್ಕಾರ ವಿಧಿಸಿರುವ ಷರತ್ತುಗಳು

ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಉಪ ಸಮಿತಿಗಳಿಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ. ಉಪ ಸಮಿತಿಗಳು ರಾಜ್ಯದ ವಿಶ್ವವಿದ್ಯಾಲಯಗಳೊಂದಿಗೆ ಸಮಾಲೋಚನೆ ನಡೆಸಿ, ಕೂಲಂಕಷ ಅಧ್ಯಯನ ಮತ್ತು ಪರಿಶೀಲನೆ ಮಾಡಿ ತುರ್ತಾಗಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಉಪ ಸಮಿತಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರಿಗೆ ಪ್ರಯಾಣ ಭತ್ಯೆ, ಉಪಾಹಾರ ಭತ್ಯೆ, ದಿನ ಭತ್ಯೆ ಸೇರಿದಂತೆ ಇತರೆ ವೆಚ್ಚಗಳನ್ನು ಆರ್ಥಿಕ ಇಲಾಖೆಯ ಚಾಲ್ತಿಯಲ್ಲಿರುವ ಆದೇಶಗಳು ಮತ್ತು ಸುತ್ತೋಲೆಗಳ ಅನುಸಾರ ಪಾವತಿಸಲಾಗುತ್ತದೆ. ಅಲ್ಲದೇ, ಉಪ ಸಮಿತಿಗಳ ಸಭೆಗಳಿಗೆ ಅಗತ್ಯವಾದ ಸ್ಥಳಾವಕಾಶ ಮತ್ತು ಆಡಳಿತಾತ್ಮಕ ಸಹಕಾರವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಒದಗಿಸಲಿದೆ ಎಂದು ಎಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಭಾರತ-ಇಟಲಿ ಬಲಿಷ್ಠ ಬಂಧ

ಪುಟ ೧➡ ಮಾತುಕತೆಯ ವೇಳೆ ಉಭಯ ನಾಯಕರು ಜಂಟಿ ವ್ಯೂಹಾತ್ಮಕ ಕ್ರಿಯಾ ಯೋಜನೆ 2025–2029ರ ಪ್ರಗತಿ ಪರಿಶೀಲಿಸಿದರು. ಇದು ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ಸಹಭಾಗಿತ್ವಕ್ಕೆ ದಿಕ್ಸೂಚಿಯಾಗಿದೆ. ಇದರೊಂದಿಗೆ, ಬಹುನಿರೀಕ್ಷಿತ ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್(ಐಎಂಇಸಿ) ಯೋಜನೆಗೆ ಮತ್ತಷ್ಟು ವೇಗ ನೀಡುವ ಕುರಿತು ಚರ್ಚಿಸಲಾಯಿತು.

ಅಧಿಕೃತ ಮಾತುಕತೆಗೂ ಮುನ್ನ, ಇಟಲಿ ಅಧ್ಯಕ್ಷ ಸೆರ್ಗಿಯೋ ಮಟ್ಟರೆಲ್ಲಾ ಅವರನ್ನು ಭೇಟಿಯಾದ ಮೋದಿ, ಕೃತಕ ಬುದ್ಧಿಮತ್ತೆ(ಎಐ), ಅತ್ಯಗತ್ಯ ಖನಿಜಗಳು, ಬಾಹ್ಯಾಕಾಶ, ಪರಮಾಣು ಶಕ್ತಿಯಂತಹ ಆಧುನಿಕ ಕ್ಷೇತ್ರಗಳಲ್ಲಿ ಕೈಜೋಡಿಸುವ ಬಗ್ಗೆ ಚರ್ಚಿಸಿದರು. ಪ್ರಧಾನಿ ಮೆಲೋನಿ, ಮೋದಿ ಅವರಿಗಾಗಿ ಔತಣಕೂಟ ಏರ್ಪಡಿಸಿದ್ದಲ್ಲದೆ, ಜಗತ್ಪ್ರಸಿದ್ಧ ರೋಮನ್ ಕಾಲೋಸಿಯಂಗೆ ಒಟ್ಟಾಗಿ ಭೇಟಿ ನೀಡಿದ್ದು ಉಭಯ ನಾಯಕರ ನಡುವಿನ ಆಪ್ತತೆಗೆ ಸಾಕ್ಷಿಯಾಯಿತು.

ಗಟ್ಟಿಯಾಗುತ್ತಿದೆ ಆರ್ಥಿಕ ಸಂಬಂಧ: 2025ರ ಅಂಕಿ–ಅಂಶಗಳ ಪ್ರಕಾರ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಬರೋಬ್ಬರಿ 14.25 ಬಿಲಿಯನ್ ಯೂರೋ ತಲುಪಿದೆ. ಇದರಲ್ಲಿ ಭಾರತದಿಂದ ಇಟಲಿಗೆ ಆದ ರಫ್ತು 8.55 ಬಿಲಿಯನ್ ಯೂರೋ ಆಗಿದ್ದರೆ, ಇಟಲಿಯಿಂದ ಭಾರತಕ್ಕೆ ಆದ ಆಮದು 5.70 ಬಿಲಿಯನ್ ಯೂರೋ. ಇದು 2024ಕ್ಕೆ ಹೋಲಿಸಿದರೆ ಶೇ.9.42ರಷ್ಟು ಪ್ರಗತಿ ಕಂಡಿದೆ. ಇದೀಗ 2029ರ ವೇಳೆಗೆ ವಾರ್ಷಿಕ ವ್ಯಾಪಾರವನ್ನು 20 ಬಿಲಿಯನ್ ಯೂರೋಗೆ ಕೊಂಡೊಯ್ಯುವ ಗುರಿ ಇಟ್ಟುಕೊಳ್ಳಲಾಗಿದೆ. ಯುರೋಪಿಯನ್ ಒಕ್ಕೂಟದಲ್ಲಿ ಇಟಲಿ ಭಾರತದ 4ನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದ್ದು, ಭಾರತಕ್ಕೆ ವಿಶೇಷ ಆದ್ಯತೆ ನೀಡಿದೆ.

ಇಟಲಿಯಲ್ಲಿ ಭಾರತೀಯರ ಸದ್ದು: ಸಾಂಸ್ಕೃತಿಕವಾಗಿಯೂ ಭಾರತೀಯರು ಇಟಲಿಯಲ್ಲಿ ಮನ್ನಣೆ ಗಳಿಸುತ್ತಿದ್ದಾರೆ. ಜನವರಿ 2025ರ ವರದಿ ಪ್ರಕಾರ, ಇಟಲಿಯಲ್ಲಿ ಸದ್ಯ 1,86,833 ಭಾರತೀಯರು ನೆಲೆಸಿದ್ದಾರೆ.

> **ದೇಶದ ಟಾಫಿ, ಅಂತಹುದೇ ಮಿಠಾಯಿ ವಸ್ತುಗಳ ರಫ್ತು ಕಳೆದ 12 ವರ್ಷಗಳಲ್ಲಿ ಶೇ.166ರಷ್ಟು ಏರಿಕೆಯಾಗಿ 2025-26ರಲ್ಲಿ 132 ಕೋಟಿ ರೂ. ತಲುಪಿದೆ. ಈ ವಸ್ತುಗಳ ರಫ್ತು 2013-14ರಲ್ಲಿ 49.68 ಕೋಟಿ ರೂ.ಗಳಷ್ಟಿತ್ತು.**
>
> ■ **ಪಿಯೂಷ್ ಗೋಯಲ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ**

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು

ಪುಟ ೧➡ ಈ ವರ್ಷವೇ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಅಗತ್ಯ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸಲು ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದರು. ಜತೆಗೆ, ಕೆಪಿಎಸ್ ಶಾಲೆಗಳಿಗೆ ಶಾಲಾ ಬಸ್ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು, ಅಲ್ಲದೇ, ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ತಕ್ಷಣ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಮುಖ್ಯಮಂತ್ರಿ ಆದೇಶಿಸಿದರು.

ಎಸ್ಸೆಸ್ಸೆಸ್ಸಿ, ದ್ವಿತೀಯ ಪಿಯುಸಿ ಫಲಿತಾಂಶ ಹೆಚ್ಚಳ: ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶಗಳ ಸುಧಾರಣೆ ಕುರಿತೂ ಚರ್ಚೆ ನಡೆದಿದ್ದು, ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.94.10ರಷ್ಟು ಉತ್ತೀರ್ಣ ಪ್ರಮಾಣ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.14.06ರಷ್ಟು ಹೆಚ್ಚಳವಾಗಿದೆ. ದ್ವಿತೀಯ ಪಿಯುಸಿಯಲ್ಲಿ ಶೇ.86.48ರಷ್ಟು ಫಲಿತಾಂಶ ದಾಖಲಾಗಿದ್ದು, ಕಳೆದ ಸಾಲಿನ ಶೇ.73.45ಗಿಂತ ಶೇ.13.03ರಷ್ಟು ಹೆಚ್ಚಳವಾಗಿದೆ ಎಂದರು. ಎಸ್‌ಎಸ್‌ಎಲ್ ಸಿಯಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ ಕಳೆದ ವರ್ಷದ 766 ರಿಂದ ಈ ಬಾರಿ 2,393ಕ್ಕೆ ಏರಿಕೆಯಾಗಿದೆ. ಎಸ್‌ಸಿ ಹಾಗೂ ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಶೇ.18ರಷ್ಟು ಏರಿಕೆ ಕಂಡುಬಂದಿದ್ದು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಾಧನೆಯಲ್ಲಿಯೂ ಗಮನಾರ್ಹ ಸುಧಾರಣೆ ದಾಖಲಾಗಿದೆ ಎಂದು ಹೇಳಿದರು. ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ.94.80 ದಾಖಲಾಗಿದ್ದರೆ, ನಗರ ಪ್ರದೇಶದಲ್ಲಿ ಶೇ.93.20 ದಾಖಲಾಗಿದೆ. ದ್ವಿತೀಯ ಪಿಯುಸಿಯಲ್ಲೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇ.87.62 ಆಗಿದ್ದು, ನಗರ ಪ್ರದೇಶದಲ್ಲಿ ಶೇ.85.95 ದಾಖಲಾಗಿದೆ ಎಂದು ವಿವರಿಸಿದರು.



> **ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡಿಲ್ಲ ಹಾಗೂ ಮೂರನೇ ಪರೀಕ್ಷೆ ಇರುವುದಿಲ್ಲ. ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳ ಜತೆಗೆ ಉಚಿತ ನೋಟ್‌ಬುಕ್ ವಿತರಣೆ ಮಾಡುವ ಬೇಡಿಕೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.**
>
> ■ **ಸಿದ್ದರಾಮಯ್ಯ, ಮುಖ್ಯಮಂತ್ರಿ**

ಶಿವಾನಂದ್ ನೀಲಣ್ಣವರ ಬೆಂಗಳೂರಿಗೆ ಶಿಫ್ಟ್

ಬೆಳಗಾವಿ: ಬಹುಕೋಟಿ ವಂಚನೆಯ ಆರೋಪಿ ಶಿವಾನಂದ ನಿಲಣ್ಣವರ ಅವರನ್ನು ನ್ಯಾಯಾಲಯ ಮಂಗಳವಾರ ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಆದರ ಬೆನ್ನಲೆ ಬೆಳಗಾವಿಯಿಂದ ನೇರವಾಗಿ ಬೆಂಗಳೂರಿಗೆ ಶಿಫ್ಟ್ ಮಾಡಲಾಗಿದೆ. ಬೆಳಗಾವಿಯನ್ನಷ್ಟೇ ಅಲ್ಲದೆ ಇಡೀ ರಾಜ್ಯವನ್ನೇ ನಡುಗಿಸಿದ್ದ 4,500 ಕೋಟಿ ರೂಪಾಯಿ ವಂಚನೆ ಪ್ರಕರಣದ ತನಿಖೆ ಈಗ ಮತ್ತಷ್ಟು ತೀವ್ರಗೊಂಡಿದೆ ಎನ್ನಲಾಗಿದೆ.

ಮಾಳಮಾರುತಿ ಪೊಲೀಸ್ ಠಾಣೆಯಲ್ಲಿದ್ದ ಆರೋಪಿ ಶಿವಾನಂದ ನೀಲಣ್ಣವರ್‌ನನ್ನು ಸಿಐಡಿ ಅಧಿಕಾರಿಗಳ ತಂಡ ಬಿಗಿ ಭದ್ರತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ.

ಮೊದಲನೇ ವಾಹನದಲ್ಲಿ ಕೇವಲ ಆರೋಪಿ ಶಿವಾನಂದ ನೀಲಣ್ಣವನವರನ್ನು ಕೂರಿಸಿಕೊಂಡು ಬರಲಾಗುತ್ತಿದ್ದರೆ, ಎರಡನೇ ವಾಹನದಲ್ಲಿ ಈ ಹಗರಣದಲ್ಲಿ ಜಪ್ತಿ ಮಾಡಲಾದ ನೂರಾರು ಮಹತ್ವದ ದಾಖಲೆಗಳು, ಕಂಪ್ಯೂಟರ್‌ಗಳು, ಲ್ಯಾಪ್ಟಾಪ್ಗಳು, ಪೆನ್ ಡ್ರೈವ್ ಹಾಗೂ ಮೊಬೈಲ್ ಫೋನ್‌ಗಳನ್ನು ಈ ವಾಹನದಲ್ಲಿ ಬೆಂಗಳೂರಿಗೆ ತರಲಾಗುತ್ತಿದೆ.

ನ್ಯಾಯಾಲಯವು ನಿನ್ನೆಯಷ್ಟೇ ಆರೋಪಿ ಶಿವಾನಂದನನ್ನು ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಕೋರ್ಟ್‌ನಿಂದ ಗ್ರೀನ್ ಸಿಗ್ನಲ್ ಸಿಗುತ್ತಿದ್ದಂತೆ ಅಲರ್ಟ್ ಆದ ಅಧಿಕಾರಿಗಳು, ಕಾಲಹರಣ ಮಾಡದೆ ಬೆಂಗಳೂರಿನ ಮುಖ್ಯ ಕಚೇರಿಯಲ್ಲಿ ವಿಚಾರಣೆ ನಡೆಸಲು ತಯಾರಿ ಮಾಡಿಕೊಂಡಿದ್ದಾರೆ.

35 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶ

ಬೆಂಗಳೂರು: ಅಂತಾರಾಜ್ಯ ಮಟ್ಟದ ಬೃಹತ್ ಮಾದಕ ವಸ್ತುಗಳ ಜಾಲವನ್ನು ಭೇದಿಸುವಲ್ಲಿ ಹೆಬ್ಬಾಳ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೊಸದಿಲ್ಲಿಯಿಂದ ನಗರಕ್ಕೆ ಡ್ರಗ್ಸ್ ತಂದು ಮಾರಾಟ ಮಾಡುತ್ತಿದ್ದ ಮೂವರು ವಿದೇಶಿಗರು ಸೇರಿದಂತೆ ಒಟ್ಟು ಎಂಟು ಮಂದಿ ಅಂತಾರಾಜ್ಯ ಡ್ರಗ್ ಪೆಡ್ಲರ್‌ಗಳನ್ನು ಪೊಲೀಸರು ಹೆಡೆಮುರಿಕಟ್ಟಿದ್ದಾರೆ. ಬಂಧಿತರಿಂದ ಬರೋಬ್ಬರಿ 35 ಕೋಟಿ ರೂ. ಮೌಲ್ಯದ 17.500 ಕೆ.ಜಿ. ಎಂಡಿಎಂಎ, 2 ಕಾರನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಬುಧವಾರ ಆಯುಕ್ತರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಕರಣದ ಬಗ್ಗೆ ವಿವರಿಸಿದ ಅವರು, ಸೆನೆಗಲ್ ಮೂಲದ ಡನ್ಫಾ ಗೆರಾಲ್ಡ್, ತಾಂಜೇನಿಯಾದ ಮೆಗ್ರಾತ್, ನೈಜೀರಿಯಾದ ಒಬಿಯಾನಿಜ್ ರೀಟಾ ಎಂಬ ವಿದೇಶಿ ಪ್ರಜೆಗಳೊಂದಿಗೆ, ಹೊಸದಿಲ್ಲಿ ಮೂಲದ ರೀನಾ ಯಾದವ್, ದೆಬಾಶಿಶ್ ಬ್ಯಾನರ್ಜಿ ಮತ್ತು ಬೆಂಗಳೂರಿನ ಸ್ಥಳೀಯ ಪೆಡ್ಲರ್‌ಗಳಾದ ಧೀರಜ್, ಮೊಹಮ್ಮದ್ ಮನ್ಸೂರ್ ಹಾಗೂ ಅಬ್ದುಲ್ ಸಮದ್ ಎನ್ನುವ ಆರೋಪಿಗಳನ್ನು ಬಂಧಿಸಲಗಿದೆ ಎಂದು ತಿಳಿಸಿದರು.

ಸರಣಿ ದಾಳಿ ನಡೆಸಿ ಖೆಡ್ಡಾಕ್ಕೆ ಕೆಡವಿದ ಖಾಕಿ ಪಡೆ: ಮೊದಲಿಗೆ ಹೆಬ್ಬಾಳದ ಆನಂದನಗರದ ಸಮೀಪ ಅನುಮಾನಾಸ್ಪದವಾಗಿ ದಂಧೆಯಲ್ಲಿ ತೊಡಗಿದ್ದ ಮೂವರನ್ನು ವಶಕ್ಕೆ ಪಡೆದ ಪೊಲೀಸರು, ಅವರ ಬಳಿಯಿದ್ದ 4.300ಕೆ.ಜಿ. ಎಂಡಿಎಂಎ ವಶಪಡಿಸಿಕೊಂಡಿದ್ದರು. ಅವರ ನೀಡಿದ ಸುಳಿವಿನ ಮೇರೆಗೆ ಕಾರ್ಯಾಚರಣೆ ವಿಸ್ತರಿಸಿದ ಪೊಲೀಸರು, ಸರ್ಜಾಪುರದ ಚೂಡಸಂದ್ರದಲ್ಲಿರುವ ಸ್ಥಳೀಯ ಪೆಡ್ಲರ್ ಮೊಹಮ್ಮದ್ ಮನ್ಸೂರ್ ನಿವಾಸದ ಮೇಲೆ ದಾಳಿ ನಡೆಸಿ 10 ಕೆ.ಜಿ. ಎಂಡಿಎಂಎ ಪತ್ತೆ ಮಾಡಿದ್ದರು. ಇದರ ಬೆನ್ನಲ್ಲೇ ಅಬ್ದುಲ್ ಸಮದ್ ಎಂಬಾತನ ಹೆಣ್ಣೂರಿನ ನಿವಾಸದ ಮೇಲೆಯೂ ದಾಳಿ ನಡೆಸಿ 3.5 ಕೆ.ಜಿ. ಮಾದಕ ವಸ್ತುವನ್ನು ಜಪ್ತಿ ಮಾಡಲಾಗಿತ್ತು.

ಆರೋಪಿಗಳ ತೀವ್ರ ವಿಚಾರಣೆ ನಡೆಸಿದಾಗ ಈ ಜಾಲವು ದೆಹಲಿ ಮತ್ತು ಹರಿಯಾಣದವರೆಗೂ ವಿಸ್ತರಿಸಿರುವುದು ಬಯಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಸುಮಾರು 40 ಜನ ಪೊಲೀಸ್ ಸಿಬ್ಬಂದಿಗಳ ವಿಶೇಷ ತಂಡವು ದೆಹಲಿಗೆ ತೆರಳಿ, ಅಲ್ಲಿ ಒಂದು 15 ದಿನಕ್ಕೂ ಹೆಚ್ಚು ಕಾಲ ಬೀಡುಬಿಟ್ಟು ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಹಾಗೂ ಜೆ.ಸಿ.ನಗರ ಎಸಿಪಿ ಕೆ.ಎಸ್. ತನ್ವಿರ್ ಅವರ ಮಾರ್ಗದರ್ಶನದಲ್ಲಿ ಹೆಬ್ಬಾಳ ಪೊಲೀಸರು ನಡೆಸಿರುವ ಈ ಬೃಹತ್ ಮತ್ತು ಸಾಹಸಮಯ ಕಾರ್ಯಾಚರಣೆಗೆ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ 2 ಲಕ್ಷ ರೂ.ಬಹುಮಾನ ಘೋಷಣೆ ಮಾಡಿದರು.



ಸೀರೆ, ಇಸ್ತ್ರಿ ಪೆಟ್ಟಿಗೆ ಟೇಬಲ್‌ಗಳಲ್ಲಿ ಡ್ರಗ್ಸ್ ಸಾಗಾಟ!

ಬಂಧಿತ ಆರೋಪಿಗಳು ಯಾರಿಗೂ ಸಂಶಯ ಬಾರದಂತೆ ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದರು. ತಾವು ಉಡುಗೊರೆ ನೀಡುವ ನೆಪದಲ್ಲಿ ಸೀರೆಗಳು, ಬಟ್ಟೆ ಇಸ್ತ್ರಿ ಮಾಡಲು ಬಳಸುವ ಟೇಬಲ್‌ಗಳು ಮತ್ತು ಕುರ್ಚಿಗಳ ಒಳಭಾಗದಲ್ಲಿ ಎಂಡಿಎಂಎ ಅಡಗಿಸಿ, ಸುಂದರವಾಗಿ ಪ್ಯಾಕ್ ಮಾಡುತ್ತಿದ್ದರು. ನಂತರ ಇವುಗಳನ್ನು ಹೊಸದಿಲ್ಲಿಯಿಂದ ರೈಲಿನ ಮೂಲಕ ಬೆಂಗಳೂರಿಗೆ ತರುತ್ತಿದ್ದರು. ಹೀಗೆ ನಗರಕ್ಕೆ ತಲುಪುತ್ತಿದ್ದ ಡ್ರಗ್ಸ್ ಅನ್ನು ನಿರ್ಜನ ಪ್ರದೇಶಗಳಲ್ಲಿ ನಿಲ್ಲಿಸುತ್ತಿದ್ದ ಕಾರುಗಳಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು ಎಂಬ ಆಘಾತಕಾರಿ ವಿಷಯ ತನಿಖೆಯಿಂದ ಬೆಳಕಿಗೆ ಬಂದಿದೆ.

ಯುಎಸ್ 42 ಯುದ್ಧ ವಿಮಾನಗಳು ನಾಶ!

ಪುಟ ೧➡ ಏಳು ಕೆಸಿ–135 ಸ್ಟ್ರಾಟೋಟ್ಯಾಂಕರ್ ಇಂಧನ ತುಂಬುವ ವಿಮಾನಗಳು, ಒಂದು ಇ–3 ಸೆಂಟ್ರಿ ಅವಾಕ್ಸ್, ಎರಡು ಎಂಸಿ–130ಜೆ ಕಮಾಂಡೋ–II ವಿಶೇಷ ಕಾರ್ಯಾಚರಣೆ ವಿಮಾನಗಳು ಹಾಗೂ ಎಚ್‌ಎಚ್–60ಡಬ್ಲ್ಯು ಜಾಲಿ ಗ್ರೀನ್–II ಹೆಲಿಕಾಪ್ಟರ್ ಸೇರಿವೆ. ಇದರ ಜತೆಗೆ 24 ಎಂಕ್ಯು–9 ರೀಪರ್ ಡ್ರೋನ್ ಹಾಗೂ ಒಂದು ಎಂಕ್ಯು–4ಸಿ ಟ್ರೈಟಾನ್ ಡ್ರೋನ್ ಕಳೆದುಕೊಂಡಿರುವುದಾಗಿ ತಿಳಿಸಲಾಗಿದೆ. 2026ರ ಫೆ.28ರಂದು ಆರಂಭವಾದ ಈ ಕಾರ್ಯಾಚರಣೆ ಮಧ್ಯಪ್ರಾಚ್ಯದಲ್ಲಿ ವಾಯು, ಸಮುದ್ರ ಮತ್ತು ಕ್ಷಿಪಣಿ ದಾಳಿಗಳ ಮೂಲಕ ಮುಂದುವರಿದಿತ್ತು. ಏಪ್ರಿಲ್‌ನಲ್ಲಿ ಕದನ ವಿರಾಮ ಘೋಷಣೆಯಾದ ಬಳಿಕ ದಾಳಿಗಳು ನಿಧಾನಗೊಂಡರೂ, ಕೆಲವು ವಾರಗಳ ಬಳಿಕ ಮತ್ತೆ ಉದ್ವಿಗ್ನತೆ ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

ಪುಟ ೧➡ ಹಿಂದೆ ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ ಸರ್ಕಾರ ಎಸ್‌ಐಆರ್ ಮತ್ತು ಜನಗಣತಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಸಿಬ್ಬಂದಿ ಕೊರತೆ ಎದುರಾಗಲಿದೆ. ಆದ್ದರಿಂದ ಚುನಾವಣೆ ನಡೆಸಲು ಸೆಪ್ಟೆಂಬರ್ 30ರವರೆಗೆ ಸಮಯಾವಕಾಶ ಕೋರಿ ಮನವಿ ಸಲ್ಲಿಸಿತ್ತು. ಆದರೆ ಕೋರ್ಟ್ ಎರಡು ತಿಂಗಳು ಹೆಚ್ಚುವರಿ ಸಮಯ ನೀಡಿ, ಅಂದರೆ ಆ.31 ರೊಳಗೆ ಚುನಾವಣೆ ನಡೆಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಕೋರ್ಟ್‌ನಲ್ಲಿ ಏನಾಯ್ತು?: ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲ ಡಾ. ಅಭಿಷೇಕ್ ಮನು ಸಿಂಘ್ವಿ ಐದು ಪಾಲಿಕೆಗಳಿಗೆ ಜೂನ್ 30 ರೊಳಗೆ ಚುನಾವಣೆ ನಡೆಸುವಂತೆ ಈ ಹಿಂದೆ ನಿರ್ದೇಶಿಸಲಾಗಿತ್ತು. ಆದರೆ ಸಿಬ್ಬಂದಿ ಕೊರತೆ ಇರುವುದರಿಂದ ಎರಡರಿಂದ ಮೂರು ತಿಂಗಳು ಕಾಲಾವಕಾಶ ಕೇಳುತ್ತಿದ್ದೇವೆ ಅಷ್ಟೆ. ಚುನಾವಣೆ ನಡೆಸಲು ಈಗಾಗಲೇ ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ ಎಂದು ವಿವರಿಸಿದರು.

ಚುನಾವಣೆ ಮುಂದೂಡಿಕೆ ವಿರೋಧಿಸಿ ವಕೀಲ ರಂಗನಾಥ್ ಪರವಾಗಿ ಹಾಜರಾಗಿದ್ದ ವಕೀಲ ಪರಮೇಶ್ವರ್, ನ್ಯಾಯಾಲಯವು ಹಲವು ಬಾರಿ ಕಾಲಾವಕಾಶ ನೀಡಿದ್ದು, 15 ದಿನ ಹೆಚ್ಚುವರಿ ಕಾಲಾವಕಾಶ ನೀಡಬಹುದು. ಅದರ ಮೇಲೆ ಸಮಯ ನೀಡಕೂಡದು ಎಂದು ವಾದಿಸಿದರು.

ಚುನಾವಣಾ ಆಯೋಗದ ಪರ ವಕೀಲ ಕೆ.ಎನ್ .ಫಣೀಂದ್ರ ಜಿಬಿಎ ಮುಖ್ಯಸ್ಥರು ಚುನಾವಣೆ ನಡೆಸಲು ಡಿಸೆಂಬರ್‌ವರೆಗೆ ಕಾಲಾವಕಾಶ ಕೋರಿದ್ದಾರೆ. ಆದರೆ ಮತ್ತೊಮ್ಮೆ ನ್ಯಾಯಾಲಯದ ಮುಂದೆ ಬರಲು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಅಂತಿಮಮವಾಗಿ ಕೋರ್ಟ್ ಚುನಾವಣೆ ನಡೆಸಲು ಆ.31ಕ್ಕೆ ಗಡುವು ನೀಡಿ, ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಲಾಗಿದೆ ಎಂದು ಆದೇಶಿಸಿತು.



> **ಸೋಲುವ ಭಯದಿಂದ ಜಿಬಿಎ ಚುನಾವಣೆಯನ್ನು ರಾಜ್ಯ ಸರ್ಕಾರ ಪದೇ ಪದೆ ಮುಂದೂಡುತ್ತಿದ್ದು, ಇದು ಬೆಂಗಳೂರು ಜನತೆಗೆ ಮಾಡುತ್ತಿರುವ ದ್ರೋಹ**
>
> ■ **ಆರ್.ಅಶೋಕ್, ಪ್ರತಿಪಕ್ಷ ನಾಯಕ**

ಇನ್ನಾದರೂ ನಡೆಯಲಿ ಚುನಾವಣೆ

ಸುಪ್ರೀಂ ಕೋರ್ಟ್ ಆ.31ಕ್ಕೆ ನೀಡಿರುವ ಗಡುವು ಅಂತಿಮ ಗಡುವಾಗಲಿ. ಇನ್ನಾದರೂ ಜಿಬಿಎಗೆ ಚುನಾವಣೆ ನಡೆಯಲಿ. 11 ವರ್ಷಗಳಿಂದ ಚುನಾವಣೆ ನಡೆಯದೆ, 6 ವರ್ಷದಿಂದ ಸ್ಥಳೀಯ ಜನಪ್ರತಿನಿಧಿಗಳಿಲ್ಲದೆ ಬೆಂಗಳೂರು ಹಲವು ಸಮಸ್ಯೆ ಎದುರಿಸುತ್ತಿದೆ. ಆದ್ದರಿಂದ ಆದಷ್ಟು ಶೀಘ್ರ ಚುನಾವಣೆ ನಡೆಯಲಿ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

> **ಈಗ ಸುಪ್ರೀಂಕೋರ್ಟ್ ನೀಡಿರುವ ಅವಧಿ ವಿಸ್ತರಣೆ ಕೊನೆಯ ಅವಕಾಶವಾಗಬೇಕು. ಸರ್ಕಾರ ಮತ್ತು ಚುನಾವಣಾ ಆಯೋಗ ಇದನ್ನು ಕಟ್ಟುನಿಟ್ಟಿನ ಗಡುವಾಗಿ ಪರಿಗಣಿಸಿ, ವಿಳಂಬವಿಲ್ಲದೆ ಚುನಾಯಿತ ಸ್ಥಳೀಯ ಆಡಳಿತವನ್ನು ಪುನಃ ಸ್ಥಾಪಿಸಬೇಕು.**
>
> ■ **ರಿಷ್ವಂಜಸ್ ರಿಷಿ ರಾಘವನ್, ಬಿಎಸ್‌ಪಿ ಯುವ ಘಟಕದ ನಾಯಕ**

ಅಧಿಕಾರಿ ನಿರ್ಲಕ್ಷ್ಯ: ವರದಿ ಬಹಿರಂಗ

ಬೆಂಗಳೂರು: ಬೌರಿಂಗ್ ಆ್ಯಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ನಡೆದಿದ್ದ ಭೀಕರ ಕಾಂಪೌಂಡ್ ಗೋಡೆ ಕುಸಿತ ದುರಂತಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ, ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಹಾಗೂ ಸುರಕ್ಷತಾ ಕ್ರಮಗಳ ಕೊರತೆಯೇ ಪ್ರಮುಖ ಕಾರಣ ಎಂಬುದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ತನಿಖಾ ವರದಿಯಲ್ಲಿ ಬಹಿರಂಗವಾಗಿದೆ.

ಏ.29ರಂದು ಸಂಭವಿಸಿದ್ದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿತ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಈ ದುರಂತದಲ್ಲಿ ಹಲವು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಗುತ್ತಿಗೆದಾರರ ಬೇಜವಾಬ್ದಾರಿತನ ಸ್ಪಷ್ಟವಾಗಿ ಬೆಳಕಿಗೆ ಬಂದಿದೆ. ಘಟನೆಯಲ್ಲಿ 7 ಮಂದಿ ಸಾವನ್ನಪ್ಪಿ, ಇನ್ನೂ 7 ಮಂದಿ ಗಾಯಗೊಂಡಿದ್ದರು. ಪ್ರಕರಣದ ಗಂಭೀರತೆಯನ್ನು ಗಮನಿಸಿ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ತನಿಖೆ ನಡೆಸಿತ್ತು.

ಮೇ 14ರಂದು ಸ್ಥಳ ಪರಿಶೀಲನೆ ನಡೆಸಿದ ಬಳಿಕ ಸಿದ್ಧಪಡಿಸಲಾದ ವರದಿಯಲ್ಲಿ ಆಸ್ಪತ್ರೆ ಆವರಣದಲ್ಲಿ ನಡೆದಿದ್ದ ಅವೈಜ್ಞಾನಿಕ ಕಾಮಗಾರಿಗಳು ಮತ್ತು ತ್ಯಾಜ್ಯ ವಿಲೇವಾರಿಯ ಬಗ್ಗೆ ಗಂಭೀರ ಆಕ್ಷೇಪ ವ್ಯಕ್ತಪಡಿಸಲಾಗಿದೆ. ವರದಿ ಪ್ರಕಾರ, ಆಸ್ಪತ್ರೆ ಆವರಣದ ಸುಮಾರು 22 ಸಾವಿರ ಚದರ ಅಡಿ ಪ್ರದೇಶದಲ್ಲಿ ಎಎಸ್‌ಆರ್ ಟ್ರೇಡರ್ಸ್ ಸಂಸ್ಥೆಯು ಕಟ್ಟಡ ಕಾಮಗಾರಿಯಿಂದ ಉಂಟಾದ ಜಿಬಿಎ ತ್ಯಾಜ್ಯ, ಮಣ್ಣು ಹಾಗೂ ಇತರ ಅವಶೇಷಗಳನ್ನು ನಿಯಮ ಉಲ್ಲಂಘಿಸಿ ರಾಶಿ ಹಾಕಿತ್ತು.

ಈ ತ್ಯಾಜ್ಯವನ್ನು ಗೋಡೆಯ ಸಮೀಪವೇ ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿದ್ದರಿಂದ ಗೋಡೆಯ ಮೇಲೆ ಅತಿಯಾದ ಒತ್ತಡ ನಿರ್ಮಾಣವಾಗಿತ್ತು. ಜತೆಗೆ ಮಳೆ ನೀರು ಸರಿಯಾಗಿ ಹರಿದು ಹೋಗಲು ಯಾವುದೇ ಸಮರ್ಪಕ ವ್ಯವಸ್ಥೆ ಮಾಡದಿರುವುದರಿಂದ ಗೋಡೆಯ ಅಡಿಪಾಯ ದುರ್ಬಲಗೊಂಡು ಕುಸಿತ ಸಂಭವಿಸಿದೆ ಎಂದು ವರದಿ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರ ಸಂಸ್ಥೆಯಾದ ಎಎಸ್‌ಆರ್ ಟ್ರೇಡರ್ಸ್ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ರಾಜ್ಯದಲ್ಲಿ ₹6 ಸಾವಿರ ಕೋಟಿ ಹೂಡಿಕೆ: ಎಂ.ಬಿ. ಪಾಟೀಲ




ಬೆಂಗಳೂರು: ವೈಮಾನಿಕ ಹಾಗೂ ರಕ್ಷಣಾ ವಲಯದ ಬೆಂಗಳೂರು ಮೂಲದ ಆಕ್ಸಿಸ್ಕೇಡ್ಸ್ ಏರೋಸ್ಪೇಸ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ರಾಜ್ಯದಲ್ಲಿ 6 ಸಾವಿರ ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಗೆ ಮುಂದೆ ಬಂದಿದೆ. 200 ಎಕರೆ ಪ್ರದೇಶದಲ್ಲಿ ವೈಮಾನಿಕ, ರಕ್ಷಣೆ, ಸೆಮಿಕಂಡಕ್ಟರ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಸಾಧಿನ್ನತ ಕ್ಷೇತ್ರಗಳಲ್ಲಿ ಉತ್ಪಾದನೆ, ಪರೀಕ್ಷೆ ನಿರ್ವಹಣೆಯ ಸಮಗ್ರ ಕೇಂದ್ರ ಸ್ಥಾಪಿಸುವುದು ಆಕ್ಸಿಸ್ಕೇಡ್ಸ್ ಏರೋಸ್ಪೇಸ್ ಮುಖ್ಯ ಉದ್ದೇಶವಾಗಿದೆ.

ಬುಧವಾರ ಖನಿಜ ಭವನದಲ್ಲಿ ಕಂಪನಿಯ ಉನ್ನತಾಧಿಕಾರಿಗಳ ಜೊತೆಗೆ ನಡೆದ ವಿಸ್ತೃತ ಸಮಾಲೋಚನೆಯ ನಂತರ ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದ್ದು, ಕಂಪನಿಯು ಹಂತ ಹಂತವಾಗಿ ಒಟ್ಟು 6 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ ರಾಜ್ಯದಲ್ಲಿ ಪ್ರತ್ಯಕ್ಷವಾಗಿ 20 ಸಾವಿರ ಹಾಗೂ ಪರೋಕ್ಷವಾಗಿ 54 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಜಾಗತಿಕ ಪಾಲುದಾರಿಕೆಯ ದೇಶೀಯವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಲಿದೆ ಎಂದು ತಿಳಿಸಿದರು.

ಕ್ಷಿಪಣಿ ತಯಾರಿಕೆಯ ಪೂರಕ ಸೌಲಭ್ಯ, ರೇಡಾರ್-ಸಂವೇದಕ, ಯುದ್ಧ ವಿಮಾನಗಳ ದುರಸ್ತಿ-ನಿರ್ವಹಣೆ ಸೌಲಭ್ಯ (ಎಂಆರ್‌ಒ) ಸೇರಿದಂತೆ ವೈಮಾನಿಕ ಹಾಗೂ ರಕ್ಷಣಾ ವಲಯದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಉದ್ದೇಶಿಸಿದೆ. ಮೊದಲ ಹಂತದಲ್ಲಿ 1,290 ಕೋಟಿ ರೂ., 2ನೇ ಹಂತದಲ್ಲಿ 2,898 ಕೋಟಿ ರೂ. ಮತ್ತು 3ನೇ ಹಂತದಲ್ಲಿ 1,512 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಸಚಿವರು ವಿವರಿಸಿದರು. ಈ ಯೋಜನೆ ಕಾರ್ಯಗತಗೊಳಿಸಲು ಕಂಪನಿಯು ದೇವನಹಳ್ಳಿ ಬಳಿ ಭೂಮಿ ಒದಗಿಸಲು ಮನವಿ ಮಾಡಿಕೊಂಡಿದೆ. 1.8 ಕಿ.ಮೀ ಉದ್ದದ ರನ್ ವೇ ನಿರ್ಮಾಣದ ಉದ್ದೇಶ ಕೂಡ ಇದೆ ಎಂದು ಕಂಪನಿ ಹೇಳಿದೆ ಎಂದು ತಿಳಿಸಿದರು.

ಚೆಕ್ ವಿತರಣೆ



ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾದ 6 ಕೋಟಿ ರೂ.ಗಳ ಚೆಕ್ಕನ್ನು ಮಂಡಳಿಯ ಅಧ್ಯಕ್ಷ ಶಾಸಕ ನರೇಂದ್ರ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಕಾವೇರಿ ನಿವಾಸದಲ್ಲಿ ಹಸ್ತಾಂತರಿಸಿದರು. ಪರಿಸರ ಮತ್ತು ಅರಣ್ಯ ಸಚಿವ ಈಶ್ವರ ಖಂಡ್ರೆ, ಸದಸ್ಯ ಕಾರ್ಯದರ್ಶಿ ಆರ್.ಗೋಕುಲ, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಫಾರಿಗೆ ಸುರಕ್ಷಿತ ಬಸ್ ಬಳಕೆ

ಬೆಂಗಳೂರು: ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳ ಸಫಾರಿಯಲ್ಲಿ ತೆರೆದ ಕ್ಯಾಂಟರ್ ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ದುಬಾರೆ ಆನೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಅರಣ್ಯ ಸಚಿವರು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸ್ಪಷ್ಟ ನಿರ್ದೇಶನ ಕೊಟ್ಟಿದ್ದಾರೆ. ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ (ಕ್ಯಾತದೇವರ ಗುಡಿ) ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಕಾನನಗಳಲ್ಲಿ ಸಫಾರಿ ನಡೆಯುತ್ತಿದೆ. ರಾಜ್ಯದ ಮೂಲೆಮೂಲೆಗಳಿಂದ ಅಷ್ಟೇ ಅಲ್ಲದೆ, ದೇಶ-ವಿದೇಶಗಳಿಂದಲೂ ಪ್ರವಾಸಿಗರು, ವನ್ಯಜೀವಿ ಪ್ರಿಯರು ಇಲ್ಲಿಗೆ ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆಗಳು, ಹುಲಿಗಳು ಸೇರಿದಂತೆ ಯಾವುದೇ ವನ್ಯಮೃಗಗಳು ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆಗಳು ಸಂಭವಿಸಿಲ್ಲ. ಆದಾಗ್ಯೂ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ಸೂಚನೆಯಲ್ಲಿ ತಿಳಿಸಿದ್ದಾರೆ.

ಸಫಾರಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಇನ್ನು ಮುಂದೆ ತೆರೆದ ಕ್ಯಾಂಟರ್ ವಾಹನಗಳ ಬದಲಿಗೆ ಸಂಪೂರ್ಣ ಸುರಕ್ಷಿತವಾದ ಬಸ್ ಸಫಾರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಲಿ ಬಳಕೆಯಲ್ಲಿರುವ ಕ್ಯಾಂಪರ್‌ಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿಗಳನ್ನು ಅಥವಾ ಒಡೆಯಲಾಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮವಹಿಸಬೇಕು. ಯಾವುದೇ ಪ್ರವಾಸಿಗರು ಅರಣ್ಯದೊಳಗೆ ಇಳಿಯಲು ಅವಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀಪದಲ್ಲಿ ಆ್ಯಂಬುಲೆನ್ಸ್ ವಾಹನ ಇರುವುದನ್ನು ಖಾತ್ರಿಪಡಿಸಿಕೊಳ್ಳುವಂತೆಯೂ ಸಚಿವ ಖಂಡ್ರೆ ಸೂಚಿಸಿದ್ದಾರೆ.

ಕಿರುಸುದ್ದಿ

ಮಗು ದತ್ತು ಪಡೆದ ಕೆನಡಾ ದೇಶದ ದಂಪತಿ

ಮೈಸೂರು: ಮೈಸೂರಿನ ಸರ್ಕಾರಿ ಹಾಗೂ ಖಾಸಗಿ ವಿಶೇಷ ಕೇಂದ್ರಗಳಲ್ಲಿ ಪೋಷಿಸುತ್ತಿರುವ ಐದು ಮಕ್ಕಳನ್ನು ದತ್ತು ಪಡೆದ ಪೋಷಕರಿಗೆ ಹಸ್ತಾಂತರಿಸಲಾಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದತ್ತು ಪೂರ್ವ ಸಭೆ ನಡೆಸಲಾಯಿತು. ಈ ವೇಳೆ ಭಾವಿ ದತ್ತು ಪೋಷಕರು ಮತ್ತು ದತ್ತು ಕೊಡಲಾಗುವ ಮಕ್ಕಳ ಪೋಷಕರು ಹಾಜರಿದ್ದರು. ಐದು ಮಕ್ಕಳಿಗೆ ದತ್ತು ನೀಡಲು ಆದೇಶ ನೀಡಿದ್ದರಿಂದಾಗಿ ದತ್ತು ಸ್ವೀಕಾರಕ್ಕೆ ಅರ್ಜಿ ಸಲ್ಲಿಸಿದ್ದ ಪೋಷಕರಿಗೆ ಹಸ್ತಾಂತರ ಮಾಡಲಾಯಿತು. ಒಂದು ವಿಶೇಷಚೇತನ ಮಗುವನ್ನು ಕೆನಡಾ ದೇಶದ ದಂಪತಿಗೆ ಜಿಲ್ಲಾಧಿಕಾರಿಗಳು ಹಸ್ತಾಂತರ ಮಾಡಿ ಶುಭಕೋರಿದರು. ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಸದಸ್ಯರು, ಸರ್ಕಾರಿ ಹಾಗೂ ಸರ್ಕಾರೇತರ ವಿಶೇಷ ದತ್ತು ಕೇಂದ್ರದ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

ಹಂಪಿಯಲ್ಲಿ ಆಳ್ವಾರ್ ವಿಗ್ರಹಗಳು ಪತ್ತೆ

ವಿಜಯನಗರ: ವಿಶ್ವ ವಿಖ್ಯಾತ ಹಂಪಿಯ ಹಜಾರ ರಾಮ ದೇವಸ್ಥಾನದ ಬಳಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ನಡೆಸುತ್ತಿರುವ ಉತ್ಖನನದಲ್ಲಿ ಐತಿಹಾಸಿಕ ಆಳ್ವಾರ್ ವಿಗ್ರಹಗಳು ಪತ್ತೆಯಾಗಿವೆ. ಕ್ರಿಶ 1565ರ ತಾಳಿಕೋಟೆ ಯುದ್ಧದ ಬಳಿಕ ನಡೆದ ಬಹುಮನಿ ಸುಲ್ತಾನರ ದಾಳಿಯ ಸಂದರ್ಭದಲ್ಲಿ, ವೈಷ್ಣವ ಮತ ಪ್ರಚಾರಕರಾದ ಆಳ್ವಾರ್ ಸಂತರ ಈ ಮೂರ್ತಿಗಳನ್ನು ಶಿರಚ್ಛೇದನ ಮಾಡಿ ಮಣ್ಣಿನಲ್ಲಿ ಹೂತುಹಾಕಲಾಗಿತ್ತು. ಪ್ರಸ್ತುತ ವೈಜ್ಞಾನಿಕ ವಿಧಾನದ ಮೂಲಕ ಜಾಗರೂಕತೆಯಿಂದ ನಡೆಸಲಾದ ಉತ್ಖನನದಲ್ಲಿ ಈ ಭಗ್ನ ಮೂರ್ತಿಗಳು ಹೊರಬಂದಿವೆ. ಅದೇ ಪರಿಸರದಲ್ಲಿ ಇನ್ನುಳಿದ ಆಳ್ವಾರ್ ವಿಗ್ರಹಗಳೂ ಪತ್ತೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರೇಷ್ಮೆ ಖರೀದಿ ಕೇಂದ್ರ ನಿರ್ಮಾಣ

ಮಂಗಳೂರು: ಕರ್ನಾಟಕದಲ್ಲಿ ರೇಷ್ಮೆಯು ಪ್ರಮುಖ ಬೆಳೆಯಾಗಿದ್ದು, ಉತ್ತರ ಕರ್ನಾಟಕದಲ್ಲಿ ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸಲಾಗುತ್ತಿದೆ. ಅಗತ್ಯ ಇರುವ ಕಡೆಗೆ ರೇಷ್ಮೆ ಖರೀದಿ ಕೇಂದ್ರ ಮತ್ತು ಮಾರುಕಟ್ಟೆಗಳನ್ನು ನಿರ್ಮಿಸಲಾಗುವುದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರು ತಿಳಿಸಿದ್ದಾರೆ.



ಅವರು ಬುಧವಾರ ರೇಷ್ಮೆ ಇಲಾಖೆ ಹಾಗೂ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆ ವತಿಯಿಂದ ವಿಟ್ಲದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದರು. ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ ಖರೀದಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ರೈತರಿಗೆ ರೇಷ್ಮೆಯನ್ನು ಮಾರುಕಟ್ಟೆಗೆ ಸಾಗಿಸಲು ಸಾಗಾಣಿಕೆ ವೆಚ್ಚ 1 ಕೆಜಿಗೆ ರೂ. 30 ರಂತೆ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ರೇಷ್ಮೆ ಗೂಡಿಗೆ ಮಾರುಕಟ್ಟೆಯಲ್ಲಿ ಪ್ರತೀ ಕೆ.ಜಿ ರೂ.600 ರಿಂದ 700 ರವರೆಗೆ ದರವಿದ್ದು, ಬೆಳೆಗಾರರು ಕೆ.ಜಿಗೆ ರೂ.300 ರಂತೆ ಲಾಭ ಪಡೆಯುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಬೆಳೆಗಾರರು ರೇಷ್ಮೆ ಕೃಷಿಯತ್ತ ಗಮನಹರಿಸಬೇಕು ಎಂದು ಸಚಿವರು ತಿಳಿಸಿದರು.

ಮಧ್ಯಪ್ರದೇಶ, ಹರ್ಯಾಣ, ಬಿಹಾರ ಚುನಾವಣೆಯಲ್ಲಿ ಕೈ ಯೋಜನೆ: ಡಿಕೆಶಿ

ಎಲ್ಲೆಡೆ ನಮ್ಮ ಗ್ಯಾರಂಟಿ ಕಾಪಿ

ಬೆಂಗಳೂರು: ಬಿಜೆಪಿಗರು ಚುನಾವಣೆ ಗೆಲ್ಲಲು ನಮ್ಮ ಮಾದರಿಯನ್ನು ಅನುಸರಿಸುತ್ತಿದ್ದಾರೆ. ತಮ್ಮದೇ ಆದ ಯೋಜನೆಗಳನ್ನು ಜಾರಿ ಮಾಡದೇ, ಕಾಂಗ್ರೆಸ್ ಯೋಜನೆಗಳನ್ನು ಅನುಸರಿಸುತ್ತಿರುವುದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ವ್ಯಂಗ್ಯವಾಡಿದರು.

ಬುಧವಾರ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಈ ಕಾರ್ಯಕ್ರಮ ದೇಶಕ್ಕೆ ಮಾದರಿ. ನಮ್ಮ ಯೋಜನೆಗಳನ್ನು ಟೀಕೆ ಮಾಡುತಿದ್ದ ಬಿಜೆಪಿ ಮಹಾರಾಷ್ಟ್ರ, ಮಧ್ಯಪ್ರದೇಶ ಹರಿಯಾಣ, ಬಿಹಾರ ಸೇರಿದಂತೆ ಇತರೆ ರಾಜ್ಯಗಳಲ್ಲಿ ನಮ್ಮ ಯೋಜನೆಗಳನ್ನು ನಕಲು ಮಾಡಿ ಜಾರಿಗೆ ತಂದಿದ್ದಾರೆ.

ನಮ್ಮ ಸರ್ಕಾರ 3 ವರ್ಷಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗೆ 1.34 ಲಕ್ಷ ಕೋಟಿ ಹಣ ವನ್ನು ವೆಚ್ಚ ಮಾಡಿದ್ದು, 6ನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ನೀಡಿದೆ. ಆ ಮೂಲಕ ಇಡೀ ದೇಶದಲ್ಲೇ ಇತಿಹಾಸ ಸೃಷ್ಟಿಸಿದೆ. ನಮ್ಮ ಸರ್ಕಾರಕ್ಕೆ 3 ವರ್ಷ ತುಂಬಿದೆ. ಆಕ್ಸ್‌ಫರ್ಡ್ ವಿವಿಯವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಈ ಅಧ್ಯಯನದಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕತ್ತಲೆಯಲ್ಲಿ ಮೂಡಿದ ಬೆಳಕು ಎಂದು ಬಣ್ಣಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೊಟ್ಟ ಮಾತಿನಂತೆ ನಡೆದಿದ್ದೇವೆ: ನಮ್ಮ ಸಾಧನೆ ನಮಗೆ ತೃಪ್ತಿ ತಂದಿದೆ. ಗೃಹಲಕ್ಷ್ಮಿ ಮೂಲಕ 1.24 ಕೋಟಿ ಮಹಿಳೆಯರಿಗೆ ತಿಂಗಳಿಗೆ 2 ಸಾವಿರದಂತೆ 69,793 ಕೋಟಿ ರೂ. ವಿನಿಯೋಗಿಸಲಾಗಿದೆ. ಗೃಹಜ್ಯೋತಿಯಿಂದ 1.64 ಕೋಟಿ ಕುಟುಂಬಗಳು ಉಪಯೋಗ ಪಡೆದಿದ್ದು ಇದಕ್ಕೆ 26,115 ಕೋಟಿ ರೂ. ವೆಚ್ಚವಾಗಿದೆ. ಶಕ್ತಿ ಯೋಜನೆ ಮೂಲಕ ಮಹಿಳೆಯರು 726 ಕೋಟಿ ಬಾರಿ ಉಚಿತ ಪ್ರಯಾಣ ಮಾಡಿದ್ದು 18,943 ಕೋಟಿ ವೆಚ್ಚ ಮಾಡಲಾಗಿದೆ. ಅನ್ನಭಾಗ್ಯದಿಂದ 4.4 ಕೋಟಿ ಜನರಿಗೆ ಉಪಯೋಗವಾಗಿದ್ದು 11,821 ಕೋಟಿ ವೆಚ್ಚ. ಯುವನಿಧಿಗೆ 950 ಕೋಟಿ ವೆಚ್ಚವಾಗಿದೆ. ನಾವು ಕೊಟ್ಟ ಮಾತಿನಂತೆ ನಡೆದಿದ್ದೇವೆ ಎಂದು ಹೇಳಿದರು.

ಎಚ್‌ಡಿಕೆ ಅವಧಿಯಲ್ಲೇ ಯೋಜನೆ

ಬಿಡದಿ ಟೌನ್‌ಶಿಪ್‌ಗೆ ಜಮೀನು ಯೋಜನೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಹುಟ್ಟಿಕೊಂಡಿದೆ. ಇದು ನಾನು ಪ್ರಾರಂಭಿಸಿದ ಯೋಜನೆ ಅಲ್ಲ. ಕುಮಾರಸ್ವಾಮಿ ಅವರ ಅವಧಿಯಲ್ಲಿ ಇದನ್ನು ಈಗಾಗಲೇ ತಿಳಿಸಲಾಗಿತ್ತು. ಈ ಯೋಜನೆಯನ್ನು ಡಿಎಲ್‌ಎಫ್‌ಗೆ ನೀಡಲಾಗಿದೆ. ನಂತರ ಡಿಎಲ್‌ಎಫ್ ಇದು ಕಾರ್ಯಸಾಧ್ಯವಲ್ಲ ಎಂದು ಹೇಳಿ ಅದರಿಂದ ಹಿಂದೆ ಸರಿದಿದೆ ಎಂದು ಡಿಸಿಎಂ ಹೇಳಿದರು. ಸಭೆಯಲ್ಲಿ ರೈತರು ತಮ್ಮ ಕೆಲವು ಬೇಡಿಕೆಗಳನ್ನು ಕೂಡ ಮುಂದಿಟ್ಟರು. ವಿಶೇಷವಾಗಿ, ಅಭಿವೃದ್ಧಿ ಆಗುವ ಜಾಗದಲ್ಲಿ ರೈತರಿಗೆ 30★40 ಸೈಟ್‌ಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ತಮ್ಮ ಭೂಮಿಯನ್ನು ಸರ್ಕಾರಕ್ಕೆ ನೀಡುತ್ತಿರುವ ಹಿನ್ನೆಲೆಯಲ್ಲಿ, ಹಣದೊಂದಿಗೆ ಕನಿಷ್ಠ ಕೆಲವು ಸೈಟ್‌ಗಳ ರೂಪದಲ್ಲಿ ಹಿಂತಿರುಗಿ ಸೌಲಭ್ಯ ನೀಡಬೇಕು ಎಂದು ವಿನಂತಿಸಿದರು.



ಯಾರಿಗೂ ಕೂಲಿ ಕೇಳಿಲ್ಲ

ರಾಜ್ಯ ರಾಜಕಾರಣ, ಪಕ್ಷವನ್ನು ಯಾವ ರೀತಿ ಅಧಿಕಾರಕ್ಕೆ ತರಬೇಕು ಎಂಬುವುದರ ಕುರಿತು ಸಚಿವ ಜಾರ್ಜ್ ಅವರ ನಿವಾಸದಲ್ಲಿ ಚರ್ಚೆ ಮಾಡಿದ್ದೇವೆ. ನಾನು ಯಾರಿಗೂ ಕೂಲಿ ಕೇಳಿಲ್ಲ. ರಾಹುಲ್ ಗಾಂಧಿ ಅವರು ಕರೆಯುತ್ತೇವೆ ಎಂದಿದ್ದಾರೆ. ಕರೆದಾಗ ಹೋಗುತ್ತೇನೆ ಎಂದ ಅವರು, ಪ್ರತಿ ದಿನವೂ ಶುಭದಿನ ನನಗೆ. ಶುಭದಿನ, ಶುಭಗಳಿಗೆ, ಶುಭ ಮುಹೂರ್ತ ಎಂದರು. ರಾಜಣ್ಣ ಅವರು ಸಿಎಂ ಮುಂದುವರಿಯಲಿ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ಅವರ ಬೇಡಿಕೆ ಬಗ್ಗೆ ಗೊತ್ತಿಲ್ಲ. ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಸಿಎಂ ಹೇಳಿದ್ದಾರೆ, ಅವರನ್ನೇ ಕೇಳಬೇಕೆಂದರು.

ದಿನದ ಫೋಟೋ ಶೂಟ್

ಬಿಜೆಪಿ ನಾಯಕರು ಒಂದೆರಡು ದಿನ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಒಂದು ದಿನದ ಫೋಟೋ ಶೂಟ್ ಬಿಟ್ಟು ಪ್ರತಿನಿತ್ಯ ಮೆಟ್ರೋ, ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ, ಅವರು ಓಡಾಡುವುದಾದರೆ ನಮ್ಮ ಆಕ್ಷೇಪಣೆ ಇಲ್ಲ. ಅವರು ಪೆಟ್ರೋಲ್, ಡೀಸೆಲ್ ಉಳಿಸಲಿ, ಅವರು ಅಡುಗೆ ಎಣ್ಣೆ ಬಳಸಿದ ಆಹಾರ ತಿನ್ನುವುದೇ ಬೇಡ. ವಿದೇಶ ಪ್ರವಾಸ ಮಾಡಬೇಡ ಎಂದಿದ್ದಾರೆ. ಅವರು ವಿದೇಶ ಪ್ರವಾಸ ಹೋಗಿರುವುದನ್ನು ನಾನು ಪ್ರಶ್ನೆ ಮಾಡುವುದಿಲ್ಲ ಎಂದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಿಸಿ: ಶ್ರೀರಾಮುಲು

ಮೈಸೂರು: ಪ.ಜಾತಿ, ಪಂಗಡದವರಿಗೆ ಹೆಚ್ಚಿಸಲಾಗಿರುವ ಮೀಸಲಾತಿಯನ್ನು ರಾಜ್ಯ ಸರ್ಕಾರ ಕೂಡಲೇ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಆರಂಭಿಸಬೇಕಾಗುತ್ತದೆ ಎಂದು ಮಾಜಿ ಸಚಿವ ಶ್ರೀರಾಮುಲು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.



ಬುಧವಾರ ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ಆಗ್ರಹಿಸಿ ಕಳೆದ 30 ವರ್ಷಗಳಿಂದಲೂ ಪ.ಜಾತಿ, ಪಂಗಡದವರು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇದನ್ನು ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿಯವರು ಗಮನಿಸಿ, ಈ ಬಗ್ಗೆ ವರದಿ ನೀಡಲು ನಾಗಮೋಹನ ದಾಸ್ ಆಯೋಗವನ್ನು ರಚಿಸಿದ್ದರು. ಆಯೋಗ ಕೂಡ ವರದಿಯನ್ನು ನೀಡಿತ್ತು. ನಮ್ಮ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು, ವರದಿಯನ್ನು ಅಂಗೀಕರಿಸಿ, ಪ.ಜಾತಿಯವರಿಗೆ ಇದ್ದ ಮೀಸಲಾತಿಯನ್ನು ಶೇ 15 ರಿಂದ 17ಕ್ಕೆ, ಪರಿಶಿಷ್ಟ ಪಂಗಡಕ್ಕೆ ಇದ್ದ ಮೀಸಲಾತಿಯನ್ನು 3 ರಿಂದ 7 ಕ್ಕೆ ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿಸಿ ಆದೇಶ ಹೊರಡಿಸಿದರು. ಇದಕ್ಕೆ ಉಭಯ ಸದನಗಳಲ್ಲೂ ಅಂಗೀಕಾರ ದೊರೆಯಿತು. ಸರ್ವ ಪಕ್ಷಗಳ ಸಭೆಯಲ್ಲೂ ಕೂಡ ಒಪ್ಪಿಗೆ ನೀಡಲಾಯಿತು.

ಅಂದು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯನವರೇ ಮೀಸಲಾತಿ ಹೆಚ್ಚಳಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆ ಇರುವುದಾಗಿ ತಿಳಿಸಿದ್ದರು. ಆದರೆ ನಮ್ಮ ಸರ್ಕಾರ ಚುನಾವಣೆಯಲ್ಲಿ ಬಿದ್ದು ಹೋಯಿತು. ಸಿದ್ದರಾಮಯ್ಯನವರು ಸಿಎಂ ಆಗಿ 3 ವರ್ಷ ಅಧಿಕಾರವನ್ನು ಪೂರೈಸಿದ್ದಾರೆ. ಆದರೆ ಇನ್ನೂ ಕೂಡ ಮೀಸಲಾತಿ ಹೆಚ್ಚಳವನ್ನು ಶಿಕ್ಷಣ, ಉದ್ಯೋಗದಲ್ಲಿ ಜಾರಿಗೆ ತರದೆ, ಈ ಸಮುದಾಯವರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ತಡೆಯಾಜ್ಞೆಗೆ ತೆರವಿಗೆ ಕ್ರಮ ಅಗತ್ಯ

ಸಿಎಂ ಸಿದ್ದರಾಮಯ್ಯನವರು ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡುವುದಾಗಿ ಹೇಳಿ ರಾಜ್ಯಪಾಲರಿಂದಲೂ ಸಹಿ ಪಡೆದು, ಒಪ್ಪಿಗೆ ಪಡೆದುಕೊಂಡಿದ್ದಾರೆ. ಆದರೆ ಆ ನಂತರ ಮೀಸಲಾತಿ ಪ್ರಮಾಣವನ್ನು ಶೇ 56 ರಿಂದ 50ಕ್ಕೆ ಇಳಿಸಿ, ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡದೆ ಅನ್ಯಾಯ ಮಾಡುತ್ತಿದ್ದಾರೆ. ಮೀಸಲಾತಿ ಹೆಚ್ಚಳದ ಕುರಿತು ರಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗಲೂ ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳವನ್ನು ಸಮರ್ಥಿಸಿಕೊಳ್ಳುವ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ಇದರಿಂದಾಗಿ ಹೈಕೋರ್ಟ್ ತಡೆಯಾಜ್ಞೆಯನ್ನು ನೀಡಿದೆ ಎಂದರು.

ಮೇ 23ಕ್ಕೆ ಬೆಂಗಳೂರಿಗೆ ನಿತಿನ್



ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ.

ನಿತಿನ್ ನವೀನ್ ಅವರು ಮೇ 23ರಂದು ರಾತ್ರಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ರಾಜ್ಯ ಪದಾಧಿಕಾರಿಗಳು ಮತ್ತು ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳ ಜಿಲ್ಲಾಧ್ಯಕ್ಷರ ಸಭೆ ನಡೆಸಲಿದ್ದಾರೆ.

ಬಳಿಕ ರಾಜ್ಯ ಕಾರ್ಯಾಲಯದಲ್ಲಿ ರಾಜ್ಯದ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ ಯಲಹಂಕದಲ್ಲಿ ನಡೆಯುತ್ತಿರುವ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಅಪೇಕ್ಷಿತರ ಪ್ರಶಿಕ್ಷಣ ವರ್ಗಕ್ಕೆ ಭೇಟಿ ನೀಡಿ ನಂತರ ಬೆಂಗಳೂರಿನಿಂದ ತೆರಳಲಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಮೊದಲ ಭೇಟಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಗಳಾಗಿ 12 ವರ್ಷ ಪೂರೈಸುತ್ತಿರುವುದರಿಂದ ಪಕ್ಷ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಪರಿಶೀಲಿಸಲು ಪಕ್ಷದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಬುಧವಾರ ಬೆಂಗಳೂರಿಗೆ ಆಗಮಿಸಿದರು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸ್ವಾಗತಿಸಿದರು.

ಗೊಂದಲಗಳ ನಿವಾರಣೆಗೆ ರಾಜಕೀಯೇತರ ಮುಖಂಡರ ಕಮಿಟಿ ರಚನೆ: ನಿರಾಣಿ

ಪಂಚಮಸಾಲಿ ಸಮಾಜ ಒಗ್ಗಟ್ಟಿನ ಮಂತ್ರ

ಹುಬ್ಬಳ್ಳಿ: ಇತ್ತೀಚೆಗೆ ನಡೆದ ಪಂಚಮಸಾಲಿ ಪೀಠಗಳ ವಿವಾದಗಳ ಪರಿಹರಿಸುವುದು ಹಾಗೂ ಸಮಾಜ ಒಗ್ಗೂಡಿಸುವ ಉದ್ದೇಶದಿಂದ ಪಂಚಮಸಾಲಿ ಲಿಂಗಾಯತ ಸಮಾಜದ ಮುಖಂಡರು ನಗರದಲ್ಲಿ ಸುದೀರ್ಘ ಸಭೆ ನಡೆಸಿದರು.

ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಯಿತು. ಇತ್ತೀಚೆಗೆ ಹರಿಹರ ಪೀಠದ ಕುರಿತು ನಡೆದ ವಿವಾದಗಳು, ಲೆಕ್ಕ ಪತ್ರ ನೀಡುವುದು, ಮುಂದೆ ಸಮಾಜವನ್ನು ಯಾವ ರೀತಿ ಒಗ್ಗಟ್ಟಿನಿಂದ ಕೊಂಡಯ್ಯುವುದು ಎಂಬುವುದರ ಕುರಿತು ಚರ್ಚೆ ನಡೆದಿದೆ. ಈ ಕುರಿತು ಚರ್ಚಿಸುವಾಗ ಮುಖಂಡರ ಮಧ್ಯೆ ಪರಸ್ಪರ ಮಾತಿನ ಚಕಮಕಿ ಹಾಗೂ ವಾಗ್ವಾದ ನಡೆಯಿತು ಎನ್ನಲಾಗಿದೆ. ಗೌಪ್ಯ ಸಭೆಯ ಕುರಿತು ಮಾತನಾಡಿದ ಶಾಸಕರು, ಮಾಜಿ ಶಾಸಕರು ಹಾಗೂ ಸಮಾಜದ ಮುಖಂಡರು ಒಗ್ಗಟ್ಟಿನ ಮಂತ್ರ ಜಪಿಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾಜಿ ಸಚಿವ ಮುರಗೇಶ ನಿರಾಣಿ ಮಾತನಾಡಿ, ಪಂಚಮಸಾಲಿ ಲಿಂಗಾಯತ ಸಮಾಜದ ಪೀಠಗಳಲ್ಲಿ ಉಂಟಾದ ಗೊಂದಲಗಳ ನಿವಾರಣೆಗೆ 10 ಜನ ರಾಜಕೀಯೇತರ ಮುಖಂಡರ ಕಮಿಟಿ ರಚನೆ ಮಾಡುತ್ತಿದ್ದು, ಈ ಮೂಲಕ ಸತ್ಯಾಸತ್ಯೆಗಳನ್ನು ಅರಿತು ಸಮಸ್ಯೆ ಪರಿಹರಿಸಲಾಗುವುದು ಎಂದರು.



ಮುಖಂಡರ ಮಾರ್ಗದರ್ಶನ ಅಗತ್ಯ

ಸಭೆಯಲ್ಲಿ ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠದಲ್ಲಿ ಸ್ವಲ್ಪ ಲೆಕ್ಕಪತ್ರದ ಬಗ್ಗೆ ಕೆಲವೊಂದು ಆರೋಪಗಳು, ಪ್ರತ್ಯಾರೋಪಗಳು ನಿರಂತರವಾಗಿ ಕೇಳಿಬಂದಿದ್ದವು. ಇದೀಗ ನಾವು ಪಾರದರ್ಶಕವಾಗಿ ಲೆಕ್ಕಪತ್ರದ ಬಗ್ಗೆ, ಯಾರು ಯಾರು ಹಣ ನೀಡಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ದಿನಾಂಕ ನಿಗದಿ ಮಾಡಿ, ಎಲ್ಲ ಲೆಕ್ಕಪತ್ರದ ಬಗ್ಗೆ ಏನು ಗೊಂದಲಗಳಿವೆ ಅವುಗಳನ್ನು ನಿವಾರಿಸಿಕೊಳ್ಳುತ್ತೇವೆ. ಸಮಾಜ ಒಗ್ಗೂಡಿ ಹೋಗುವ ನಿಟ್ಟಿನಲ್ಲಿ ಮುಂದೆ ಏನೇನು ಮಾಡಬೇಕು ಎಂಬ ಬಗ್ಗೆ ಸಮಾಜದ ಮುಖಂಡರ ಮಾರ್ಗದರ್ಶನದಲ್ಲಿ ಮುನ್ನಡೆಯುವ ಬಗ್ಗೆ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ಸಮಾಜಕ್ಕೆ ಧಕ್ಕೆ ಬರುವಂತಹ ಕೆಲವೊಂದು ಅಹಿತಕರ ಘಟನೆಗಳು ಇತ್ತೀಚೆಗೆ ನಡೆದಿವೆ. ಈ ಹಿನ್ನೆಲೆ ಸಮಾಜದ ಹಿರಿಯರೆಲ್ಲರೂ ಸೇರಿ ಈ ವಿವಾದಗಳನ್ನು ಪರಿಹರಿಸಲು ಸಭೆ ನಡೆಸಿದ್ದೇವೆ. ಈಗಾಗಲೇ ಪಂಚಮಸಾಲಿ ಪೀಠದ 2 ಕಡೆಯ ಮುಖಂಡರು ಮುಂದೆ ಯಾವ ರೀತಿ ಸಾಗಬೇಕು ಎಂಬ ಸಲಹೆಗಳನ್ನು ನೀಡಿದ್ದಾರೆ ಎಂದರು. ಶಾಸಕ ಅರವಿಂದ ಬೆಲ್ಲದ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಶಾಸಕ ಸೋಮಣ್ಣ ಬೇವಿನಮರದ, ಮಾಜಿ ಸಚಿವ ಸಿ.ಸಿ. ಪಾಟೀಲ ಇದ್ದರು.

ಕಳಪೆ ಗುಣಮಟ್ಟದ ಔಷಧ, ಆಹಾರ ವಿರುದ್ಧ ದಾಳಿ | 2025-26ರಲ್ಲಿ ವ್ಯಾಪಕ ತಪಾಸಣೆ | ದುರುಪಯೋಗ ತಡೆ

ಸಾರ್ವಜನಿಕ ಆರೋಗ್ಯ ಭದ್ರತೆಗೆ ಎಫ್‌ಎಸ್‌ಡಿಎ ಕಟ್ಟುನಿಟ್ಟಿನ ಕ್ರಮ


ನಂದಿನಿ ಎನ್.

ಬೆಂಗಳೂರು: ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ರಾಜ್ಯದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ (ಎಫ್‌ಎಸ್‌ಡಿಎ) 2025-26ನೇ ಸಾಲಿನಲ್ಲಿ ವ್ಯಾಪಕ ತಪಾಸಣೆ, ಕಠಿಣ ಜಾರಿ ಕ್ರಮ ಹಾಗೂ ಡಿಜಿಟಲ್ ಆಡಳಿತ ವ್ಯವಸ್ಥೆ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಔಷಧಿ ಮತ್ತು ಆಹಾರ ಕ್ಷೇತ್ರಗಳಲ್ಲಿ ಗುಣಮಟ್ಟ ಕಾಪಾಡಲು ಇಲಾಖೆ ಕೈಗೊಂಡ ಕ್ರಮಗಳು ಸಾರ್ವಜನಿಕ ಆರೋಗ್ಯ ಭದ್ರತೆಯನ್ನು ಬಲಪಡಿಸುವ ದಿಸೆಯಲ್ಲಿ ಮಹತ್ವ ಪಡೆದಿವೆ.

ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆಯು ರಾಜ್ಯದ ಎಲ್ಲಾ 227 ಔಷಧ ತಯಾರಿಕಾ ಘಟಕಗಳನ್ನು ಇಲಾಖೆ ಪರಿಶೀಲಿಸಿದ್ದು, ಉತ್ತಮ ಉತ್ಪಾದನಾ ಪದ್ಧತಿ ನಿಯಮ ಉಲ್ಲಂಘನೆ ಪತ್ತೆಯಾದ ಹಿನ್ನೆಲೆಯಲ್ಲಿ 10 ಘಟಕಗಳಿಗೆ ಉತ್ಪಾದನೆ ಸ್ಥಗಿತ ಆದೇಶನೀಡಿದೆ. ರಾಜ್ಯದ ಮೂರು ಔಷಧಿ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಒಟ್ಟು 16,337 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, 473 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಇವುಗಳಲ್ಲಿ 143 ಪ್ರಕರಣಗಳು ಗಂಭೀರ ಎ ವರ್ಗಕ್ಕೆ ಸೇರಿದ್ದು, ಸಂಬಂಧಿತ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಶಪಡಿಸಿಕೊಂಡ ಕಳಪೆ ಔಷಧಿಗಳ ಮೌಲ್ಯ 1.54 ಕೋಟಿ ರೂ.ಗಿಂತ ಹೆಚ್ಚಾಗಿದೆ. ಮಾದಕ ವಸ್ತುಗಳ ಅಕ್ರಮ ಬಳಕೆ ಮತ್ತು ಮಾರಾಟ ತಡೆಗಟ್ಟಲು ಇಲಾಖೆ 1,309 ಪರಿಶೀಲನೆ ಗಳನ್ನು ನಡೆಸಿದೆ. ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ 457 ಔಷಧಿ ಅಂಗಡಿಗಳ ಪರವಾನಗಿಗಳನ್ನು ಅಮಾನತು ಮಾಡಲಾಗಿದ್ದು, 17 ಪ್ರಕರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಎನ್‌ಡಿಪಿಎಸ್ ನಿಯಮ ಉಲ್ಲಂಘನೆ ಸಂಬಂಧ 231 ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದ್ದು, 10 ಪರವಾನಗಿಗಳನ್ನು ಅಮಾನತು ಮಾಡಲಾಗಿದೆ.

ಡಿಜಿಟಲ್ ಆಡಳಿತಕ್ಕೆ ಒತ್ತು: ಬ್ಲಡ್ ಬ್ಯಾಂಕ್ ಪರವಾನಗಿ, ಆರ್‌ಎಂಐ ಪ್ರಮಾಣಪತ್ರ ಹಾಗೂ ಔಷಧಿ ಅಂಗಡಿಗಳ ತಪಾಸಣೆ ಸೇರಿದಂತೆ ಹಲವು ಸೇವೆಗಳನ್ನು ಸಂಪೂರ್ಣ ಆನ್‌ಲೈನ್ ಮೂಲಕ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮೈಸೂರಿನಲ್ಲಿ ಹೊಸ ಔಷಧಿ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗೂ ಅನುಮೋದನೆ ದೊರೆತಿದೆ.

ಆಹಾರ ಸುರಕ್ಷತೆಯಲ್ಲಿ ವ್ಯಾಪಕ ತಪಾಸಣೆ: 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ 3.83 ಲಕ್ಷಕ್ಕೂ ಅಧಿಕ ಆಹಾರ ವ್ಯವಹಾರಗಳಿಗೆ ನೋಂದಣಿ ಮತ್ತು ಪರವಾನಗಿ ನೀಡಲಾಗಿದ್ದು, ಇದರಿಂದ ಸರ್ಕಾರಕ್ಕೆ 25.21 ಕೋಟಿ ರೂ. ಆದಾಯ ಬಂದಿದೆ.



ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆನ್‌ಲೈನ್ ಆಧಾರಿತ ನಿಗಾ ವ್ಯವಸ್ಥೆಯನ್ನು ಜಾರಿ ಮಾಡಿದ್ದು, ಈ ನೂತನ ಪೋರ್ಟಲ್‌ನಿಂದ ಈ ವ್ಯವಸ್ಥೆಯನ್ನು ಪರಿಣಾಮಕಾರಿ ಹಾಗೂ ಪಾರದರ್ಶಕವಾಗಿ ನಿರ್ವಹಿಸಲು ಸಾಧ್ಯವಾಗಲಿದೆ.

■ ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆ ಸಚಿವ

ಹಾಲು, ಬೆಣ್ಣೆ, ನಮ್ಕೀನ್ ಮಾದರಿಗಳಲ್ಲಿ ಅಸುರಕ್ಷಿತ ಅಂಶ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಬೆಣ್ಣೆ ಮಾರಾಟ ಮಳಿಗೆಗಳ ಮೇಲೆ ನಡೆಸಿದ ದಾಳಿಯಲ್ಲಿ 13 ಮಾದರಿಗಳ ಪೈಕಿ 9 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಕೋಲಾರ ಜಿಲ್ಲೆಯ ಖಾಸಗಿ ಡೇರಿಗಳಿಂದ ಸಂಗ್ರಹಿಸಿದ 48 ಹಾಲು ಮಾದರಿಗಳಲ್ಲಿ 18 ಮಾದರಿಗಳು ಗುಣಮಟ್ಟದ ಕೊರತೆಯದ್ದಾಗಿವೆ. ನಮ್ಕೀನ್ ಮಾದರಿಗಳಲ್ಲಿ 77 ಅಸುರಕ್ಷಿತ ಎಂದು ಪತ್ತೆಯಾಗಿದ್ದು, ಮಿಶ್ರಣ ತಿಂಡಿಗಳಲ್ಲಿ 69, ಮಸಾಲೆ ಪದಾರ್ಥಗಳಲ್ಲಿ 42, ವಸತಿ ನಿಲಯಗಳ ಆಹಾರದಲ್ಲಿ 21 ಹಾಗೂ ಮಧ್ಯಾಹ್ನ ಊಟ ಯೋಜನೆಯ ಆಹಾರದಲ್ಲಿ 7 ಮಾದರಿಗಳು ಅಸುರಕ್ಷಿತವಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ದಿಗಂತ ವಿಶೇಷ

ಕೇಂದ್ರದಿಂದ ದಕ್ಷಿಣ ಭಾರತ ವಿರೋಧಿ ನಡೆ: ಮಹದೇವಪ್ಪ

ಬೆಂಗಳೂರು: ಜನಸಂಖ್ಯೆ ಆಧರಿಸಿ ಉತ್ತರದ ರಾಜ್ಯಗಳಿಗೆ ಹೆಚ್ಚಿನ ಚುನಾವಣಾ ಕ್ಷೇತ್ರಗಳನ್ನು ನೀಡಿ, ದಕ್ಷಿಣದ ರಾಜ್ಯಗಳಿಗೆ ಕಡಿಮೆ ಚುನಾವಣಾ ಕ್ಷೇತ್ರಗಳನ್ನು ನೀಡುವ ಹುನ್ನಾರವು ದಕ್ಷಿಣ ಭಾರತ ವಿರೋಧಿ ನಡೆಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಿಡಿಕಾರಿದ್ದಾರೆ.



ಕ್ಷೇತ್ರ ಪುನರ್ ವಿಂಗಡನೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಸಚಿವರು, ದಕ್ಷಿಣದ ರಾಜ್ಯಗಳ ಮೇಲೆ ಸದಾ ತಾರತಮ್ಯ ತೋರುವ ಕೇಂದ್ರದ ಬಿಜೆಪಿ ಸರ್ಕಾರ, ದಕ್ಷಿಣದ ರಾಜ್ಯಗಳ ರಾಜಕೀಯ ಅಸ್ಮಿತೆಗೆ ಕೊಡಲಿ ಪೆಟ್ಟು ನೀಡುವ ದುರುದ್ದೇಶದಿಂದ ಉತ್ತರ ಭಾರತಕ್ಕೆ ಹೆಚ್ಚು ಮತ್ತು ದಕ್ಷಿಣ ಭಾರತಕ್ಕೆ ಕಡಿಮೆ ಮತ ಕ್ಷೇತ್ರಗಳನ್ನು ಹಂಚಿಕೆ ಮಾಡಲು ಹೊರಟಿದೆ ಎಂದರು. ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತನೆ ಮಾಡ ಬೇಕಾದ ಜವಾಬ್ದಾರಿಯನ್ನು ಹೊಂದಿರುವ ಕೇಂದ್ರದ ಬಿಜೆಪಿ ಸರ್ಕಾರವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸಿ, ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದನ್ನು ಬಿಟ್ಟು, ಕೇವಲ ಚುನಾವಣಾ ರಾಜಕೀಯದ ದೃಷ್ಟಿಯಿಂದ ತೀರಾ ಅತಾರ್ಕಿಕವಾಗಿ ಮತ ಕ್ಷೇತ್ರಗಳ ಹೆಚ್ಚಳಕ್ಕೆ ಮುಂದಾಗಿರುವುದು ಅತ್ಯಂತ ಕೆಟ್ಟ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರದ ಕುತಂತ್ರ: ಎಲ್ಲಕ್ಕಿಂತ ಮುಖ್ಯವಾಗಿ ಮತ ಕ್ಷೇತ್ರಗಳ ಹೆಚ್ಚಳದ ಮಸೂದೆಯನ್ನು ಈಗಾಗಲೇ ಅನುಮೋದಿತವಾಗಿದ್ದ ಮಹಿಳಾ ಮೀಸಲಾತಿ ಮಸೂದೆಯ ಒಳಗಿಟ್ಟು, ದಕ್ಷಿಣದ ರಾಜ್ಯಗಳನ್ನು ಹಣಿಯಲು ಕೇಂದ್ರದ ಬಿಜೆಪಿಗರು ಸಂಚು ರೂಪಿಸಿದ್ದರು ಎಂದು ತಿಳಿಸಿದರು.

ಸಂಪಾದಕೀಯ

ನಿಲ್ಲದ ವರದಕ್ಷಿಣೆ ಸಾವುಗಳು

ಉತ್ತರ ಪ್ರದೇಶದಲ್ಲಿ ಇಬ್ಬರು ಮಹಿಳೆಯರು ಇತ್ತೀಚೆಗೆ ವರದಕ್ಷಿಣೆ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಮತ್ತೊಮ್ಮೆ ಇಡೀ ದೇಶದ ಗಮನವನ್ನು ವರದಕ್ಷಿಣೆ ಪಿಡುಗಿನ ಕುರಿತಂತೆ ಸೆಳೆದಿದೆ. ಟ್ವಿಶಾ ಶರ್ಮಾ ಎಂಬ 33ರ ಮಹಿಳೆ ತನ್ನ ಪತಿಯ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಸಾವಿಗೂ ಮುನ್ನ ಆಕೆ ತನ್ನ ತಾಯಿ ಮತ್ತು ಸ್ನೇಹಿತೆಯರೊಂದಿಗೆ ಹಂಚಿಕೊಂಡ ಮಾತುಕತೆಗಳಲ್ಲಿ ಪತಿಯ ಮನೆಯಲ್ಲಿ ತಾನು ಅನುಭವಿಸುತ್ತಿರುವ



ಕಿರುಕುಳ, ಚಿತ್ರಹಿಂಸೆಯ ಕುರಿತಂತೆ ವಿವರಿಸಿದ್ದಾಳೆ. ವರದಕ್ಷಿಣೆಗಾಗಿ ತನ್ನನ್ನು ಪೀಡಿಸುತ್ತಿರುವುದನ್ನು ತಿಳಿಸಿದ್ದಾಳೆ. ಇದರ ಬೆನ್ನಿಗೇ ಮತ್ತೊಂದು ಪ್ರಕರಣದಲ್ಲಿ ದೀಪಿಕಾ ಎಂಬಾಕೆ ಮನೆಯ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡುದು ವರದಿಯಾಗಿದೆ. ಆಕೆಗೆ ಕೂಡಾ ಪತಿಯ ಮನೆಯವರು ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎಂಬುದಾಗಿ ಆಕೆಯ ಕುಟುಂಬಸ್ಥರು ಹೇಳುತ್ತಿದ್ದಾರೆ.

ಈ ಆಧುನಿಕ ಯುಗದಲ್ಲೂ ವರದಕ್ಷಿಣೆಗಾಗಿ ಪೀಡಿಸಲಾಗುತ್ತಿದೆ ಹಾಗೂ ಮಹಿಳೆಯರು ಆತ್ಮಹತ್ಯೆಯ ದಾರಿ ತುಳಿಯಲು ಪ್ರೇರೇಪಿಸುತ್ತದೆ ಎಂಬುದು ಅಚ್ಚರಿಯಾಗಿ ಕಂಡುಬರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ವರದಕ್ಷಿಣೆಗಾಗಿ ಆಗ್ರಹಿಸಿ ಮಹಿಳೆಯನ್ನು ಆಕೆಯ ಪತಿಯ ಮನೆಯವರು ಹತ್ಯೆಗೈಯುವ ಪ್ರಸಂಗಗಳೂ ಸಂಭವಿಸುತ್ತಿವೆ. ದಿಲ್ಲಿಯಲ್ಲಿ ಪೊಲೀಸ್ ಕಮಾಂಡೋ ಆಗಿದ್ದ ಗರ್ಭಿಣಿ ಪತ್ನಿಯನ್ನು ಪತಿಯು ಡಂಬೆಲ್‌ನಿಂದ ಹೊಡೆದು ಕೊಂದ ದಾರುಣ ಘಟನೆಯು ಜನವರಿಯಲ್ಲಿ ವರದಿಯಾದುದನ್ನು ಯಾರೂ ಮರೆಯಲಾರರು.

ವರದಕ್ಷಿಣೆ ಕಿರುಕುಳದ ಪ್ರಕರಣಗಳು ಹಾಗೂ ಅದರಿಂದ ಉಂಟಾಗುವ ಸಾವುಗಳು ಉತ್ತರ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ವಿಪರ್ಯಾಸವೆಂದರೆ ನಮ್ಮ ಕರ್ನಾಟಕವೂ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿಯೇ ಇದೆ. ರಾಷ್ಟ್ರೀಯ ಅಪರಾಧ ಬ್ಯೂರೋದ 2024 ವರದಿಯೊಂದರ ಪ್ರಕಾರ ಮೆಟ್ರೋಪಾಲಿಟನ್ ನಗರಗಳಲ್ಲಿ ಬೆಂಗಳೂರಿನಲ್ಲೇ ಅತ್ಯಧಿಕ ವರದಕ್ಷಿಣೆ ಕಿರುಕುಳಗಳು ವರದಿಯಾಗಿರುವುದು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ವರದಕ್ಷಿಣೆಗೆ ಸಂಬಂಧಿಸಿ 25 ಸಾವುಗಳೂ ಸಂಭವಿಸಿವೆ. 2024ರಲ್ಲಿ ದೇಶಾದ್ಯಂತ ಒಟ್ಟು 1.2 ಲಕ್ಷ ವರದಕ್ಷಿಣೆ ಕಿರುಕುಳದ ಪ್ರಕರಣಗಳು ದಾಖಲಾಗಿವೆ ಎಂಬುದು ಹಾಗೂ ವಾರ್ಷಿಕವಾಗಿ 7000 ವರದಕ್ಷಿಣೆಗೆ ಸಂಬಂಧಿಸಿ ಸಾವುಗಳು ಸಂಭವಿಸುತ್ತಿವೆ ಎನ್ನುವುದು ಅತ್ಯಂತ ಆಘಾತಕಾರಿಯಾದ ವಿಷಯ. ಇನ್ನು ಪೊಲೀಸರಿಗೆ ದೂರು ದಾಖಲಿಸದೆ ವರದಕ್ಷಿಣೆ ಕಿರುಕುಳ ಅನುಭವಿಸುತ್ತಿರುವ ಅದೆಷ್ಟು ಕೋಟ್ಯಂತರ ಬಡಪಾಯಿಗಳಿದ್ದಾರೋ ಅರಿತವರಾರು?

ನಿಜವಾಗಿ ವರದಕ್ಷಿಣೆ ಪಡೆಯುವುದನ್ನು ನಿಷೇಧಿಸಿ 1961ರಲ್ಲೇ ಕಾನೂನು ತರಲಾಗಿದೆ. ಆದರೆ ವರದಕ್ಷಿಣೆಯ ಬದಲಿಗೆ 'ಕೊಡುಗೆಗಳನ್ನು' ಕೊಡುವ ಅಥವಾ ಅದಕ್ಕಾಗಿ ಬೇಡಿಕೆಯಿಡುವ ಪದ್ಧತಿಗಳು ವರದಕ್ಷಿಣೆ ಪಿಡುಗನ್ನು ಜೀವಂತವಾಗಿರಿಸಿವೆ. ವರದಕ್ಷಿಣೆ ಪಿಡುಗು ಕೇವಲ ಶಾಸನಾತ್ಮಕವಾಗಿ ನಿವಾರಿಸಲ್ಪಡುವಂತಹುದಲ್ಲ. ಮುಖ್ಯವಾಗಿ ಜನರಲ್ಲಿ ಮಾನಸಿಕ ಬದಲಾವಣೆಯಿಂದ ಉಂಟಾಗಬೇಕಾಗಿರುವುದು ಎಂಬುದು ಸತ್ಯ.

ಅವಮಾನವಲ್ಲ, ಆತ್ಮಗೌರವದ ಭಾರತವನ್ನು ಅರಿಯಿರಿ

ಗುರುತರ
ಸೋಮಶೇಖರ ಸಿ.ಜೆ.
sompreethi@gmail.com



ಒಂದು ದೇಶದ ಪ್ರಧಾನಿಯನ್ನು ಟೀಕಿಸುವುದು ಪತ್ರಿಕೋದ್ಯಮದ ವ್ಯಾಪ್ತಿಗೆ ಬರುತ್ತದೆ. ಸರ್ಕಾರದ ನೀತಿಗಳನ್ನು ಪ್ರಶ್ನಿಸುವುದು ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣವೂ ಹೌದು. ಆದರೆ, ಒಬ್ಬ ನಾಯಕನನ್ನು ಅಥವಾ ಒಂದು ದೇಶದ ಸಾಂಸ್ಕೃತಿಕ ಗುರುತನ್ನೇ ಹಾಸ್ಯಾಸ್ಪದಗೊಳಿಸುವ ಮಟ್ಟಕ್ಕೆ ಇಳಿದರೆ, ಅದು ಪತ್ರಿಕೋದ್ಯಮವಾಗುವುದಿಲ್ಲ. ಅದು ಪೂರ್ವಾಗ್ರಹ. ಅದು ವಸಾಹತುಶಾಹಿ ಮನೋಭಾವದ ಉಳಿದ ಅವಶೇಷ. ಇತ್ತೀಚೆಗೆ ನಾರ್ವೆಯಲ್ಲಿ ನಡೆದ ಘಟನೆ ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ನಾರ್ವೆ ಭೇಟಿಯ ವೇಳೆ ಒಬ್ಬ ಪತ್ರಕರ್ತೆ ಕೇಳಿದ ಪ್ರಶ್ನೆಗೆ ಉತ್ತರಿಸದೇ ಮುಂದೆ ಸಾಗಿದ ವಿಚಾರವನ್ನು ಕೆಲವರು 'ಪತ್ರಿಕಾ ಸ್ವಾತಂತ್ರ್ಯದ ಹರಣ' ಎಂಬಂತೆ ಚಿತ್ರಿಸಲು ಮುಂದಾಗಿದ್ದಾರೆ. ಭಾರತದಲ್ಲಿ ಪ್ರಶ್ನೆ ಕೇಳಲು ಅವಕಾಶವಿಲ್ಲ, ಸರ್ಕಾರ ಟೀಕೆಗಳನ್ನು ಸಹಿಸುವುದಿಲ್ಲ ಎಂಬ ಮಾತುಗಳನ್ನು ಕೆಲ ವಲಯಗಳು ಜೋರಾಗಿ ಹರಡುತ್ತಿವೆ. ಆದರೆ, ಇದು ಹೇಗಿದೆ ಅಂದರೆ ದಾರಿಯಲ್ಲಿ ಯಾರೋ ಹೋಗುವಾಗ ಓಯ್, ಊಟ ಆಯ್ತಾ ಅಂತ ಜೋರಾಗಿ ಕೂಗಿ ಕೇಳಿ, ಆಕಡೆಯಿಂದ ಉತ್ತರ ಬರದಿದ್ದರೆ ಎಂಥ ಅಹಂಕಾರ ಅಂದ ಹಾಗೆ ಆಯಿತು. ಪಾಪ, ಈ ಪತ್ರಿಕೋದ್ಯಮದ ದೊಡ್ಡ ನಾಯಕಿಯಂತೆ ಬಿಂಬಿಸುತ್ತಿರುವ ಆ ಪತ್ರಕರ್ತೆಯೇ, ಈ ಜಂಟಿ ಹೇಳಿಕೆ ವೇಳೆ ಪತ್ರಕರ್ತರ ಪ್ರಶ್ನೆಗಳಿಗೆ ಅವಕಾಶಗಳಿರಲಿಲ್ಲ. ಆದರೂ ನಾನು ಕೂಗಿದೆ ಎಂದು ಹೇಳಿಕೊಂಡಿದ್ದಾಳೆ. ಕಳೆದ ಮೂರು ವರ್ಷಗಳಿಂದ ನಿಷ್ಕ್ರಿಯ ಪತ್ರಕರ್ತೆಯಾಗಿದ್ದ ಈಕೆ, ಈಗ ದಿಢೀರನೇ ಸಕ್ರಿಯ ಪತ್ರಕರ್ತೆಯಾಗಿದ್ದಾಳೆ. ಅದೇ ಕಾರ್ಯಕ್ರಮದ ನಂತರ ಭಾರತೀಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸದ ನಾರ್ವೆ ಪ್ರಧಾನಿಯ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಇಲ್ಲಿ ಅಬ್ಬರಿಸುತ್ತಿರುವವರು ಮಾತ್ರ ಸುಮ್ಮನಿದ್ದಾರೆ.


Aftenposten
Bli abonnent
Kommentar | India
En lur og litt irriterende mann
Frank Rossavik
Narendra Modi holder seg inne med så mange som mulig. Slik utøver India makt.

ನಾರ್ವೆ ಪತ್ರಿಕೆಯಲ್ಲಿ ಪ್ರಕಟವಾದ ವಿವಾದಿತ ವ್ಯಂಗ್ಯಚಿತ್ರ

ಇರಲಿ, ಇದೇ ನಾರ್ವೆಯ ಪ್ರಮುಖ ಪತ್ರಿಕೆಯೊಂದರಲ್ಲಿ ಪ್ರಕಟವಾದ ಕಾರ್ಟೂನ್ ಮಾತ್ರ ಪಾಶ್ಚಿಮಾತ್ಯ ಮನೋಭಾವದ ನಿಜಸ್ವರೂಪವನ್ನು ಬಯಲಿಗೆಳೆದಿದೆ. ಆ ಕಾರ್ಟೂನ್‌ನಲ್ಲಿ ಭಾರತದ ಪ್ರಧಾನಿಯನ್ನು ಹಾವಿನ ಮುಂದೆ ಪುಂಗಿ ಊದುತ್ತಿರುವ ಹಾವಾಡಿಗನಂತೆ ಚಿತ್ರಿಸಲಾಗಿದೆ. ಇದು ಕೇವಲ ಒಂದು ರಾಜಕೀಯ ವ್ಯಂಗ್ಯಚಿತ್ರವಲ್ಲ. ಇದು ಭಾರತದ ಬಗ್ಗೆ ಇನ್ನೂ ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜೀವಂತವಾಗಿರುವ ಅಹಂಕಾರದ ಮನಸ್ಥಿತಿ. 'ಭಾರತ ಎಂದರೆ ಹಾವಾಡಿಗರ ದೇಶ', 'ಅಭಿವೃದ್ಧಿಯ ಅರಿವು ಇಲ್ಲದ ಸಮಾಜ', 'ಪಾಶ್ಚಿಮಾತ್ಯರ ಮಾರ್ಗದರ್ಶನ ಬೇಕಾದ ರಾಷ್ಟ್ರ' ಎಂಬ ಹಳೆಯ ಕಲ್ಪನೆಗಳನ್ನು ಇಂದಿಗೂ ಹಿಡಿದುಕೊಂಡಿರುವ ಮನೋವೈಕಲ್ಯ.

ಒಮ್ಮೆ ಭಾರತವನ್ನು ಜಗತ್ತು ದಾರಿದ್ರ್ಯದ ಸಂಕೇತವಾಗಿ ನೋಡಿರಬಹುದು. ಹಸಿವಿನ ಚಿತ್ರಗಳು, ಅಭಿವೃದ್ಧಿಹೀನ ಹಳ್ಳಿಗಳು, ಹಾವು-ಮಂಗಗಳ ಆಟ ಇವೆಲ್ಲವನ್ನೇ ಭಾರತವೆಂದು ಬಿಂಬಿಸಲಾಗುತ್ತಿತ್ತು. ಆದರೆ, ಆ ಭಾರತ ಈಗ ಬದಲಾಗಿದೆ. ಮಾಹಿತಿ ತಂತ್ರಜ್ಞಾನದಿಂದ ಹಿಡಿದು ಬಾಹ್ಯಾಕಾಶ ಸಂಶೋಧನೆವರೆಗೆ, ಡಿಜಿಟಲ್ ಆರ್ಥಿಕತೆಯಿಂದ ಹಿಡಿದು ರಕ್ಷಣಾ ಉತ್ಪಾದನೆವರೆಗೆ ಭಾರತ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿದೆ.

ಇಂದು ಜಗತ್ತಿನ ದೊಡ್ಡ ತಂತ್ರಜ್ಞಾನ ಕಂಪನಿಗಳಲ್ಲಿ ಭಾರತೀಯರು ಮುನ್ನಡೆಸುತ್ತಿದ್ದಾರೆ. ಜಾಗತಿಕ ಔಷಧೋದ್ಯಮದಲ್ಲಿ ಭಾರತದ ಪಾಲು ನಿರ್ಣಾಯಕವಾಗಿದೆ. ಕೊರೋನಾ ಕಾಲದಲ್ಲಿ ಶ್ರೀಮಂತ ರಾಷ್ಟ್ರಗಳೇ ತತ್ತರಿಸಿದ್ದಾಗ, ಭಾರತವೇ ಅನೇಕ ದೇಶಗಳಿಗೆ ಲಸಿಕೆ ಕಳುಹಿಸಿತ್ತು. ಒಮ್ಮೆ ಆಹಾರ ಸಹಾಯಕ್ಕಾಗಿ ವಿದೇಶಗಳ ಬಾಗಿಲು ತಟ್ಟುತ್ತಿದ್ದ ದೇಶ, ಇಂದು ಮಾನವೀಯ ನೆರವಿಗಾಗಿ ಜಗತ್ತಿನ ಅನೇಕ ಭಾಗಗಳಿಗೆ ಧಾವಿಸುತ್ತಿದೆ.

ಚಂದ್ರಯಾನದಿಂದ ಹಿಡಿದು ಆದಿತ್ಯ ಮಿಷನ್‌ವರೆಗೆ ಭಾರತದ ವೈಜ್ಞಾನಿಕ ಸಾಧನೆಗಳು ವಿಶ್ವವನ್ನು ಬೆರಗುಗೊಳಿಸಿವೆ. ಯುಪಿಐ ಮೂಲಕ ಭಾರತ ಕಟ್ಟಿದ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಈಗ ಅನೇಕ ರಾಷ್ಟ್ರಗಳು ಅಧ್ಯಯನ ಮಾಡುತ್ತಿವೆ. ಜಿ-20 ಶೃಂಗಸಭೆಯ ಮೂಲಕ ಭಾರತ ತನ್ನ ಜಾಗತಿಕ ನಾಯಕತ್ವವನ್ನು ಸಾಬೀತುಪಡಿಸಿದೆ. ಇಂತಹ ದೇಶವನ್ನು ಇನ್ನೂ 'ಹಾವಾಡಿಗರ ಭಾರತ' ಎಂಬ ಹಳೆಯ ದೃಷ್ಟಿಕೋನದಿಂದ ನೋಡುವುದು ಅವರ ಬೌದ್ಧಿಕ ದಾರಿದ್ರ್ಯವನ್ನೇ ತೋರಿಸುತ್ತದೆ.

ವಾಸ್ತವವಾಗಿ, ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭಾರತದ ಏಳಿಗೆ ಅಸಹನೀಯವಾಗುತ್ತಿದೆ. ಒಂದು ಕಾಲದಲ್ಲಿ ತಮ್ಮ ಮಾರುಕಟ್ಟೆ, ತಮ್ಮ ಆರ್ಥಿಕ ವ್ಯವಸ್ಥೆ, ತಮ್ಮ ರಾಜಕೀಯ ಪ್ರಭಾವದ ಮೇಲೆ ಅವಲಂಬಿತವಾಗಿದ್ದ ದೇಶ ಈಗ ಸ್ವತಂತ್ರ ಧ್ವನಿಯೊಂದಿಗೆ ಜಾಗತಿಕ ವೇದಿಕೆಯಲ್ಲಿ ನಿಂತಿದೆ. ರಷ್ಯಾ-ಉಕ್ರೇನ್ ಯುದ್ಧದ ವಿಚಾರದಲ್ಲಿಯೂ ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಮೊದಲು ಇಟ್ಟುಕೊಂಡಿತು. ಪಾಶ್ಚಿಮಾತ್ಯ ಒತ್ತಡಕ್ಕೆ ಮಣಿಯಲಿಲ್ಲ. ಇದೇ ಅವರಿಗೆ ಅಸಹಜವಾಗಿ ಕಾಣುತ್ತಿದೆ.

ಇನ್ನು 'ಭಾರತವನ್ನು ಯಾಕೆ ನಂಬಬೇಕು?' ಎಂಬ ಪ್ರಶ್ನೆ ಕೇಳಿದ ಪತ್ರಕರ್ತೆಯ ಧೋರಣೆ ನೋಡಿದರೆ, ಅದು ಪತ್ರಿಕೋದ್ಯಮಕ್ಕಿಂತ ಹೆಚ್ಚು ಅಹಂಕಾರದ ಪ್ರತಿಬಿಂಬವಾಗಿ ಕಾಣುತ್ತದೆ. 140 ಕೋಟಿಗೂ ಹೆಚ್ಚು ಜನಸಂಖ್ಯೆಯ, ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯ ರಾಷ್ಟ್ರವನ್ನು ಪ್ರಶ್ನಿಸುವ ಮುನ್ನ, ಅವರೇ ತಮ್ಮ ಇತಿಹಾಸವನ್ನು ಒಮ್ಮೆ ನೋಡಿಕೊಳ್ಳಬೇಕು. ವಸಾಹತುಶಾಹಿಯ ಹೆಸರಿನಲ್ಲಿ ಎಷ್ಟು ದೇಶಗಳನ್ನು ಶೋಷಿಸಲಾಗಿದೆ? ಎಷ್ಟು ಸಮಾಜಗಳನ್ನು ಧ್ವಂಸ ಮಾಡಲಾಗಿದೆ? ಜಗತ್ತಿನ ಅನೇಕ ಯುದ್ಧಗಳಿಗೆ ಕಾರಣವಾದದ್ದು ಯಾರು? ಈ ಪ್ರಶ್ನೆಗಳ ಉತ್ತರವೇ ಪಾಶ್ಚಿಮಾತ್ಯರ ನೈತಿಕತೆಗೆ ಕನ್ನಡಿಯಂತಿದೆ.

ಅಷ್ಟೇ ಅಲ್ಲ, ಈಗ ಇರಾನ್ ಮೇಲೆ ಯುದ್ಧ ಸಾರಿದ ಅಮೆರಿಕದ ಮನಸ್ಥಿತಿ ಎಂಥದ್ದು? ಈ ಯುದ್ಧದಿಂದಾಗಿ ಇಡೀ ಜಗತ್ತಿನ ಸರಪಳಿ ಅಲುಗಾಡಿದೆ. ಕೊರೋನಾ ಕಾಲಕ್ಕಿಂತ ಅಧಿಕ ಸಮಸ್ಯೆಯಾಗುವ ಸಾಧ್ಯತೆಗಳಿವೆ, ಬಡತನ ಇನ್ನಷ್ಟು ಹೆಚ್ಚಾಗಬಹುದು ಎಂಬ ಮಾತುಗಳೂ ಇವೆ. ಇದನ್ನು ಸೃಷ್ಟಿಸಿದ್ದು ಯಾರು? ಅದೇ ಅಮೆರಿಕ ಮತ್ತು ಮಿತ್ರ ದೇಶಗಳಲ್ಲವೇ? ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿನ ಯುದ್ಧ ನಿಲ್ಲಿಸಿದೆ ಎಂದು ಹೇಳುತ್ತಲೇ ಯುದ್ಧ ಆರಂಭಿಸಿದ ಟ್ರಂಪ್ ಅಥವಾ ಅಮೆರಿಕದ ಗುಣಗಾನ ಮಾಡುತ್ತಲೇ ಈ ದೇಶಗಳು ಬದುಕಿಲ್ಲವೇ?

ಭಾರತ ಯಾರಿಂದಲೂ ನಂಬಿಕೆ ಪತ್ರ ಕೇಳಿಕೊಂಡಿಲ್ಲ. ನಮ್ಮ ಪ್ರಜಾಪ್ರಭುತ್ವವೇ ನಮ್ಮ ಶಕ್ತಿ. ನೂರಾರು ಭಾಷೆಗಳು, ಅನೇಕ ಧರ್ಮಗಳು, ವಿಭಿನ್ನ ಸಂಸ್ಕೃತಿಗಳ ನಡುವೆ ಇಷ್ಟೊಂದು ದಶಕಗಳಿಂದ ಪ್ರಜಾಪ್ರಭುತ್ವವನ್ನು ಜೀವಂತವಾಗಿಟ್ಟಿರುವುದು ಸಣ್ಣ ಸಾಧನೆಯಲ್ಲ. ಅನೇಕ ದೇಶಗಳಲ್ಲಿ ಸೈನಿಕ ಆಡಳಿತಗಳು ಬಂದಿವೆ, ಗೃಹಯುದ್ಧಗಳು ನಡೆದಿವೆ, ಸಂವಿಧಾನಗಳು ಕುಸಿದಿವೆ. ಆದರೆ ಭಾರತದಲ್ಲಿ ಜನರೇ ಅಂತಿಮ ತೀರ್ಪುಗಾರರು ಎಂಬ ವ್ಯವಸ್ಥೆ ಇನ್ನೂ ಗಟ್ಟಿಯಾಗಿ ಉಳಿದಿದೆ.

ಇದೇ ಕಾರಣಕ್ಕೆ ಭಾರತದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಕೆಲವು ವಲಯಗಳಲ್ಲಿ ಅಸಹಜ ಅಸಹನೆ ಕಂಡುಬರುತ್ತಿದೆ. ಭಾರತ ಬಲಿಷ್ಠವಾಗುತ್ತಿರುವುದು ಅವರಿಗೆ ಅಸ್ವಸ್ಥತೆಯನ್ನು ಉಂಟುಮಾಡುತ್ತಿದೆ. ಏಕೆಂದರೆ, ಈಗ ಭಾರತ ಕೇವಲ ಮಾರುಕಟ್ಟೆಯಲ್ಲ, ಅದು ಜಾಗತಿಕ ನಿರ್ಣಯಗಳಲ್ಲಿ ಪ್ರಭಾವ ಬೀರುವ ಶಕ್ತಿಯಾಗಿದೆ.

ಇಂತಹ ಸಂದರ್ಭಗಳಲ್ಲಿ ಭಾರತದ ಒಳರಾಜಕೀಯವೂ ಜವಾಬ್ದಾರಿಯುತವಾಗಿರಬೇಕು. ಆಡಳಿತ ಪಕ್ಷವನ್ನು ಟೀಕಿಸುವುದು ಪ್ರತಿಪಕ್ಷಗಳ ಕರ್ತವ್ಯ. ಆದರೆ, ವಿದೇಶಿ ನೆಲದಲ್ಲಿ ದೇಶದ ಗೌರವಕ್ಕೆ ಧಕ್ಕೆ ಉಂಟಾದಾಗ, ಅದನ್ನು ರಾಜಕೀಯ ಆಯುಧವನ್ನಾಗಿ ಬಳಸುವುದು ಅಪಾಯಕಾರಿ ಪ್ರವೃತ್ತಿ. ಸರ್ಕಾರದ ವಿರುದ್ಧದ ದ್ವೇಷ ದೇಶದ ವಿರುದ್ಧದ ಅಸಹನೆಯಾಗಿ ಮಾರ್ಪಡಬಾರದು.

ದುರದೃಷ್ಟವಶಾತ್, ಕೆಲವು ರಾಜಕೀಯ ನಾಯಕರು ಮತ್ತು ವಿಚಾರವಂತರಿಗೆ ಭಾರತವನ್ನು ಟೀಕಿಸುವ ಯಾವುದೇ ವಿದೇಶಿ ಧ್ವನಿಯೂ ಸತ್ಯದ ಪ್ರತಿನಿಧಿಯಂತೆ ಕಾಣುತ್ತಿದೆ. ವಿದೇಶಿ ಪತ್ರಿಕೆಯೊಂದು ಭಾರತದ ಪ್ರಧಾನಿಯನ್ನು ಅವಮಾನಿಸಿದರೂ, ಅದರಲ್ಲಿ ಸಮಸ್ಯೆ ಕಾಣದೇ, ಅದನ್ನು ಸಮರ್ಥಿಸಲು ಪ್ರಯತ್ನಿಸುವ ಮನೋಭಾವ ಇನ್ನೂ ಆತಂಕಕಾರಿ. ಇದು ವೈಚಾರಿಕ ದಾಸ್ಯತೆಯ ಲಕ್ಷಣ ಎನ್ನಲಡ್ಡಿಯಿಲ್ಲ.

ಸ್ವಾತಂತ್ರ್ಯ ಎಂದರೆ ಜವಾಬ್ದಾರಿಯಿಲ್ಲದ ವರ್ತನೆಗೆ ಪರವಾನಗಿ ಅಲ್ಲ. ಪತ್ರಿಕಾ ಸ್ವಾತಂತ್ರ್ಯ ಎಂದರೆ ಯಾರನ್ನಾದರೂ ಅವಮಾನಿಸುವ ಹಕ್ಕು ಎಂದಾದರೆ, ಅದೇ ತರ್ಕವನ್ನು ಜಗತ್ತಿನ ಎಲ್ಲ ದೇಶಗಳೂ ಒಪ್ಪಬೇಕಾಗುತ್ತದೆ. ಆಗ ಧರ್ಮ, ಸಂಸ್ಕೃತಿ, ಜನಾಂಗ, ರಾಷ್ಟ್ರೀಯ ಗುರುತು ಯಾವುದಕ್ಕೂ ಗೌರವ ಉಳಿಯುವುದಿಲ್ಲ. ಪಾಶ್ಚಿಮಾತ್ಯ ಮಾಧ್ಯಮಗಳ ಒಂದು ಸಮಸ್ಯೆ ಏನೆಂದರೆ, ಅವರು ಜಗತ್ತನ್ನು ಇನ್ನೂ ತಮ್ಮ ಕಣ್ಣಿನಿಂದಲೇ ಅಳೆಯಲು ಪ್ರಯತ್ನಿಸುತ್ತಾರೆ. ಅವರ ರಾಜಕೀಯ ಮಾದರಿಯೇ ಶ್ರೇಷ್ಠ, ಅವರ ಸಂಸ್ಕೃತಿಯೇ ಪ್ರಗತಿಶೀಲ, ಅವರ ಮೌಲ್ಯಗಳೇ ಅಂತಿಮ ಸತ್ಯ ಎಂಬ ಮನೋಭಾವದಿಂದ ಹೊರಬರಲು ಸಾಧ್ಯವಾಗಿಲ್ಲ. ಇದೇ ಕಾರಣಕ್ಕೆ ಭಾರತ ತನ್ನದೇ ದಾರಿಯಲ್ಲಿ ಸಾಗಿದಾಗ ಅವರಿಗೆ ಅದು ಅಸಹಜವಾಗಿ ಕಾಣುತ್ತದೆ.

ಭಾರತ ಇಂದು ಆತ್ಮವಿಶ್ವಾಸದ ರಾಷ್ಟ್ರ. ಜಾಗತಿಕ ವೇದಿಕೆಯಲ್ಲಿ ತಲೆತಗ್ಗಿಸದೇ ಮಾತನಾಡುವ ರಾಷ್ಟ್ರ. ತನ್ನ ಹಿತಾಸಕ್ತಿಗಳನ್ನು ಮುಂಚೂಣಿಯಲ್ಲಿ ಇಡುವ ರಾಷ್ಟ್ರ. ಇಂತಹ ದೇಶವನ್ನು ಹಳೆಯ ಕಾಲದ ಸ್ಟೀರಿಯೋಟೈಪ್‌ಗಳಿಂದ ಅಳೆಯುವ ಪ್ರಯತ್ನಗಳು ಈಗ ಅಪ್ರಸ್ತುತ. ಭಾರತದ ಬಗ್ಗೆ ಜಗತ್ತು ಅಭಿಪ್ರಾಯ ಹೇಳಬಹುದು. ಟೀಕಿಸಬಹುದು. ಪ್ರಶ್ನಿಸಬಹುದು. ಆದರೆ, ಭಾರತವನ್ನು ಹೀನಾಯವಾಗಿ ಚಿತ್ರಿಸುವ ಪ್ರಯತ್ನಗಳಿಗೆ ಪ್ರತಿಕ್ರಿಯೆ ಸಿಗುತ್ತದೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಇದು 1950ರ ಭಾರತವಲ್ಲ. ಇದು ಆತ್ಮಗೌರವದ ಭಾರತ. ತನ್ನ ಬಗ್ಗೆ ತಾನೇ ಹೆಮ್ಮೆಪಡುವ ಭಾರತ. ಜಗತ್ತಿಗೆ ತನ್ನ ಶಕ್ತಿಯನ್ನು ತೋರಿಸಿರುವ ಭಾರತ.

ಪತ್ರಿಕೋದ್ಯಮಕ್ಕೆ ಗೌರವ ಇದೆ. ಪ್ರಶ್ನೆ ಕೇಳುವ ಹಕ್ಕಿಗೂ ಗೌರವ ಇದೆ. ಆದರೆ, ಅವಮಾನಕ್ಕೆ ಗೌರವವಿಲ್ಲ. ಭಾರತದ ಏಳಿಗೆಯನ್ನು ಒಪ್ಪಿಕೊಳ್ಳಲು ಅಸಮರ್ಥರಾಗಿರುವವರು ಇನ್ನೂ ಹಳೆಯ ಕಾಲದ ಮನೋವೈಕಲ್ಯದಲ್ಲೇ ಸಿಲುಕಿಕೊಂಡಿದ್ದಾರೆ. ಕಾಲ ಬದಲಾಗಿದೆ. ಭಾರತವೂ ಬದಲಾಗಿದೆ. ಈಗ ಜಗತ್ತೂ ತನ್ನ ದೃಷ್ಟಿಕೋನವನ್ನು ಬದಲಿಸಬೇಕಾದ ಸಮಯ ಬಂದಿದೆ.

ಮಾತಿನ ಶೈಲಿ ವಿಭಿನ್ನ

ಏಕೈಕಸ್ಯಾಪಿ ವೃಕ್ಷಸ್ಯ ಫಲೇ ದೃಷ್ಟಂ ರಸಾಂತರಮ್।
ಏಕೈಕಸ್ಯಾಪಿ ಮರ್ತ್ಯಸ್ಯ ವಕ್ತ್ರೇ ಭಿನ್ನಾ ಸರಸ್ವತೀ ॥ – ಸುವಚನ ಶತಕಮ್

ಒಂದೊಂದು ಮರದ ಹಣ್ಣಿನಲ್ಲೂ ರುಚಿಯು ಬೇರೆ ಬೇರೆಯಾಗಿರುತ್ತದೆ. ಹಾಗೆ ಒಬ್ಬೊಬ್ಬರ ಬಾಯಿಯಲ್ಲೂ ಸರಸ್ವತಿಯು (ಅಂದರೆ ಮಾತಿನ ಶೈಲಿಯು) ಭಿನ್ನಭಿನ್ನವಾಗಿರುತ್ತದೆ – ಎಂಬುದು ಶ್ಲೋಕಾರ್ಥ.

ಪ್ರಪಂಚದ ಉದ್ದಗಲಕ್ಕೂ ಇರುವ ಭಗವಂತನ ಸೃಷ್ಟಿ ಚಿತ್ರ-ವಿಚಿತ್ರವಾದದ್ದು, ವಿಶಿಷ್ಟವಾದದ್ದು. ಮನುಷ್ಯ ಲೋಕವನ್ನೊಮ್ಮೆ ನೋಡಿ! ಎಷ್ಟೊಂದು ಕೋಟಿ ಜನರಿದ್ದಾರೆ. ಆದರೆ ಅವರೆಲ್ಲರೂ ಒಂದೆ ಬಗೆಯಾಗಿ ಇಲ್ಲ. ಒಬ್ಬರಿಗಿಂತ ಇನ್ನೊಬ್ಬರಲ್ಲಿ ಸಣ್ಣದಾದರೂ ವ್ಯತ್ಯಾಸವಿದ್ದೇ ಇರುತ್ತದೆ. ಅವಳಿ ಜವಳಿ ಮಕ್ಕಳಲ್ಲೂ ಸೂಕ್ಷ್ಮವಾದ ವ್ಯತ್ಯಾಸವಿದ್ದೇ ಇದೆ. ಇದಕ್ಕಾಗಿಯೇ ಭಗವಂತನ ಸೃಷ್ಟಿ ಆಶ್ಚರ್ಯವೆನಿಸುವುದು.



ಒಂದೇ ಜಾತಿಯ ಮರಗಳಿರಲಿ, ಒಂದೊಂದು ಮರದ ಹಣ್ಣಿನ ರುಚಿಯಲ್ಲೂ ಬೇರೆ ರೀತಿಯಿರುತ್ತದೆ. ಅಂದರೆ ಒಂದರಂತೆ ಇನ್ನೊಂದಿಲ್ಲ. ಕೆಲವೊಮ್ಮೆ ಮೇಲ್ನೋಟಕ್ಕೆ ಏಕಪ್ರಕಾರವಾಗಿ ಕಂಡರೂ ರುಚಿಯಲ್ಲಿ ವ್ಯತ್ಯಾಸವಿದೆ. ಸೂಕ್ಷ್ಮ ವ್ಯತ್ಯಾಸವಿದ್ದೇ ಇರುತ್ತದೆ.

ಬಹುಶಃ ಇದಕ್ಕಾಗಿಯೇ ಇರಬೇಕು ಬಲ್ಲವರು ಜಗತ್ತಿನಲ್ಲಿ ಒಂದು ವಸ್ತುವಿನಂತೆ ಇನ್ನೊಂದು ವಸ್ತುವಿಲ್ಲ ಎನ್ನುವುದು. ಸೂಕ್ಷ್ಮವಾಗಿ ಚಿಂತನೆ ನಡೆಸಿದರೆ ಈ ಮಾತಿನಲ್ಲಿ ಸತ್ಯವಿದೆ ಎನ್ನಿಸುತ್ತದೆ.

ಒಂದೇ ಪದ್ಯವನ್ನು ಒಂದೇ ರಾಗ, ತಾಳ, ಲಯಗಳಲ್ಲಿ ಬೇರೆ ಬೇರೆ ಗಾಯಕರು ಹಾಡಿದರೆ ಅವರ ಹಾಡುವಿಕೆಯಲ್ಲಿ ಸಾಕಷ್ಟು ಮಾರ್ಪಾಡಿರುತ್ತವೆ. ಒಂದೇ ವಿಷಯದ ಕುರಿತು ಬೇರೆ ಬೇರೆ ವಿದ್ವಾಂಸರು ಉಪನ್ಯಾಸವಿತ್ತರೂ ಅದರಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಾಣಬಹುದು. ಇದರಿಂದ ಗೊತ್ತಾಗುವುದಿಷ್ಟೆ! 'ಒಂದರಂತೆ ಇನ್ನೊಂದಿಲ್ಲ' ಎಂಬುದಾಗಿ.

ಮರ,ಗಿಡ, ಬಳ್ಳಿ ಹಾಗೂ ಅವುಗಳಲ್ಲಿ ಅರಳುವ ಹೂವು, ಬಿಡುವ ಹಣ್ಣು ಇವುಗಳನ್ನು ಕವಿಯು ಸೂಕ್ಷ್ಮವಾಗಿ ಗಮನಿಸಿದ್ದಾನೆ, ಅನುಭವಿಸಿದ್ದಾನೆ. ಅಂತೆಯೇ ಜನರಾಡುವ ಮಾತು, ಮಾತಿನ ಶೈಲಿ ಇವುಗಳನ್ನೂ ಗಮನಿಸಿದ್ದಾರೆ. ಇಂತಹ ದಟ್ಟ ಅನುಭವದ ಹಿನ್ನೆಲೆಯಲ್ಲಿ ಈ ಶ್ಲೋಕದ ಮೂಲಕ ಮಾತಿನ ಶೈಲಿಯ, ವೈಖರಿಯ ವಿಭಿನ್ನತೆಯನ್ನು ಗುರುತಿಸಿ ನಿರೂಪಿಸಿದ್ದಾನೆ.

ಎಲ್ಲರೂ ಮಾತು ಬಲ್ಲವರೇ. ಎಲ್ಲರೂ ವಿಷಯ ಜ್ಞಾನ ಹೊಂದಿದವರೇ. ಆದರೆ ಅವರಾಡುವ ಮಾತು ಒಂದೇ ವಿಷಯವನ್ನೊಳಗೊಂಡಿದ್ದರೂ ನಿರೂಪಣ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಒಂದು ವಿಷಯ ಗೊತ್ತಿದ್ದರೂ ಹೇಳುವವನ ಆಕರ್ಷಕ ಶೈಲಿ ನಮ್ಮನ್ನು ಮತ್ತೊಮ್ಮೆ ಕೇಳುವಂತೆ ಮಾಡುತ್ತದೆ. ಅದೇ ವಿಷಯವನ್ನು ಇನ್ನೊಬ್ಬನು ನೀರಸ ಶೈಲಿಯಲ್ಲಿ ಆರಂಭಿಸಿದರೆ ಕೂಡಲೇ ತೆರಳೋಣ, ಜಾಗ ಖಾಲಿ ಮಾಡೋಣ ಎಂದೆನಿಸುತ್ತದೆ.

ಇದು ಪ್ರಕೃತಿಯ ನಿಯಮ. ಭಗವಂತ ಮಾಡಿದ ಸಂವಿಧಾನ. ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಬದಲಾಯಿಸುವ ಮೂರ್ಖ ಪ್ರಯತ್ನ ಮಾಡಿದರೂ ವ್ಯರ್ಥವೇ ಸರಿ.

ಮೋದಿಯವರ ಇಟಲಿ ಭೇಟಿಯ ಮಹತ್ವ

ಅರವಿಂದ ಶೆಣೈ

ಪ್ರಧಾನಿ ನರೇಂದ್ರ ಮೋದಿ ಇದೀಗ ಇಟಲಿ ಭೇಟಿಯಲ್ಲಿದ್ದಾರೆ. ಅವರ ಐದು ರಾಷ್ಟ್ರಗಳ ಯುರೋಪ್ ಪ್ರವಾಸದ ಕೊನೆಯ ಹಂತದಲ್ಲಿ ಅವರು ಇಟಲಿಗೆ ಕಾಲಿಟ್ಟಿದ್ದಾರೆ. ಇರಾನ್ ಸಂಘರ್ಷದ ಕಾರಣದಿಂದಾಗಿ ಫೆ. 28ರಿಂದ ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಮೋದಿಯವರ ಇಟಲಿ ಭೇಟಿಯು ಈ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಹಲವಾರು ರಾಷ್ಟ್ರಗಳು ಕೆಲವು ದಶಕಗಳಿಂದ ನಿರ್ಮಿಸಿದ್ದ ಸರಕು ಪೂರೈಕೆಯ ಜಾಲಗಳೆಲ್ಲವೂ ಅಸ್ತವ್ಯಸ್ತಗೊಂಡಿವೆ. ಜಗತ್ತು ಈಗ ಅವಶ್ಯ ವಸ್ತುಗಳ ಪೂರೈಕೆಗೆ ಕಷ್ಟಪಡುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತವು 2023ರಲ್ಲಿ ಪ್ರತಿಪಾದಿಸಿದ 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಎಕನಾಮಿಕ್ ಕಾರಿಡಾರ್' (ಐಎಂಇಇಸಿ) ಈಗ ಹೆಚ್ಚು ಪ್ರಸ್ತುತವಾಗುತ್ತಿದೆ. ಹೊಸದಿಲ್ಲಿಯಲ್ಲಿ ನಡೆದ ಜಿ-20 ಸಮ್ಮೇಳನದಲ್ಲಿ ಐಎಂಇಇಸಿ ಪ್ರಸ್ತಾವ ಇಡಲಾಗಿತ್ತು.

ಇದೀಗ ಈ ಕಾರಿಡಾರ್ ಯೋಜನೆಯು ಕೇವಲ ಹೆಸರಿನಲ್ಲಷ್ಟೇ ಇರುವುದೇ ಅಥವಾ ಅದನ್ನು ತುರ್ತಾಗಿ ಕಾರ್ಯರೂಪಕ್ಕೆ ಇಳಿಸಬೇಕೆ ಎಂಬ ಕುರಿತಂತೆ ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಿರ್ಧರಿಸಬೇಕಾಗಿದೆ. ಐಎಂಇಇಸಿ ಕಲ್ಪನೆಯು ಅತ್ಯಂತ ಮಹತ್ವಾಕಾಂಕ್ಷಿಯಾದುದು. ಇದು ವಿಸ್ತೃತ ರೈಲು ಮತ್ತು ಜಲಮಾರ್ಗಗಳ ಮೂಲಕ ಏಷ್ಯಾವನ್ನು ಗಲ್ಫ್ ರಾಷ್ಟ್ರಗಳ ಮುಖಾಂತರವಾಗಿ ಯುರೋಪ್‌ನೊಂದಿಗೆ ಸಂಪರ್ಕಿಸಲು ಬಯಸುತ್ತದೆ. ಪೂರ್ವ ಮತ್ತು ಪಶ್ಚಿಮದ ಎರಡು ಬೃಹತ್ ಆರ್ಥಿಕ ವಲಯಗಳನ್ನು ಹಲವಾರು ದಾರಿಗಳ ಮೂಲಕ ಪರಸ್ಪರ ಸಂಪರ್ಕಿಸುವುದು ಇದರ ಉದ್ದೇಶ. ಯಾವುದೇ ಒಂದು ದಾರಿಯು ನಿರ್ಬಂಧಿಸಲ್ಪಟ್ಟರೆ ಇನ್ನುಳಿದ ದಾರಿಗಳನ್ನು ತೆರೆಯುವ ಅವಕಾಶ ಇಲ್ಲಿದೆ.

ಭಾರತ, ಅಮೆರಿಕ, ಫ್ರಾನ್ಸ್, ಜರ್ಮನಿ, ಇಟಲಿ, ಸೌದಿ ಅರೇಬಿಯಾ, ಯುಎಇ ಮತ್ತು ಐರೋಪ್ಯ ಒಕ್ಕೂಟಗಳು 2023ರಲ್ಲಿ ಈ ಕುರಿತಾದ ಒಪ್ಪಂದಕ್ಕೆ ಸಹಿ ಹಾಕಿದ್ದವು. ಸಾಗಣೆಯ ಸಮಯವನ್ನು ಉಳಿಸುವುದು, ಸೂಯೆಜ್ ಕಾಲುವೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಪೂರೈಕೆ ಜಾಲವನ್ನು ವಿಸ್ತರಿಸುವುದು, ಯಾವುದೇ ಪ್ರಾದೇಶಿಕ ಸಂಘರ್ಷ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವುದು ಈ ಎಕನಾಮಿಕ್ ಕಾರಿಡಾರ್ ನಿರ್ಮಾಣದ ಮಹತ್ವದ ಗುರಿಯಾಗಿದೆ.

ಆದರೆ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಮೊದಲೇ ಅಡ್ಡಿಗಳು ಬಂದವು. ಹಮಾಸ್ ಇಸ್ರೇಲ್ ಮೇಲೆ ದಾಳಿ ಮಾಡಿತು. ಬಳಿಕ ನಡೆದ ಗಾಝಾ ಸಮರವು ಜಗತ್ತಿನ ರಾಜಕೀಯ ಗಮನವನ್ನು ಅತ್ತ ಸೆಳೆಯಿತು. ಹೌತಿಗಳು ಕೆಂಪು ಸಮುದ್ರ ಪ್ರದೇಶದಲ್ಲಿ ಹಡಗುಗಳ ಮೇಲೆ ದಾಳಿ ನಡೆಸಿದ್ದು ಐಎಂಇಇಸಿ ಜಲಮಾರ್ಗದ ಮೇಲೆ ಉಂಟಾಗುವ ಕಂಟಕವನ್ನು ತೋರ್ಪಡಿಸಿತು. ಹಾಗಾಗಿ ಈ ಕಾರಿಡಾರ್ ಯೋಜನೆ ಸ್ಥಗಿತಗೊಂಡಿತು.

ಆದರೂ 2025ರ ಮಧ್ಯಂತರ ವೇಳೆಗೆ ಪೂರ್ವಭಾಗದಲ್ಲಿ ಈ ಕಾರಿಡಾರಿನ ಚಟುವಟಿಕೆಗಳು ನಡೆದೇ ಇದ್ದವು. ಭಾರತ , ಯುಎಇ ಮತ್ತು ಸೌದಿಅರೇಬಿಯಾಗಳು ಭಾರತ ಮತ್ತು ಗಲ್ಫ್ ಪ್ರದೇಶದ ಕಾರ್ಯಗಳ ಅನುಷ್ಠಾನದಲ್ಲಿ ಸದ್ದಿಲ್ಲದೆ ತೊಡಗಿದ್ದವು. ಆದರೆ ಗಲ್ಫ್‌ನಿಂದ ಯುರೋಪಿಗೆ ಸಂಪರ್ಕಿಸುವ ಯೋಜನಾ ಜಾಲವು ಮುಂದುವರಿಯಲೇ ಇಲ್ಲ.

ಅಷ್ಟರಲ್ಲಿ ಫೆ. 28ರಂದು ಇರಾನ್ ಸಮರ ಪ್ರಾರಂಭಗೊಂಡಿತು. ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ತೈಲ ಮತ್ತು ಇನ್ನಿತರ ಕೆಲವು ವಸ್ತುಗಳ ಸಾಗಣೆಗೆ ಅಡ್ಡಿಯಾಯಿತು. ಎಲ್ಲಾ ದೇಶಗಳೂ ಅದರ ಪರಿಣಾಮ ಅನುಭವಿಸತೊಡಗಿದವು. ಒಮ್ಮೆಗೇ ಎಲ್ಲರೂ ಮತ್ತೆ ಐಎಂಇಇಸಿ ಕುರಿತಂತೆ ಮಾತನಾಡತೊಡಗಿದರು. ಇಂತಹ ಎಕನಾಮಿಕ್ ಕಾರಿಡಾರ್ ನಿಜಕ್ಕೂ ಅಗತ್ಯ ಎಂಬುದು ಈಗ ಎಲ್ಲರಿಗೂ ಮನವರಿಕೆಯಾಗತೊಡಗಿದೆ. ತಮ್ಮ ಉಳಿವಿಗೆ ಇಂತಹ ಸಂಪರ್ಕ ಜಾಲ ಅಗತ್ಯವಾಗಿದೆ ಎಂದು ವಿವಿಧ ದೇಶಗಳು ಭಾವಿಸತೊಡಗಿವೆ.ಈ ಎಕನಾಮಿಕ್ ಕಾರಿಡಾರ್ ಕೇವಲ ಕಲ್ಪನೆಯಲ್ಲ. ಬದಲಾಗಿ ಇದೊಂದು ಕಾರ್ಯಸಾಧು ಯೋಜನೆ ಎಂಬುದಾಗಿ 'ಫಾರ್ಚೂನ್' ನಿಯತಕಾಲಿಕ ಇತ್ತೀಚೆಗೆ ಬಣ್ಣಿಸಿದೆ. ಜಗತ್ತು ತಮ್ಮ ಸರಕು ಸಾಗಣೆಗೆ ಕೇವಲ ಒಂದೇ ಮಾರ್ಗದ ಮೇಲೆ ಅವಲಂಬಿತವಾಗಿದ್ದರೆ ಸಣ್ಣದೊಂದು ಸಂಘರ್ಷ ಕೂಡಾ ಅದೆಷ್ಟು ದೊಡ್ಡ ಪರಿಣಾಮ ಬೀರಬಲ್ಲದು ಎಂಬುದನ್ನು ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟು ತೋರಿಸಿಕೊಟ್ಟಿದೆ. ಐಎಂಇಇಸಿಯ ಪ್ರಮುಖ ತರ್ಕವೇ 'ಭವಿಷ್ಯದಲ್ಲಿ ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ವಹಿವಾಟು ಯಾವುದೋ ಒಂದು ಜಲಮಾರ್ಗದ ಮೇಲೆ, ಯಾರೋ ಒಬ್ಬರು ಯಾವುದೋ ಒಂದು ದಿನ ನಿಯಂತ್ರಣ ಹೊಂದಿರುತ್ತಾರೆ ಎಂಬುದರ ಮೇಲೆ ಅವಲಂಬಿಸಬಾರದು' ಎನ್ನುವುದೇ ಆಗಿದೆ. ಇರಾನ್ ಬಿಕ್ಕಟ್ಟು ಈ ವಾದವನ್ನು ಇನ್ನಷ್ಟು ಬಲಗೊಳಿಸಿದೆ.

ಈ ಎಕನಾಮಿಕ್ ಕಾರಿಡಾರ್ ಯೋಜನೆಯಲ್ಲಿ ಇಟಲಿಯ ಪಾತ್ರ ಮಹತ್ವದ್ದಾಗಿದೆ. ಇಡೀ ಯೋಜನೆಯ ಪಾಶ್ಚಿಮಾತ್ಯ 'ಲಂಗರು ತಾಣ'ವಾಗಿ ಇಟಲಿ ಪಾತ್ರ ವಹಿಸಲಿದೆ. ಈ ಇಕನಾಮಿಕ್ ಕಾರಿಡಾರ್ ಅನುಷ್ಠಾನಿಸಲ್ಪಟ್ಟರೆ ಮುಂಬೈನಿಂದ ಗಲ್ಫ್ ರಾಷ್ಟ್ರವಾಗಿ ಸಾಗುವ ದಾರಿಯು ಯುರೋಪಿನಲ್ಲಿ ಇಟಲಿಯನ್ನು ಪ್ರಮುಖ ಕೇಂದ್ರವಾಗಿ ಪರಿಗಣಿಸಲಿದೆ. ಅಲ್ಲಿಂದ ಬಳಿಕ ಯುರೋಪ್‌ಗೆ ವಿಸ್ತರಿಸಲ್ಪಡಲಿದೆ. ಇಟಲಿ ಈ ಯೋಜನೆಯಲ್ಲಿ ಪಾಲ್ಗೊಳ್ಳದಿದ್ದರೆ ಯೋಜನೆಯು ಅಪೂರ್ಣಗೊಳ್ಳಬಹುದು.

ಅದೃಷ್ಟವಶಾತ್ ಈ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಇಟಲಿ ಪ್ರಧಾನಿ ಮೆಲೊನಿ ಸಕ್ರಿಯ ಆಸಕ್ತಿ ವಹಿಸಿದ್ದಾರೆ. ಐಎಂಇಇಸಿ ಕಾರ್ಯಗತಗೊಳ್ಳಲು ಅವರೂ ಶ್ರಮಿಸುತ್ತಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಯುಎಇಗೆ ಹಠಾತ್ ಭೇಟಿ ನೀಡಿ ಈ ವಿಷಯದ ಕುರಿತಂತೆ ಚರ್ಚಿಸಿದ್ದರು.ಕೊಲ್ಲಿ ಸಮರ ಆರಂಭವಾದ ಬಳಿಕ ಬೇರೆ ಯಾವ ಯುರೋಪಿಯನ್ ಅಥವಾ ನ್ಯಾಟೋ ಮುಖಂಡರೂ ಕೊಲ್ಲಿ ರಾಷ್ಟ್ರಗಳಿಗೆ ಭೇಟಿ ನೀಡಿದ್ದಿಲ್ಲ. ಆದರೆ ಮೆಲೊನಿ ಮೂರು ಅರಬ್ ದೇಶಗಳ ಮುಖಂಡರನ್ನು ಭೇಟಿಯಾಗಿ ವಿಸ್ತೃತ ಚರ್ಚೆ ನಡೆಸಿದರು. ಇಂಧನ ಬಿಕ್ಕಟ್ಟನ್ನು ಪರಿಹರಿಸುವುದು ಆಕೆಯ ಪ್ರಮುಖ ಆದ್ಯತೆಯಾಗಿತ್ತು. ಏಕೆಂದರೆ ಇಟಲಿಗೆ ಕೊಲ್ಲಿಯಿಂದ ಎಲ್‌ಎನ್‌ಜಿ ಪೂರೈಕೆ ಅಸ್ತವ್ಯಸ್ತಗೊಂಡು ಇಟಲಿಯ ಇಂಧನ ಪರಿಸ್ಥಿತಿ ಬಿಕ್ಕಟ್ಟಿಗೆ ಸಿಲುಕಿತ್ತು. ಅದರ ಜತೆಗೇ ಐಎಂಇಇಸಿ ಯೋಜನೆಯ ಬಗೆಗೂ ಚರ್ಚಿಸಿದರು.

ಆದರೆ ಇತ್ತೀಚಿನ ದಿನಗಳಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಮಧ್ಯೆ ಉಂಟಾಗಿರುವ ಸಂಘರ್ಷವು ಐಎಂಇಇಸಿ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇಲ್ಲದಿಲ್ಲ. ಸೌದಿ ಅರೇಬಿಯಾ ಭಾರತದ ಪ್ರಗತಿಯನ್ನು ಸಹಿಸದ ಪಾಕಿಸ್ತಾನದೊಂದಿಗೂ ರಕ್ಷಣಾ ಒಪ್ಪಂದ ಮಾಡಿಕೊಂಡಿರುವುದು ಕೂಡಾ ತೊಡಕಾಗಿ ಪರಿಣಮಿಸಬಹುದು. ಪಾಕಿಸ್ತಾನವು ಸೌದಿ ಮೇಲೆ ಪ್ರಭಾವ ಬೀರಿ ಐಎಂಇಇಸಿ ಯೋಜನೆಗೆ ತೊಡರುಗಾಲು ಒಡ್ಡಲು ಯತ್ನಿಸಬಹುದು.

ಐಎಂಇಇಸಿ ಯೋಜನೆಗೆ ಸೌದಿ ಅರೇಬಿಯಾದ ಬಂದರುಗಳು ಯುಎಇ ಬಂದರುಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವುದು ಅಗತ್ಯವಾಗಿದೆ. ಹಾಗಾಗಿ ಮೇಲಿನ ಮಟ್ಟದಿಂದ ಹೇರಬಹುದಾದ ಒತ್ತಡವು ಸೌದಿಯು ಈ ಯೋಜನೆಯೊಂದಿಗೆ ಮುಂದುವರಿಯುವಂತೆ ಮಾಡಬಲ್ಲುದು. ಈ ನಿಟ್ಟಿನಲ್ಲಿ ಇಟಲಿ ಪ್ರಧಾನಿ ಮೆಲೊನಿ ಪ್ರಮುಖ ಪಾತ್ರ ವಹಿಸಬಲ್ಲರು. ಭಾರತ, ಯುಎಇ ಮತ್ತು ಸೌದಿ ಅರೇಬಿಯಾಗಳು ಯೋಜನೆಯಲ್ಲಿ ತಮ್ಮ ತಮ್ಮ ಪಾತ್ರವನ್ನು ನೆರವೇರಿಸುತ್ತಿರುವುದಾಗಿ ಕೆಲ ಸಮಯದ ಹಿಂದೆ ವಿದೇಶಾಂಗ ಸಚಿವ ಜೈಶಂಕರ್ ಕೂಡಾ ಹೇಳಿದ್ದರು.

ಈ ಕಾರ್ಯಾನುಷ್ಠಾನ ಅನೂಚಾನವಾಗಿ ಮುಂದುವರಿಯುವಂತೆ ಮಾಡುವ ಒತ್ತಡವನ್ನು ಇಟಲಿ ಸೌದಿಯ ಮೇಲೆ ಹೇರಬಲ್ಲುದು. ಬೇರೆಲ್ಲಾ ಐರೋಪ್ಯ ಮುಖಂಡರಿಗಿಂತ ಇಟಲಿ ಪ್ರಧಾನಿಯೇ ಈ ವಿಷಯದಲ್ಲಿ ಹೆಚ್ಚು ಸಂವಹನ ಸಾಮರ್ಥ್ಯ ಹೊಂದಿದ್ದಾರೆ. ಅವರ ರಾಜಕೀಯವು ಆರ್ಥಿಕ ಸಾರ್ವಭೌಮತ್ವ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ಆಧಾರದಲ್ಲಿ ನಿಂತಿದೆ. ಅಗತ್ಯ ಬಿದ್ದರೆ ತಾನು ದಿಟ್ಟ ಹೆಜ್ಜೆ ತೆಗೆದುಕೊಳ್ಳಲು ಸಿದ್ಧ ಎಂಬುದನ್ನು ಮೆಲೊನಿಯವರು ಸಮರ ಕಾಲದಲ್ಲೂ ಗಲ್ಫ್ ರಾಷ್ಟ್ರಗಳಿಗೆ ಭೇಟಿ ನೀಡುವ ಮೂಲಕ ತೋರ್ಪಡಿಸಿದ್ದಾರೆ. ಇರಾನ್ ಸಮರವು ಇಟಲಿಯ ಇಂಧನ ಶಕ್ತಿಯ ಮೇಲೂ ಪ್ರತಿಕೂಲ ಪರಿಣಾಮ ಬೀರಿರುವುದರಿಂದ ಇಟಲಿ ಕೂಡಾ ದೀರ್ಘಾವಧಿಯಲ್ಲಿ ಇಂತಹ ಸಮಸ್ಯೆ ಉದ್ಭವಿಸದಂತೆ ಮಾಡಲು ಉಪಕ್ರಮಿಸುವುದು ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ಐಎಂಇಇಸಿ ಯೋಜನೆ ಮಹತ್ವದ್ದಾಗಿದೆ. ಹಾಗಾಗಿ ಇಟಲಿಯು ಈ ವಿಷಯದಲ್ಲಿ ಹೆಚ್ಚು ಗಂಭೀರ ಹೆಜ್ಜೆಯಿಡುವುದೆಂದು ಆಶಿಸಲಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದು, ಕೆಂಪು ಸಮುದ್ರ ಪ್ರದೇಶ ಕೂಡಾ ಸಮರಪೀಡಿತವಾಗಿರುವುದು ವಿಶ್ವದ ಎರಡು ಪ್ರಮುಖ ವಹಿವಾಟು ಕೇಂದ್ರಗಳನ್ನು (ಏಷ್ಯಾ- ಗಲ್ಫ್ ಮತ್ತು ಯುರೋಪ್) ಅತಂತ್ರಗೊಳಿಸಿರುವುದು ಐಎಂಇಇಸಿ ಯೋಜನೆಯು ಕಾರ್ಯಗತಗೊಳ್ಳಬೇಕಾದ ಅನಿವಾರ್ಯವನ್ನು ಎತ್ತಿ ತೋರಿದೆ.

ಕೇರಳದ ಸೆಕ್ಯುಲರ್ ಹಿಪಾಕ್ರಸಿ

ಮಜುಂದಾರ್

ಕೇರಳದ ರಾಜಕೀಯದಲ್ಲಿ 'ಜಾತ್ಯತೀತತೆ' ಎಂಬ ಪದಕ್ಕೆ ಹಲವಾರು ಪಿತರಿದ್ದಾರೆ. ಆದರೆ ನೈಜ ಅರ್ಥದಲ್ಲಿ 'ಜಾತ್ಯತೀತತೆ'ಯ ಅನುಷ್ಠಾನದ ವಿಷಯ ಬಂದಾಗ ಅದು ಅನಾಥವಾಗಿದೆ.


ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳು ಬಿಜೆಪಿಯನ್ನು ಕೋಮುವಾದಿ ಪಕ್ಷ ಹಾಗೂ ಅಲ್ಪಸಂಖ್ಯಾತ ವಿರೋಧಿ ಪಕ್ಷ ಎಂದು ನಿರಂತರವಾಗಿ ಟೀಕಿಸುತ್ತಿರುತ್ತವೆ. ಆದರೆ ವಾಸ್ತವಾಂಶವು ಬೇರೆಯೇ ಕಥೆ ಹೇಳುತ್ತದೆ.

ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಅಲ್ಪಸಂಖ್ಯಾತ ಓಲೈಕೆಯ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಆಶ್ಚರ್ಯಕರವಾಗಿ ಇತರ ಸಮುದಾಯದವರನ್ನು ಕೂಡಾ ತಲುಪುವ ಕಾರ್ಯ ಮಾಡಿದೆ. ಇತ್ತೀಚಿನ ಕೇರಳ ವಿಧಾನಸಭಾ ಚುನಾವಣೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಬಿಜೆಪಿ 7 ಮಂದಿ ಕ್ರೈಸ್ತರನ್ನು ಚುನಾವಣೆಗೆ ನಿಲ್ಲಿಸಿತ್ತು. ಕ್ರೈಸ್ತ ಪ್ರಾಬಲ್ಯದ ಕೊಟ್ಟಾಯಂ, ಪಾಲ, ತಿರುವಳ್ಳ, ಪೂಂಜಾರ್ ಮುಂತಾದ ಕಡೆಗಳಲ್ಲಿ ಬಿಜೆಪಿ ಪರವಾಗಿ ಕ್ರೈಸ್ತ ಮುಖಂಡರು ಸಾಕಷ್ಟು ಪ್ರಚಾರ ನಡೆಸಿದ್ದಾರೆ. ಬಿಜೆಪಿ ಪರವಾಗಿ ಪ್ರಚಾರ ನಡೆಸಿದ ಕ್ರೈಸ್ತ ಮುಖಂಡರಲ್ಲಿ ಕೇಂದ್ರ ಸಚಿವ ಜಾರ್ಜ್ ಕುರಿಯನ್, ಪಿ.ಸಿ. ಜಾರ್ಜ್, ಅನೂಪ್ ಆ್ಯಂಟನಿ ಜೋಸೆಫ್ ಮುಂತಾದವರು ಸೇರಿದ್ದಾರೆ.

ಕ್ರೈಸ್ತ ಸಮುದಾಯದ ಮೇಲೆ ಯುಡಿಎಫ್ ಹೊಂದಿರುವ ಹಿಡಿತವನ್ನು ಸಡಿಲಿಸಲು ಬಿಜೆಪಿ ಇಂತಹ ದಿಟ್ಟ ಕ್ರಮ ತೆಗೆದುಕೊಂಡಿದೆ. ಬಿಜೆಪಿ ಇದರಲ್ಲಿ ಗೆದ್ದಿತೋ ಸೋತಿತೋ ಎಂಬುದು ಬೇರೆ ವಿಷಯ. ಆದರೆ ಅವರೆಡೆಗೆ ಸ್ನೇಹಹಸ್ತ ಚಾಚುವ ತನ್ನ ಇಂಗಿತವನ್ನಂತೂ ಸ್ಪಷ್ಟಪಡಿಸಿದೆ. ತನ್ನ ಪಕ್ಷದಲ್ಲಿ ಅಲ್ಪಸಂಖ್ಯಾತರಿಗೆ ಸ್ಪರ್ಧಿಸಲು ಅವಕಾಶ ನೀಡಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದೆ.

ಈಗ ಇದನ್ನು ಮುಸ್ಲಿಂಲೀಗ್(ಐಯುಎಂಎಲ್)ನೊಂದಿಗೆ ಹೋಲಿಸಿ ನೋಡಿ. ಮೊಹಮ್ಮದ್ ಆಲಿ ಜಿನ್ನಾನಿಂದ ಸ್ಥಾಪಿತವಾದ ಮುಸ್ಲಿಂಲೀಗನ್ನೇ ಸಮೀಕರಿಸುವ ಐಯುಎಂಎಲ್ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಅಂಗಪಕ್ಷವಾಗಿದೆ. ಕಾಂಗ್ರೆಸ್ ಪಕ್ಷವು ಮುಸ್ಲಿಂಲೀಗನ್ನು ಸದಾ ಜಾತ್ಯತೀತ ಪಕ್ಷವೆಂದೇ ಬಣ್ಣಿಸುತ್ತಿರುತ್ತದೆ.

ಮುಸ್ಲಿಂಲೀಗ್ ಕೂಡಾ ಇತರ ಪಕ್ಷಗಳಿಗೆ ಜಾತ್ಯತೀತತೆ ಕುರಿತಂತೆ ಬೋಧಿಸಲು ಹಿಂದೆ ಬೀಳುವುದಿಲ್ಲ. ಆದರೆ ತಾನು ಮಾತ್ರ ಆಚರಣೆಯಲ್ಲಿ ಜಾತ್ಯತೀತತೆಯನ್ನು ಪಾಲಿಸುವುದಿಲ್ಲ. ಕೇರಳ ಸರಕಾರದಲ್ಲಿ ಬಹಳಷ್ಟು ಬಾರಿ ಪಾಲು ಪಡೆದ ಮುಸ್ಲಿಂಲೀಗ್ ಒಂದೇ ಒಂದು ಬಾರಿಯೂ ಮುಸ್ಲಿಮೇತರರಿಗೆ ಸಚಿವ ಸ್ಥಾನ ನೀಡಿದ್ದಿಲ್ಲ. ಮೊನ್ನೆಯ ಚುನಾವಣೆಯ ಬಳಿಕ ರಚಿಸಲಾದ ಯುಡಿಎಫ್ ಸರಕಾರದಲ್ಲಿ



ಮುಸ್ಲಿಂಲೀಗ್ 5 ಸಚಿವ ಸ್ಥಾನ ಪಡೆದಿದೆ. ಅವೆಲ್ಲವನ್ನೂ ಮುಸ್ಲಿಮರಿಗೇ ನೀಡಲಾಗಿದೆ. ಒಬ್ಬನೇ ಒಬ್ಬ ಕ್ರೈಸ್ತ ಅಥವಾ ಹಿಂದುವಿಗೆ ನೀಡಲಾಗಿಲ್ಲ. ಹಿಂದುಗಳಲ್ಲಿ ಈಳವ ಅಥವಾ ನಾಯರ್ ಸಮುದಾಯದವರಿಗೆ ಸಚಿವ ಸ್ಥಾನ ಕೊಡಮಾಡಿಲ್ಲ. ಹಾಗಿದ್ದೂ ಮುಸ್ಲಿಂಲೀಗನ್ನು ಜಾತ್ಯತೀತ ಎಂದು ಕಾಂಗ್ರೆಸ್ ಹೇಳುತ್ತದೆ.

ಕಾಂಗ್ರೆಸ್ ಕೂಡಾ ಕೇರಳದಲ್ಲಿ ಜಾತ್ಯತೀತತೆಯನ್ನು ಪಾಲಿಸುವುದು ಅಷ್ಟರಲ್ಲೇ ಇದೆ. ಸತೀಶನ್ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಕೂಡಾ ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿಲ್ಲ. ಮುಸ್ಲಿಂ ಮತಗಳಿಗಾಗಿ ಅದು ಮುಸ್ಲಿಂಲೀಗನ್ನು ಬಹಳವಾಗಿ ಅವಲಂಬಿಸಿದ್ದರೂ ಹಾಗೂ ಕ್ರೈಸ್ತರ ಬೆಂಬಲಕ್ಕಾಗಿ ಕೇರಳ ಕಾಂಗ್ರೆಸ್ ಪಕ್ಷವನ್ನು ಅವಲಂಬಿಸಿದ್ದರೂ ಸಚಿವ ಸಂಪುಟದಲ್ಲಿ ಮಾತ್ರ ಅವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಗೋಜಿಗೆ ಹೋಗಿಲ್ಲ. ಮುಸ್ಲಿಂ ಅಥವಾ ಕ್ರೈಸ್ತ ಸಮುದಾಯದ ಪ್ರಮುಖ ವ್ಯಕ್ತಿಗಳಿಗೆ ಕೂಡಾ ಸಚಿವ ಸ್ಥಾನ ನಿರಾಕರಿಸಲಾಗಿದೆ.

> ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಇತರ ಸಮುದಾಯದವರನ್ನು ತಲುಪುವ ಕಾರ್ಯ ಮಾಡಿದೆ.

ಸರಿಯಾಗಿ ವಿಶ್ಲೇಷಿಸಿದರೆ ಕೋಮುವಾದಿಯೆಂದು ಕರೆಯಲ್ಪಡುವ ಬಿಜೆಪಿಯೇ ಹೆಚ್ಚು ಜಾತ್ಯತೀತವಾಗಿ ಕಂಡುಬರುತ್ತದೆ. ಬಿಜೆಪಿಯು ಆರಿಫ್ ಮೊಹಮ್ಮದ್‌ಖಾನ್‌ರನ್ನು 2019ರಿಂದ 2025ರ ವರೆಗೆ ಕೇರಳದ ರಾಜ್ಯಪಾಲರನ್ನಾಗಿ ನೇಮಿಸಿತ್ತು. ಬಿಜೆಪಿ ಕೆಲವಾರು ರಾಜ್ಯಗಳಲ್ಲಿ ಕ್ರೈಸ್ತರಿಗೆ ಮತ್ತು ಪಾಸ್ಮಾಂಡ ಮುಸ್ಲಿಮರಿಗೆ ಸಂಪುಟದಲ್ಲಿ ಸ್ಥಾನಮಾನ ನೀಡಿದೆ. ಉತ್ತರಪ್ರದೇಶ, ಬಿಹಾರ, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿ ಅವರಿಗೆ ಸಚಿವ ಸ್ಥಾನ ದೊರಕಿದೆ. ಪಶ್ಚಿಮ ಬಂಗಾಳದಲ್ಲೂ ಆದಿವಾಸಿಗಳು, ಪರಿಶಿಷ್ಟ ಪಂಗಡದವರಿಗೆ ಕೂಡಾ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ.

ಕೇರಳದ ರಾಜಕೀಯ ನೋಡುವಾಗ ತಥಾಕಥಿತ ಜಾತ್ಯತೀತ ಪಕ್ಷಗಳು ಅದು ಹೇಗೆ ಅಲ್ಪಸಂಖ್ಯಾತರನ್ನು ತಮ್ಮ ವೋಟ್ ಬ್ಯಾಂಕನ್ನಾಗಿ ಉಳಿಸಿಕೊಳ್ಳಲು ಪ್ರಯತ್ನ ನಡೆಸುತ್ತವೆ, ಅವರು ತಮ್ಮ ಹಿಡಿತದಿಂದ ಜಾರಿಹೋಗದಿರಲು ಏನೆಲ್ಲಾ ತಂತ್ರ ಹೂಡುತ್ತವೆ, ಅವರ ಮನದಲ್ಲಿ ಬಹುಸಂಖ್ಯಾತರ ಬಗ್ಗೆ ಹೇಗೆ ಭೀತಿ ಸೃಷ್ಟಿಸಿ ಅವರು ತಮ್ಮದೇ ನೆರಳಲ್ಲಿ ಇರುವಂತೆ ನೋಡಿಕೊಳ್ಳುತ್ತವೆ ಎಂಬುದು ಸುಸ್ಪಷ್ಟವಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಬಿಜೆಪಿಯು ಹಿಂದುತ್ವಕ್ಕೆ ಬದ್ಧವಾಗಿದ್ದರೂ, ಇತರ ಸಮುದಾಯಗಳವರಿಗೂ ಟಿಕೆಟ್ ನೀಡುವಲ್ಲಿ ಅವರಿಗೆ ಸೂಕ್ತ ವೇದಿಕೆ ಒದಗಿಸುವಲ್ಲಿ ಹಿಂದೆ ಬಿದ್ದಿಲ್ಲ. ಬಿಜೆಪಿಯಲ್ಲಿ ಅಲ್ಪಸಂಖ್ಯಾತರು ಉನ್ನತ ಸ್ಥಾನಗಳನ್ನು ಪಡೆಯಲೂ ಸಫಲರಾಗಿದ್ದಾರೆ. ಕೇರಳದಲ್ಲಿ ಬಿಜೆಪಿ ಕ್ರೈಸ್ತರನ್ನು ಚುನಾವಣಾ ಅಭ್ಯರ್ಥಿಗಳನ್ನಾಗಿಸಿದೆ, ಮುಸ್ಲಿಮ್ ರಾಜ್ಯಪಾಲರನ್ನು ನೇಮಿಸಿದೆ, ರಾಷ್ಟ್ರೀಯವಾದಿ ಮುಸ್ಲಿಮರತ್ತಲೂ ಹಸ್ತ ಚಾಚಿದೆ.

ಈ ಎಲ್ಲ ಬೆಳವಣಿಗೆಗಳನ್ನು ಕೇರಳವು ವೀಕ್ಷಿಸುತ್ತಿದೆ. ಬಿಜೆಪಿ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲದಿರಬಹುದು, ಆದರೆ ಹಿಂದಿಗಿಂತ ಅದರ ಸೀಟು ಸಂಖ್ಯೆ ಹೆಚ್ಚಿದೆ. ಅದರ ಮತ ಪ್ರಮಾಣ ಹೆಚ್ಚಿದೆ. ಮೂರು ಸ್ಥಾನಗಳನ್ನು ಗೆದ್ದಿರುವ ಬಿಜೆಪಿಯ ಮತ ಪ್ರಮಾಣವು ಶೇ. 11.42ಕ್ಕೇರಿದೆ.

ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳ 'ಸೆಕ್ಯುಲರ್ ಹಿಪಾಕ್ರಸಿ' ಬಹುಕಾಲ ಬಿಜೆಪಿಯ ಬೆಳವಣಿಗೆಯನ್ನು ತಡೆದಿಡಲು ಸಫಲವಾಗದು.

ಕಿರುಸುದ್ದಿ

ಜೂ.14ರಂದು ಥೀಮ್ ಪಾರ್ಕ್‌ನಲ್ಲಿ ಕಾಲಮಿತಿ ಸಾಹಿತ್ಯ ಸಮ್ಮೇಳನ

ಕೋಟ: ಡಾ. ಶಿವರಾಮ ಕಾರಂತ ಪ್ರತಿಷ್ಠಾನ ಕೋಟ, ಕೋಟತಟ್ಟು ಗ್ರಾಮ ಪಂಚಾಯತ್, ನೆನಪು ಮೂವೀಸ್ ಕೋಟ ಮತ್ತು ಉಸಿರು ಕೋಟ ಇವರ ಸಾರಥ್ಯದಲ್ಲಿ ಐದನೇ ಕಾಲಮಿತಿಯ ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನ ಜೂ.14ರಂದು ಮಧ್ಯಾಹ್ನ 2 ಗಂಟೆಯಿಂದ ಕೋಟದ ಕಾರಂತ ಥೀಮ್ ಪಾರ್ಕ್‌ನಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗೆ ವಿದ್ಯಾರ್ಥಿಗಳು ಮಂಜುನಾಥ ಗುಂಡ್ಮಿ 9902663747, ಪುರುಷರು ಚೇಂಪಿ ದಿನೇಶ್ ಆಚಾರ್ಯ 9900476706, ಮಹಿಳೆಯರು ಸುಮನ ಹೇರ್ಳೆ 9448744140 ಅವರನ್ನು ಮೇ 31ರ ಒಳಗೆ ಸಂಪರ್ಕಿಸಬಹುದು ಎಂದು ಕಾರ್ಯಾಧ್ಯಕ್ಷ ಆನಂದ ಸಿ. ಕುಂದರ್, ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ, ಕೋಟತಟ್ಟು ಪಂಚಾಯತ್ ಪಿಡಿಒ ರವೀಂದ್ರ ರಾವ್, ಪಂಚಾಯತ್ ಕಾರ್ಯದರ್ಶಿ ಸುಮತಿ ಅಂಚನ್, ಆಡಳಿತಾಧಿಕಾರಿ ಪ್ರತಾಪ್ ಚಂದ್ರ ಶೆಟ್ಟಿ, ಯೋಜನೆಯ ಸಂಚಾಲಕ ಸತೀಶ್ ವಡ್ಡರ್ಸೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ಹುದ್ದೆಗಳಿಗೆ ಸಂದರ್ಶನ

ಮುಳ್ಳೇರಿಯ: ಅಡೂರು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕೆ ವಿವಿಧ ಹುದ್ದೆಗಳಲ್ಲಿ ನಿರೀಕ್ಷಿತ ಖಾಲಿ ಹುದ್ದೆಗಳಿಗೆ ದಿನವೇತನ ಆಧಾರದ ಮೇಲೆ ಶಿಕ್ಷಕರ ನೇಮಕಾತಿಗೆ ಸಂದರ್ಶನ ಮೇ 29ರಂದು ಶಾಲೆಯಲ್ಲಿ ನಡೆಯ ಲಿವೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಹತೆ ಸಾಬೀತುಪಡಿಸುವ ಮೂಲ ಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಇಂಗ್ಲಿಷ್ (ಸೀನಿಯರ್), ಇತಿಹಾಸ (ಸೀನಿಯರ್), ಮಲೆಯಾಳ (ಜೂನಿಯರ್), ಕನ್ನಡ (ಜೂನಿಯರ್) ಮತ್ತು ಅರೇಬಿಕ್ (ಜೂನಿಯರ್) ವಿಷಯಗಳಿಗೆ ಬೆಳಿಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ರಾಜ್ಯಶಾಸ್ತ್ರ (ಸೀನಿಯರ್ ಮತ್ತು ಜೂನಿಯರ್), ಅರ್ಥಶಾಸ್ತ್ರ (ಜೂನಿಯರ್), ಸಮಾಜ ಕಾರ್ಯ (ಸೀನಿಯರ್) ಮತ್ತು ವಾಣಿಜ್ಯ (ಜೂನಿಯರ್) ವಿಷಯಗಳಿಗೆ ಮಧ್ಯಾಹ್ನ 2 ಗಂಟೆಗೆ ಸಂದರ್ಶನ ಜರಗಲಿದೆ. ಹೆಚ್ಚಿನ ವಿವರಗಳಿಗೆ 7293135059 ಕರೆ ಮಾಡಬಹುದು.

ನಿಡ್ಪಳ್ಳಿ: ಮಕ್ಕಳ ಬೇಸಿಗೆ ಶಿಬಿರ

ನಿಡ್ಪಳ್ಳಿ: ನಿಡ್ಪಳ್ಳಿ ಗ್ರಾಮ ಪಂಚಾಯತ್ ಅರಿವು ಕೇಂದ್ರದಲ್ಲಿ ನಡೆಯುತ್ತಿರುವ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ 6ನೇ ದಿನವಾದ ಮೇ 20ರಂದು ಮಕ್ಕಳಿಗೆ ಹಾರಾಡಿ ಸರಕಾರಿ ಶಾಲೆಯ ಶಿಕ್ಷಕ ಜನಾರ್ದನ ದುರ್ಗ ಹಾಗೂ ಸವಣೂರಿನ ಸರಕಾರಿ ಶಾಲೆಯ ಶಿಕ್ಷಕಿ ಶೋಭಾ ಅವರು ಕೆಲವು ಚಟುವಟಿಕೆಗಳನ್ನು ನಡೆಸಿದರು. ಪಂಚಾಯತ್ ಕಾರ್ಯದರ್ಶಿ ಶಿವರಾಮ ಮೂಲ್ಯ, ಸಿಬ್ಬಂದಿ ಜಯ ಕುಮಾರಿ, ಪಶುಸಖಿ ತೇಜಸ್ವಿನಿ ಉಪಸ್ಥಿತರಿದ್ದರು. ಲಘು ಉಪಹಾರದ ವ್ಯವಸ್ಥೆಯನ್ನು ಪಂಚಾಯತ್ ಸಿಬ್ಬಂದಿ ರೇವತಿ ಹಾಗೂ ಸಂಜೀವಿನಿ ಸಂಘದ ಮುಖ್ಯ ಪುಸ್ತಕ ಬರಹಗಾರ್ತಿ ಭವ್ಯ ನೀಡಿದರು. ಗ್ರಂಥ ಪಾಲಕಿ ಪವಿತ್ರ ಸ್ವಾಗತಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಬಿ.ಎಂ. ಪೂಜಾರಿ, ಸಂಗಮ್ ಬಿಲ್ಡಿಂಗ್, ಚೆಂಬೂರ್, ಮುಂಬಾಯಿ – ಕಟೀಲು ಸಾನಿಧ್ಯ ಹಾಲ್‌ನಲ್ಲಿ.
2. ಬಿ. ಜೈದೀಪ್ ರಾವ್, ತೊಟ್ಟಿಲ ಗುಳಿಮನೆ, ಬಜಪೆ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ದೇವ್ ಆಳ್ವ, ರಾಮಯರ ಪಾಲು, ತಲಪಾಡಿ, ದೇವಿಪುರ – ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ವಠಾರ.
4. ಬೋಳಂತೂರುಗುತ್ತು ದಿ| ಕೃಪಾ ಪ್ರಕಾಶ್ ಶೆಟ್ಟಿ ಸ್ಮರಣಾರ್ಥ ಕನಕೂರು ಪ್ರಕಾಶ್ ಶೆಟ್ಟಿ – ಇರಾ ಶ್ರೀ ಸೋಮನಾಥೇಶ್ವರ ದೇವಸ್ಥಾನ ವಠಾರ.
5. ಸೀತಮ್ಮ ಎಸ್. ಶೆಟ್ಟಿ, ಬಿಲುಗೂರು, ಬಾಳೆಹೊಳೆ, ಮೂಡಿಗೆರೆ (ತಾ) – ಕಟೀಲು ಪಿ.ಯು. ಕಾಲೇಜ್ ವಠಾರ.
6. ಶಶಿಕುಮಾರ್ ಶೆಟ್ಟಿ, ಬಾಲ್ಕಟ್ಟ ಹೌಸ್, ಸಾಂತೂರು, ಕಾಪು (ತಾ).
7. ಸುಂದರ ಶೆಟ್ಟಿ, ಕಾರಂಬಾಡಿ ಮನೆ, ಕುಂಜತ್ತಬೈಲು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.

ಶ್ರೀ ಧರ್ಮಸ್ಥಳ ಮೇಳ
ಆರ್ಡಿಯಲ್ಲಿ
ಶ್ರೀ ಶೇಖರ ಶೆಟ್ಟಿ S/o ಭೋಜು ಶೆಟ್ಟಿ, ಮಾಬಳಿ, ಬೈಲುಮನೆ

ಶ್ರೀ ಸಾಲಿಗ್ರಾಮ ಮೇಳ
ಶ್ರೀ ಕ್ಷೇತ್ರ ಸಾಲಿಗ್ರಾಮ ಶ್ರೀ ಗುರುನರಸಿಂಹ ಶ್ರೀ ಆಂಜನೇಯ ದೇವರ ಸನ್ನಿಧಿಯಲ್ಲಿ ದೇವರ ಸೇವೆಯಾಟ
ಚಕ್ರ ಚಂಡಿಕೆ – ಶ್ರೀ ಕೃಷ್ಣ ವಿವಾಹ

ಶ್ರೀ ಪೆರ್ಡೂರು ಮೇಳ
ಶ್ರೀ ಕ್ಷೇತ್ರ ಪೆರ್ಡೂರಿನಲ್ಲಿ ಕೊನೆಯ ದೇವರ ಸೇವೆಯಾಟ
ಮೀನಾಕ್ಷಿ ಕಲ್ಯಾಣ–ಕನಕಾಂಗಿ ಕಲ್ಯಾಣ

ಶ್ರೀ ಹನುಮಗಿರಿ ಮೇಳ
ಕಾರ್ಕಳದಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಶಂಭು ಶೈಲೇಶರ ಮತ್ತು ಪ್ರಸನ್ನ ಸೋಮೇಶ್ವರ ದೇವಸ್ಥಾನ, ಶಂಭುಕಲ್ಲು, ಉದ್ಯಾವರದಲ್ಲಿ
-ಛಾಯಾನಂದನ



ಪುತ್ತೂರು ನಗರದ ಸೈಂಟ್ ಫಿಲೋಮಿನಾ ಪ್ರೌಢ ಶಾಲೆಯ ಸಂಚಾಲಕ ರೆ.ಫಾ. ಲಾರೆನ್ಸ್ ಮಸ್ಕರೇನಸ್ ಅವರು ವಾಮಂಜೂರ್ ಚರ್ಚ್‌ಗೆ ವರ್ಗಾವಣೆಗೊಳ್ಳುತ್ತಿರುವ ಹಿನ್ನೆಲೆ ಅವರನ್ನು ಶಾಲೆಯ ಹಿರಿಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಭೇಟಿಯಾಗಿ ಪುಷ್ಪಗುಚ್ಛ ನೀಡಿ ವಿದಾಯ ಕೋರಿದರು. ಈ ಸಂದರ್ಭ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಯ ಕುಮಾರ್ ರೈ, ಮುಖ್ಯ ಗುರು ಫಾ. ಮ್ಯಾಕ್ಸಿಂ ಡಿ'ಸೋಜಾ, ಉಪಾಧ್ಯಕ್ಷ ಜಾನ್ ಕುಟಿನ್ಹಾ, ಮಾಜಿ ಅಧ್ಯಕ್ಷ ಎನ್.ಕೆ. ಜಗನ್ನಿವಾಸ್ ರಾವ್, ಕಾರ್ಯದರ್ಶಿ ಬೆನೆಟ್ ಮೊಂತೇರೊ, ಸದಸ್ಯರಾದ ಲಾರೆನ್ಸ್ ಗೊನ್ಸಲ್ವಿಸ್, ಸೋಮಶೇಖರ್ ರೈ, ಡಾ. ಅಮೃತ ಮಲ್ಲ, ದಿಕ್ಸನ್ ತಾವ್ರೋ ಉಪಸ್ಥಿತರಿದ್ದರು.

ಕಾಸರಗೋಡು – ಮಂಗಳೂರು ಸರಕಾರಿ ಬಸ್‌ನಲ್ಲೂ ಉಚಿತ ಪ್ರಯಾಣಕ್ಕೆ ಆಗ್ರಹ

ಕುಂಬಳೆ: ಕೇರಳದ ನೂತನ ಐಕ್ಯರಂಗ ಸರಕಾರವು ಮಹಿಳೆಯರಿಗೆ ಸರಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದ್ದು, ಆದರೆ ಇದರಿಂದ ಕಾಸರಗೋಡು ಜಿಲ್ಲೆಯ ಜನರು ವಂಚಿತರಾಗುವ ಸಾಧ್ಯತೆಯಿದೆ. ಅಂತಾರಾಜ್ಯ ಪ್ರಯಾಣದ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಇಲ್ಲದಿರುವುದು ಇದಕ್ಕೆ ಕಾರಣ. ಆದ್ದರಿಂದ ಕಾಸರಗೋಡು ಜಿಲ್ಲಾ ಭಾಗದ ಜನರಿಗೆ ಅನುಕೂಲವಾಗುವಂತೆ ಕಾಸರಗೋಡು–ಮಂಗಳೂರು ನಡುವಿನ ಬಸ್‌ಗಳಲ್ಲಿ ಕನಿಷ್ಠ ಗಡಿಭಾಗದ ವರೆಗಾದರೂ ಉಚಿತ ಪ್ರಯಾಣಕ್ಕೆ ಅವಕಾಶ ನೀಡಬೇಕು ಎಂದು ಬಿಜೆಪಿ ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ಮಣಿಕಂಠ ರೈ ಪಟ್ಲ ಆಗ್ರಹಿಸಿದ್ದಾರೆ.



ಜೊತೆಗೆ ಬದಿಯಡ್ಕ, ಪೆರ್ಲ ಭಾಗದ ಜನರಿಗೆ ಅನುಕೂಲವಾಗುವಂತೆ ಕಾಸರಗೋಡು – ಪುತ್ತೂರು ನಡುವೆ ಸಂಚರಿಸುವ ಮತ್ತು ಕಾಸರಗೋಡು – ಸುಳ್ಯ ನಡುವೆ ಸಂಚರಿಸುವ ಭಾಗದಲ್ಲೂ ಉಚಿತ ಪ್ರಯಾಣಕ್ಕೆ ಅವಕಾಶ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಎಲ್ಲದಕ್ಕೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಶ್ರಯಸುವ ಈ ಭಾಗದ ಜನರಿಗೆ ಅಂತಾರಾಜ್ಯ ಬಸ್‌ಗಳಲ್ಲದೆ ಬೇರೆ ಸರಕಾರಿ ಬಸ್ ಸೇವೆ ಇಲ್ಲ. ಆದ್ದರಿಂದ ಸರಕಾರದ ಉಚಿತ ಪ್ರಯಾಣ ಯೋಜನೆಯಲ್ಲಿ ಕಾಸರಗೋಡು ಜಿಲ್ಲೆಯ ಮಹಿಳೆಯರನ್ನು ಪರೋಕ್ಷವಾಗಿ ಹೊರಗಿಡುವುದು ಸರಿಯಲ್ಲ. ಈ ಭಾಗದ ಜನರಿಗೆ ಕನಿಷ್ಠಪಕ್ಷ ಗಡಿಭಾಗದ ವರೆಗಾದರೂ ಉಚಿತ ಪ್ರಯಾಣಕ್ಕೆ ಅವಕಾಶ ನೀಡಬೇಕು ಎಂದು ಅವರು ಹೇಳಿದ್ದಾರೆ.

ಪುತ್ತೂರಿನಿಂದ ಮಂಜೇಶ್ವರ, ಉಪ್ಪಳ ಭಾಗಕ್ಕೆ ಬರುವ ಕರ್ನಾಟಕದ ಸರಕಾರಿ ಬಸ್‌ಗಳಲ್ಲಿ ಕರ್ನಾಟಕದ ಗಡಿ ವರೆಗೆ ಉಚಿತ ಪ್ರಯಾಣದ ಅವಕಾಶ ನೀಡುತ್ತಿದ್ದು, ಅದೇ ರೀತಿ ಕೇರಳದ ಬಸ್‌ಗಳಲ್ಲೂ ಅವಕಾಶ ನೀಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ರಾಷ್ಟ್ರೀಯ ಕಾರ್ಯಾಗಾರ

ನಮ್ಮಲ್ಲೇ ಗೇರು ಬೆಳೆಯೋಣ

ಪುತ್ತೂರು: ಗೇರು ಕೃಷಿಗೆ ಉತ್ತಮ ಭವಿಷ್ಯ ಇದೆ. ಗೇರು ಬೀಜದ ಜತೆಗೆ ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡುವುದರ ದೇಶಕ್ಕೆ ಬೇಕಾದ ಗೇರನ್ನು ಭಾರತದಲ್ಲಿಯೇ ಬೆಳೆಯಲು ಗಮನಹರಿಸಬೇಕು ಎಂದು ರಾಜ್ಯ ಗೇರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕಮಲಾ ಕೆ. ಹೇಳಿದರು.

ಬುಧವಾರ ಪುತ್ತೂರಿನ ಮೊಟ್ಟೆತ್ತಡ್ಕ ಗೇರು ಸಂಶೋಧನಾ ನಿರ್ದೇಶನಾಲಯ (ಎನ್‌ಆರ್‌ಸಿಸಿ)ದಲ್ಲಿ ಆಯೋಜನೆಗೊಂಡ 3 ದಿನಗಳ ರಾಷ್ಟ್ರೀಯ ಮಟ್ಟದ ಸುಸ್ಥಿರ ಗೋಡಂಬಿ ಉತ್ಪಾದನೆ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿಗಾಗಿ ವೈಜ್ಞಾನಿಕ ಸಮಾನತೆಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೇರು ನೆಡುತೋಪುಗಳಲ್ಲಿ ಪ್ರಸ್ತುತ ಬೀಜಾಧಾರಿತ ಮರಗಳಿವೆ. ಒಂದು ಮರದಲ್ಲಿ ಕನಿಷ್ಟ 8 ಕೆ.ಜಿ. ಇಳುವರಿ ಸಿಗಬೇಕಿದ್ದರೂ ಪ್ರಸ್ತುತ ಅಂದಾಜು ಕೇವಲ 3 ಕೆ.ಜಿ. ಮಾತ್ರ ದೊರಕುತ್ತಿದೆ. ರಕ್ಷಿತಾರಣ್ಯಕ್ಕೆ ಸೇರಿದ ಭೂಮಿಯಲ್ಲಿ ಈ ನೆಡುತೋಪುಗಳಿದ್ದು, ಹೆಚ್ಚಿನ ಬಂಡವಾಳ ಬಳಕೆ ಮಾಡಿ ಅಭಿವೃದ್ಧಿ ಮಾಡಲು ತಾಂತ್ರಿಕ ತೊಂದರೆಗಳಿವೆ. ಆದರೂ ಹೆಚ್ಚಿನ ಇಳುವರಿ ಪಡೆಯುವ ಉದ್ದೇಶದಿಂದ ಈಗ ಕಸಿ ಗಿಡಗಳನ್ನು ನೆಡಲಾಗುತ್ತಿದೆ. ಈಗಾಗಲೇ ಗೇರು ಸಂಶೋಧನಾ ನಿರ್ದೇಶನಾಲಯ ಗೇರುಬೀಜ ಮತ್ತು ಹಣ್ಣಿನಿಂದ ಬಿಸ್ಕತ್, ಬೆಲ್ಲ, ಜಾಮ್, ಜ್ಯೂಸ್‌ನಂತಹ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರು ಮಾಡಿದೆ. ಇದನ್ನು ಮಾರುಕಟ್ಟೆ ಮಾಡಲು ಪೇಟೆಂಟ್ ನೀಡುವ ಅವಕಾಶವನ್ನು ಕಲ್ಪಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ನಿರ್ದೇಶಕ ಡಾ.ಜೆ.ದಿನಕರ ಅಡಿಗ ಅವರು ಮಾತನಾಡಿ, ಬದುಕು ಕಟ್ಟಿಕೊಳ್ಳಲು ಗೇರುಕೃಷಿ ಅತ್ಯಂತ ಸಮೃದ್ಧವಾದ ಬೆಳೆಯಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ 1 ಕೆ.ಜಿ. ಗೇರು ಬೀಜಕ್ಕೆ ರೂ.150 ದರವಿದ್ದರೆ ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಕ್ಕೂ ಗಮನಹರಿಸಿದರೆ ರೂ.650 ರಷ್ಟು ಮೌಲ್ಯವನ್ನು ಪಡೆಯಲು ಸಾಧ್ಯವಿದೆ. ಸಂಶೋಧನೆಗಳ ಮೂಲಕ ಸುಮಾರು 17 ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ಗೇರುಹಣ್ಣು ಶುಗರ್ ಕಂಟ್ರೋಲ್ ಮಾಡುವಲ್ಲಿಯೂ ಅತ್ಯಂತ ಪರಿಣಾಮಕಾರಿ ಎಂಬುದನ್ನು ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಗಳು ದೃಢಪಡಿಸಿವೆ. ಕಿತ್ತಳೆ ಹಣ್ಣಿಗಿಂತ ಗೇರು ಹಣ್ಣು 4 ಪಟ್ಟು ಹೆಚ್ಚು ವಿಟಮಿನ್ ಸಿಯನ್ನು ಹೊಂದಿದೆ. ಎಲ್ಲಾ ಹವಾಮಾನಗಳಲ್ಲಿಯೂ ಬೆಳೆಯಬಹುದಾದ ಗೇರುಕೃಷಿಯನ್ನು ಕಡಿಮೆ ಬಂಡವಾಳದಲ್ಲಿ ಬೆಳೆಯಬಹುದಾದ ಉತ್ತಮ ಬೆಳೆಯಾಗಿದೆ. ಭವಿಷ್ಯದಲ್ಲಿ ಗೇರುಕೃಷಿಗೆ ಹೆಚ್ಚಿನ ಅವಕಾಶಗಳಿವೆ. ಆದರೆ ಗೇರುಬೀಜ ಮತ್ತುಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳು, ಮಾರುಕಟ್ಟೆ ಮತ್ತು ಕೃಷಿ ಬೆಳೆ ಮಾಹಿತಿ ಕೊರತೆಯಿಂದ ನಾವು ಗೇರು ಬೆಳೆಯಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಿಲ್ಲ ಎಂದರು.



ಅತಿಥಿಯಾಗಿದ್ದ ಕೇರಳ ಕೊಚ್ಚಿಯ ಡಿಸಿಸಿಡಿ ಉಪನಿರ್ದೇಶಕ ದಾದಾಸಾಹೇಬ್ ದೇಸಾಯಿ ಮಾತನಾಡಿ, ಗೇರು ಬೆಳೆ ಪ್ರಸ್ತುತ ದೇಶದಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಸಾಧ್ಯವಾಗುತ್ತಿಲ್ಲ. ಹಾಗಾಗಿ 11 ಲಕ್ಷ ಮೆಟಿಕ್ ಟನ್ ಗೇರುಬೀಜ ಆಮದು ಮಾಡಿಕೊಳ್ಳುತ್ತಿದ್ದೇವೆ. ಐವರಿ ಕೋಸ್ಟ್, ಗಾನ ಮತ್ತು ನೈಜೀರಿಯಾ ದೇಶಗಳು ಮಧ್ಯಪ್ರಾಚ್ಯ ದೇಶಗಳಲ್ಲಿನ ಯುದ್ಧದ ಪರಿಣಾಮ ರಫ್ತು ಮಾಡುವುದನ್ನು ನಿಲ್ಲಿಸಿದ ಕಾರಣ ನಾವು ಊಹಿಸಲು ಸಾಧ್ಯವಾಗದಷ್ಟು ಬೆಲೆ ಏರಿಕೆಯನ್ನು ಕಾಣುತ್ತಿದ್ದೇವೆ. ಪ್ರಸ್ತುತ ದೇಶದಲ್ಲಿ ವರ್ಷಕ್ಕೆ ಕೇವಲ 10ರಿಂದ 15 ಹೆಕ್ಟೇರ್‌ಗಳಲ್ಲಿ ಮಾತ್ರ ಗೇರುಕೃಷಿ ಅಭಿವೃದ್ಧಿ ಮಾಡಲಾಗುತ್ತಿದೆ.

> **ಹೈಬ್ರೀಡ್ ತಳಿ**
> ಪ್ರಸ್ತುತ ಕರ್ನಾಟಕ ರಾಜ್ಯ ಗೇರು ಅಭಿವೃದ್ಧಿ ಮಂಡಳಿಯಲ್ಲಿ 25 ಸಾವಿರ ಹೆಕ್ಟೇರ್‌ಗೂ ಅಧಿಕ ಭೂಮಿಯಲ್ಲಿ ಗೇರುಕೃಷಿ ಇದೆ. ಆದರೆ ಸುಮಾರು 40 ವರ್ಷಗಳಷ್ಟು ಹಳೆಯ ಮರಗಳಾಗಿರುವ ಕಾರಣ ಇಳುವರಿ ಕಡಿಮೆಯಾಗಿದೆ. ಈ ಗೇರು ನೆಡುತೋಪುಗಳಿಗೆ ಹೊಸ ಹೈಬ್ರೀಡ್ ತಳಿಗಳನ್ನು ಹಾಕುವ ನಿಟ್ಟಿನಲ್ಲಿ ಕಾರ್ಯಯೋಜನೆ ಮಾಡಲಾಗುತ್ತಿದೆ
> ■ ಕಮಲಾ ಕೆ.

ಆದರೆ, 2030ಕ್ಕೆ ಗೇರು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ 1.2 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಗೇರು ಬೆಳೆಯುವ ಯೋಜನೆ ರೂಪಿಸಲಾಗಿದೆ. ಹಳೆಯ ಗಿಡಗಳ ಬದಲಿಗೆ ನೂತನ ಹೈಬ್ರೀಡ್ ತಳಿಗಳನ್ನು ಬೆಳೆಸುವ ಮೂಲಕ ಗೇರು ಬೆಳೆ ಮತ್ತು ಗೇರು ಸಂಬಂಧಿತ ಮೌಲ್ಯವರ್ಧಿತ ಉತ್ಪನ್ನಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ ಎಂದರು.

ಶರಣ್ಯ ಪ್ರಾರ್ಥಿಸಿದರು. ಡಿಸಿಆರ್ ಪ್ರಧಾನ ವಿಜ್ಞಾನಿ ಈರದಾಸಪ್ಪ ಸ್ವಾಗತಿಸಿ, ವಿಜ್ಞಾನಿ ಅಶ್ವಥಿ ಚಂದ್ರಶೇಖರ್ ವಂದಿಸಿದರು. ಎನ್‌ಪ್ರೊಫೆಷನಲ್ ಮಂಜು ಮ್ಯಾನಿವಲ್ ಕಾರ್ಯಕ್ರಮ ನಿರ್ವಹಿಸಿದರು. ಮೂರು ದಿನಗಳ ಕಾರ್ಯಾಗಾರದಲ್ಲಿ ವಿವಿಧ ರಾಜ್ಯಗಳ 49 ಮಂದಿ ನೋಂದಾಯಿಸಿ ಪಾಲ್ಗೊಂಡಿದ್ದಾರೆ.

ಸದಾಶಿವ ಶೆಟ್ಟಿ ಕುಳೂರು ನೇತೃತ್ವದಲ್ಲಿ ಸಮಾನ ಮನಸ್ಕ ಬಂಟರ ಸಭೆ



ಮಂಜೇಶ್ವರ: ಕಾಸರಗೋಡಿನ ತಳಮಟ್ಟದ ಬಂಟರ ಏಳಿಗೆ ಮತ್ತು ಬಂಟರ ಭವನ ನಿರ್ಮಾಣದ ಸದುದ್ದೇಶವನ್ನು ಮುಂದಿಟ್ಟುಕೊಂಡು ಮಹಾದಾನಿ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅವರ ನೇತೃತ್ವದಲ್ಲಿ ಸಮಾನ ಮನಸ್ಸಿನ ಬಂಟರು ಭಾಗಿಯಾಗಿ ಕಾಸರಗೋಡು ಬಂಟ ಸಮಾಜದ ಸರ್ವತೋಮುಖ ಏಳಿಗೆಯ ಬಗ್ಗೆ ಸಮಗ್ರ ಚರ್ಚೆ ನಡೆಯಿತು.

ಸದಾಶಿವ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಅವರ ಹೊಸ ನಿವಾಸ ಶ್ರೀಲಿಲಾ ಸದನದಲ್ಲಿ ಜರಗಿದ ಸಭೆಯಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಲಾಯಿತು. ಸಭೆಯಲ್ಲಿ ಕಾಸರಗೋಡಿನ ನೂರಕ್ಕೂ ಅಧಿಕ ಮಂದಿ ಭಾಗಿಯಾಗಿದ್ದರು. ಕಾಸರಗೋಡು ಜಿಲ್ಲೆಯ ಸುಮಾರು ಹತ್ತಕ್ಕಿಂತಲೂ ಹೆಚ್ಚು ಪಂಚಾಯತ್‌ಗಳ ಬಂಟರ ಸಂಘದ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಸಹಿತ ವಿವಿಧ ಪದಾಧಿಕಾರಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಭೆಯಲ್ಲಿ ಕಾಸರಗೋಡು ಮಾತೃ ಸಂಘದ ನೂತನ ಪದಾಧಿಕಾರಿ ವಸಂತ್‌ರಾಜ್ ವರ್ಕಾಡಿ, ಸಮಾಜ ಸೇವಕಿ ಜಯಂತಿ ಟಿ.ಶೆಟ್ಟಿ, ಮೀಂಜ ಪಂಚಾಯತ್ ಬಂಟರ ಸಂಘದ ಅಧ್ಯಕ್ಷ ಅರವಿಂದಾಕ್ಷ ಭಂಡಾರಿ ದಡ್ಡಂಗಡಿ, ಮೀರಾ ಆಳ್ವ, ಸದಾಶಿವ ಶೆಟ್ಟಿ ಸೇವಾ ಸಮಿತಿ ಪಿಆರ್‌ಒ ಕಾರ್ತಿಕ್ ಶೆಟ್ಟಿ ಮಜಿಬೈಲು, ಬಿಜೆಪಿ ಮುಖಂಡರಾದ ಎಂ.ವಿಜಯ್ ಕುಮಾರ್ ರೈ, ಭರತ್ ರೈ ಕೋಡಿಬೈಲು, ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಾಗೂ ಪ್ರಸ್ತುತ ಬ್ಲಾಕ್ ಪಂಚಾಯತ್ ಸದಸ್ಯ ಪೃಥ್ವಿರಾಜ್ ಶೆಟ್ಟಿ ಕುಂಬಳೆ, ಅನ್ನಪೂರ್ಣ ರೈ ಕಿದೂರು, ಸುರೇಶ್ ಶೆಟ್ಟಿ ಮಹಾಲಿಂಗೇಶ್ವರ, ಪ್ರದೀಪ್ ಕುಟ್ಟಿ ಬಲ್ಲಂಗುಡೇಲ್, ವಿಜಯಕುಮಾರ್ ಶೆಟ್ಟಿ ಗಾಣದಮೂಲೆ, ಜಗದೀಶ್ ಮಾಸ್ಟರ್ ಎಲಿಯಾಣ, ಕುಂಬ್ಡಾಜೆ ಬಂಟರ ಸಂಘದ ಅಧ್ಯಕ್ಷ ಸಂತೋಷ್ ಶೆಟ್ಟಿ ಗಾಡಿಗುಡ್ಡೆ, ಕುಳೂರು ಕನ್ಯಾನ ಚಂದ್ರಹಾಸ ಶೆಟ್ಟಿ, ದೇಲಂಪಾಡಿ ಬಂಟರ ಸಂಘದ ಅಧ್ಯಕ್ಷರು ಮೊದಲಾದ ಗಣ್ಯರು ಭಾಗವಹಿಸಿದ್ದರು.

ನಾರಾಯಣ ನಾಯ್ಕ್ ನಡುಹಿತ್ಲು ಸ್ವಾಗತಿಸಿ, ಸದಾಶಿವ ಶೆಟ್ಟಿ ಸೇವಾ ಬಳಗದ ಪ್ರಧಾನ ಕಾರ್ಯದರ್ಶಿ ಜಯರಾಜ್ ಶೆಟ್ಟಿ ಕುಳೂರು ಚಾರ್ಲ ವಂದಿಸಿದರು.

ಇಂದು ಚಿರಂತನ ವಿದ್ಯಾಸಂಸ್ಥೆಗಳ ಉದ್ಘಾಟನೆ

ಕುಂದಾಪುರ: ಕುಂದಾಪುರ ತಾಲೂಕಿನ ಕೋಟೇಶ್ವರ ಗ್ರಾಮದ ಯುವ ಮೆರಿಡಿಯನ್ ಸಮೀಪದ ಲೋಟಸ್ ಎಡ್ಜ್‌ನಲ್ಲಿ ಸುಲೋಚನಾ ಸರ್ವೋತ್ತಮ ಶೆಟ್ಟಿ ಎಜುಕೇಶನಲ್ ಟ್ರಸ್ಟ್ ಪ್ರಾಯೋಜಿತ ಚಿರಂತನ ವಿದ್ಯಾಸಂಸ್ಥೆಗಳ ಉದ್ಘಾಟನೆ ಮೇ 21ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಚಿರಂತನ ವಿದ್ಯಾ ಸಂಸ್ಥೆಗಳ ಸ್ಥಾಪಕಿ, ನಿರ್ದೇಶಕಿ ಡಾ.ಚಿಂತನಾ ರಾಜೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೈಂದೂರು ಮಾಜಿ ಶಾಸಕ ಬಿ.ಎಂ.ಸುಕುಮಾರ್ ಶೆಟ್ಟಿ ನೂತನ ವಿದ್ಯಾಸಂಸ್ಥೆಗಳನ್ನು ಉದ್ಘಾಟಿಸಲಿದ್ದು, ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ, ಮಾನಸಿಕ ರೋಗ ತಜ್ಞ ಡಾ.ಪ್ರಕಾಶ ಸಿ.ತೋಳಾರ್, ಗುತ್ತಿಗೆದಾರ ಕಮಲ್ ಕಿಶೋರ್ ಹೆಗ್ಡೆ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಉತ್ತಮ ಶಿಕ್ಷಕರು ಸಮಾಜದ ಬಹು ದೊಡ್ಡ ಅವಶ್ಯಕತೆ. ಒಳ್ಳೆಯ ಶಿಕ್ಷಕರ ತರಬೇತಿಯ ಆವಶ್ಯಕತೆ ದಿನೇ ದಿನೇ ಹೆಚ್ಚುತ್ತಿದೆ. ಈ ದಿಸೆಯಲ್ಲಿ ಟೀಚರ್ ಟ್ರೈನಿಂಗ್ ಸ್ಕೂಲ್ ಆರಂಭಿಸಲಾಗುತ್ತಿದೆ. ಆಧುನಿಕ ಬದುಕಿಗೆ ಬೇಕಾಗಿರುವ ಸಮಗ್ರ ಶಿಕ್ಷಣದ ಅಗತ್ಯತೆ ಕೂಡ ಹೆಚ್ಚುತ್ತಿದೆ. ಜೊತೆಗೆ ಎಲ್ಲಾ ಶಿಕ್ಷಣದ ಮೂಲ ಒಂದು ಉತ್ತಮ ಫೌಂಡೇಷನ್ ಸ್ಕೂಲ್. ಮಗುವಿನ ಶೈಕ್ಷಣಿಕ ಬದುಕಿಗೆ/ಜೀವನಕ್ಕೆ ಒಂದು ತಳಪಾಯ ಆಗುವಂತಹ ವೈಜ್ಞಾನಿಕ ಅಳವಡಿಸಿಕೊಂಡು ಪ್ರೈಮ್‌ರೋಸ್ ಫೌಂಡೇಶನ್ ಸ್ಕೂಲ್ ಪ್ರಾರಂಭಿಸಲಾಗುತ್ತಿದೆ. ಮಕ್ಕಳ ಹಾಗೂ ಹದಿಹರೆಯರವರ ಮಾನಸಿಕ ಆರೋಗ್ಯ ಸಮಸ್ಯೆಗಳು ದಿನ ಹೆಚ್ಚುತ್ತಿದೆ. ಅದಕ್ಕೆ ಬೇಕಾದ ಚಿಕಿತ್ಸೆಯ ಅಗತ್ಯತೆ ಕೂಡ ಹೆಚ್ಚಾಗುತ್ತಿದ್ದು, ಈ ನಿಟ್ಟಿನಲ್ಲಿ ಮಕ್ಕಳ ಮತ್ತು ಹದಿಹರೆಯದವರಿಗೆ ಮಾರ್ಗದರ್ಶನ ಕೇಂದ್ರವನ್ನು ಉದ್ಘಾಟಿಸಲಾಗುವುದು ಎಂದು ಅವರು ಹೇಳಿದರು.

ಫೌಂಡೇಶನ್ ಶಾಲೆ (ಪ್ರೀ ಸ್ಕೂಲ್) ಯಲ್ಲಿ ಮಗುವಿನ ಬೌದ್ಧಿಕ, ಮಾನಸಿಕ ಮತ್ತು ಶಾರೀರಿಕ ಬೆಳವಣಿಗೆಗೆ ಪೂರಕವಾಗಿ, ವೈಜ್ಞಾನಿಕವಾಗಿ ಸಿದ್ಧಗೊಂಡ ಕಲಿಕಾ ಮಾದರಿಯ ಶಿಕ್ಷಣವನ್ನು ಇಲ್ಲಿ ನೀಡಲಾಗುವುದು. ಫೌಂಡೇಶನ್ ಲೆವೆಲ್ ನಲ್ಲಿ ಬೋಧಿಸುವ ಶಿಕ್ಷಕರನ್ನು ರೂಪುಗೊಳಿಸುವ ಪ್ರೀಸ್ಕೂಲ್ ಟೀಚರ್ಸ್ ಟ್ರೇನಿಂಗ್ ಕೋರ್ಸ್‌ಗಳನ್ನು ಇಲ್ಲಿ ನೀಡಲಾಗುತ್ತಿದೆ. ಇಲ್ಲಿ ಶೇ.100 ಉದ್ಯೋಗಾವಕಾಶದ ಸಾಧ್ಯತೆಗಳಿದ್ದು, ಈಗಾಗಲೇ ಮೂರನೇ ವರ್ಷದ ದಾಖಲಾತಿ ಪ್ರಕ್ರಿಯೆ ನಡಿತಾ ಇದೆ. ಎರಡು ಬ್ಯಾಚ್‌ಗಳು ತರಬೇತಿ ಪೂರ್ಣಗೊಳಿಸಿ ಉದ್ಯೋಗವನ್ನು ಪಡೆದಿದ್ದಾರೆ. ಈಗಾಗಲೇ ಉದ್ಯೋಗದಲ್ಲಿರುವವರಿಗೆ ಹಾಗೂ ಇನ್ನೂ ಉದ್ಯೋಗ ಪಡೆಯ ಬೇಕಾದವರಿಗೆ ಪ್ರತ್ಯೇಕ ತರಬೇತಿ ವ್ಯವಸ್ಥೆ ಇರುತ್ತದೆ ಎಂದು ಅವರು ಹೇಳಿದರು.

ಚಿರಂತನ ಸಂಸ್ಥೆ ಶಿಕ್ಷಕರ ಕೌಶಲ್ಯ ಅಭಿವೃದ್ಧಿ ಕೇಂದ್ರ ಕೂಡ ಆಗಿ ಕೆಲಸ ನಿರ್ವಹಿಸಲಿದೆ. ವಿವಿಧ ಶಾಲೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ನಮ್ಮ ಸಂಸ್ಥೆಯಿಂದ ಶಿಕ್ಷಕರರಿಗೆ ಪುನಶ್ಚೇತನ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ಮಕ್ಕಳ ಹಾಗೂ ಹದಿಹರೆಯದವರ ವಿಶೇಷ ಆಪ್ತ ಸಮಾಲೋಚನೆ ಹಾಗೂ ವೃತ್ತಿಪರ ಮಾರ್ಗದರ್ಶನ ಕೇಂದ್ರವಾಗಿ ಈ ಸಂಸ್ಥೆ ಕಾರ್ಯ ನಿರ್ವಹಿಸಲಿದೆ. ಜೊತೆಗೆ ವೃತ್ತಿಪರ ಆಪ್ತ ಸಮಾಲೋಚನೆ ಕೋರ್ಸ್‌ಗಳು ಕೂಡ ಇಲ್ಲಿ ಲಭ್ಯವಿದೆ ಎಂದರು.

ಅಕಾಡೆಮಿಕ್ ಲೀಡ್ ವಿಲ್ಮಾ ಡಿಸೋಜ, ಸಂಸ್ಥೆಯ ಪ್ರಾಂಶುಪಾಲೆ ವಿನೂತಾ ಬಿ.ಶೆಟ್ಟಿ ಉಪಸ್ಥಿತರಿದ್ದರು.

ಗಾಂಜಾ ಮಾರಾಟಗಾರರಿಗೆ ಜೈಲು

ಮಂಗಳೂರು: ಮಾರಾಟ ಮಾಡುವ ಉದ್ದೇಶದಿಂದ ಗಾಂಜಾ ಹೊಂದಿದ್ದ ಪ್ರಕರಣದಲ್ಲಿ ಕೆಳಗಿನ ನ್ಯಾಯಾಲಯದಿಂದ ಖುಲಾಸೆಗೊಂಡಿದ್ದ ಇಬ್ಬರು ಅಪರಾಧಿಗಳಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಎಫ್.ಟಿ.ಎಸ್.ಸಿ–1 ತ್ವರಿತ ನ್ಯಾಯಾಲಯ 3 ತಿಂಗಳ ಕಾಲ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 10,000 ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಕಾವೂರು ಪಂಜಿಮೊಗರು ಉರುಂದಾಡಿಗುಡ್ಡೆ ನಿವಾಸಿ ಮನೋಜ್ ಕುಮಾರ್ ಅಲಿಯಾಸ್ ಮಂಜು (36) ಹಾಗೂ ಕಾಸರಗೋಡು ಜಿಲ್ಲೆ ಮಂಜೇಶ್ವರ ಉದ್ಯಾವರದ ಮೊಹಮ್ಮದ್ ಕಲಂದರ್ (42) ಶಿಕ್ಷೆಗೊಳಗಾದ ಅಪರಾಧಿಗಳು.

ಪ್ರಕರಣದ ವಿವರ

2016ರ ಜ.21ರಂದು ಕಾಟಿಪಳ್ಳ ಗ್ರಾಮದ 7ನೇ ಬ್ಲಾಕ್ ಚೊಕ್ಕಬೆಟ್ಟು ಪ್ಯಾರಡೈಸ್ ಮೈದಾನದ ಬಳಿಯ ಕೆ.ಇ.ಬಿ ಕ್ರಾಸ್ ರಸ್ತೆಯಲ್ಲಿರುವ ಅಲ್ ಅಮೀನ್ ಪಾರ್ಕ್‌ನಲ್ಲಿ ಮನೋಜ್ ಪೂಜಾರಿ ಮತ್ತು ಮಹಮ್ಮದ್ ಕಲಂದರ್ ಅವರು ಗಾಂಜಾವನ್ನು ತಮ್ಮ ವಶದಲ್ಲಿಟ್ಟುಕೊಂಡು ಗ್ರಾಹಕರಿಗೆ ಮಾರಾಟ ಮಾಡಲು ಕಾಯುತ್ತಿದ್ದರು.

ಖಚಿತ ಮಾಹಿತಿಯಂತೆ ಸ್ಥಳಕ್ಕೆ ದಾಳಿ ನಡೆಸಿದ ಸುರತ್ಕಲ್ ಠಾಣೆ ಪೊಲೀಸರು ಮಂಜುನಾಥ್ ಬಳಿಯಿಂದ 400 ಗ್ರಾಂ ತೂಕದ ಗಾಂಜಾ ಮತ್ತು ತಲಾ 3 ಗ್ರಾಂ ಗಾಂಜಾ ಇರುವ 3 ಪ್ಯಾಕೇಟ್‌ಗಳನ್ನು ಕಲಂದರ್ ಬಳಿಯಿಂದ 500 ಗ್ರಾಂ ಗಾಂಜಾ ಸಹಿತ ಆರೋಪಿಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದರು. ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ್ದರು. ಮಂಗಳೂರಿನ ಮಾನ್ಯ 2ನೇ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ನ್ಯಾಯಾಲಯವು ಆರೋಪಿತರನ್ನು ಬಿಡುಗಡೆಗೊಳಿಸಿತ್ತು.

ಬಿಡುಗಡೆ ಆದೇಶದ ವಿರುದ್ಧ ಅಭಿಯೋಜನೆಯು ಮೇಲ್ಮನವಿ ಸಲ್ಲಿಸಿತ್ತು. ಮೇಲ್ಮನವಿಯು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಎಫ್.ಟಿ.ಎಸ್.ಸಿ–1 ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಿದೆ. ಅಭಿಯೋಜನೆಯ ಹಾಗೂ ಆರೋಪಿತರ ಪರ ವಾದ ಪ್ರತಿವಾದವನ್ನು ಆಲಿಸಿ, ಆರೋಪಿಗಳ ವಿರುದ್ಧ ಅಪರಾಧ ಸಾಬೀತಾಗಿದೆ ಎಂದು ತೀರ್ಮಾನಿಸಿದ ನ್ಯಾಯಾಧೀಶರಾದ ಮೋಹನ ಜೆ. ಎಸ್. ಅವರು, ವಿಚಾರಣಾ ನ್ಯಾಯಾಲಯ 2026ರ ಮಾ.26ರಂದು ನೀಡಿದ್ದ ತೀರ್ಪನ್ನು ರದ್ದುಗೊಳಿಸಿದ್ದಾರೆ. ಬಳಿಕ ಇಬ್ಬರು ಅಪರಾಧಿಗಳಿಗೆ ಎನ್.ಡಿ.ಪಿ.ಎಸ್ ಕಾಯ್ದೆಯ ಕಲಂ: 8(ಸಿ) ಮತ್ತು 20(29)(ಬಿ)(ಎ) ಪ್ರಕಾರ 3 ತಿಂಗಳುಗಳ ಕಾಲ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 10,000 ರೂ. ದಂಡ ವಿಧಿಸಿ, ಮೇ 18ರಂದು ತೀರ್ಪು ನೀಡಿದ್ದಾರೆ.

ಪ್ರಕರಣದಲ್ಲಿ ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಕೆ.ಬದರಿನಾಥ ನಾಯರಿ ಅವರು ಮೇಲ್ಮನವಿ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದಾರೆ.

ಕೊಳಚಪ್ಪುವಿನ ಎಂಬತ್ತೆರಡರ ಉತ್ಸಾಹೀ ಮಹಿಳಾ ಸಾಹಿತಿಯ ಹದಿಮೂರನೆಯ ಕೃತಿ | ಗೌರವಾರ್ಪಣೆ | ಕವಿಗಳಿಂದ ಕವಿಗೋಷ್ಠಿ

ಸಾಹಿತಿ ಸತ್ಯವತಿಯವರ 'ನೀಲಾಂಜನ' ಭಕ್ತಿಗೀತೆ ಸಂಕಲನ ಲೋಕಾರ್ಪಣೆ

ಮಂಜೇಶ್ವರ: ಎಂಭತ್ತೆರಡು ವರ್ಷದ ಇಳಿ ವಯಸ್ಸಿನಲ್ಲೂ ಚೈತನ್ಯದ ಚಿಲುಮೆಯಂತಿರುವ ಹಿರಿಯ – ಕಿರಿಯ ಬರಹಗಾರರಿಗೆ ಸ್ಫೂರ್ತಿಯ ಸೆಲೆಯಾಗಿರುವ ಹಿರಿಯ ಸಾಹಿತಿ ಬಿ.ಸತ್ಯವತಿ ಎಸ್. ಭಟ್ ಕೊಳಚಪ್ಪು ಅವರ ಹದಿಮೂರನೆಯ ಕೃತಿ 'ನೀಲಾಂಜನ' ಭಕ್ತಿಗೀತೆಗಳ ಸಂಕಲನ ಭಾನುವಾರ ಅವರ ನಿವಾಸ ಕಾಸರಗೋಡು ಜಿಲ್ಲೆಯ ಮಂಜೇಶ್ವರ ಸಮೀಪದ ಕೊಳಚಪ್ಪು ನಿವಾಸ 'ಸತ್ಯಶ್ರೀ'ಯಲ್ಲಿ ಬಿಡುಗಡೆಗೊಳಿಸಲಾಯಿತು.

ಹಿರಿಯ ಸಾಹಿತಿ ಮತ್ತು ಸಾಹಿತ್ಯ ಪ್ರವರ್ತಕರಾದ ಡಾ.ಕೊಳ್ಚಪ್ಪೆ ಗೋವಿಂದ ಭಟ್ ದೀಪ ಪ್ರಜ್ವಲನೆ ಮೂಲಕ ಸಭಾ ಕಾರ್ಯಕ್ರಮ ಉದ್ಘಾಟಿಸಿ, ಬರವಣಿಗೆ ಕ್ಷೇತ್ರದಲ್ಲಿ ಸತ್ಯವತಿ ಭಟ್ ಕೊಳಚಪ್ಪು ಅವರು ಓರ್ವ ವಿಶೇಷ ಪ್ರತಿಭೆ. ಅನೇಕ ಹಿರಿಯ ಕಿರಿಯ ಬರಹಗಾರರ ಸ್ಫೂರ್ತಿಗೆ ಪ್ರೇರಕರಾದವರೆಂದು ನುಡಿದರು.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಇಂಜಿನಿಯರ್ ಬಿ.ಮಹಾಬಲ ತಿಲಕ ಮಂಗಳೂರು ಅವರು ಕೃತಿ ಬಿಡುಗಡೆಗೊಳಿಸಿ, ಸಾಹಿತ್ಯ ಕ್ಷೇತ್ರದಲ್ಲಿ ತನ್ನ ತಾಯಿ ಸಾಧಿಸಿದ ಅಪ್ರತಿಮ ಸಾಧನೆಯ ಕುರಿತು ಅಪಾರ ಸಂತಸ ವ್ಯಕ್ತಪಡಿಸಿದರು.

ವಿಶ್ರಾಂತ ಪ್ರಾಂಶುಪಾಲರು ಮತ್ತು ಹಿರಿಯ ಸಾಹಿತಿ ಪ್ರೊ. ಪಿ. ಎನ್. ಮೂಡಿತ್ತಾಯರು ಕೃತಿ ಪರಿಚಯ ಮಾಡಿದರು.

ಕೃತಿಕಾರರಾದ ಬಿ.ಸತ್ಯವತಿ ಎಸ್.ಭಟ್ ಕೊಳಚಪ್ಪು ಮಾತನಾಡಿ, ತಾಯಿ ಸರಸ್ವತಿಯ ಅನುಗ್ರಹದಿಂದ ಮಕ್ಕಳು, ಅಳಿಯ ಸೊಸೆಯಂದಿರ ಸಹಕಾರದಿಂದ, ಬಂಧುಗಳ ಪ್ರೋತ್ಸಾಹದಿಂದ ಸಾಹಿತ್ಯ ಕ್ಷೇತ್ರದಲ್ಲಿ ಒಂದಷ್ಟು ಸಾಧನೆ ಮಾಡಲು ಸಾಧ್ಯವಾಯಿತು. ಸಾಹಿತ್ಯದ ಬೆಳವಣಿಗೆಗೆ ಸಹಕರಿಸಿದ ಸರ್ವರನ್ನೂ ಈ ಸಂದರ್ಭದಲ್ಲಿ ಸ್ಮರಿಸಿದರು.



ಹಿರಿಯ ಯಕ್ಷಗಾನ ಅರ್ಥಧಾರಿ ಹಾಗೂ ಸಾಹಿತ್ಯ ದಿಗ್ಗಜರೂ ಆಗಿರುವ ಡಾ.ರಮಾನಂದ ಬನಾರಿಯವರು ಕಾರ್ಯಕ್ರಮದ ಕುರಿತು ವ್ಯಕ್ತಪಡಿಸಿದ ಶುಭದೊಸಗೆಯ ಧ್ವನಿ ಮುದ್ರಣವನ್ನು ಸಭೆಯಲ್ಲಿ ಬಿತ್ತರಿಸಲಾಯಿತು.

ಅಧ್ಯಕ್ಷತೆ ವಹಿಸಿದ ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ ಕಾಸರಗೋಡು ಇದರ ಅಧ್ಯಕ್ಷ ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅವರು ಮಾತನಾಡಿ, ಸತ್ಯವತಿ ಅಮ್ಮನವರು ಭಕ್ತಿಭಾವಪರವಶತೆಯಿಂದ ಬರೆದಿರುವ ನೀಲಾಂಜನ ಕೃತಿ ಪ್ರತಿಯೊಂದು ಭಜನಾ ಮಂಡಳಿಗಳಲ್ಲೂ ಹಾಡುವಂತಾಗಬೇಕು, ಅವರಿಂದ ಮತ್ತಷ್ಟು ಕೃತಿಗಳು ಸಾಹಿತ್ಯ ಸರಸ್ವತಿಯ ಮಡಿಲು ಸೇರಬೇಕು, ಸದಾ ಚೈತನ್ಯದ ಚಿಲುಮೆಯಂತಿರುವ ಹಿರಿಯ ಕವಯತ್ರಿಯ ಕೃತಿ ಬಿಡುಗಡೆಯ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರಬೇಕು ಅದನ್ನು ಪ್ರೇಕ್ಷಕನಾಗಿ ಆಸ್ವಾದಿಸುವ ಭಾಗ್ಯವನ್ನು ದೇವರು ಒದಗಿಸಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸಿದರು.

ಸಾಹಿತ್ಯ ಕ್ಷೇತ್ರದಲ್ಲಿ ಅಮ್ಮನ ವಿಶೇಷ ಸಾಧನೆಯನ್ನು ಪರಿಗಣಿಸಿ ಸತ್ಯವತಿ ಭಟ್ ಕೊಳಚಪ್ಪು ಅವರನ್ನು ಮಕ್ಕಳು ಗೌರವಪೂರ್ವಕವಾಗಿ ಸನ್ಮಾನಿಸಿದರು.

ಕೃತಿಕಾರರಾದ ಬಿ.ಸತ್ಯವತಿ ಭಟ್ ಕೊಳಚಪ್ಪರು ಅವರ ಸಾಹಿತ್ಯ ಕೈಂಕರ್ಯಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಆಪ್ತ ಬಂಧುಗಳನ್ನು ವೇದಿಕೆಯಲ್ಲಿ ಗೌರವಿಸಲಾಯಿತು. 'ನೀಲಾಂಜನ' ಕೃತಿಯಿಂದ ಆಯ್ದ ಭಕ್ತಿಗೀತೆಗಳಿಗೆ ಸುಶ್ರಾವ್ಯವಾಗಿ ಹಾಡಿದ ಪ್ರಸನ್ನ ಕಾಕುಂಜೆ ಅವರ ಹಾಡುಗಾರಿಕೆಯ ಧ್ವನಿಮುದ್ರಣವನ್ನು ಸಭೆಯಲ್ಲಿ ಆಸ್ವಾದಿಸಲಾಯಿತು. ಸುಬ್ರಹ್ಮಣ್ಯ ಭಟ್ ಕೊಳಚಪ್ಪು ಅವರು ಪ್ರಾರ್ಥನೆಗೈದರು.

ಲತೀಶ್ ಎಂ.ಸಂಕೊಳಿಗೆ ಸ್ವಾಗತಿಸಿ, ಪ್ರಮೀಳಾ ಚುಳ್ಳಿಕಾನ ವಂದಿಸಿದರು. ಹಿರಿಯ ಸಾಹಿತಿ ಮತ್ತು ನಿವೃತ್ತ ಶಿಕ್ಷಕಿ ಲಕ್ಷ್ಮೀ ವಿ.ಭಟ್ ಮಂಜೇಶ್ವರ ಕಾರ್ಯಕ್ರಮ ನಿರೂಪಿಸಿದರು.

ಸಭಾ ಕಾರ್ಯಕ್ರಮದ ನಂತರ ನಿವೃತ್ತ ಕನ್ನಡ ಅಧ್ಯಾಪಕರು ಕವಿ, ಹಿರಿಯ ಸಾಹಿತಿಯೂ ಆಗಿರುವ ಗುಣಾಜೆ ರಾಮಚಂದ್ರ ಭಟ್ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಕಾರ್ಯಕ್ರಮ ನಡೆಯಿತು. ಲಕ್ಷ್ಮೀ ವಿ.ಭಟ್ ಮಂಜೇಶ್ವರ, ಪ್ರಮೀಳಾ ಚುಳ್ಳಿಕಾನ, ಡಾ.ಕೊಳ್ಚಪ್ಪೆ ಗೋವಿಂದ ಭಟ್, ಡಾ.ಅಬ್ರಾಜೆ ಕೇಶವ ಭಟ್ ಮತ್ತು ಸತ್ಯವತಿ ಎಸ್.ಭಟ್ ಕೊಳಚಪ್ಪು ಮುಂತಾದ ಕವಿವರ್ಯರು ಭಾಗವಹಿಸಿ ಭಕ್ತಿಗೀತೆಗಳನ್ನು ವಾಚನ ಮಾಡಿದರು.

ಮಧುರ ತರಂಗ ವತಿಯಿಂದ 'ಶ್ರೀ ಸಿದ್ಧಿ ವೃದ್ಧಿ ಸ್ವರಮಾಧುರ್ಯ' ಗಾಯನ ಸ್ಪರ್ಧೆ

◆ **ಮಂಗಳೂರು:** ಮಧುರ ತರಂಗ ವತಿಯಿಂದ ಆಯೋಜಿಸಲಾದ 'ಶ್ರೀ ಸಿದ್ಧಿ ವೃದ್ಧಿ ಸ್ವರಮಾಧುರ್ಯ' ಗಾಯನ ಸ್ಪರ್ಧೆಯನ್ನು ಕಿನ್ನಿಗೋಳಿಯ ಯುಗಪುರುಷ ಹಾಲ್‌ನಲ್ಲಿ ಶ್ರೀಮತಿ ಭಂಡಾರಿ ಉದ್ಘಾಟಿಸಿದರು. ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಯುಗಪುರುಷ ಮಾಸಪತ್ರಿಕೆಯ ಭುವನಾಭಿರಾಮ ಉಡುಪ, ಪ್ರಕಾಶ್, ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮಹಿಳೆಯರು ಹಾಗೂ ಪುರುಷರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಉದ್ದೇಶದಿಂದ ಒಂದು ಗೀತೆ ಹಾಡುವ ಮೂಲಕ ನಗದು ಬಹುಮಾನ ಪಡೆಯುವ ಅವಕಾಶ ಕಲ್ಪಿಸಲಾಗಿತ್ತು. ಗಾಯನ ಸ್ಪರ್ಧೆಗೆ ಬೆಳ್ತಂಗಡಿ, ಕಾರ್ಕಳ, ಮೂಡಬಿದ್ರೆ, ಉಡುಪಿ, ಮುಲ್ಕಿ, ಹಳೆಯಂಗಡಿ, ಭಜಗೋಳಿ, ಮಾಳ ಹಾಗೂ ಮಂಗಳೂರು ಮೊದಲಾದ ವಿವಿಧ ಭಾಗಗಳಿಂದ ಸ್ಪರ್ಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಸಮಾರೋಪ ಸಮಾರಂಭವು ಸಂಸ್ಕಾರ ಭಾರತೀಯ ಜಿಲ್ಲಾಧ್ಯಕ್ಷ ಬ್ರಹ್ಮರಕೂಟ್ಲು ಅನಿಲ್ ಪಂಡಿತ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ಸಂದರ್ಭ ಭುವನಾಭಿರಾಮ ಅವರಿಗೆ 'ನುಡಿಚಕ್ರೇಶ್ವರ' ಬಿರುದನ್ನು ಮಧುರ ತರಂಗ ವತಿಯಿಂದ ಪ್ರದಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕಲ್ಕೂರ ಪ್ರತಿಷ್ಠಾನದ ಪ್ರದೀಪ್ ಕುಮಾರ್ ಕಲ್ಕೂರ, ಕಲಾ ಸಾಹಿತಿ ಜನಾರ್ದನ ಹಂದೆ, ಕಿನ್ನಿಗೋಳಿಯ ಕೌನ್ಸಿಲರ್ ಪ್ರಕಾಶ್ ಕಿನ್ನಿಗೋಳಿ, ಡಾ. ಸರಳ ರಮೇಶ್ ಕುಂದರ್, ಶ್ರೀಮತಿ ಭಂಡಾರಿ ಉಪಸ್ಥಿತರಿದ್ದರು.

ಗಾಯನ ಸ್ಪರ್ಧೆಯ ವಿಜೇತರಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಆಚಾರ್ಯ ಜಗದೀಶ್ ಶಿವಪುರ, ರೇಖಾ ಜಗದೀಶ್, ನಯನ, ಆಶಾ ಶಿವಾನಂದ, ಸಂಸ್ಥೆಯ ಕಾರ್ಯದರ್ಶಿ ಮೋಹನ್ ದಾಸ್, ವಿನೋದ್ ರಾಜ್, ಸುಗುಣಾ ಕಾಮತ್, ಆದೀಶ್ ಶೆಟ್ಟಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಸ್ಪರ್ಧೆಗೆ ಸತೀಶ್ ಸುರತ್ಕಲ್ ಹಾಗೂ ಶುಭಲಕ್ಷ್ಮೀ ಆಚಾರ್ಯ ತೀರ್ಪುಗಾರರಾಗಿದ್ದರು.

ಕಾರ್ಯಕ್ರಮವನ್ನು ಸ್ವರ್ಣಶ್ರೀ ನಿರೂಪಿಸಿದರು.

ಅಶುಚಿತ್ವ ಮಾಡಿದ ತಮಿಳುನಾಡು ಪ್ರವಾಸಿಗರಿಗೆ ಬಿಸಿ ಮುಟ್ಟಿಸಿದ ನಗರಸಭೆ



◆ **ಮಡಿಕೇರಿ:** ನಗರದ ಗಾಂಧಿ ಮೈದಾನವನ್ನು ಅಶುಚಿತ್ವ ಮಾಡಿದ ತಮಿಳುನಾಡು ಮೂಲದ ಪ್ರವಾಸಿಗರಿಗೆ ಮಡಿಕೇರಿ ನಗರಸಭೆ ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ.

ನಗರದ ಪ್ರವಾಸಿ ತಾಣವಾದ ರಾಜಾಸೀಟ್ ಸಮೀಪದಲ್ಲೇ ಇರುವ ಗಾಂಧಿ ಮೈದಾನದ ಒಳಗೆ ತಮಿಳುನಾಡು ಮೂಲದ ಸುಮಾರು 40 ಜನರಿದ್ದ ಪ್ರವಾಸಿಗರ ತಂಡವೊಂದು ಗ್ಯಾಸ್ ಸಿಲಿಂಡರ್, ಸ್ಟವ್ ಸೇರಿದಂತೆ ಪಾತ್ರೆಗಳನ್ನು ಬಳಸಿ ಅಡುಗೆ ಮಾಡುತ್ತಿತ್ತು.

ಇದನ್ನು ಗಮನಿಸಿದ ಸಾರ್ವಜನಿಕರು ನಗರಸಭಾ ಉಪಾಧ್ಯಕ್ಷ ಮಹೇಶ್ ಜೈನಿ ಅವರ ಗಮನ ಸೆಳೆದರು. ತಕ್ಷಣ ಕಾರ್ಯಪ್ರವೃತ್ತರಾದ ಮಹೇಶ್ ಜೈನಿ, ನಗರಸಭೆಯ ಆರೋಗ್ಯ ನಿರೀಕ್ಷಕ ಸುರೇಶ್, ಸಿಬ್ಬಂದಿಗಳಾದ ಬೂತ್ ರಾಜ್ ಮತ್ತು ರಂಗಪ್ಪ ಅವರೊಂದಿಗೆ ಸ್ಥಳಕ್ಕೆ ತೆರಳಿ ಪ್ರವಾಸಿಗರಿಂದಲೇ ಪೂರ್ತಿ ಮೈದಾನವನ್ನು ಶುಚಿಗೊಳಿಸಿ, ಶುಚಿತ್ವದ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಪ್ರವಾಸಿ ಬಸ್ ಚಾಲಕನಿಂದ ಎರಡು ಸಾವಿರ ರೂ.ಗಳ ದಂಡ ವಸೂಲು ಮಾಡಿದ್ದಾರೆ. ಶುಚಿತ್ವಕ್ಕೆ ಹೆಸರಾಗಿದ್ದ ಮಡಿಕೇರಿ ಇಂದು ಪ್ರವಾಸಿಗರ ನಿರ್ಲಕ್ಷ್ಯದಿಂದ ಕಸದ ಕೊಂಪೆಯಾಗುತ್ತಿದ್ದು, ಜಿಲ್ಲೆಯ ಇತರೆಡೆಗಳಲ್ಲೂ ಇಂತಹ ಚಟುವಟಿಕೆಗಳು ಕಂಡು ಬರುತ್ತಿವೆ. ರಸ್ತೆ ಬದಿಯಲ್ಲಿ ಅಡುಗೆ ಮಾಡಿ ತಿಂದು, ಕಸವನ್ನೆಲ್ಲಾ ಅಲ್ಲಿಯೇ ಎಸೆದು ಹೋಗುವುದು ಸಾಮಾನ್ಯವಾಗಿದೆ.

ಆಯಾ ಗ್ರಾ.ಪಂ.ಗಳು ಕೂಡಾ ಇಂತಹ ಚಟುವಟಿಕೆಗಳಿಗೆ ನಿಯಂತ್ರಣ ಹಾಕಲು ಮುಂದಾಗಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

20-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	425 - 460
ಚೋಲ್ ಅಡಿಕೆ	515 - 540
ಡಬಲ್ ಚೋಲ್	515 - 540
ಹೊಸ ಪಟೋರ	345 - 395
ಹಳೆ ಪಟೋರ	365 - 395
ಹೊಸ ಉಳ್ಳಿ	140 - 295
ಹಳೆ ಉಳ್ಳಿ	130 - 295
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	260 - 290
ಹಳೆ ಕರಿಗೋಟು	260 - 290
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	255.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	150.00
ಸ್ಕ್ರಾಪ್ 2	140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-53) ಡ್ರಾ ಮೇ 20ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DF 314005 (KANHANGAD)

Consolation Prize Rs.5,000/-
DA 314005 DB 314005 DC 314005 DD 314005
DE 314005 DG 314005 DH 314005 DJ 314005
DK 314005 DL 314005 DM 314005

2nd Prize Rs.30,00,000/- [30 Lakhs]
DK 765564 (KASARAGOD)

3rd Prize Rs.5,00,000/- [5 Lakhs]
DE 973009 (GURUVAYUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0439 1732 2231 2662 3148 4065 4335 4577 4584 5053
5498 5956 6655 6981 7674 8603 9064 9267 9457

5th Prize Rs.2,000/-
1109 1413 1621 1781 3998 5961

6th Prize Rs.1,000/-
0696 1028 1142 1320 1361 1399 1979 2969 2998 3080
3526 4357 4556 4841 5849 6073 6084 7095 7342 7425
7938 9013 9056 9376 9871

7th Prize Rs.500/-
0030 0161 0379 0416 0566 1397 1445 1579 1910 2011
2029 2123 2154 2364 2546 2597 2633 2637 2673 2717
2791 2875 3051 3172 3499 3860 3903 4172 4328 4705
4805 4875 4913 4921 5016 5129 5157 5625 6068 6102
6164 6192 6304 6314 6323 6327 6743 6830 7030 7196
7300 7568 7732 7817 7824 7930 7932 8053 8155 8223
8330 8338 8382 8432 8468 8630 8889 8993 9108 9367
9409 9424 9669 9673 9723 9776

8th Prize Rs.200/-
0014 0068 0259 0340 0492 0616 0637 0772 1118 1152
1163 1283 1429 1532 1577 1616 1713 1884 1916 1924
2126 2243 2323 2485 2715 2846 2906 2917 2963 3086
3120 3137 3233 3299 3301 3484 3560 3812 3820 3874
4018 4046 4260 4270 4299 4324 4337 4351 4394 4473
4497 4533 4764 5019 5255 5450 5544 5634 5703 5814
5939 6012 6027 6196 6211 6280 6395 6417 6427 6531
6931 7370 7517 7534 7607 7614 7628 7636 7897 7952
7977 7994 8006 8252 8556 8593 8848 8906 9003 9166
9174 9454 9489 9581 9648 9677

9th Prize Rs.100/-
0016 0050 0140 0266 0295 0299 0400 0402 0482 0608
0659 0678 0706 0767 0863 0948 1155 1255 1261 1315
1381 1407 1465 1482 1491 1570 1724 1736 1738 1802
1877 1881 1929 1963 2000 2021 2053 2055 2193 2204
2239 2383 2400 2556 2601 2634 2684 2760 2796 2844
2853 2878 2935 3100 3114 3142 3190 3276 3297 3457
3465 3515 3590 3706 3716 3797 3800 3832 4027 4242
4406 4413 4460 4630 4653 4671 4674 4695 4763 4802
4962 4987 5357 5383 5409 5445 5461 5541 5623 5751
6044 6112 6134 6166 6321 6326 6331 6413 6450 6561
6629 6645 6733 6785 6970 7100 7422 7454 7584 7593
7701 7876 7937 8181 8186 8419 8454 8589 8599 8602
8607 8723 8724 8759 8777 8895 8979 8988 9079 9084
9475 9510 9511 9525 9593 9684 9936 9981

ವಿಶ್ವದಲ್ಲೇ ಜಲಮಂಡಳಿಯಿಂದ ಅತ್ಯುತ್ತಮ ಸಾಧನೆ



» ಗ್ಲೋಬಲ್ ವಾಟರ್ ಸಮಿಟ್ ಸಮಾವೇಶ
» ಪ್ರತಿಷ್ಠಿತ ಯುಟಿಲಿಟಿ ಆಫ್ ದಿ ಇಯರ್ ಪ್ರಶಸ್ತಿಯ ಅಂತಿಮ 5ರ ಪಟ್ಟಿಯಲ್ಲಿ ಮನ್ನಣೆ

• **ಮ್ಯಾಡ್ರಿಡ್/ಬೆಂಗಳೂರು:** ಬೆಂಗಳೂರು ಜಲಮಂಡಳಿಗೆ ವಿಶ್ವಮಟ್ಟದ ಪ್ರಶಂಸೆ ದೊರೆತಿದ್ದು, ವಿಶ್ವದ ಐದು ಅತ್ಯುತ್ತಮ ಸಂಸ್ಥೆಯಲ್ಲಿ ಒಂದಾಗಿ ಆಯ್ಕೆಯಾಗಿದೆ.

ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ ಆಯೋಜಿಸಲಾಗಿರುವ ಪ್ರತಿಷ್ಠಿತ ಗ್ಲೋಬಲ್ ವಾಟರ್ ಸಮಿಟ್ –2026 ಸಮಾವೇಶದಲ್ಲಿ ಬೆಂಗಳೂರು ಜಲಮಂಡಳಿಯು ವಿಶ್ವದ 5 ಅತ್ಯುತ್ತಮ ಸಂಸ್ಥೆಗಳಲ್ಲಿ ಒಂದಾಗಿ ಆಯ್ಕೆಯಾಗುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ. ವಿಶೇಷವೆಂದರೆ, 3 ಪ್ರಮುಖ ವಿಭಾಗಗಳಲ್ಲಿ ಜಾಗತಿಕ ಟಾಪ್ 5 ಸ್ಥಾನ ಪಡೆದ ಭಾರತದ ಏಕೈಕ ನೀರು ಸರಬರಾಜು ಸಂಸ್ಥೆ ಎಂಬ ಹೆಗ್ಗಳಿಕೆಗೆ ಬೆಂಗಳೂರು ಜಲಮಂಡಳಿ ಪಾತ್ರವಾಗಿದೆ.

ಬೆಂಗಳೂರಿನಲ್ಲಿ ನೀರಿನ ಸದ್ಬಳಕೆ, ಮರುಬಳಕೆ ಹಾಗೂ ಸಮರ್ಥ ನಿರ್ವಹಣೆಗಾಗಿ ಜಲಮಂಡಳಿ ಅಳವಡಿಸಿಕೊಂಡಿರುವ 5 ಪಂಚಸೂತ್ರಗಳು ವಿಶ್ವಕ್ಕೆ ಮಾದರಿಯಾಗಿವೆ ಎಂದು ಸಮ್ಮೇಳನದಲ್ಲಿ ಉತ್ತಮ ಪ್ರಶಂಸೆಗೆ ಪಾತ್ರವಾಗಿದೆ. ಎಲ್ಲರಿಗೂ ಶುದ್ಧ ನೀರು ಮತ್ತು ನೈರ್ಮಲ್ಯ ಒದಗಿಸುವ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಲ್ಲಿ ಜಲಮಂಡಳಿಯು ಅತ್ಯುತ್ತಮ ಮಾದರಿಯಾಗಿ ಹೊರಹೊಮ್ಮಿದೆ. ಈ ವಿಭಾಗದಲ್ಲಿ ಚಿಲಿ, ಮಲೇಷ್ಯಾ, ಬ್ರೆಜಿಲ್, ಪರಾನಾ ದೇಶದ ಸಂಸ್ಥೆಗಳ ಜೊತೆಗೆ ಬೆಂಗಳೂರು ಜಲಮಂಡಳಿಯು ವಿಶ್ವದ ಟಾಪ್ 5 ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಅಲ್ಲದೆ ಕಳೆದ ಮೂರು ವರ್ಷಗಳಲ್ಲಿ ನೀರು ಪೂರೈಕೆ, ನೈರ್ಮಲ್ಯ ಹಾಗೂ ಹೊಸ ತಂತ್ರಜ್ಞಾನಗಳ ಯಶಸ್ವಿ ಅಳವಡಿಕೆಯನ್ನು ಪರಿಗಣಿಸಿ, ಜಲಮಂಡಳಿಯು ವಿಶ್ವದ ಅತ್ಯಂತ ಪ್ರತಿಷ್ಠಿತ ಯುಟಿಲಿಟಿ ಆಫ್ ದಿ ಇಯರ್ ಪ್ರಶಸ್ತಿಯ ಅಂತಿಮ 5ರ ಪಟ್ಟಿಯಲ್ಲಿ ಮನ್ನಣೆ ಪಡೆದಿದೆ.

> **ಬೆಂಗಳೂರನ್ನು ಅತ್ಯುತ್ತಮ ಜಾಗತಿಕ ನಗರವನ್ನಾಗಿ ರೂಪಿಸುವ ಸಲುವಾಗಿ ಜಲಮಂಡಳಿಯು ಸುಸ್ಥಿರ ಜಲ ನಿರ್ವಹಣಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.ಅದರ ಪರಿಣಾಮ ಜಾಗತಿಕ ವೇದಿಕೆಯಲ್ಲಿ ಸಿಕ್ಕಿರುವ ಬಹುದೊಡ್ಡ ಮನ್ನಣೆಯಾಗಿದೆ. ನಗರದ ನಾಗರಿಕರಿಗೆ ಸದಾ ವಿಶ್ವದರ್ಜೆಯ ಸೇವೆ ಒದಗಿಸಲು ಜಲಮಂಡಳಿಯು ಬದ್ಧವಾಗಿದೆ.**
> ■ **ಡಾ. ರಾಮ್ ಪ್ರಸಾತ್ ಮನೋಹರ್,** ಜಲಮಂಡಳಿ ಅಧ್ಯಕ್ಷ

ಜತೆಗೆ ಬೆಂಗಳೂರಿನ ನೀರಿನ ಬವಣೆ ನೀಗಿಸಲು ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ ಹಾಗೂ ಬೃಹತ್ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯು ಸಹ ವಾಟರ್ ಪ್ರಾಜೆಕ್ಟ್ ಆಫ್ ದಿ ಇಯರ್ ಜಾಗತಿಕ ಟಾಪ್ ಐದು ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಜಲ ನಿರ್ವಹಣಾ ತಜ್ಞರ ವಿಶೇಷ ಪ್ರಶಂಸೆಗೆ ಪಾತ್ರವಾಗಿದೆ.

ಈ ಪ್ರತಿಷ್ಠಿತ ಗ್ಲೋಬಲ್ ವಾಟರ್ ಸಮಿಟ್‌ನಲ್ಲಿ ಜಲಮಂಡಳಿಯ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಪ್ರತಿನಿಧಿಸಿ ವಿಶ್ವದ ಪ್ರಮುಖ ಜಲ ನಿರ್ವಹಣಾ ನಾಯಕರು ಹಾಗೂ ತಜ್ಞರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ.

ಜೇನು ದಿನಾಚರಣೆ



ವಿಶ್ವ ಜೇನು ದಿನಾಚರಣೆ ಅಂಗವಾಗಿ ಜಿಕೆವಿಕೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ರೀತಿಯ ಜೇನು ಹಾಗೂ ಜೇನು ಪೆಟ್ಟಿಗೆಯನ್ನು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ವೀಕ್ಷಿಸಿದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ. ಎ.ಎಚ್.ರಾಜಾಸಾಬ್, ಡಾ.ಸಚಿನ್ ಸುರೋಶೆ ಇದ್ದರು.

ಕಿರುಸುದ್ದಿ

ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ವೇಗ

• **ಕೆಂಗೇರಿ:** ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ವೇಗ ಹೆಚ್ಚಿಸಲಾಗಿದೆ ಎಂದು ಶಾಸಕ ಎಸ್ .ಟಿ.ಸೋಮಶೇಖರ್ ಹೇಳಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ವಾರ್ಡ್‌ನ ಸನ್‌ಸಿಟಿ ಅರುಂಧತಿನಗರ ಹಾಗೂ ಮಾರಪ್ಪ ಬಡಾವಣೆಯ ಮಾರಮ್ಮ ದೇವಸ್ಥಾನ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 12 ವಾರ್ಡ್, 17ಗ್ರಾಮ ಪಂಚಾಯಿತಿಗಳಲ್ಲಿನ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುವಂತೆ ಗ್ರಾಮೀಣ ಪ್ರದೇಶದ ಪ್ರತಿ ಹಳ್ಳಿಗಳಿಗೂ ಉತ್ತಮ ರಸ್ತೆ ನಿರ್ಮಾಣ, ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಕೆಂಗೇರಿ ಬ್ಲಾಕ್ ಅಧ್ಯಕ್ಷ ಮೈಲಸಂದ್ರ ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ, ವಾರ್ಡ್ ಅಧ್ಯಕ್ಷ ಟಿ. ಪ್ರಭಾಕರ್, ವಾರ್ಡ್ ಅಧ್ಯಕ್ಷ ಪುರುಷೋತ್ತಮ, ಮಾಜಿ ಉಪಾಧ್ಯಕ್ಷ ಅಮನ್ ಉಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಕತಾರ್ ಕರ್ನಾಟಕ ಸಂಘಕ್ಕೆ ಸುಬ್ರಹ್ಮಣ್ಯ ಆಯ್ಕೆ

• **ಬೆಂಗಳೂರು:** ಕರ್ನಾಟಕ ಸಂಘ ಕತಾರ್ 2026–2028ನೇ ಸಾಲಿನ ನೂತನ ಆಡಳಿತ ಸಮಿತಿಯನ್ನು ಐಸಿಸಿ ಸಭಾಂಗಣದಲ್ಲಿ ನಡೆದ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಆಯ್ಕೆ ಮಾಡಲಾಯಿತು. ಸಂಘದ 15ನೇ ಅಧ್ಯಕ್ಷರಾಗಿ ಸುಬ್ರಹ್ಮಣ್ಯ ಹೆಬ್ಬಾಗಿಲು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕುಂದಾಪುರ ಬೈಂದೂರಿನ ಸುಬ್ರಮಣ್ಯ ಹೆಬ್ಬಾಗಿಲು ಅವರು ಭಾರತೀಯ ಸಮುದಾಯದಲ್ಲಿ ಸಾಮಾಜಿಕ ಮತ್ತು ಸಮುದಾಯ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೇ ಈ ಹಿಂದೆ ಭಾರತೀಯ ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷರಾಗಿ, ಭಾರತೀಯ ಕ್ರೀಡಾ ಕೇಂದ್ರದ ಸಲಹಾ ಮಂಡಳಿ ಸದಸ್ಯರಾಗಿ ಹಾಗೂ ಭಾರತೀಯ ಸಮುದಾಯ ಹಿತಚಿಂತಕ ವೇದಿಕೆಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲಾ ಸಂಸ್ಥೆಗಳು ಭಾರತೀಯ ರಾಯಭಾರ ಕಚೇರಿಯ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

5ಜಿ ಸ್ಲೈಸಿಂಗ್ ತಂತ್ರಜ್ಞಾನ ಆಧಾರಿತ ಸೌಲಭ್ಯ

• **ಬೆಂಗಳೂರು:** ಏರ್‌ಟೆಲ್ ಪೋಸ್ಟ್‌ಪೇಯ್ಡ್ ಗ್ರಾಹಕರಿಗೆ ಅತ್ಯುನ್ನತ ಹಾಗೂ ಸ್ಥಿರವಾದ ನೆಟ್‌ವರ್ಕ್ ಅನುಭವವನ್ನು ನೀಡುವ ಸಲುವಾಗಿ 5ಜಿ ಸ್ಲೈಸಿಂಗ್ ತಂತ್ರಜ್ಞಾನ ಆಧಾರಿತ ಹೊಸ ಪ್ರಯಾರಿಟಿ ಪೋಸ್ಟ್‌ಪೇಯ್ಡ್ ಸೌಲಭ್ಯವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಉದ್ಯೋಗ, ವೃತ್ತಿಪರ ಕೆಲಸಗಳು, ಮನರಂಜನೆ ಅಥವಾ ಆನ್‌ಲೈನ್ ಮೀಟಿಂಗ್‌ಗಳಿಗಾಗಿ ಯಾವುದೇ ಅಡೆತಡೆಯಿಲ್ಲದ ಕನೆಕ್ಟಿವಿಟಿಯನ್ನು ಬಯಸುವ ಬಿಡುವಿಲ್ಲದ ಗ್ರಾಹಕರಿಗಾಗಿಯೇ ಈ ಸೇವೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಈ ವಿಶೇಷ ಸೇವೆಗಾಗಿ ಏರ್‌ಟೆಲ್ ತನ್ನ ಹಾಲಿ 5ಜಿ ನೆಟ್‌ವರ್ಕ್ ಅನ್ನು ಸುಧಾರಿತ ಸಾಮರ್ಥ್ಯದ ಸ್ಲೈಸಿಂಗ್ ತಂತ್ರಜ್ಞಾನದೊಂದಿಗೆ ಮೇಲ್ದರ್ಜೆಗೆ ಏರಿಸಿದೆ. ಈ ತಂತ್ರಜ್ಞಾನವು ನೆಟ್‌ವರ್ಕ್‌ನ ಒಟ್ಟಾರೆ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ, ಹೆಚ್ಚಿನ ಡೇಟಾ ಸಾಮರ್ಥ್ಯವನ್ನು ಸೃಷ್ಟಿಸುತ್ತದೆ. ಈ ಹೆಚ್ಚುವರಿ ಸಾಮರ್ಥ್ಯವನ್ನು ನಿರ್ದಿಷ್ಟವಾಗಿ ಬಳಸಿಕೊಂಡು, ನೆಟ್‌ವರ್ಕ್ ದಟ್ಟಣೆ ಇರುವ ಪ್ರದೇಶಗಳಲ್ಲೂ ಪ್ರಯಾರಿಟಿ ಗ್ರಾಹಕರಿಗೆ ಯಾವುದೇ ವೇಗ ಮಿತಿ ಇಲ್ಲದೆ ಅತ್ಯುತ್ತಮ ಡಿಜಿಟಲ್ ಅನುಭವವನ್ನು ನೀಡಲು ಇದು ನೆರವಾಗಲಿದೆ.

ಕುಮಾರಸ್ವಾಮಿ ಜತೆ ದೇವೇಗೌಡರೂ ಬರಲಿ | ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು

ಎಚ್‌ಡಿಕೆಯ ಪಂಥಾಹ್ವಾನ ಸ್ವೀಕಾರ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಕುಮಾರಸ್ವಾಮಿ ಅವರು ಪಂಥಾಹ್ವಾನ ಕರೆದಿದ್ದಾರಂತೆ. ಅವರ ಪಂಥಾಹ್ವಾನವನ್ನು ನಾನು ಸ್ವೀಕರಿಸುವೆ. ನನಗೆ ಮೂರು ದಿನ ಸಮಯ ಸಾಕು. ಯಾವತ್ತು ಸಮಯ ನಿಗದಿ ಮಾಡುವಿರೋ ನಾನು ಅಂದು ತಯಾರಿದ್ದೇನೆ. ಜಾಗ ಹಾಗೂ ಸಮಯ ಅವರೇ ನಿಗದಿ ಮಾಡಲಿ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಬುಧವಾರ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಆ ಭಾಗದ ರೈತರೊಂದಿಗೆ ಸಭೆ ನಡೆಸಿ ಚರ್ಚಿಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ರಿಯಲ್ ಎಸ್ಟೇಟ್ ಮಾಫಿಯಾ ಮಾಡಿದವರು ಯಾರು? ಡಿಎಲ್ ಎಫ್ ಗೆ ಮಾರಿದವರು ಯಾರು? ಅವರ ಮಗ ಪಂಥಾಹ್ವಾನ ನೀಡಿದ್ದಾರಲ್ಲವೇ ಅವರ ಜೊತೆ ದೇವೇಗೌಡರು ಚರ್ಚೆಗೆ ಬರಲಿ ಎಂದರು.

ಪಂಥಾಹ್ವಾನದ ಬಗ್ಗೆ ರೈತರಿಗೆ ಹೇಳಿದಾಗ. ಅಣ್ಣ ನೀವು ಬೇಡ ನಾವೇ ಪಂಥಾಹ್ವಾನ ಸ್ವೀಕರಿಸುತ್ತೇವೆ, ನಾವೇ ಅವರಿಗೆ ಉತ್ತರ ಕೊಡುತ್ತೇವೆ ಎಂದು ರೈತರೇ ಹೇಳಿದ್ದಾರೆ. ಕಬ್ಬಿಣ, ಸ್ಟೀಲ್ ಬೆಲೆ ಟನ್ ಗೆ ಐದು ಸಾವಿರ ಹೆಚ್ಚಳವಾಗಿದೆ. ಕುಮಾರಣ್ಣನವರೇ ಇದರ ಸಚಿವರು. ಇದನ್ನು ಮೊದಲು ಇದನ್ನು ಕಡಿಮೆ ಮಾಡಿಸಲು ಹೇಳಿ ಆನಂತರ ಪಂಥಾಹ್ವಾನಕ್ಕೆ ಕುಮಾರಸ್ವಾಮಿ ಅವರು ಬರಲಿ ಎಂದು ರೈತರು ನನಗೆ ಸಲಹೆ ನೀಡಿದರು. ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾದ ಮೇಲೆ ಇದರ ಬೆಲೆಯೂ ಜಾಸ್ತಿಯಾಗಲಿದೆ. ಮೊದಲು ನೀವು ಕುಮಾರಸ್ವಾಮಿ ಅವರನ್ನು ಇದರ ಬಗ್ಗೆ ಪ್ರಶ್ನಿಸಿ ಎಂದು ರೈತರು ನನಗೆ ಹೇಳಿದರು ಎಂದರು.

ದೇವೇಗೌಡರು ಮೋದಿಯವರಿಗೆ, ಅವರ ಬೇರೆ ನಾಯಕರಿಗೆ ಪತ್ರ ಬರೆಯಬೇಕು. ನಮ್ಮ ನಾಯಕರಿಗೆ ಪತ್ರ ಬರೆದರೆ ಏನು ಪ್ರಯೋಜನ. ರಾಹುಲ್ ಗಾಂಧಿ ಅವರು ಅಧಿಕಾರದಲ್ಲಿಲ್ಲ. ಅವರು ಯಾಕೆ ಇದಕ್ಕೆಲ್ಲಾ ಬಾಯಿ ಹಾಕಬೇಕು. ದೇವೇಗೌಡರು ಏಕೆ ಏನೂ ಮಾಡಲು ಆಗಲಿಲ್ಲ. ಅವರು ಆರೋಪ ಮಾಡಲಿ. ನಮ್ಮ ಸಿದ್ದರಾಮಯ್ಯ ಅವರ ಬಗ್ಗೆಯೂ ಬಹಳ ಪ್ರೀತಿ ತೋರಿಸುತ್ತಿದ್ದಾರೆ ಎಂದರು. ಈ ಪ್ರದೇಶವನ್ನು ರೆಡ್ ಜೋನ್ ಎಂದು ತೀರ್ಮಾನ ಮಾಡಲಾಗಿತ್ತು. ಅಂದರೆ ಯಾರು ಸಹ ಭೂಮಿ ಮಾರಾಟ ಮಾಡುವಂತಿಲ್ಲ. ಬೇರೆ ಯಾರಿಗೂ ಕೂಡ ವಹಿವಾಟು ಮಾಡುವಂತಿಲ್ಲ ಎಂದು ಕಾನೂನು ಮಾಡಲಾಗಿತ್ತು. ನ್ಯಾಯಲಯ ಕೂಡ ಯೋಜನೆ ಕೈ ಬಿಡಲು ನಿರಾಕರಿಸಿತ್ತು. ಈ ಕಾರಣಕ್ಕೆ ನಾನು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮುಂದುವರೆಸುತ್ತಿದ್ದೇನೆ. ಯಾವ ರೈತರೂ ಸಹ ಭೂಮಿ ಮಾರಿಕೊಳ್ಳಬೇಡಿ ಎಂದು ಮನವರಿಕೆ ಮಾಡಿಕೊಟ್ಟಿದ್ದೇನೆ. ಏಕೆಂದರೆ ನಿಮಗೆಲ್ಲರಿಗೂ ಇದರ ಬೆಲೆ ಅರ್ಥವಾಗುವುದಿಲ್ಲ ಎಂದು ಹೇಳಿದ್ದೇನೆ. ಎಲ್ಲರೂ ಸಹ ಇದಕ್ಕೆ ಒಪ್ಪಿಕೊಂಡಿದ್ದಾರೆ ಎಂದರು.



ನಾವೇ ಉತ್ತರ ಕೊಡುತ್ತೇವೆಂದ ಬಿಡದಿ ಭಾಗದ ರೈತರು

ಪಂಥಾಹ್ವಾನದ ಬಗ್ಗೆ ರೈತರಿಗೆ ಹೇಳಿದಾಗ. ಅಣ್ಣ ನೀವು ಬೇಡ ನಾವೇ ಪಂಥಾಹ್ವಾನ ಸ್ವೀಕರಿಸುತ್ತೇವೆ, ನಾವೇ ಅವರಿಗೆ ಉತ್ತರ ಕೊಡುತ್ತೇವೆ ಎಂದು ರೈತರೇ ಹೇಳಿದ್ದಾರೆ. ಕಬ್ಬಿಣ, ಸ್ಟೀಲ್ ಬೆಲೆ ಟನ್ ಗೆ ಐದು ಸಾವಿರ ಹೆಚ್ಚಳವಾಗಿದೆ. ಕುಮಾರಣ್ಣನವರೇ ಇದರ ಸಚಿವರು. ಇದನ್ನು ಮೊದಲು ಇದನ್ನು ಕಡಿಮೆ ಮಾಡಿಸಲು ಹೇಳಿ ಆನಂತರ ಪಂಥಾಹ್ವಾನಕ್ಕೆ ಕುಮಾರಸ್ವಾಮಿ ಅವರು ಬರಲಿ ಎಂದು ರೈತರು ನನಗೆ ಸಲಹೆ ನೀಡಿದರು.

ಬಿಡದಿ ಭಾಗದ ರೈತರೊಂದಿಗೆ ಚರ್ಚಿಸಲಾಗಿದೆ

ಬಿಡದಿ ಟೌನ್‌ಶಿಪ್‌ಗೆ ಜಮೀನು ನೀಡಿರುವ ರೈತರಿಗೆ ಜೂನ್ ಮೊದಲನೇ ವಾರದಿಂದ ಪರಿಹಾರದ ಹಣ ಬಿಡುಗಡೆಗೆ ಕ್ರಮವಹಿಸುತ್ತೇನೆ. ಮೂರು, ಮೂರು ಹಳ್ಳಿಗಳನ್ನು ಸೇರಿಸಿ ಪ್ರತ್ಯೇಕವಾದ ಅಂತಿಮ ಹಂತದ ನೋಟಿಫಿಕೇಶನ್ ಮಾಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಬಿಡದಿ ಟೌನ್ ಶಿಪ್ ವಿಚಾರವಾಗಿ ಅಲ್ಲಿನ ಶೇ.80 ರಷ್ಟು ರೈತರು ಒಪ್ಪಿಗೆ ನೀಡಿದ್ದು, ಆದಷ್ಟು ಬೇಗ ಪರಿಹಾರ ವಿತರಿಸಿ ಎಂದು ಒತ್ತಾಯ ಮಾಡಿದ್ದಾರೆ. ಭೂ ರಹಿತರ ಬಗ್ಗೆ ಕಾಳಜಿ ವಹಿಸಿದ್ದು ಈ ವಿಚಾರ ಬಗೆಹರಿಸಲಾಗುವುದು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಭೂಸ್ವಾಧೀನ ರೈತರಿಗೆ ದ್ರೋಹ: ಅಶೋಕ

• **ಬೆಂಗಳೂರು:** ಬಿಡದಿಯಲ್ಲಿ ಭೂಸ್ವಾಧೀನ ಮಾಡಲು ಸರ್ಕಾರ ಮುಂದಾಗಿರುವುದು ರೈತರಿಗೆ ಮಾಡುತ್ತಿರುವ ದ್ರೋಹ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿಯಲ್ಲಿ ತೆಂಗು, ಮಾವು, ರೇಷ್ಮೆ ಹಾಗೂ ಹಾಲು ಉತ್ಪಾದನೆ ಸಮೃದ್ಧವಾಗಿರುವ ಫಲವತ್ತಾದ ಕೃಷಿ ಭೂಮಿಯಿದೆ. ಅಂತಹ ಪ್ರದೇಶವನ್ನು ಒತ್ತುವರಿ ಮಾಡಿ ರೈತರನ್ನು ಬೀದಿಗೆ ತರುವ ಕೆಲಸ ನಡೆಯುತ್ತಿದೆ ಎಂದರು.



ಬಿಜೆಪಿ ಅಧಿಕಾರಕ್ಕೆ ಬಂದಾಗ ಮೂಲ ಹೆಸರು: ಅಭಿವೃದ್ಧಿ ಮಾಡಲು ಯೋಗ್ಯತೆ ಇಲ್ಲದವರು ಹೆಸರು ಬದಲಾಯಿಸಿ ಪ್ರಚಾರ ಪಡೆಯಲು ಯತ್ನಿಸುತ್ತಿದ್ದಾರೆ. ಹಣ ನೀಡದೆ, ಯೋಜನೆ ತರದೆ ಕೇವಲ ಹೆಸರನ್ನು ಬಳಸುವುದರಿಂದ ಜನ ಮೆಚ್ಚುವುದಿಲ್ಲ. ಬಿಜೆಪಿ ಸರ್ಕಾರ ಬಂದ ಬಳಿಕ ಮೂಲ ಹೆಸರನ್ನೇ ಮರುಸ್ಥಾಪಿಸಲಾಗುವುದು. ಬ್ರ್ಯಾಂಡ್ ಬೆಂಗಳೂರು, ಟನಲ್ ಬೆಂಗಳೂರು ಎಂದು ಹೇಳಿದರೂ ಇಂದು ನರಕ, ಕಸದ ಬೆಂಗಳೂರು, ಗುಂಡಿಗಳ ಬೆಂಗಳೂರು ಆಗಿದೆ. ಜನರ ಗಮನ ಬೇರೆಡೆ ಸೆಳೆಯಲು ಹೆಸರಿನ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸೋಲುವ ಭಯದಿಂದ ಜಿಬಿಎ ಚುನಾವಣೆ ಮುಂದೂಡಿಕೆ

ಸೋಲುವ ಭಯದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಕಾಂಗ್ರೆಸ್ ಸರ್ಕಾರ ಪದೇ ಪದೇ ಮುಂದೂಡುತ್ತಿದೆ. ಸಮೀಕ್ಷೆಯಲ್ಲಿ ಗೆಲ್ಲುತ್ತೇವೆ ಎನ್ನುವ ವಿಶ್ವಾಸ ಇದ್ದರೆ ಚುನಾವಣೆ ಏಕೆ ನಡೆಸುತ್ತಿಲ್ಲ? ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಪ್ರಶ್ನಿಸಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹಿಂದೆ ಇದ್ದ 198 ವಾರ್ಡ್‌ಗಳ ಆಧಾರದ ಮೇಲೆ ಚುನಾವಣೆ ನಡೆಸಿದ್ದರೆ ಇಷ್ಟೊತ್ತಿಗೆ ಚುನಾವಣೆ ಮುಗಿದಿರುತ್ತಿತ್ತು. ಆದರೆ, ಬೆಂಗಳೂರನ್ನು ಐದು ಭಾಗಗಳಾಗಿ ವಿಭಜಿಸಿದ ಬಳಿಕ ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಐದು ಕಡೆಯೂ ಸೋಲು ಖಚಿತವಾಗಿದೆ ಎಂಬ ವರದಿ ಬಂದಿರುವುದರಿಂದ ಸರ್ಕಾರ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಸೋಲು ಖಚಿತವಾದ ಬಳಿಕ ಪ್ರತಿಪಕ್ಷಗಳ ಮೇಲೆ ಆರೋಪ ಹೊರಿಸುವ ಕೆಲಸ ಮಾಡಲಾಗುತ್ತಿದೆ.

ಬಸಪ್ಪ ಸಾಲುಂಡಿಗೆ ವಿಸಿಟಿಂಗ್ ಪ್ರೊಫೆಸರ್ ಸ್ಥಾನಮಾನ

• **ಬೆಂಗಳೂರು:** ರಷ್ಯಾದ ಪ್ರತಿಷ್ಠಿತ ಸೆಚ್‌ನೋವ್ ಫಸ್ಟ್ ಮಾಸ್ಕೋ ಸ್ಟೇಟ್ ಮೆಡಿಕಲ್ ಯುನಿವರ್ಸಿಟಿ (ಎಸ್‌ಎಂಎಸ್‌ಎಂ)ಯು ಮೈಸೂರು ವಿಶ್ವವಿದ್ಯಾ ಲಯದ ಸಾವಯವ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಬಸಪ್ಪ ಸಾಲುಂಡಿ ಅವರಿಗೆ ವಿಸಿಟಿಂಗ್ ಪ್ರೊಫೆಸರ್ ಎಂಬ ಅಧಿಕೃತ ಸ್ಥಾನಮಾನ ನೀಡಿ ಗೌರವಿಸಿದೆ.



ಎಸ್‌ಎಂಎಸ್‌ಎಂ ವಿಶ್ವವಿದ್ಯಾಲಯದ ಮೊದಲ ಉಪ-ರೆಕ್ಟರ್ ಎ.ಎ.ಸ್ವಿಸ್ಟುನೋವ್ ಅವರು ಈ ನೇಮಕಾತಿಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಚೀನಾದ ಹೈಯಾನ್ ಹು ಹಾಗೂ ದಕ್ಷಿಣ ಕೊರಿಯಾದ ಜಂಗ್ ಹ್ವಾನ್ ಬೇಕ್ ಸೇರಿದಂತೆ ವಿವಿಧ ದೇಶಗಳ ಖ್ಯಾತ ಶೈಕ್ಷಣಿಕ ತಜ್ಞರೊಂದಿಗೆ ಭಾರತದಿಂದ ಡಾ. ಬಸಪ್ಪ ಸಾಲುಂಡಿ ಅವರನ್ನು ಆಯ್ಕೆ ಮಾಡಲಾ ಗಿದೆ. ವಿಶ್ವವಿದ್ಯಾಲಯದ ಪ್ರಕಟಣೆಯ ಪ್ರಕಾರ, ಸೆಚ್‌ನೋವ್ ಯುನಿವರ್ಸಿಟಿ ವಿಸಿಟಿಂಗ್ ಪ್ರೊಫೆಸರ್ ಸ್ಥಾನಮಾನವು 2025ರ ನ. 15ರಿಂದ ಜಾರಿಗೆ ಬಂದಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬಾಹ್ಯ ತಜ್ಞರಿಗೆ ನೀಡುವ ಗೌರವ ಪೂರ್ಣ ಜೀವಿತಾವಧಿಯ ಬಿರುದಾಗಿದೆ. ಈ ಸ್ಥಾನಮಾನವು ಯಾವುದೇ ಪೂರ್ಣಕಾಲಿಕ ಉದ್ಯೋಗ ಅಥವಾ ಸಂಬಳವನ್ನು ಒಳಗೊಂಡಿರುವುದಿಲ್ಲ ಎಂದು ತಿಳಿಸಲಾಗಿದೆ.

ನಾಳೆ ನೇರ ಫೋನ್ ಇನ್ ಕಾರ್ಯಕ್ರಮ

• **ಬೆಂಗಳೂರು:** ಜಲಮಂಡಳಿಯಿಂದ ಜಲಮಂಡಳಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೇ 22 ರಂದು ಬೆಳಗ್ಗೆ 9:30 ರಿಂದ 10:30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ, ಪ್ರದೇಶದಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ,ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ದೂ. 080-22945119 ಮತ್ತು 080-22229639 ಸಂಖ್ಯೆಯನ್ನು ಸಾರ್ವಜನಿಕರು ಸಂಪರ್ಕಿಸಬಹುದಾಗಿದ್ದು, ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡುವಂತೆ ಜಲಮಂಡಳಿ ತಿಳಿಸಿದೆ.

ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ

» ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡಿ
» ಘನ ತ್ಯಾಜ್ಯ ನಿರ್ವಹಣೆ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ
» ಆ ಮೂಲಕ ಲಭ್ಯವಾಗುವ ಸ್ಥಳವನ್ನು ಎಬಿಸಿಗೆ ಬಳಸಿ

• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡುವಂತೆ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸುಮನಹಳ್ಳಿಯಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಾಣ ಕಾಮಗಾರಿ ಪರಿಶೀಲನೆ ನಡೆಸಿದ ಅವರು, ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡಿ, ಒಂದು ತಿಂಗಳೊಳಗೆ ಕನಿಷ್ಠ ನೂರು ಶ್ವಾನಗಳಿಗೆ ಆಶ್ರಯ ಒದಗಿಸುವಂತಾಗಬೇಕು. ಬಳಿಕ ಹಂತ ಹಂತವಾಗಿ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ. ಅದೇ ಸಂಕೀರ್ಣದಲ್ಲಿ ಪ್ರಾಣಿ ಸಂತಾನಹರಣ ಶಸ್ತ್ರಚಿಕಿತ್ಸೆ (ಎಬಿಸಿ)ಕೇಂದ್ರ ಹಾಗೂ ಘನ ತ್ಯಾಜ್ಯ ನಿರ್ವಹಣೆ ಘಟಕವಿದ್ದು, ಘನ ತ್ಯಾಜ್ಯ ನಿರ್ವಹಣೆ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ, ಎಬಿಸಿ ಸಾಮರ್ಥ್ಯ ಹೆಚ್ಚಿಸುವಂತೆ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಆಯುಕ್ತರು ಮಾನವ ಮತ್ತು ಪ್ರಾಣಿಗಳ ವಿದ್ಯುತ್ ಚಿತಾಗಾರ ಪರಿಶೀಲಿಸಿ ಅಗತ್ಯ ನಿರ್ದೇಶನ ನೀಡಿದ್ದಾರೆ.

ಚಿನ್ನ ಖರೀದಿಸುವ ನೆಪದಲ್ಲಿ ದರೋಡೆ

• **ಬೆಂಗಳೂರು:** ಸಗಟು ದರದಲ್ಲಿ ಚಿನ್ನ ಖರೀದಿಸುವುದಾಗಿ ನಂಬಿಸಿ ಉದ್ಯಮಿಯೊಬ್ಬರಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ದೋಚಿ ವಂಚಿಸಿರುವ ಘಟನೆಯೊಂದು ಮಲ್ಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ನಗರತ್ ಪೇಟೆಯಲ್ಲಿರುವ ಮೆಹ್ತಾ ಜ್ಯುವೆಲ್ಲರಿ ಶಾಪ್ ಮಾಲೀಕರನ್ನು ನಂಬಿಸಿದ ಖದೀಮರು ಬರೋಬ್ಬರಿ 3 ಕೋಟಿ ರೂ. ಮೌಲ್ಯದ 1.850 ಕೆ.ಜಿ. ಚಿನ್ನಾಭರಣಗಳೊಂದಿಗೆ ಪರಾರಿಯಾಗಿದ್ದಾರೆ. ಚಿನ್ನ ಕಳೆದುಕೊಂಡ ಉದ್ಯಮಿ ಈ ಸಂಬಂಧ ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳಾದ ಪರೇಶ್ ಸೋನಿ, ಶ್ಯಾಮ್ ಹಾಗೂ ರಾಮಚಂದ್ರ ಅಲಿಯಾಸ್ ಚಂದ್ರಶೇಖರ್ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ.

ಮೆಹ್ತಾ ಜ್ಯುವೆಲ್ಲರಿ ಮಾಲೀಕರಿಗೆ ಕರೆ ಮಾಡಿದ್ದ ಆರೋಪಿ ಪರೇಶ್ ಸೋನಿ, ತಾನು ಮಾಹಿ ಎಂಟರ್‌ಪ್ರೈಸಸ್ ಹೆಸರಿನ ಸಂಸ್ಥೆಯನ್ನು ನಡೆಸುತ್ತಿದ್ದು, ಅದಕ್ಕೆ ಹೋಲ್‌ಸೇಲ್ ದರದಲ್ಲಿ ಭಾರಿ ಪ್ರಮಾಣದ ಚಿನ್ನದ ಆಭರಣಗಳು ಬೇಕಾಗಿವೆ ಎಂದು ನಂಬಿಸಿದ್ದ. ಆರೋಪಿಯ ಮಾತನ್ನು ನಂಬಿದ ಜ್ಯುವೆಲ್ಲರ್ಸ್ ಮಾಲೀಕರು, ಮೇ 16ರಂದು ತಮ್ಮ ಸೇಲ್ಸ್ ಮ್ಯಾನೇಜರ್ ಮಹೇಂದ್ರ ಕುಮಾರ್ ಜೈನ್ ಅವರ ಕೈಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಕೊಟ್ಟು ಮಲ್ಲೇಶ್ವರಂನ ಸಂಪಿಗೆ ರಸ್ತೆಯಲ್ಲಿರುವ ಆರೋಪಿಯ ಕಚೇರಿಗೆ ಕಳುಹಿಸಿಕೊಟ್ಟಿದ್ದರು. ಆದರೆ, ಆರೋಪಿಗಳು ತಮಗೆ ಯಾವುದೇ ಸಂಬಂಧವಿಲ್ಲದ ಕಚೇರಿಯೊಂದರ ಬಾಗಿಲಿನ ಮೇಲೆ ಮಾಹಿ ಎಂಟರ್‌ಪ್ರೈಸಸ್ ಎಂದು ನಕಲಿ ಬೋರ್ಡ್ ಹಾಕಿ ಈ ವ್ಯವಸ್ಥಿತವಾದ ಸಂಚು ರೂಪಿಸಿದ್ದರು ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಮಹೇಂದ್ರ ಕುಮಾರ್ ಆಭರಣಗಳನ್ನು ತಂದಾಗ, ಅವುಗಳ ವಿನ್ಯಾಸವನ್ನು ಪರಿಶೀಲಿಸುವಂತೆ ನಟಿಸಿದ ಪರೇಶ್ ಸೋನಿ, ಪಕ್ಕದ ಕ್ಯಾಬಿನ್‌ನಲ್ಲಿ ಕುಳಿತಿದ್ದ ತನ್ನ ಸಹಚರರಾದ ಶ್ಯಾಮ್ ಹಾಗೂ ಚಂದ್ರಶೇಖರ್‌ಗೆ ಆಭರಣ ಪಟ್ಟಿ ಸಿದ್ಧಪಡಿಸಲು ಸೂಚಿಸಿದ್ದಾನೆ. ತದನಂತರ ಆಭರಣಗಳ ಫೋಟೋ ತೆಗೆಯುವ ನೆಪ ಒಡ್ಡಿ ಪಕ್ಕದ ಕೋಣೆಗೆ ಹೋದ ಆರೋಪಿಗಳು, ಅಲ್ಲಿಂದಲೇ ಒಡವೆಗಳೊಂದಿಗೆ ಹಿಂಬಾಗಿಲಿನಿಂದ ನಾಪತ್ತೆಯಾಗಿದ್ದಾರೆ. ಒಳಗೆ ಹೋದವರು ಎಷ್ಟು ಹೊತ್ತಾದರೂ ಬಾರದಿದ್ದಾಗ ಅನುಮಾನಗೊಂಡ ಮ್ಯಾನೇಜರ್‌ಕೋಣೆಯೊಳಗೆಹೋಗಿಪರಿಶೀಲಿಸಿದಾಗ ಆರೋಪಿಗಳು ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನದೊಂದಿಗೆ ಎಸ್ಕೇಪ್ ಆಗಿರುವುದು ಮತ್ತು ತಾವು ವಂಚನೆಗೆ ಒಳಗಾಗಿರುವುದು ಬೆಳಕಿಗೆ ಬಂದಿದೆ.

ಕೇರಳ ಖಾತೆ ಹಂಚಿಕೆ : ಸಿಎಂಗೆ ವಿತ್ತ, ಚೆನ್ನಿತ್ತಲಗೆ ಗೃಹ, ಅನಿಲ್‌ಗೆ ಕಂದಾಯ

• **ತಿರುವನಂತಪುರಂ:** ನೂತನ ಯುಡಿಎಫ್ ಸರಕಾರದ ಸಚಿವರಿಗೆ ಖಾತೆ ಹಂಚಿಕೆಯನ್ನು ಬುಧವಾರ ಗಜೆಟ್ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದ್ದು, ಇದರಂತೆ, ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಹಣಕಾಸು, ಕಾನೂನು, ಬಂದರು ಖಾತೆಗಳನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡಿದ್ದಾರೆ. ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರಿಗೆ ಗೃಹ ಮತ್ತು ವಿಜಿಲೆನ್ಸ್ ಖಾತೆ (ಇವು ಈ ಹಿಂದೆಲ್ಲ ಮುಖ್ಯಮಂತ್ರಿ ಬಳಿಯಲ್ಲೇ ಇರುತ್ತಿತ್ತು) ಲಭಿಸಿದೆ.

ತೀವ್ರ ಹಗ್ಗಜಗ್ಗಾಟ , ಸಂಧಾನ, ಅನಿಶ್ಚಿತತೆಗಳ ಬಳಿಕ ಯುಡಿಎಫ್ ಸರಕಾರ ಖಾತೆಗಳ ಹಂಚಿಕೆಯನ್ನು ರಾಜ್ಯಪಾಲರಿಗೆ ಸಲ್ಲಿಸಿತ್ತು. ಹಿರಿಯ ನಾಯಕ ಎ.ಪಿ.ಅನಿಲ್ ಕುಮಾರ್ ಅವರಿಗೆ ಅವರಿಗೆ ಕಂದಾಯ ಖಾತೆ ಲಭಿಸಿದ್ದರೆ, ಸನ್ನಿ ಜೋಸೆಫ್ ಅವರಿಗೆ ಸಂಸದೀಯ ವ್ಯವಹಾರಗಳೊಂದಿಗೆ ವಿದ್ಯುತ್ ಇಲಾಖೆ ಲಭಿಸಿದೆ. ಮುಸ್ಲಿಂಲೀಗ್ ನಾಯಕ ಪಿ.ಕೆ.ಕುಂಞಾಲಿಕುಟ್ಟಿ ಅವರಿಗೆ ಕೈಗಾರಿಕೆ ಮತ್ತು ಐಟಿ ಖಾತೆ, ಮುಸ್ಲಿಂಲೀಗ್ ನಾಯಕ ವಿ.ಇ.ಅಬ್ದುಲ್ ಗಫೂರ್‌ಗೆ ಮೀನುಗಾರಿಕಾ ಇಲಾಖೆ ಲಭಿಸಿದೆ.

ಖಾತೆ ಹಂಚಿಕೆ ಬಗ್ಗೆ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ನಡುವೆ ತೀವ್ರ ಚೌಕಾಶಿ ನಡೆದ ಬಳಿಕ ಖಾತೆಗಳ ಹಂಚಿಕೆ ನಡೆದಿದೆ. ಸಂಪುಟದಲ್ಲಿ ಕಡಿಮೆ ಪ್ರಾತಿನಿಧ್ಯ ಹಾಗೂ ಮೀನುಗಾರಿಕಾ ಇಲಾಖೆಯನ್ನು ಮುಸ್ಲಿಂಲೀಗಿಗೆ ನೀಡಿರುವ ಕುರಿತಂತೆ ಲ್ಯಾಟಿನ್ ಕ್ಯಾಥೋಲಿಕ್ ಚರ್ಚ್ ತೀವ್ರ ಆಕ್ಷೇಪ, ಅಸಮಾಧಾನ ವ್ಯಕ್ತಪಡಿಸಿದೆ.

ಸಿಎಂ ಬಳಿ ಇದೀಗ ವಿತ್ತ, ರಾಷ್ಟ್ರೀಯ ಉಳಿತಾಯ, ವಾಣಿಜ್ಯ ತೆರಿಗೆ, ಕೃಷಿ ಆದಾಯ ತೆರಿಗೆ, ಖಜಾನೆ, ಲಾಟರಿ, ರಾಜ್ಯ ಲೆಕ್ಕಪರಿಶೋಧನೆ, ಕೇರಳ ರಾಜ್ಯ ಹಣಕಾಸು ಎಂಟರ್‌ಪ್ರೈಸಸ್‌ಗಳು, ರಾಜ್ಯ ಇನ್ಶೂರೆನ್ಸ್, ಕೇರಳ ಹಣಕಾಸು ನಿಗಮ, ಸ್ಟ್ಯಾಂಪ್ಸ್ ಮತ್ತು ಸ್ಟ್ಯಾಂಪ್ಸ್ ಡ್ಯೂಟಿ, ಬಂದರು, ಕಾನೂನು, ಯೋಜನೆ ಮತ್ತು ಹಣಕಾಸು ವ್ಯವಹಾರ, ಸಾಮಾನ್ಯ ಆಡಳಿತ, ಅಖಿಲ ಭಾರತೀಯ ಸೇವೆ, ವಿಜ್ಞಾನ , ತಂತ್ರಜ್ಞಾನ, ಮಾಲಿನ್ಯ ನಿಯಂತ್ರಣ, ವೈಜ್ಞಾನಿಕ ಸಂಸ್ಥೆಗಳು, ಸಿಬ್ಬಂದಿ, ಆಡಳಿತ ಸುಧಾರಣೆ, ಚುನಾವಣೆ, ಸೈನಿಕ ಕಲ್ಯಾಣ, ವಿಪತ್ತು ಪರಿಹಾರ, ವಿಮಾನ ನಿಲ್ದಾಣ, ಮೆಟ್ರೋ ರೈಲು, ಅಂತಾರಾಜ್ಯನದಿ ನೀರು, ಕರಾವಳಿ ಶಿಪ್ಪಿಂಗ್, ನಾಗರಿಕ ಮತ್ತು ಕ್ರಿಮಿನಲ್ ನ್ಯಾಯ, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ, ಪ್ರಿಂಟಿಂಗ್ ಅಂಡ್ ಸ್ಟೇಷನರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ಇವೆ.

ಚೆನ್ನಿತ್ತಲ ಅವರಿಗೆ ಗೃಹ, ವಿಜಿಲೆನ್ಸ್, ಅಗ್ನಿಶಾಮಕ, ಜೈಲು, ತೆಂಗಿನ ನಾರು ಉದ್ಯಮ ಇಲಾಖೆಗಳು ಲಭಿಸಿದ್ದು, ಭೂಮಿ,ಕಂದಾಯ , ಭೂಸುಧಾರಣೆ ಅನಿಲ್ ಕುಮಾರ್‌ಗೆ, ಕೆ.ಮುರಳೀಧರನ್‌ಗೆ ಆರೋಗ್ಯ , ದೇವಸ್ವಂ, ಮೆಡಿಕಲ್ ಎಜುಕೇಷನ್, ಮೆಡಿಕಲ್ ಯುನಿವರ್ಸಿಟಿ, ದೇಶೀ ವೈದ್ಯಪದ್ಧತಿ, ಆಯುಷ್, ಡ್ರಗ್ ಕಂಟ್ರೋಲ್, ಫುಡ್ ಸೇಫ್ಟಿ ಇಲಾಖೆಗಳು ಲಭಿಸಿವೆ. ಕುಂಞಾಲಿಕುಟ್ಟಿಗೆ ಕೈಗಾರಿಕೆ, ವಾಣಿಜ್ಯ , ಐಟಿ, ಎವಿ, ಸ್ಟಾರ್ಟ್‌ಅಪ್‌ಗಳು, ಗಣಿ, ಭೂ, ಕೈಮಗ್ಗ, ಜವಳಿ, ಮಾನ್ಸ್ ಜೋಸೆಫ್ ಅವರಿಗೆ ನೀರಾವರಿ, ಅಂತರ್ಜಲ ಇಲಾಖೆ, ನೀರು ಪೂರೈಕೆ, ನೈರ್ಮಲ್ಯ, ಹೌಸಿಂಗ್, ಶಿಬು ಬೇಬಿ ಜಾನ್‌ಗೆ ಅರಣ್ಯ, ಕೌಶಲ್ಯಾಭಿವೃದ್ಧಿ, ಅನೂಪ್ ಜಾಕೋಬ್‌ಗೆ ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ, ಸಿ.ಪಿ.ಜಾನ್‌ಗೆ ಸಾರಿಗೆ, ಜಲಸಾರಿಗೆ, ಮೋಟಾರು ವಾಹನ, ಸಂಶುದ್ದೀನ್‌ಗೆ ಸಾಮಾನ್ಯ ಶಿಕ್ಷಣ, ಸಾಕ್ಷರತೆ, ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತ ಇಲಾಖೆ, ಪಿ.ಸಿ.ವಿಷ್ಣುನಾಥ್‌ಗೆ ಪ್ರವಾಸೋದ್ಯಮ, ಸಂಸ್ಕೃತಿ, ಕೆಎಸ್‌ಎಫ್‌ಡಿಸಿ, ಚಲನಚಿತ್ರ ಅಕಾಡೆಮಿ, ಸಂಸ್ಕೃತಿ ಸೇವೆಗಳು, ಕಲ್ಯಾಣ ನಿಧಿ ಇಲಾಖೆ, ರೋಜಿ ಎಂ.ಜಾನ್‌ಗೆ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಿಶ್ವವಿದ್ಯಾಲಯ (ಕೃಷಿ, ಪಶುಸಂಗೋಪನಾ, ಮೀನುಗಾರಿಕಾ, ವೈದ್ಯಕೀಯ, ಡಿಜಿಟಲ್ ವಿಶ್ವವಿದ್ಯಾಲಗಳನ್ನು ಹೊರತುಪಡಿಸಿ), ಪ್ರವೇಶ ಪರೀಕ್ಷೆ, ಬಿಂದು ಕೃಷ್ಣ ಅವರಿಗೆ ಕಾರ್ಮಿಕ, ಹೈನುಗಾರಿಕೆ, ಹಾಲು ಉತ್ಪಾದಕ ಸಹಕಾರಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಎಂ.ಲಿಜುಗೆ ಸಹಕಾರ ಮತ್ತು ಅಬಕಾರಿ, ಕೆ.ಎಂ.ಶಾಜಿಗೆ ಪಂಚಾಯತ್, ನಗರಪಾಲಿಕೆ, ಮಹಾನಗರಪಾಲಿಕೆ, ನಗರ ಯೋಜನೆ, ಗ್ರಾಮೀಣ ಅಭಿವೃದ್ಧಿ, ಪಿ.ಕೆ.ಬಶೀರ್, ಲೋಕೋಪಯೋಗಿ ಇಲಾಖೆ,ವಿ.ಇ.ಅಬ್ದುಲ್ ಗಫೂರ್‌ಗೆ ಮೀನುಗಾರಿಕೆ, ಹಾರ್ಬರ್ ಇಂಜಿನಿಯರಿಂಗ್, ಸಾಮಾಜಿಕ ನ್ಯಾಯ, ಟಿ.ಸಿದ್ದಿಕ್‌ಗೆ ಕೃಷಿ, ಮಣ್ಣಿನ ಸರ್ವೇ-ಸಂರಕ್ಷಣೆ, ಕೇರಳ ಕೃಷಿ ವಿವಿ, ವೇರ್‌ಹೌಸ್ ಕಾರ್ಪೊರೇಷನ್, ಕೆ.ಎ.ತುಳಸಿ ಅವರಿಗೆ ಪರಿಶಿಷ್ಟ ಜಾತಿ-ಪಂಗಡ,ಹಿಂದುಳಿದ ವರ್ಗಗಳ ಕಲ್ಯಾಣ, ಒ.ಜೆ.ಜನೀಶ್‌ಗೆ ಕ್ರೀಡೆ, ಯುವಜನ, ಮೃಗಾಲಯ, ಮ್ಯೂಸಿಯಂ, ನೋಂದಣಿ, ಆರ್ಕಿಯಾಲಜಿ ಇಲಾಖೆಗಳು ಲಭಿಸಿವೆ.

ಕಿರುಸುದ್ದಿ

ಎಸ್‌ಎಸ್‌ಎಲ್‌ಸಿ: ಮರು ಮೌಲ್ಯಮಾಪನ; ಅಂಕ ಹೆಚ್ಚಳ




• **ಬಂಟ್ವಾಳ:** 2025–26 ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ ಬಟ್ವಾಳ ಎಸ್.ವಿ.ಎಸ್. ದೇವಳ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯಾದ ಧೃವಿ ಬಿ. 618 ರ ಬದಲಾಗಿ 620 ಅಂಕ ಗಳಿಸಿ ರಾಜ್ಯದಲ್ಲಿ ಆರನೇ ಸ್ಥಾನಿಯಾಗಿದ್ದಾಳೆ. ಹಾಗೂ ಗಗನ್ ಆಳ್ವ 616 ರ ಬದಲಾಗಿ 619 ಅಂಕ ಗಳಿಸಿ ರಾಜ್ಯದಲ್ಲಿ ಏಳನೇ ಸ್ಥಾನಿಯಾಗಿದ್ದಾರೆ. ವಿದ್ಯಾರ್ಥಿ ಗಳಿಗೆ ಶ್ರೀ ದೇವಳದ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯಿನಿಯವರು, ಶಿಕ್ಷಕ–ಶಿಕ್ಷಕೇತರ ವೃಂದದವರು ಶುಭ ಹಾರೈಸಿದ್ದಾರೆ.

ಡಿ.ಇಎಲ್.ಇಡಿ ವ್ಯಾಸಂಗಕ್ಕೆ ಅರ್ಜಿ ಆಹ್ವಾನ

• **ಮಂಗಳೂರು:** ಮಂಗಳೂರಿನ ಕೊಡಿಯಾಲ್‌ಬೈಲ್‌ನಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಇಲ್ಲಿ 2026–27ನೇ ಸಾಲಿಗೆ ಡಿ.ಇಎಲ್.ಇಡಿ ವ್ಯಾಸಂಗಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡಾ 45ಕ್ಕಿಂತ ಅಧಿಕ ಅಂಕ ಗಳಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1 ರ ವಿದ್ಯಾರ್ಥಿಗಳು ಹಾಗೂ ಶೇಕಡಾ 5)ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಇತರ ವರ್ಗಗಳ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ದಾಖಲಾಗಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 01.06.2026. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ಡಯಟ್ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.(ಮಾಹಿತಿಗಾಗಿ ದೂರವಾಣಿ ಸಂಖ್ಯೆ : 9448999366, 8747857070)

ಮನೆಯಿಂದ 45 ಪವನ್ ಚಿನ್ನ, ನಗದು ಕಳವುಗೈದ ಆರೋಪಿ ಕೊಯಂಬತ್ತೂರಿನಿಂದ ಸೆರೆ

• **ಕಾಸರಗೋಡು:** ಗಲ್ಫ್ ಉದ್ಯೋಗಿಯ ಮನೆಯಿಂದ 45 ಪವನ್ ಚಿನ್ನದ ಒಡವೆ ಹಾಗೂ 50,000 ರೂ. ನಗದು ಕಳವುಗೈದ ಪ್ರಕರಣದ ಆರೋಪಿಯನ್ನು ಕೊಯಂಬತ್ತೂರಿನಿಂದ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡು ಕೊಯಂಬತ್ತೂರು ಮೇಟ್ಟುಪಾಳಯಂ ನಿವಾಸಿ ರಾಜನ್ (61) ಬಂಧಿತ ಆರೋಪಿ. ಬೇಕಲ ಡಿವೈಎಸ್‌ಪಿ ಎಂ.ಪಿ.ಆಜಾದ್‌ರ ನೇತೃತ್ವದಲ್ಲಿ ಬೇಕಲ ಪೊಲೀಸ್ ಠಾಣಾಧಿಕಾರಿ ಶಿವಂ (ಐಪಿಎಸ್ ಟ್ರೈನಿ), ಇನ್ಸ್‌ಪೆಕ್ಟರ್ ಎಸ್.ನಿಖಿಲ್ ಸೆಬಾಸ್ಟಿಯನ್ ಮತ್ತು ಎಸ್‌ಪಿಯವರ ನೇತೃತ್ವದ ವಿಶೇಷ ತಂಡದ ಪೊಲೀಸರು ಸೇರಿ ನಡೆಸಿದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಗಲ್ಫ್ ಉದ್ಯೋಗಿ ಪಳ್ಳಿಕೆರೆ ಪೂಚ್ಚಕ್ಕಾಡ್ ಅರಯಿಲ್‌ತರ ನಿವಾಸಿ ಮಜೀದ್ ಎಂಬವರ ಮನೆಯಲ್ಲಿ ಮೇ 9ರಂದು ಈ ಕಳವು ನಡೆದಿತ್ತು. ಮಜೀದ್‌ರ ಪತ್ನಿ ಮತ್ತು ಪುತ್ರಿ ಮನೆಗೆ ಬೀಗ ಹಾಕಿ ತಮ್ಮ ಸಂಬಂಧಿಕರ ಮನೆಗೆ ತೆರಳಿದ್ದ ವೇಳೆ ಬೀಗ ಮುರಿದು ಒಳ ನುಗ್ಗಿದ ಕಳ್ಳರು ಕಪಾಟಿನೊಳಗಿರಿಸಲಾಗಿದ್ದ ನಗ ನಗದನ್ನು ಕಳವುಗೈಯ್ಯಲಾಗಿತ್ತು. ಆರೋಪಿ ರಾಜನ್‌ನನ್ನು ಬೇರೊಂದು ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಬಂಧಿಸಿದ್ದರು. ಆತನನ್ನು ತೀವ್ರ ತಪಾಸಣೆಗೊಳಪಡಿಸಿದಾಗ ಮಜೀದ್‌ರ ಮನೆಯಿಂದ ನಗ ನಗದು ಕಳವುಗೈದಿರುವುದಾಗಿ ಆತನೇ ಒಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದರು.

ನಿಧನ ಸುದ್ದಿ

ವೆಂಕಟೇಶ್ವರಿ ಅಮ್ಮ



ಕಾಸರಗೋಡು: ಉಳಿಯತ್ತಡ್ಕ ಸಮೀಪದ ಮನ್ನಿಪ್ಪಾಡಿಯಲ್ಲಿ ವಾಸವಾಗಿದ್ದ ಧರ್ಮತ್ತಡ್ಕ ಬಳಿಯ ಪೂಕಳ ವೆಂಕಟೇಶ್ವರಿ ಅಮ್ಮ (73) ಭಾನುವಾರ ರಾತ್ರಿ ನಿಧನ ಹೊಂದಿದರು.

ಮೃತರು ಮಕ್ಕಳಾದ ಗೀತಾ ಗೋವಿಂದ, ಅರವಿಂದ, ಶಿವನಾರಾಯಣ ಅವರನ್ನು ಆಗಲಿದ್ದಾರೆ.

ಲಲಿತಾದೇವಿ



ಉಪ್ಪಿನಂಗಡಿ: ಇಲ್ಲಿನ ಖ್ಯಾತ ವೈದ್ಯರಾದ ದಿವಂಗತ ಡಾ. ಮುದ್ರಜೆ ರಾಮಚಂದ್ರ ಭಟ್ ಅವರ ಪತ್ನಿ, ಖ್ಯಾತ ಮಕ್ಕಳ ತಜ್ಞ ಡಾ. ಎಂ ಎನ್ ಭಟ್ ಅವರ ತಾಯಿ ಲಲಿತಾದೇವಿ (90) ಹೃದಯಾಘಾತಕ್ಕೀಡಾಗಿ ಬುಧವಾರ ಮುಂಜಾನೆ ನೆಕ್ಕಿಲಾಡಿಯಲ್ಲಿನ ಅವರ ಸ್ವಗೃಹದಲ್ಲಿ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿಯನ್ನು ಆಗಲಿದ್ದಾರೆ.

ದೂಮಣ್ಣ ಶೆಟ್ಟಿ ಪಂಜಗುತ್ತು

ಮಂಜೇಶ್ವರ: ಮಂಗಲ್ಪಾಡಿ ಪಂಜಗುತ್ತು ನಿವಾಸಿ, ಹಿರಿಯ ಕೃಷಿಕರಾಗಿದ್ದ ದೂಮಣ್ಣ ಶೆಟ್ಟಿ (90) ಮಂಗಳವಾರ ನಿಧನ ಹೊಂದಿದರು. ಅಂಬಾರು ಶ್ರೀ ಸದಾಶಿವ ದೇವಸ್ಥಾನದ ಸೇವಾ ಸಮಿತಿಯಲ್ಲಿ 35 ವರ್ಷಗಳ ಕಾಲ ವಿವಿಧ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಅವರು ಪಂಜಗುತ್ತು ತರವಾಡಿನ ಹಿರಿಯರಾಗಿದ್ದರು. ಮೃತರು ಮಕ್ಕಳಾದ ಹೇಮರಾಜ ಶೆಟ್ಟಿ, ಸೋಮನಾಥ ಶೆಟ್ಟಿ, ವಿಮಲಾ, ಉಮಾವತಿ, ಪದ್ಮಾವತಿ ಅವರನ್ನು ಆಗಲಿದ್ದಾರೆ.



ತಿರುವನಂತಪುರದ ಮೇಯರ್ ವಿ.ವಿ.ರಾಜೇಶ್ ಮತ್ತು ಉಪಮೇಯರ್ ಆಶಾ ನಾಥ್ ಅವರು ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರನ್ನು ಬುಧವಾರ ಸಿಎಂ ಕಚೇರಿಯಲ್ಲಿ ಭೇಟಿಯಾಗಿ ಶುಭಾಶಯ ಕೋರಿ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸಮಾಲೋಚಿಸಿದರು.

ಉಡುಪಿಯ ವೈಜ್ಞಾನಿಕ ಮುಕುಟಕ್ಕೆ 'ಪ್ರೊ. ಯು.ಆರ್. ರಾವ್ ವಿಜ್ಞಾನ ಕೇಂದ್ರ'ದ ಗರಿ

ಕ್ಯಾಂಪ್ಕೊ ಹಿಂದಿನ ಪ್ರಸ್ತಾವನೆಯ ಪ್ರತಿಫಲ

• **ಮಂಗಳೂರು:** ಕರಾವಳಿ ಭಾಗದ ಶೈಕ್ಷಣಿಕ ಹಾಗೂ ವೈಜ್ಞಾನಿಕ ಮುಕುಟಕ್ಕೆ ಹೊಸಗರಿಯಾಗಿ ಉಡುಪಿಯಲ್ಲಿ ಮುಂದಿನ ಆರು ತಿಂಗಳೊಳಗೆ ತಲೆ ಎತ್ತಲಿರುವ 'ಪ್ರೊ. ಯು.ಆರ್. ರಾವ್ ಅತ್ಯಾಧುನಿಕ ವಿಜ್ಞಾನ ಕೇಂದ್ರ'ದ ನಿರ್ಮಾಣವನ್ನು ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಅವರು ಸ್ವಾಗತಿಸಿದ್ದು, ಇದು ಇಡೀ ಕರಾವಳಿ ಪ್ರದೇಶಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಬಣ್ಣಿಸಿದ್ದಾರೆ.



ಭಾರತದ ಹೆಮ್ಮೆಯ ಚಂದ್ರಯಾನ ಯೋಜನೆಯ ವಿಜ್ಞಾನಿಗಳನ್ನು ಗೌರವಿಸುವ ಹಾಗೂ ಬಾಹ್ಯಾಕಾಶ ವಿಜ್ಞಾನ ಸಂಶೋಧನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಉಡುಪಿ ಜಿಲ್ಲೆಯಲ್ಲಿ 'ಇಸ್ರೋ' ಪ್ರಯೋಗಾಲಯ ಘಟಕವನ್ನು ಸ್ಥಾಪಿಸಬೇಕೆಂದು ಕೋರಿ ಕ್ಯಾಂಪ್ಕೊ ಮಾಜಿ ಅಧ್ಯಕ್ಷ ಎ. ಕಿಶೋರ್ ಕುಮಾರ್ ಕೊಡ್ಗಿ ಅವರು 2023 ರಲ್ಲಿಯೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲಾಗಿದೆ.

ಭಾರತದ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವಿಜ್ಞಾನಿಗಳ ಗಣನೀಯ ಕೊಡುಗೆಯನ್ನು ಆ ಪ್ರಸ್ತಾವನೆಯಲ್ಲಿ ಎತ್ತಿ ತೋರಿಸಲಾಗಿತ್ತು. ಅಲ್ಲದೆ, ಉಡುಪಿ ಮೂಲದವರೇ ಆದ, ದೇಶದ ಹೆಸರಾಂತ ಬಾಹ್ಯಾಕಾಶ ವಿಜ್ಞಾನಿ ದಿ. ಪ್ರೊ. ಯು.ಆರ್. ರಾವ್ ಅವರ ಸ್ಮರಣಾರ್ಥ ಇಸ್ರೋ ಘಟಕವೊಂದರ ಅಗತ್ಯವನ್ನು ಅದರಲ್ಲಿ ಬಲವಾಗಿ ಪ್ರತಿಪಾದಿಸಲಾಗಿತ್ತು.

ಸುಮಾರು 6.2 ಕೋಟಿ ರೂ. ವೆಚ್ಚದಲ್ಲಿ ಐದು ಎಕರೆ ವಿಶಾಲಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಹಾಗೂ 'ಏರೋ–ಸ್ಪೇಸ್ ಗ್ಯಾಲರಿ'ಯಂತಹ ಅದ್ಭುತ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಈ ನೂತನ ವಿಜ್ಞಾನ ಕೇಂದ್ರವು, ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಯುವಸಂಶೋಧಕರಿಗೆ ವಿಜ್ಞಾನ, ನಾವೀನ್ಯತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನದತ್ತ ಒಲವು ಮೂಡಿಸಲು ದಾರಿದೀಪವಾಗಲಿದೆ. ಭವಿಷ್ಯದಲ್ಲಿ ಕರಾವಳಿ ಭಾಗದಲ್ಲಿ ಇಂತಹ ಮತ್ತಷ್ಟು ಉನ್ನತ ಮಟ್ಟದ ವೈಜ್ಞಾನಿಕ ಸಂಸ್ಥೆಗಳು ಸ್ಥಾಪನೆಯಾಗಲಿ ಎಂದು ಕ್ಯಾಂಪ್ಕೊ ಅಧ್ಯಕ್ಷರು ಆಶಯ ವ್ಯಕ್ತಪಡಿಸಿದ್ದಾರೆ.

ವಿಟ್ಲದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ | ಕೃಷಿಕರಿಗೆ ಸಚಿವ ವೆಂಕಟೇಶ್ ಕಿವಿಮಾತು

ಅಡಿಕೆ ಬೆಳೆಗೆ ರೇಷ್ಮೆ ಪರ್ಯಾಯ ಸಾಧ್ಯ

• **ವಿಟ್ಲ:** ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 30 ವರ್ಷದ ಹಿಂದೆ ಶೇ.70ರಷ್ಟು ರೇಷ್ಮೆ ಕೃಷಿಯಿತ್ತು. ಅಡಿಕೆ ಬೆಳೆಗೆ ಪರ್ಯಾಯವಾಗಿ ರೇಷ್ಮೆಯನ್ನು ಅಭಿವೃದ್ಧಿ ಪಡಿಸಬಹುದಾಗಿದೆ. ಹಿಂದಿನ ಹಾಗೂ ಈಗಿನ ರೇಷ್ಮೆ ಬೆಳೆಗೆ ಅಜಗಜಾಂತರ ವ್ಯತ್ಯಾಸವಿದೆ. ರೇಷ್ಮೆ ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂದು ರೇಷ್ಮೆ ಇಲಾಖೆ ಸಚಿವ ಕೆ. ವೆಂಕಟೇಶ್ ಹೇಳಿದರು.

ವಿಠಲ ಪದವಿ ಪೂರ್ವ ಕಾಲೇಜ್ ಸುವರ್ಣ ರಂಗ ಮಂದಿರದಲ್ಲಿ ದ.ಕ. ಜಿಲ್ಲಾ ಪಂಚಾಯತ್ ರೇಷ್ಮೆ ಇಲಾಖೆ, ಭಾರತ ಕೃಷಿ ಅಭಿವೃದ್ಧಿ ಸಂಸ್ಥೆಯ ವತಿಯಿಂದ ದ.ಕ. ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದರು.

ಮೈಸೂರು ರೇಷ್ಮೆ ಇಲಾಖೆ ಜಂಟಿ ನಿರ್ದೇಶಕಿ ಪ್ರತಿಭಾ ಮಾತನಾಡಿ, ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೈಪೋಟಿ ನೀಡಲು ರೇಷ್ಮೆ ಕೃಷಿಗೆ ಮುಂದಾಗಬೇಕಾಗಿದೆ. ರೇಷ್ಮೆಯ ಕೃಷಿಯಲ್ಲಿ ಆಧುನಿಕತೆಯನ್ನು ತರಲಾಗಿದ್ದು, ಇದರ ಅಳವಡಿಕೆಯಿಂದ ರೈತರು ಆದಾಯ ಹೆಚ್ಚಿಸಬಹುದು. ಸಮಗ್ರ ಹಾಗೂ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಘಟಕ ನಿರ್ಮಾಣ ಮಾಡುವವರಿಗೆ ಇಲಾಖೆಯಿಂದ ಆರ್ಥಿಕ ನೆರವು ನೀಡಲಾಗುವುದು ಎಂದರು.

ಮುರುವ ಮಹಾಬಲ ಭಟ್, ರೇಷ್ಮೆ ಕೃಷಿಯಲ್ಲಿ ಅನುಭವಿ ಮಮತಾ ರೈ ದೇವಸ್ಯ, ಮಿತ್ರ ಕೃಷಿಕ ನವೀನ್ ಚಾಕಬಾಯ್ ಸುಳ್ಯ ಅವರನ್ನು ಸನ್ಮಾನಿಸಲಾಯಿತು.



ದಕ್ಷಿಣ ಕನ್ನಡ ಜಿಲ್ಲೆಯ ರೇಷ್ಮೆ ಇಲಾಖೆಗೆ ಅಧಿಕಾರಿಗಳನ್ನು ಮತ್ತು ಹೆಚ್ಚುವರಿ ಸಿಬ್ಬಂದಿಗಳನ್ನು ಒದಗಿಸಲಾಗುವುದು ಎಂದು ಅವರು, ಹಿಂದೆ ರೇಷ್ಮೆ ಉತ್ಪಾದನೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿತ್ತು. ಈಗ ಭಾರತವು ಮೊದಲ ಸ್ಥಾನಕ್ಕೇರಿದೆ. ಮೈಸೂರು ಸಿಲ್ಕ್ ಸೀರಿಗೆ ವಿಶ್ವದಲ್ಲಿ ಅತ್ಯುತ್ತಮ ಬೇಡಿಕೆ ಇದ್ದು, ಬೇಡಿಕೆಯಷ್ಟು ಸೀರೆ ಪೂರೈಸಲಾಗದ ಪರಿಸ್ಥಿತಿ ಇದೆ ಎಂದು ಅವರು ಹೇಳಿದರು.

ರೇಷ್ಮೆ ಬೆಳೆಗಾರರಿಗೆ ಎಲ್ಲಾ ರೀತಿಯ ಅಗತ್ಯ ನೆರವು ನೀಡಲಾಗುವುದು. ಉಚಿತ ಸಸಿ ವಿತರಣೆ, ಸಲಕರಣೆ, ಗೊಬ್ಬರ ಹಾಗೂ ಸಬ್ಸಿಡಿ ನೆರವು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ರೇಷ್ಮೆ ಇಲಾಖೆಯಿಂದ ಒದಗಿಸಲಾಗುವುದು ಎಂದು ಸಚಿವರು ತಿಳಿಸಿದರು.

ಇದೇ ಸಂದರ್ಭ ಬೆಳೆಗಾರರಿಗೆ ಸಬ್ಸಿಡಿ ಮತ್ತು ಸಲಕರಣೆಗಳನ್ನು ವಿತರಿಸಲಾಯಿತು.

ಉದ್ಯಮಿ ಸುರೇಶ್ ಶೆಟ್ಟಿ, ಸುದ್ದಿ ಸಮೂಹ ಸಂಸ್ಥೆಯ ಮುಖ್ಯಸ್ಥ ಡಾ. ಶಿವಾನಂದ, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಅರುಣ್ ಕುಮಾರ್ ಶೆಟ್ಟಿ, ರೈತ ಸಂಘದ ಜಿಲ್ಲಾಧ್ಯಕ್ಷ ಶ್ರೀಧರ ಶೆಟ್ಟಿ ಬೈಲುಗುತ್ತು, ಕೃಷಿ ಅಭಿವೃದ್ಧಿ ಸಂಸ್ಥೆಯ ವ್ಯವಸ್ಥಾಪನಾ ನಿರ್ದೇಶಕ ಎಂ. ಪ್ರಸಾದ್ ಶೆಟ್ಟಿ, ಪ್ರೀತಮ್ ಸಿಕ್ವೇರಾ ಉಪಸ್ಥಿತರಿದ್ದರು.

ಸುಮಿತ್ ಮಸ್ಕರೇನಿಯಸ್ ಸ್ವಾಗತಿಸಿ, ನಾಗರಾಜ ಬನ್ನೂರು ವಂದಿಸಿದರು. ಮೋಹಿನಿ ವಿಶ್ವನಾಥ ಕಾರ್ಯಕ್ರಮ ನಿರ್ವಹಿಸಿದರು.

ಕೆಎಂಎಫ್‌ಗೆ ಸಚಿವ ವೆಂಕಟೇಶ್ ಭೇಟಿ, ವೀಕ್ಷಣೆ ಒಕ್ಕೂಟದ ಕಾರ್ಯಚಟುವಟಿಕೆಗೆ ಶ್ಲಾಘನೆ



• **ಮಂಗಳೂರು:** ಬುಧವಾರ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟಕ್ಕೆ ಪಶು ಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವ ವೆಂಕಟೇಶ್ ಕೆ. ಭೇಟಿ ನೀಡಿ, ಒಕ್ಕೂಟದ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿ ರಾಜ್ಯದಲ್ಲಿ ಅತಿ ಹೆಚ್ಚು ದರವನ್ನು ರೈತರಿಗೆ ನೀಡುವ ಒಕ್ಕೂಟವೆಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ಕೊಡವೂರು ರವಿರಾಜ ಹೆಗ್ಡೆ, ಉಪಾಧ್ಯಕ್ಷ ಉದಯ ಎಸ್. ಕೋಟ್ಯಾನ್, ನಿರ್ದೇಶಕರುಗಳಾದ ಸುಚರಿತ ಶೆಟ್ಟಿ, ಸುಧಾಕರ ಶೆಟ್ಟಿ, ಮಮತಾ ಆರ್. ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕರಾದ ವಿವೇಕ್ ಡಿ. ಮತ್ತು ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಅರುಣ್ ಕುಮಾರ್ ಶೆಟ್ಟಿ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ಕೆ. ಮತ್ತು ಮಾಜಿ ಸಚಿವ ಅಭಯಚಂದ್ರ ಜೈನ್ ಉಪಸ್ಥಿತರಿದ್ದರು.

ಒಕ್ಕೂಟದ ಅಧ್ಯಕ್ಷರು ಮಂಗಳೂರು ಕೇಂದ್ರ ಕಚೇರಿಯ ಲೀಸ್‌ನ ಜಾಗವನ್ನು ಶಾಶ್ವತವಾಗಿ ಒಕ್ಕೂಟಕ್ಕೆ ನೀಡಲು ಹಾಗೂ ಹಾಲಿನ ಮಾರಾಟ ದರವನ್ನು ರೂ.2ಕ್ಕೆ ಹೆಚ್ಚಿಸಿ ತನ್ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲು ಸಚಿವರನ್ನು ಕೋರಿದರು.

ಕೃಷಿ ಕ್ಷೇತ್ರದಲ್ಲಿ ಗಮನಸೆಳೆಯುತ್ತಿದೆ 'ಸಮೃದ್ಧಿ ಆರ್ಗಾನಿಕ್ಸ್' ಸ್ಟಾರ್ಟಪ್

• **ಮಂಗಳೂರು:** ಕೆನರಾ ಇಂಜಿನಿಯರಿಂಗ್ ಕಾಲೇಜಿನ ಕೆನರಾ ಇನೋವೇಷನ್ ಫೌಂಡೇಶನ್ ಆಶ್ರಯದಲ್ಲಿ ಬೆಳೆಯುತ್ತಿರುವ 'ಸಮೃದ್ಧಿ ಆರ್ಗಾನಿಕ್ಸ್' ವಿದ್ಯಾರ್ಥಿ ಸ್ಟಾರ್ಟಪ್ ಕೃಷಿ ಕ್ಷೇತ್ರದಲ್ಲಿ ತನ್ನ ನವೀನ ಕಾರ್ಯಚಟುವಟಿಕೆಗಳ ಮೂಲಕ ಗಮನ ಸೆಳೆಯುತ್ತಿದೆ.

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ–ಜೈವಿಕ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ, ಬೆಂಗಳೂರು ಬಯೋ ಇನೋವೇಷನ್ ಸೆಂಟರ್ ವತಿಯಿಂದ ಕಲಬುರಗಿಯಲ್ಲಿ ಇತ್ತೀಚೆಗೆ ಆಯೋಜಿಸಲಾದ 'ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಸೇಷನ್ಸ್ ಮತ್ತು ಸ್ಟಾರ್ಟಪ್ಸ್ ಸಮಾವೇಶ – 2026' ಕಾರ್ಯಕ್ರಮದಲ್ಲಿ ಈ ಸ್ಟಾರ್ಟಪ್ ತಂಡ ಭಾಗವಹಿಸಿ ವಿಶೇಷ ಮೆಚ್ಚುಗೆ ಗಳಿಸಿತು. ಸೆಕ್ಷನ್ ಇನಿಶಿಯೇಟ್–8 ಫೌಂಡೇಶನ್ ಸಲಹೆಯ ಮೇರೆಗೆ ಈ ತಂಡ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಿತ್ತು.

ಕೆನರಾ ಇಂಜಿನಿಯರಿಂಗ್ ಕಾಲೇಜಿನ 3ನೇ ವರ್ಷದ ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್ ವಿಭಾಗದ ವಿದ್ಯಾರ್ಥಿ ಸಾತ್ವಿಕ್ ಕೃಷ್ಣ ನೇತೃತ್ವದ ತಂಡದಲ್ಲಿ ಸುಹಾನ್, ಧನುಷ್ ಹಾಗೂ ಶಾನ್ ಡಿಸೋಜ ಕಾರ್ಯನಿರ್ವಹಿಸುತ್ತಿದ್ದಾರೆ. ಕೃಷಿ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಈ ತಂಡ ರೈತರ ಜಮೀನಿನಿಂದ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ, ಅವುಗಳ ಪರೀಕ್ಷಾ ವರದಿ ಆಧರಿಸಿ ಗೊಬ್ಬರ ಸಲಹೆಗಳನ್ನು ನೀಡುವ ಯೋಜನೆಯನ್ನು ರೂಪಿಸಿದೆ.



ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಈ ಸ್ಟಾರ್ಟಪ್ ರೈತರಿಗೆ ತಾಂತ್ರಿಕ ನೆರವು ಹಾಗೂ ವೈಜ್ಞಾನಿಕ ಆಧಾರಿತ ಕೃಷಿ ಸಲಹೆಗಳನ್ನು ಒದಗಿಸುತ್ತಿದೆ.

ಕೆನರಾ ಹೈಸ್ಕೂಲ್ ಅಸೋಸಿಯೇಷನ್ ಆಶ್ರಯದಲ್ಲಿ ಆರಂಭಗೊಂಡಿರುವ ಕೆನರಾ ಇನೋವೇಷನ್ ಫೌಂಡೇಶನ್ ವಿದ್ಯಾರ್ಥಿಗಳಲ್ಲಿ ನವೀನತೆ ಮತ್ತು ಸ್ಟಾರ್ಟಪ್ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಉದಯ ಕುಮಾರ್ ಕೆ. ಶೆಣೈ ಮಾರ್ಗದರ್ಶನ ನೀಡುತ್ತಿದ್ದು, ಕೆನರಾ ಇನೋವೇಷನ್ ಫೌಂಡೇಶನ್‌ನ ಸಿಇಒ ಪ್ರಶಾಂತ್ ಕುಮಾರ್ ಎ. ಮಾರ್ಗದರ್ಶಕರಾಗಿ ಬೆಂಬಲ ನೀಡುತ್ತಿದ್ದಾರೆ.

ಆಳ್ವಾಸ್ ಪ್ರಿಂಟಿಂಗ್ ಯುನಿಟ್ 'ಲಿಪಿ' ಮುದ್ರಣಾಲಯ ಲೋಕಾರ್ಪಣೆ

ಸ್ಪರ್ಧಾತ್ಮಕ ವೆಚ್ಚದಲ್ಲಿ ಉತ್ಕೃಷ್ಟ ಮುದ್ರಣ ಸೇವೆ

• **ಮೂಡುಬಿದಿರೆ:** ಆಳ್ವಾಸ್‌ನ 'ಲಿಪಿ' ಮುದ್ರಣಾಲಯ ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಒದಗಿಸುವ ಮಹತ್ವದ ಹೆಜ್ಜೆಯಾಗಿದ್ದು, ಆಧುನಿಕ ತಂತ್ರಜ್ಞಾನ ಹಾಗೂ ಅತ್ಯಾಧುನಿಕ ಯಂತ್ರೋಪಕರಣಗಳ ಮೂಲಕ ಸ್ಪರ್ಧಾತ್ಮಕ ವೆಚ್ಚದಲ್ಲಿ ಉತ್ಕೃಷ್ಟ ಮುದ್ರಣ ಸೇವೆಗಳನ್ನು ನೀಡ ಲಾಗುವುದು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ನುಡಿದರು.

ಅವರು ಬುಧವಾರ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆವರಣದಲ್ಲಿ 'ಆಳ್ವಾಸ್ ಪ್ರಿಂಟಿಂಗ್ ಯುನಿಟ್ 'ಲಿಪಿ' ಮುದ್ರಣಾಲಯವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಈ ಮುದ್ರಣ ಘಟಕವು ಶಿಕ್ಷಣ, ವಾಣಿಜ್ಯ ಹಾಗೂ ಸಾರ್ವಜನಿಕ ಮುದ್ರಣ ಸೇವೆಗಳ ಅಗತ್ಯಗಳನ್ನು ಪೂರೈಸುವ ಉದ್ದೇಶವನ್ನು ಹೊಂದಿದೆ. ಗ್ರಾಹಕರ ಅಗತ್ಯಕ್ಕೆ ತಕ್ಕ ವಿನ್ಯಾಸ, ಸ್ಪಷ್ಟ ಮುದ್ರಣ ಹಾಗೂ ಸಮಯಕ್ಕೆ ಸರಿಯಾದ ವಿತರಣೆಯ ಮೂಲಕ ವಿಶ್ವಾಸಾರ್ಹ ಸೇವೆಯನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಡಿಜಿಟಲ್ ಮತ್ತು ಆಫ್‌ಸೆಟ್ ಮುದ್ರಣ ವ್ಯವಸ್ಥೆಗಳ ಮೂಲಕ ಕಡಿಮೆ ಪ್ರಮಾಣದಿಂದ ಹಿಡಿದು ಬೃಹತ್ ಪ್ರಮಾಣದ ಮುದ್ರಣ ಕಾರ್ಯಗಳನ್ನೂ ಇಲ್ಲಿ ನಿರ್ವಹಿಸಲಾಗುತ್ತದೆ ಎಂದರು.

'ಲಿಪಿ' ಮುದ್ರಣ ಘಟಕದಲ್ಲಿ ಸಿಟಿಪಿ, ಆಫ್‌ಸೆಟ್ ಮುದ್ರಣದಲ್ಲಿ 1–ಕಲರ್, 2–ಕಲರ್, 4–ಕಲರ್ ಯಂತ್ರಗಳು, ಡಿಜಿಟಲ್ ಪ್ರಿಂಟ್ ಸೇವೆಗಳು, ಕಟಿಂಗ್ ಮಷೀನ್, ಬೈಂಡಿಂಗ್ ಮಷೀನ್, ಫೋಲ್ಡಿಂಗ್ ಮಷೀನ್, ಲ್ಯಾಮಿನೇಷನ್ ಮಷೀನ್ ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ ಆಳ್ವ, ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಡಾ ಜೀವನರಾಮ್ ಸುಳ್ಯ, ಬಾಲಕೃಷ್ಣ ಶೆಟ್ಟಿ, ಲಿಪಿ ಮುದ್ರಣಾಲಯದ ಮೇಲ್ವಿ ಚಾರಕ ಶಾಂತರಾಮ್ ನಾಯಕ್, ಕಾಲೇಜುಗಳ ಪ್ರಾಂಶುಪಾಲರು, ಇನ್ನಿತರ ಪ್ರಮುಖರು ಇದ್ದರು.



ವಿವಿಧ ಸ್ಟೇಷನರಿಗಳು ಲಭ್ಯ

ಪ್ಯಾಂಪ್ಲೆಟ್‌ಗಳು, ಬ್ರೋಶರ್‌ಗಳು, ಫ್ಲೈಯರ್‌ಗಳು, ಆಹ್ವಾನ ಪತ್ರಿಕೆಗಳು, ರಿಜಿಸ್ಟರ್‌ಗಳು, ಲೆಡ್ಜರ್‌ಗಳು, ವಿಸಿಟಿಂಗ್ ಕಾರ್ಡ್‌ಗಳು, ಬಿಸಿನೆಸ್ ಕಾಡ್‌ಗಳು, ಬಿಲ್ ಬುಕ್‌ಗಳು, ರಸೀದಿ ಪುಸ್ತಕಗಳು ಹಾಗೂ ವಿವಿಧ ಸ್ಟೇಷನರಿ ಮುದ್ರಣ ಕಾರ್ಯಗಳ ಸೇವೆಯನ್ನು ನೀಡಲಾಗುತ್ತದೆ. ಡಿಜಿಟಲ್ ಮತ್ತು ಆಫ್‌ಸೆಟ್ ಮುದ್ರಣ ಸೇವೆಗಳು ಸಾರ್ವಜನಿಕರಿಗೆ ಲಭ್ಯವಿದ್ದು, ಬಲ್ಕ್ ಆರ್ಡರ್‌ಗಳನ್ನೂ ಸ್ವೀಕರಿಸಲಾಗುತ್ತದೆ.

ಕಾಂಗ್ರೆಸ್ ಸರ್ಕಾರದ ಆಡಳಿತದ ವಿರುದ್ಧ ದಕ್ಷಿಣ ಕನ್ನಡ ಸಂಸದರ ವಗ್ದಾಳಿ | ಕೇಂದ್ರ ಸರಕಾರದ ಯೋಜನೆಗಳ ಜಾರಿಯಲ್ಲಿನ ಅಸಡ್ಡೆಗೆ ತೀವ್ರ ಅಸಮಾಧಾನ

ರಾಜ್ಯಕ್ಕೆ ಋಣಭಾರ ಭಾಗ್ಯ ಮೂರು ವರ್ಷಗಳ ಸಾಧನೆ: ಸಂಸದ ಚೌಟ ಟೀಕೆ

• **ಮಂಗಳೂರು:** ದೇಶದ ಪ್ರಗತಿಪರ, ಆರ್ಥಿಕ ಶಿಸ್ತಿನ ರಾಜ್ಯವಾಗಿದ್ದ ಕರ್ನಾಟಕವನ್ನು ಅಸಾಧಾರಣ ಪ್ರಯತ್ನದಿಂದ ಋಣಭಾರವಾಗಿಸಿದ್ದು ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಮೂರು ವರ್ಷಗಳ ಸಾಧನೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಆರ್ಥಿಕ ಶಿಸ್ತು ಕಾಪಾಡಲು ಸಾಧ್ಯವಾಗದೆ ಪ್ರಜೆಗಳನ್ನು ಸಾಲದ ಸುಳಿಯಲ್ಲಿ ಸಿಕ್ಕಿಸಿರುವುದೇ ಸರಕಾರದ ಸಾಧನೆಯಾಗಿದೆ. ಹಿಂದಿನ ಬಸವರಾಜ ಬೊಮ್ಮಾಯಿ ಸರಕಾರದ ಆಡಳಿತದಲ್ಲಿ ಕರ್ನಾಟಕ ಆರ್ಥಿಕ ಶಿಸ್ತಿಗೆ ಹೆಸರುವಾಸಿಯಾಗಿತ್ತು. ಅಂತಹ ರಾಜ್ಯ ಇಂದು ಆರ್ಥಿಕ ಕೊರತೆಯನ್ನು ಎದುರಿಸುತ್ತಿರುವುದನ್ನು ಸಿಎಜಿ ವರದಿಯೇ ಹೇಳುತ್ತಿದೆ. ಈ ಬಗ್ಗೆ ಸಾಧನಾ ಸಮಾವೇಶ ನಡೆಸುತ್ತಿರುವ ರಾಜ್ಯ ಸರಕಾರ ಉತ್ತರಿಸಬೇಕಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಕೇಂದ್ರದ ಯೋಜನೆ ಬಗ್ಗೆ ಅಸಡ್ಡೆ ಯಾಕೆ ?

ಕೇಂದ್ರ ಸರಕಾರದ ಯೋಜನೆಗಳ ಜಾರಿಯಲ್ಲಿ ಅಸಡ್ಡೆ ವಹಿಸಲಾಗಿದೆ. ಪಿಎಂ ಆವಾಜ್ (ನಗರ) ಯೋಜನೆಯಡಿ 6.38 ಲಕ್ಷ ಮನೆಗಳು ಮಂಜೂರಾಗಿದ್ದು, 2.5 ಲಕ್ಷ ಮನೆಗಳು ಅಪೂರ್ಣವಾಗಿವೆ. ಪಿಎಂ ಆವಾಜ್ ಗ್ರಾಮೀಣ ಯೋಜನೆಯಲ್ಲೂ ಇದೇ ಪರಿಸ್ಥಿತಿ ಇದೆ. ಮೂಲಸೌಲಭ್ಯ ಯೋಜನೆಗಳು ಶೇ.68ರಷ್ಟು ಭಾಗ ಅಪೂರ್ಣವಾಗಿವೆ. ಕ್ಷೀರಧಾರೆ ಯೋಜನೆಯಡಿ ಕಳೆದ 9 ತಿಂಗಳಿನಿಂದ 800 ಕೋಟಿ ರೂ. ಸಬ್ಸಿಡಿ ಹಣವನ್ನು ಹೈನುಗಾರರಿಗೆ ಬಾಕಿ ಇರಿಸಲಾಗಿದೆ. 15000 ಕೋಟಿ ರೂ. ಎಸ್‌ಸಿಎಸ್‌ಟಿ ಮೀಸಲು ನಿಧಿಯನ್ನು ಬೇರೆ ಉದ್ದೇಶಕ್ಕೆ ಬಳಸಲಾಗಿದೆ. ಯಾವ ಉದ್ದೇಶವೆಂಬುದಕ್ಕೆ ಯಾರ ಬಳಿಯೂ ಉತ್ತರವಿಲ್ಲ. ಸಿದ್ಧರಾಮಯ್ಯನವರು ಇಷ್ಟು ವರ್ಷಗಳ ಕಾಲ ರಾಜಕೀಯ ಮಾಡಿದ್ದರೂ ತಮ್ಮ ಕೊನೆಯ ಅವಧಿಯಲ್ಲಿ ಯಾಕೆ ಈ ರೀತಿ ಮಾಡುತ್ತಿದ್ದಾರೆ ಎಂದು ಅರ್ಥ ಆಗುತ್ತಿಲ್ಲ ಎಂದು ಅವರು ಹೇಳಿದರು.



ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯೂ ಇದಕ್ಕಿಂತ ಹೊರತಾಗಿಲ್ಲ. ಜಿಲ್ಲೆಯ ಆರೋಗ್ಯ ಇಲಾಖೆಗೂ ಯಾವುದೇ ಹಣ ಬಿಡುಗಡೆಯಾಗುತ್ತಿಲ್ಲ. ಸಿಎಸ್‌ಆರ್‌ನ 25 ಕೋಟಿ ರೂ.ಗಳಲ್ಲಿ ಆರೋಗ್ಯ ಇಲಾಖೆಯ ಅಭಿವೃದ್ಧಿ ಕಾರ್ಯ ನಡೆಸುವಂತಾಗಿದೆ. ಸರಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುತ್ತಿಲ್ಲ. ನೌಕಕರಿಗೆ ವೇತನ ನೀಡುವುದಿಲ್ಲ. ಹೊಸ ನೇಮಕಾತಿ ಮಾಡುತ್ತಿಲ್ಲ. ಒಟ್ಟಿನಲ್ಲಿ ರಾಜ್ಯವನ್ನು ಕಾಂಗ್ರೆಸ್ ಎಟಿಎಂ ರೀತಿ ಬಳಸಿಕೊಂಡು ರಾಜ್ಯದ ಜನರನ್ನು ಸಾಲದ ಕೂಪಕ್ಕೆ ತಳ್ಳುತ್ತಿದೆ ಎಂದು ಆರೋಪಿಸಿದರು.

ಹಿಂದು ವಿರೋಧಿ ನೀತಿ ಅನುಸರಿಸುತ್ತಿದ್ದೆಯೇ?

ರಾಜ್ಯ ಸರಕಾರ ಹಿಂದು ವಿರೋಧಿ ನೀತಿ ಅನುಸರಿಸುತ್ತಿದ್ದು, ರಾಜ್ಯ ಸರಕಾರದ ಅಲ್ಪಸಂಖ್ಯಾತರ ಮೇಲಿನ ಪ್ರೀತಿ ಸಮಾಜವನ್ನು ವಿಭಜನೆ ಮಾಡುತ್ತಿದೆ. ಆ ಮೂಲಕ ಅಂಬೇಡ್ಕರ್ ತತ್ವಗಳಿಗೆ ತಿಲಾಂಜಲಿ ನೀಡಲಾಗಿದೆ. ಈ ಎಲ್ಲಾ ವಿಷಯಗಳನ್ನು ಮುಂದಿಟ್ಟು ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಜನಾಭಿಪ್ರಾಯ ರೂಪಿಸಲಿದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಅವರಂತೆ ಪ್ರತಿಯೊಂದಕ್ಕೂ ಟ್ವೀಟ್ ಮಾಡಿಕೊಂಡು ನಾನು ರಾಜಕೀಯ ಮಾತನಾಡುವುದಿಲ್ಲ. ಪ್ರಿಯಾಂಕ್ ಖರ್ಗೆ ಮತ್ತು ಮಲ್ಲಿಕಾರ್ಜುನ ಖರ್ಗೆಯವರ ಸಾಧನೆ ಅವರ ಕ್ಷೇತ್ರಗಳಲ್ಲಿನ ಅಭಿವೃದ್ಧಿಯಿಂದಲೇ ತಿಳಿಯುತ್ತದೆ ಎಂದು ಹೇಳಿದರು.

> **ಕೇಂದ್ರ ಸರಕಾರದ ಯೋಜನೆಗಳ ಜಾರಿಯಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಅಸಡ್ಡೆ ವಹಿಸಿದೆ. ಕೇಂದ್ರದ ಯೋಜನೆಗಳ ಅನುಷ್ಠಾನದಲ್ಲಿ ಸಿಎಂ ಸಿದ್ದರಾಮಯ್ಯ ಅಸಡ್ಡೆ ಮಾಡುತ್ತಿರುವುದರಿಂದ ಕೆಳಹಂತದ ಅಧಿಕಾರಿಗಳೂ ಅದೇ ರೀತಿ ವರ್ತಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿಗೆ ಹೆಸರು ಬರುತ್ತದೆ ಎಂಬ ಕಾರಣಕ್ಕೆ ಹೀಗೆ ನಿರ್ಲಕ್ಷ್ಯ ವಹಿಸಲಾಗಿದೆ. ರಾಜ್ಯದಲ್ಲಿ ವರ್ಗಾವಣೆ, ಕಮಿಷನ್ ದಂಧೆ, ಹಗರಣ ನಡೆಯುತ್ತಿದೆ.**
> ■ **ಕ್ಯಾ. ಬ್ರಿಜೇಶ್ ಚೌಟ,** ಸಂಸದರು

ದೇಶದಲ್ಲಿ ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ ಯಿಂದ ಜನರ ಮೇಲಾಗುತ್ತಿರುವ ಪರಿಣಾಮದ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಂಸದರು, ಅದು ಏಕಾಏಕಿಯಾಗಿ ಏರಿಸಿದ್ದಲ್ಲ. ಪ್ರಜ್ಞಾವಂತ ಜನರು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಜಾಗತಿಕವಾಗಿ ತಲೆದೋರಿರುವ ಸಮಸ್ಯೆಯಿಂದಾಗಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಸದ್ಯ ಸವಾಲಿನದ್ದಾಗಿದ್ದರೂ ಅದನ್ನು ಸರಿದೂಗಿಸುವ ಕೆಲಸ ನಡೆಯುತ್ತಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶಾಂತಿ ಪ್ರಸಾದ್ ಹೆಗ್ಡೆ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಡಾ. ಮಂಜುಳಾ ರಾವ್, ಜಿಲ್ಲಾ ಕಾರ್ಯದರ್ಶಿ ಸುಜಿತ್ ಪ್ರತಾಪ್, ಜಿಲ್ಲಾ ವಕ್ತಾರರಾದ ಅರುಣ್ ಶೇಟ್, ರಾಜ್ ಗೋಪಾಲ್ ರೈ, ಜೀವನ್, ಪ್ರಮುಖರಾದ ಸಂಜಯ್ ಪ್ರಭು ದೊಂಬಯ್ಯ ಅರಳ, ಹೇಮಂತ್ ಶೇಟ್, ಕದ್ರಿ ಮನೋಹರ್ ಶೆಟ್ಟಿ, ಮಾಧವ ಮಾವೆ ಉಪಸ್ಥಿತರಿದ್ದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	13	4	9	0	8	-0.702

ಕಿರುಸುದ್ದಿ

ಸ್ಕ್ವ್ಯಾಷ್: ಧೈರ್ಯಗೆ ಗಮನಾರ್ಹ ಗೆಲುವು

ಹೊಸದಿಲ್ಲಿ: 33ನೇ ಏಷ್ಯನ್ ಜೂನಿಯರ್ ವೈಯಕ್ತಿಕ ಸ್ಕ್ವ್ಯಾಷ್ ಸ್ಪರ್ಧೆಯಲ್ಲಿ ಮಿಂಚಿರುವ ಭಾರತದ ಧೈರ್ಯ ಗೊಗಿಯಾ ವಿಶ್ವದ 5/8ನೇ ಶ್ರೇಯಾಂಕಿತ ಕಾ ಚುನ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಬುಧವಾರ ನಡೆದ ಅಂಡರ್-13 ಪಂದ್ಯಾವಳಿಯಲ್ಲಿ ಅವರು, 12-10, 10-12, 11-7, 11-7ರಿಂದ ಗೆದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಧೈರ್ಯ ತಮ್ಮ ಹೆಸರಿಗೆ ತಕ್ಕಂತೆ ಪ್ರದರ್ಶನ ನೀಡಿದರು. ಎರಡನೇ ಸೆಟ್‌ನಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ, ಮೂರನೇ ಹಾಗೂ ನಾಲ್ಕನೇ ಸೆಟ್‌ನಲ್ಲಿ ಮತ್ತೆ ಪ್ರಾಬಲ್ಯ ಸಾಧಿಸಿದ ಅವರು, ಗೆಲುವು ಸಾಧಿಸಿ ಮುನ್ನಡೆದರು. ಅಂಡರ್-13 ಮಹಿಳೆಯರ ವಿಭಾಗದಲ್ಲಿ ಭಾರತ ಮೂಲದ ರಿಯಾ ದಲಾಲ್ ಧೀಯಾರ್ ಮಿಥಾಲಿ ಅವರನ್ನು ಸೋಲಿಸಿದರು. ಅಂಡರ್-15 ವಿಭಾಗದಲ್ಲಿ ಧ್ರುವ್ ದಿಸಾಸ್ ಅವರನ್ನು ಸೋಲಿಸಿದರು. ಇನ್ನುಳಿದ ವಿಭಾಗಗಳಲ್ಲೂ ಭಾರತೀಯರು ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಜೂನಿಯರ್ ಪಂದ್ಯಾವಳಿಯು ಅಂಡರ್-13, ಅಂಡರ್-15, 17 ಮತ್ತು ಅಂಡರ್-19 ವಿಭಾಗದಲ್ಲಿ ನಡೆಯುತ್ತವೆ.

ಶೀಘ್ರವೇ ಭಾರತಕ್ಕೆ ಸಾಲ್ಟ್

ಹೊಸದಿಲ್ಲಿ: ವಾರಾಂತ್ಯದೊಳಗೆ ಫಿಲ್ ಸಾಲ್ಟ್ ಭಾರತಕ್ಕೆ ಬರಲಿದ್ದಾರೆಂದು ಹೇಳಲಾಗುತ್ತಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ಅನಿಸಿಕೊಂಡಿರುವ ಸಾಲ್ಟ್ ಬಹುದಿನಗಳಿಂದ ಇಂಗ್ಲೆಂಡ್‌ನಲ್ಲಿದ್ದಾರೆ. ಈ ಹಿಂದೆ ಅವರಿಗಾದ ಗಾಯದ ಪರಿಣಾಮ ಅವರು, ಹೆಚ್ಚಿನ ಚಿಕಿತ್ಸೆಗಾಗಿ ಲಂಡನ್‌ಗೆ ತಲುಪಿದ್ದರು. ಈ ಬೆನ್ನಲ್ಲೇ ಅವರು ಚಿಕಿತ್ಸೆ ಪೂರ್ಣಗೊಳಿಸಿದ್ದಾರೆ. ಶೀಘ್ರವೇ ಭಾರತಕ್ಕೆ ಮರಳಲಿದ್ದಾರೆ. ಪ್ಲೇಆಫ್‌ಗೂ ಮುನ್ನವೇ ತಂಡವನ್ನು ಸೇರಿಕೊಳ್ಳಲಿದ್ದಾರೆಂದು ವರದಿಯಾಗಿದೆ. ಅವರಲ್ಲದೆ, ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ಕೂಡ ಚೇತರಿಸಿಕೊಳ್ಳುತ್ತಿದ್ದು, ಅವರೂ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ. ಹಿಂದಿನ ಪಂದ್ಯಕ್ಕಾಗಿ ಅವರು ಧರ್ಮಶಾಲಾಗೆ ತಲುಪಿರಲಿಲ್ಲ. ಅವರ ಬದಲಿಗೆ ವೆಂಕಟೇಶ್ ಅಯ್ಯರ್ ಕಣಕ್ಕಿಳಿದರೆ, ಪಂದ್ಯದ ನಾಯಕತ್ವವನ್ನು ಜಿತೇಶ್ ಶರ್ಮ ನಿಭಾಯಿಸಿದ್ದರು.

ಹಾಕಿ: ಭಾರತಕ್ಕೆ ಜಯ

ಭೋಪಾಲ್: ಭಾರತ ಅಂಡರ್-18 ಮಹಿಳಾ ಹಾಕಿ ತಂಡ ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಕೊನೆಯ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿ 4-1 ಅಂತರದಲ್ಲಿ ಗೆಲುವು ಸಾಧಿಸಿದೆ. ಭೋಪಾಲ್‌ನ ಉದವ್ ದಾಸ್ ಮೆಹತಾ ಕೇಂದ್ರ ಸಾಯಿ ಕೇಂದ್ರದಲ್ಲಿ ಬುಧವಾರ ನಡೆದ ಈ ಪಂದ್ಯದಲ್ಲಿ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಪಂದ್ಯದ ಆರಂಭದಲ್ಲೇ ಆಸ್ಟ್ರೇಲಿಯಾ ಮುನ್ನಡೆ ಸಾಧಿಸಿತು. ಎಂಟನೇ ನಿಮಿಷದಲ್ಲಿ ಔರೋರಾ ಕೋವಾಸೆವಿಚ್ ಗೋಲು ಬಾರಿಸಿ ಪ್ರವಾಸಿ ತಂಡಕ್ಕೆ 1-0 ಮುನ್ನಡೆ ತಂದರು. ಆದರೆ ಭಾರತ ಹೆಚ್ಚು ಸಮಯ ಹಿನ್ನಡೆಯಲ್ಲಿರಲಿಲ್ಲ. ನಾಯಕಿ ಸ್ವೀಟಿ ಕುಜುರ್ 13ನೇ ನಿಮಿಷದಲ್ಲಿ ಸಮಬಲದ ಗೋಲು ದಾಖಲಿಸಿ ಮೊದಲ ಕ್ವಾರ್ಟರ್ ಅಂತ್ಯಕ್ಕೆ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಎರಡನೇ ಕ್ವಾರ್ಟರ್‌ನಲ್ಲಿ ಭಾರತ ತನ್ನ ಆಕ್ರಮಣ ಮುಂದುವರಿಸಿತು. 25ನೇ ನಿಮಿಷದಲ್ಲಿ ದಿಯಾ ಗೋಲು ಬಾರಿಸಿ ತಂಡಕ್ಕೆ 2-1 ಮುನ್ನಡೆ ಒದಗಿಸಿದರು. ಇದರೊಂದಿಗೆ ಭಾರತ ಅರ್ಧಾವಧಿಗೆ ಮುನ್ನ ಮೇಲುಗೈ ಸಾಧಿಸಿತು. ಎರಡನೇ ಅರ್ಧದಲ್ಲೂ ಭಾರತೀಯ ಆಟಗಾರ್ತಿಯರು ಹಿಡಿತ ಕಳೆದುಕೊಳ್ಳಲಿಲ್ಲ. ಮೂರನೇ ಕ್ವಾರ್ಟರ್‌ನಲ್ಲಿ ಪ್ರಿಯಾಂಕಾ ಮಿಂಜ್ 44ನೇ ನಿಮಿಷದಲ್ಲಿ ಗೋಲು ದಾಖಲಿಸಿ ಅಂತರವನ್ನು ಹೆಚ್ಚಿಸಿದರು. ಅಂತಿಮ ಕ್ವಾರ್ಟರ್‌ನಲ್ಲಿ ನೌಶೀನ್ ನಾಜ್ ಮತ್ತೊಂದು ಗೋಲು ಬಾರಿಸಿ ಭಾರತದ ಭರ್ಜರಿ ಗೆಲುವಿಗೆ ಮೆರಗು ತಂದರು. ಈ ಗೆಲುವಿನೊಂದಿಗೆ ಭಾರತ ಸರಣಿಯನ್ನು ಉತ್ಸಾಹಭರಿತವಾಗಿ ಮುಗಿಸಿತು. ಇದೇ ತಿಂಗಳ ಅಂತ್ಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಅಂಡರ್-18 ಏಷ್ಯಾಕಪ್‌ಗೆ ಸಿದ್ಧತೆಯ ಭಾಗವಾಗಿದ್ದ ಈ ಸರಣಿಯಲ್ಲಿ ಭಾರತೀಯ ತಂಡ ಉತ್ತಮ ಅನುಭವ ಪಡೆದುಕೊಂಡಿದೆ. ನಾಲ್ಕು ಪಂದ್ಯಗಳ ಸರಣಿಯನ್ನು ಆಸ್ಟ್ರೇಲಿಯಾ 3-1 ಅಂತರದಲ್ಲಿ ತನ್ನದಾಗಿಸಿಕೊಂಡಿತು.

ನಾಲ್ಕನೇ ಸ್ಥಾನಕ್ಕೆ ರಾಜಸ್ಥಾನ | ಪ್ಲೇಆಫ್ ಹಾದಿ ಸುಗಮ

ಸಿಕ್ಸರ್‌ಗಳ ವೈಭವ

ಜೈಪುರ: ವೈಭವ್ ಸೂರ್ಯವಂಶಿ ಬಾರಿಸಿದ ಸಿಕ್ಸರ್‌ಗಳೆದುರು ತತ್ತರಿಸಿರುವ ಲಖನೌ ಸೂಪರ್ ಜೇಂಟ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 9ನೇ ಸೋಲು ಕಂಡಿದೆ. ರಾಜಸ್ಥಾನ ಗೆಲುವಿನೊಂದಿಗೆ ನಾಲ್ಕನೇ ಸ್ಥಾನಕ್ಕೇರಿದ್ದು ಪ್ಲೇಆಫ್‌ಗೇರುವ ಅವಕಾಶಗಳನ್ನು ಹೆಚ್ಚುಗೊಳಿಸಿದೆ.

ರವೀಂದ್ರ ಜಡೇಜಾ, ರಿಯಾನ್ ಪರಾಗ್ ಇಲ್ಲದ ಪಂದ್ಯದಲ್ಲಿ ರಾಜಸ್ಥಾನ ಅನುಭವ ಇಲ್ಲದ ತಂಡದೊಂದಿಗೆ ಮೈದಾನಕ್ಕಿಳಿಯಿತು. ವೈಭವ್ ಸೂರ್ಯವಂಶಿ ನಿಧಾನ ಆರಂಭ ಮಾಡಿದರು. ಇದೆಲ್ಲದರ ನಡುವೆ ದೊಡ್ಡ ಗುರಿ. ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಎದುರಾಳಿ ಲಖನೌ ಒತ್ತಡ ಹಾಕಲು ಆರಂಭಿಸಿತು ಅನ್ನುವಷ್ಟರಲ್ಲಿ ಅಬ್ಬರಿಸಲಾರಂಭಿಸಿದರು ವೈಭವ್ ಸೂರ್ಯವಂಶಿ. 10 ಸ್ಫೋಟಕ ಸಿಕ್ಸರ್, 7 ಅಬ್ಬರದ ಬೌಂಡರಿ ಬಾರಿಸಿದ ನಂತರ ಸ್ಟ್ರೈಕ್ ರೇಟ್ ಗಗನದೆತ್ತರಕ್ಕೆ ಹಾರಿತು. ಪಂದ್ಯವನ್ನು ಗೆದ್ದು ಅಂಕಪಟ್ಟಿಯಲ್ಲೂ ರಾಜಸ್ಥಾನ ಮೇಲೇರಿತು.

ಟಾಸ್ ಗೆದ್ದ ರಾಜಸ್ಥಾನ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಲಖನೌ ಪರ ಮಿಚಲ್ ಮಾರ್ಷ್ (96; 57ಎ, 11ಬೌ, 5ಸಿ), ಜೋಶ್ ಇಂಗ್ಲಿಸ್(60; 29ಎ, 7ಬೌ, 3ಸಿ) ಮಿಂಚಿದರು. ಪಂತ್(35) ಕೂಡ ಕೈಜೋಡಿಸಿದ ನಂತರ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡ ಲಖನೌ 220 ರನ್ ಗಳಿಸಿತು. ರಾಜಸ್ಥಾನ ಪರ ಯಶ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ರಾಜಸ್ಥಾನ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು. ಯಶಸ್ವಿ ಜೈಸ್ವಾಲ್ (43; 8ಬೌ, 1ಸಿ) ಅಬ್ಬರದ ಆರಂಭ ಕೊಟ್ಟರೆ, ವೈಭವ್ ಸೂರ್ಯವಂಶಿ(93; 38ಎ, 7ಬೌ, 10ಸಿ) ಪಂದ್ಯವನ್ನು ರಾಜಸ್ಥಾನದ ಜೇಬಿಗಿತ್ತರು. ಜುರೇಲ್ 53 ರನ್ ಗಳಿಸಿ ಜಯದ ಹಾದಿ ತೋರಿಸಿದರು. ಲಖನೌ ಪರ ಮೋಹ್ಸಿನ್ ಖಾನ್ 1 ವಿಕೆಟ್ ಪಡೆದುಕೊಂಡರು.

ವೈಭವ್ ಸಿಕ್ಸರ್‌ಗಳ ಅಬ್ಬರ: ಮೊದಲ ಬಾಲ್‌ನಿಂದಲೇ ದಂಡಿಸುವುದು. ಒತ್ತಡದ ಮೂಲಕ ಮಿಂಚುವುದು ಇದು ವೈಭವ್ ಸೂರ್ಯವಂಶಿಯ ಸಾಮಾನ್ಯ ಸ್ವಭಾವ. ಆದರೆ ಲಖನೌ ವಿರುದ್ಧದ ಪಂದ್ಯದಲ್ಲಿ ಆಟವೇ ಬೇರೆಯದ್ದಾಗಿತ್ತು. ಹೊಡೆಯುವ ಜವಾಬ್ದಾರಿ ಜೈಸ್ವಾಲ್ ಮೈಗೆತ್ತಿಕೊಂಡಿದ್ದರು. ವೈಭವ್ ನಿಧಾನ ಆರಂಭ ಮಾಡಿದರು. ಮೊದಲಿನ 10 ಬಾಲ್‌ಗಳಲ್ಲಿ 5 ರನ್ ಗಳಿಸಿದ್ದ ವೈಭವ್ ಬಳಿಕ ನೈಜ ಆಟದತ್ತ ಸಾಗಿದರು. ದೊಡ್ಡ ದೊಡ್ಡ ಬೌಲರ್‌ಗಳನ್ನು ಮನ ಬಂದಂತೆ ದಂಡಿಸುವ ಅವರ ಸ್ವಾಭಾವಿಕ ಆಟಕ್ಕೆ ಮರಳಿದರು. ಮುಂದಿನ 28 ಬಾಲ್‌ಗಳಲ್ಲಿ 88 ರನ್ ಚಚ್ಚಿದರು. ಪಂದ್ಯವನ್ನೇ ಕಸಿದುಕೊಂಡರು, ಲಖನೌ ಆತ್ಮವಿಶ್ವಾಸದ ಮೇಲೆ ಪೆಟ್ಟುಕೊಟ್ಟು ಬರೆ ಎಳೆದರು. ಪಂದ್ಯದುದ್ದಕ್ಕೂ ವೈಭವ್ ಆಟಕ್ಕೆ ನಿಲ್ಲಿಸುವ ಸರದಾರರವೇ ಇರಲಿಲ್ಲ. ಒಟ್ಟು 38 ಬಾಲ್‌ಗಳಲ್ಲಿ 93 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದ ಔಪಚಾರಿಕತೆ ಮುಗಿಸುವಲ್ಲಿ ತಂಡಕ್ಕೆ ಧ್ರುವ್ ಜುರೇಲ್ ಸಹಾಯ ಮಾಡಿದರು. 38 ಬಾಲ್ ಎದುರಿಸಿ ಔಟಾಗದೇ 53 ರನ್ ಗಳಿಸಿದರು.



ವೈಭವ್ ದಾಖಲೆ

ಸಿಕ್ಸರ್ ಬಾರಿಸುವುದರಲ್ಲಿ ವೈಭವ್ ಸೂರ್ಯವಂಶಿ ಆ್ಯಂಡ್ರೆ ರಸೆಲ್ ದಾಖಲೆ ಮುರಿದಿದ್ದಾರೆ. ಒಂದೇ ಸೀಸನ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲಿ ವೈಭವ್ 2ನೇ ಸ್ಥಾನಕ್ಕೇರಿದರು. ಈ ಬಾರಿಯ ಐಪಿಎಲ್‌ನಲ್ಲಿ 53 ಸಿಕ್ಸರ್ ಬಾರಿಸಿರುವ ಅವರು, ಇನ್ನೂ ಪಂದ್ಯಗಳನ್ನು ಆಡಬೇಕಿದೆ. ಇದರೊಂದಿಗೆ ಮೊದಲ ಸ್ಥಾನದಲ್ಲಿರುವ ಕ್ರಿಸ್ ಗೇಲ್ ದಾಖಲೆ ಮುರಿಯುವ ಅವಕಾಶಗಳನ್ನೂ ಹೊಂದಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಲಖನೌ 20 ಓವರ್‌ಗಳಲ್ಲಿ 220/5: ಮಾರ್ಷ್ 96, ಇಂಗ್ಲಿಸ್ 60; ಯಶ್ ರಾಜ್ 35/2

ರಾಜಸ್ಥಾನ 19.1 ಓವರ್‌ಗಳಲ್ಲಿ 225/3: ವೈಭವ್ 93, ಜುರೇಲ್ 53*, ಜೈಸ್ವಾಲ್ 43; ಮೋಹ್ಸಿನ್ 31/1

ಅತಿ ಹೆಚ್ಚು ಸಿಕ್ಸರ್ (ಒಂದೇ ಆವೃತ್ತಿಯಲ್ಲಿ)

1.	ಕ್ರಿಸ್ ಗೇಲ್	59
2.	ವೈಭವ್ ಸೂರ್ಯವಂಶಿ	53*
3.	ಆ್ಯಂಡ್ರೆ ರಸೆಲ್	52

ಇಂದು ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ

ಅಗ್ರ ಎರಡರ ಮೇಲೆ ಗುಜರಾತ್ ಪಡೆ ಕಣ್ಣು

ಅಹಮದಾಬಾದ್: ಕೈಯಲ್ಲಿದ್ದ ಎರಡು ಅವಕಾಶಗಳನ್ನು ಕಳೆದುಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೌರವ ವಿದಾಯಕ್ಕಾಗಿ ಗುಜರಾತ್ ತಂಡವನ್ನು ಸೋಲಿಸಬೇಕಿದೆ. ಇದು ಎರಡೂ ತಂಡಕ್ಕೂ ಈ ಬಾರಿಯ ಐಪಿಎಲ್‌ನ ಕೊನೆಯ ಪಂದ್ಯವಾಗಿರಲಿದೆ. ಟೈಟಾನ್ಸ್ ತಂಡ ಈಗಾಗಲೇ ಪ್ಲೇಆಫ್‌ಗೇರಿದೆ. ಅತ್ತ ಚೆನ್ನೈ ಸೂಪರ್ ಕಿಂಗ್ಸ್ ಆರನೇ ಸ್ಥಾನದಲ್ಲಿದೆ. ಅಧಿಕೃತವಾಗಿ ಪಂದ್ಯಾವಳಿಯಿಂದ ಹೊರಬೀಳದಿದ್ದರೂ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್‌ಗೆ ಹೋಗಬಹುದಾದ ಎಲ್ಲಾ ಹಾದಿಗಳು ಮುಚ್ಚಿವೆ.

ಚೆನ್ನೈಗೆ ಔಪಚಾರಿಕತೆಯೇ ಜಾಸ್ತಿಯಾಗಿದ್ದರೂ ಟಾಪ್ ಟುಗೇರುವ ಅವಕಾಶ ಹೊಂದಿರುವ ಗುಜರಾತ್ ಟೈಟಾನ್ಸ್‌ಗೆ ಇದು ಮಹತ್ವದ ಪಂದ್ಯ. ಅಹಮದಾಬಾದ್‌ನಲ್ಲಿ ನಡೆಯಲಿರುವ ಈ ಪಂದ್ಯವನ್ನು ಗೆದ್ದರೆ, ಗುಜರಾತ್ ಟಾಪ್-2 ಬಹುತೇಕ ಖಚಿತಗೊಳ್ಳಲಿದೆ. ಅತ್ತ ಚೆನ್ನೈ ಆರನೇ ಸ್ಥಾನದಲ್ಲಿದ್ದು, ಮಿರ್‍ಯಾಕಲ್ ಆಗುವ ನಿರೀಕ್ಷೆಯಲ್ಲಿದೆ. ಒಂದು ವೇಳೆ ಚೆನ್ನೈ ಪ್ಲೇಆಫ್‌ಗೇರಬೇಕೆಂದರೆ, ಈ ಪಂದ್ಯದಲ್ಲಿ ದೊಡ್ಡ ಗೆಲುವು ಸಾಧಿಸಿ ಆರ್‌ಆರ್‌ಗಿಂತಲೂ ಹೆಚ್ಚಿನ ರನ್‌ರೇಟ್‌ನೊಂದಿಗೆ ನಾಲ್ಕನೇ ಸ್ಥಾನಕ್ಕೇರಬೇಕು. ಇಷ್ಟಾದರೂ, ಕೆಕೆಆರ್ ಒಂದು, ಪಂಜಾಬ್ ಒಂದು ಮತ್ತು ಆರ್‌ಆರ್ ಒಂದು ಪಂದ್ಯದಲ್ಲಿ ಸೋಲಬೇಕು.

ಗುಜರಾತ್‌ಗೆ ಭರವಸೆ: ಗುಜರಾತ್ ಟೈಟಾನ್ಸ್‌ಗೆ ಚೆನ್ನೈ ವಿರುದ್ಧದ ಪಂದ್ಯದ ಗೆಲುವು ಬೂಸ್ಟರ್ ಕೊಡಲಿದೆ. ಟಾಪ್ 2ರಲ್ಲಿ ಇದ್ದವರಿಗೆ ಪ್ಲೇಆಫ್‌ನಲ್ಲಿ ಎರಡು ಅವಕಾಶ ಸಿಗಲಿವೆ. ಈ ನಿಟ್ಟಿನಲ್ಲಿ ಗೆಲುವಿನ ದೊಡ್ಡ ಗುರಿ ಗುಜರಾತ್ ಹೊಂದಿದೆ. ಹಿಂದಿನ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಸೋತಿರುವುದು ಗುಜರಾತ್ ವಿವಿಧ ವಿಭಾಗಗಳನ್ನು ಗಟ್ಟಿಗೊಳಿಸಬೇಕಿದೆ. ಕೆಲವು ಬೌಲರ್‌ಗಳು ದುಬಾರಿಯಾಗಿದ್ದಾರೆ. ಆದರೆ ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಗಿಲ್ ಪಡೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದೆ. ಬ್ಯಾಟಿಂಗ್ ವಿಭಾಗಕ್ಕೆ ಬಂದರೆ ಗಿಲ್, ಬಟ್ಲರ್ ಮತ್ತು ಸುದರ್ಶನ್ ಭರ್ಜರಿ ಲಯದಲ್ಲಿದ್ದು, ವಿಶ್ವಾಸ ಹೆಚ್ಚಿಸಿದೆ.

ಪುಟಿದೇಳುವುದೇ ಚೆನ್ನೈ?: ಒಬ್ಬರಾದ ಮೇಲೊಬ್ಬರು ಗಾಯಗೊಂಡು ಹೊರ ನಡೆಯುವುದು ಚೆನ್ನೈ ತಂಡ ದೊಡ್ಡ ಹಿನ್ನಡೆ. ಪಂದ್ಯಗಳನ್ನು ಗೆಲ್ಲಿಸುತ್ತಿದ್ದ ಜಿಮಿ ಓವರ್‌ಟನ್ ಕೂಡ ಗಾಯದಿಂದಾಗಿ ಹೊರನಡೆದಿದ್ದಾರೆ. ಈ ಹೊಡೆತವೇ ಚೆನ್ನೈಗೆ ಹಿಂದಿನ ಪಂದ್ಯಗಳಲ್ಲಿ ಸೋಲು ನೀಡಿದೆ. ಈ ನಿಟ್ಟಿನಲ್ಲಿ ಲಖನೌ ಮತ್ತು ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆಯಷ್ಟೇ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲಿನ ರುಚಿ ಕೊಟ್ಟಿವೆ. ಮುಖ್ಯವಾಗಿ ಬೌಲಿಂಗ್ ವಿಚಾರದಲ್ಲಿ ಒತ್ತಡ ಎದುರಿಸುತ್ತಿರುವ ಚೆನ್ನೈ ತಂಡದಲ್ಲಿ ಅನುಭವಿ ವೇಗಿಗಳೇ ಇಲ್ಲ. ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪೈಪೋಟಿಯಲ್ಲಿದ್ದ ಅನ್ಶುಲ್ ಕಂಬೋಜ್ ಭಾರೀ ದುಬಾರಿಯಾಗಿದ್ದಾರೆ. ಸ್ಪೆನ್ಸರ್ ಜಾನ್ಸನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಕಾಣಿಸಿಕೊಂಡಿದ್ದು, ಹೆಚ್ಚುವರಿ ಬೌಲರ್ ಆದ ಗುರ್ಜಾಪ್ನೀತ್ ಕೂಡ ದುಬಾರಿಯಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ರುತುರಾಜ್, ದುಬೆ ಮೊದಲಾದವರು ಮಿಂಚಬೇಕಿದೆ.

ಪಿಚ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದಾರೆ. 200 ರನ್ ದಾಟುವುದೇ ಇಲ್ಲಿ ದೊಡ್ಡ ಸವಾಲು. ಹೆಚ್ಚಿನ ಬೌನ್ಸ್, ಕ್ರ್ಯಾಕ್ ಮತ್ತು ಸ್ವಿಂಗ್ ಬ್ಯಾಟಿಗರಿಗೆ ಕಾಟ ಕೊಡಬಹುದು. ಇಬ್ಬನಿ ಬೌಲರ್‌ಗಳಿಗೆ ಹಿನ್ನಡೆ ತರಬಹುದು.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಅಹಮದಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕುಸಿದ ಮುಂಬೈ ಇಂಡಿಯನ್ಸ್

ಕೋಲ್ಕತ್ತಾ: ದಿಢೀರ್ ಕುಸಿತ ಕಂಡ ಮುಂಬೈ ಇಂಡಿಯನ್ಸ್ ಕೆಕೆಆರ್‌ಗೆ ಸಾಮಾನ್ಯ ಗುರಿ ಮಾತ್ರ ಕೊಟ್ಟಿತು. ಮಳೆ ಅಡ್ಡಿಯಾದ ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಮುಂಬೈ ಕೆಕೆಆರ್ ವೇಗಿಗಳ ದಾಳಿಗೆ ತತ್ತರಿಸಿತು. ಮಧ್ಯಮ ಓವರ್‌ಗಳಲ್ಲಿ ನಾಯಕ ಹಾರ್ದಿಕ್ ಪಾಂಡ್ಯ ಉತ್ತಮ ಬ್ಯಾಟಿಂಗ್ ಮಾಡಿವಂತೆ ಕಂಡರು. ಆದರೆ ಹೆಚ್ಚಿನ ಕೊಡುಗೆ ಕೊಡಲಿಲ್ಲ. ತಿಲಕ್ ವರ್ಮಾ 32 ಬಾಲ್‌ಗಳಲ್ಲಿ 20 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮದಲ್ಲಿ ಕಾರ್ಬಿನ್ ಬಾಷ್ ಸ್ಫೋಟಕ ಬ್ಯಾಟಿಂಗ್ ಮಾಡಿದ ನಂತರ ಮುಂಬೈ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿತು.

ಬ್ಯಾಟಿಂಗ್‌ಗಿಳಿದ ಮುಂಬೈಗೆ ಆಘಾತ ಎದುರಾಯಿತು. ಎರಡನೇ ಓವರ್ ಮಾಡಲು ಬಂದ ಕ್ಯಾಮರೋನ್ ಗ್ರೀನ್ ರಯಾನ್ ರಿಕೆಲ್ಟನ್ ವಿಕೆಟ್ ಕಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ನಮನ್ ಬರುತ್ತಿದ್ದಂತೆ ಪೆವಿಲಿಯನ್ ಹೊರಟರು. ರೋಹಿತ್ ಶರ್ಮ 15 ರನ್ ದಾಟಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಮೊದಲಿನ ಎರಡು ಬಾಲ್‌ಗಳಲ್ಲಿ ಬೌಂಡರಿ ಬಾರಿಸಿದರೆ, ಒಂದು ಸಿಕ್ಸರ್ ಕೂಡ ಬಾರಿಸಿ ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆ ಮೂಡಿಸಿದರು. ಆದರೆ 15 ರನ್‌ಗಳಿಗೆ ಅವರೂ ವಿಕೆಟ್ ಒಪ್ಪಿಸಿದರು. 8.4 ನೇ ಓವರ್ ವೇಳೆ ಮಳೆಯಿಂದಾಗಿ ಪಂದ್ಯ ನಿಂತಿತು. ಬಳಿಕ ಮತ್ತೆ ಮುಂಬೈ ತತ್ತರಿಸಿತು. ಅಂತಿಮ ಓವರ್‌ಗಳಲ್ಲಿ 18 ಬಾಲ್‌ಗಳಲ್ಲಿ 2 ಸಿಕ್ಸರ್, 3 ಬೌಂಡರಿಗಳೊಂದಿಗೆ 32 ರನ್ ಗಳಿಸಿದ ಬಾಷ್ ಸ್ಕೋರ್ ಹಿಗ್ಗಿಸಿದರು.



ಸಿದ್ಧಾರ್ಥ್ ನಾಯರ್‌ಗೆ ಜಯ

ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಸ್ಪರ್ಧೆಯ 15 ವರ್ಷದೊಳಗಿನ ಸಿಂಗಲ್ಸ್ ಬಾಲಕರ ರೌಂಡಪ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ಬೆಂಗಳೂರಿನ ಪ್ರಥಮ ಹರ್ಷ ವಿರುದ್ಧ 21-6, 21-8 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಆರ್. ಅವರು ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ವಿರುದ್ಧ 21-7, 21-7ರಿಂದ ಗೆದ್ದರು.

ರಾಯಚೂರಿನ ರೂಹನ್ ಕರುತುರಿ ಬೆಂಗಳೂರಿನ ಚೇತಸ್ ಮುಂಡುರಗಿ ವಿರುದ್ಧ 25-23, 22-20, ಮೈಸೂರಿನ ಗೌರವ ಎಸ್. ಅವರು ಬೆಂಗಳೂರಿನ ಕೃಷ್ಣಾ ಪ್ರದ್ಯುತ್ ವಿರುದ್ಧ 21-13, 21-14 ರಿಂದ ಪ್ರಾಬಲ್ಯ ಸಾಧಿಸಿದರು. 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಬೆಂಗಳೂರಿನ ಮೈತಾ ನಾಯ್ಡು ಸುರಿ ಶೆಟ್ಟಿ ಅವರು ದಕ್ಷಿತಾ ಮುಂಡ್ಲಾ ವಿರುದ್ಧ 21-10, 21-18 ಅಂತರದಿಂದ ಗೆದ್ದರೆ, ಬೆಂಗಳೂರಿನ ಅರ್ಪಿತಾ ಬಾಬು ಅವರು ಹಮ್ಸಿಶಿಕಾ ಪಾಣಿಗ್ರಾಹಿ ವಿರುದ್ಧ 21-8, 21-11, ಬೆಂಗಳೂರು ಗ್ರಾಮಾಂತರದ ಮಾನ್ಯ ಎಂ ಅವರು ಬೆಂಗಳೂರು ನಗರದ ಚೇಸ್ತಾ ಗುಪ್ತಾ ವಿರುದ್ಧ 21-11, 12-21, 21-9 ರಿಂದ ಗೆಲುವು ದಾಖಲಿಸಿದರು. 15 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್, ಸಿದ್ಧಾರ್ಥ ಎಸ್. ನಾಯರ್ ಅವರು ಬೆಂಗಳೂರಿನ ಓಜಸ್ ಕಾಂತ್ವಿ ನಾಯಕ, ದಾವಣಗೆರೆಯ ವರುಷ್ ಎಸ್ ಗೌಡ ವಿರುದ್ಧ 21-11, 21-10 ಅಂತರದಲ್ಲಿ ಜಯಗಳಿಸಿದ್ದಾರೆ. ದಕ್ಷಿಣ ಕನ್ನಡದ ಕಿಯಾನ್ ಅಬ್ದುಲ್ ನಿಸಾರ್, ಬೆಂಗಳೂರಿನ ಶೈಲೇಶ್ ಶ್ರವಣ ಅವರು ಬೆಂಗಳೂರು ಗ್ರಾಮಾಂತರದ ಚಾರ್ವಿಕ್‌ಗೌಡ, ಉತ್ಕರ್ಷ ಬಿ. ಅಜಯ ವಿರುದ್ಧ 21-14, 21-19 ಅಂತರದಿಂದ ಗೆದ್ದರು.



ಮಾನಸಿಕ ಸವಾಲು ಎದುರಿಸಲು ರಾಹುಲ್ ಸಹಾಯ

ದ್ರಾವಿಡ್‌ರನ್ನು ಎಂದಿಗೂ ಮರೆಯಲಾರೆ: ವಿರಾಟ್


ಬೆಂಗಳೂರು: ನನ್ನ ಕ್ರಿಕೆಟ್ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗಲೂ ನಾನು ಮಾನಸಿಕ ಸವಾಲುಗಳ ವಿರುದ್ಧ ಹೋರಾಡುತ್ತಲೇ ಇದ್ದೆ. ಈ ಸಮಯದಲ್ಲಿ ನನ್ನ ಕೈಹಿಡಿದವರೆಂದರೆ ರಾಹುಲ್ ದ್ರಾವಿಡ್ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಮಂಗಳವಾರ ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ಲ್ಯಾಬ್ ಇಂಡಿಯನ್ ಸ್ಪೋರ್ಟ್ಸ್ ಸಮ್ಮಿಟ್‌ನಲ್ಲಿ ಮಾತನಾಡಿದ ವಿರಾಟ್, ಟೆಸ್ಟ್, ಏಕದಿನ ಮತ್ತು ಟಿ20ಯಲ್ಲಿ ನಾಯಕನಾಗಿದ್ದಾಗ ವಿವಿಧ ರೀತಿಯ ಸವಾಲುಗಳನ್ನು ಎದುರಿಸಿದೆ. ಮುಖ್ಯವಾಗಿ ಮಾನಸಿಕ ಸವಾಲುಗಳು. ಇದೆಲ್ಲಾ ಸವಾಲುಗಳಿಂದ ಹೊರಬರಲು ನನಗೆ ಸಹಾಯ ಮಾಡಿದ್ದು ರಾಹುಲ್ ದ್ರಾವಿಡ್. ಅವರನ್ನು ನಾನು ಜೀವನದಲ್ಲಿ ಎಂದೆಂದಿಗೂ ಮರೆಯಲಾರೆ ಎಂದರು.

ನಾವು ಮೈದಾನದಲ್ಲಿ ಒಂದು ಸಣ್ಣ ಗೀಟಿನ ನಡುವೆ ಇರುತ್ತೇವೆ. ನಮ್ಮ ವೈಯಕ್ತಿಕ ಪ್ರದರ್ಶನದ ಬಗ್ಗೆ ನಮಗೆ ಯಾವಾಗಲೂ ಅನುಮಾನ ಹುಟ್ಟಲಾರಂಭಿಸುತ್ತದೆ. ಈಗಲೂ ನಾನು ನೆಟ್‌ನಲ್ಲಿ ಹೋದಾಗ ಉತ್ತಮ ಫಲಿತಾಂಶ ಬರದಿದ್ದರೆ ಈಗಿನ ಯುವಕರಲ್ಲಿ ಇವರು 20 ಆಡಿದವರೆ ಎಂಬ ಪ್ರಶ್ನೆ ಹುಟ್ಟದರೆ ಎಂಬ ಒತ್ತಡ ನನ್ನೆದುರಿಗೆ ಬರುತ್ತದೆ. ನಾನು ಟೆಸ್ಟ್ ತಂಡದ ನಾಯಕನಾಗಿದ್ದಾಗ ಇಂಥ ಪ್ರಶ್ನೆ ಬಹುತೇಕ ದಿನವೂ ಎದುರಿಸುತ್ತಿದೆ. ಆ ಸಮಯದಲ್ಲಿ ನನ್ನಲ್ಲಿ ಒಂದಿಷ್ಟು ಧೈರ್ಯ ತುಂಬಿದವರೆಂದರೆ ಅದು ಕೋಚ್ ರಾಹುಲ್ ಎಂದು ಹೇಳಿದರು.

ರಾಹುಲ್ ವೃತ್ತಿಜೀವನವೇ ಪ್ರೇರಣೆ: ನಾನು ಈ ಬಗ್ಗೆ ರಾಹುಲ್ ಮತ್ತು ಅಂದಿನ ಬ್ಯಾಟಿಂಗ್ ಕೋಚ್ ವಿಕ್ರಮ ರಾಥೋಡ್ ಅವರೊಂದಿಗೆ ಮಾತನಾಡುತ್ತಿದ್ದೆ. ಮುಖ್ಯವಾಗಿ ರಾಹುಲ್ ಅವರ ವೈಯಕ್ತಿಕ ಕರಿಯರ್ ನನಗೆ ಇದರಿಂದ ಹೊರಬರಲು ಪ್ರೇರಣೆ ನೀಡಿತ್ತು. ಈ ಬಗ್ಗೆ ಮಾತನಾಡುತ್ತಲೇ ನನಗೆ ಅವರಿಬ್ಬರೂ ನಾನು ಟೆಸ್ಟ್ ಕ್ರಿಕೆಟ್‌ಗೆ ಏನು ಮಾಡಿದ್ದೇನೆ, ನಾನು ಮಾಡಿದ ದಾಖಲೆಗಳೇನು. ಕೊಡುಗೆಗಳೇನು ಎಂಬುದರ ಬಗ್ಗೆ ನೆನಪಿಸುತ್ತಿದ್ದರು. ಆದರಿಂದಲೇ ನಾನು ಹೊರಬಂದು ಅಸಲು ಆಟವಾಡಲು ಸಾಧ್ಯವಾಗುತ್ತಿತ್ತು ಎಂದು ಕೊಹ್ಲಿ ಹೇಳಿದ್ದಾರೆ.

ಹಾಕಿ ಆಟಗಾರರಿಗೆ ಇರುವ ಫಿಟ್ನೆಸ್ ನಮಗಿಲ್ಲ: ನಮ್ಮ ದೇಶದಲ್ಲಿ ಕ್ರಿಕೆಟ್ ಒಂದು ಪ್ರೈಮ್ ಫೋಕಸ್ ಇರುವ ಕ್ರೀಡೆ. ಆದರೆ ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ವಿಚಾರವೇನೆಂದರೆ ಹಾಕಿ ಆಟಗಾರರಿಗಿರುವ ಶೇ. 15ರಷ್ಟು ಫಿಟ್ನೆಸ್ ಕೂಡ ನಮಗಿಲ್ಲ. ನಮ್ಮ ಫಿಟ್ನೆಸ್ ಮತ್ತು ಆಟದ ಸೆಷನ್‌ಗಳನ್ನು ನಮ್ಮ ದೇಶದ ಹಾಕಿ ಆಟಗಾರರು ನೋಡಿಬಿಟ್ಟರೆ ನಗುತ್ತಾರೆ. ಏಕೆಂದರೆ ಅವರು ನಾವು ಮಾಡುವ ಪರಿಶ್ರಮಕ್ಕಿಂತ ಹೆಚ್ಚಿನ ಕಷ್ಟಪಡುತ್ತಾರೆ.



ಟೆಸ್ಟ್ ಬಿಟ್ಟ ಕಾರಣ ಬಹಿರಂಗ

ನಮ್ಮ ಬ್ಯಾಟಿಂಗ್ ಘಟಕ ಮತ್ತು ನಾಯಕತ್ವದ ಕೇಂದ್ರಬಿಂದುವಾದ ಸ್ಥಳದಲ್ಲಿ ನಾನು ಕೊನೆಗೊಂಡೆ. ಭಾರತೀಯ ಕ್ರಿಕೆಟ್ ಉನ್ನತ ಸ್ಥಾನದಲ್ಲಿ ಉಳಿಯುವಂತೆ ನೋಡಿಕೊಳ್ಳಲು ನಾನು ತುಂಬಾ ಉತ್ಸುಕನಾಗಿದ್ದೆ. ಅದಕ್ಕಾಗಿಯೇ ನಾನು ನಾಯಕತ್ವವನ್ನು ತೊರೆಯುವ ಹೊತ್ತಿಗೆ, ನಾನು ಸಂಪೂರ್ಣವಾಗಿ ಕಳೆದುಹೋಗಿದ್ದೆ. ನಾನು ಅದರಿಂದ ಸಂಪೂರ್ಣವಾಗಿ ಮುಳುಗಿದ್ದೆ. ಅದು ಭಯಾನಕವಾಗಿತ್ತು. ನಿರೀಕ್ಷೆಗಳನ್ನು ನಿರ್ವಹಿಸುವುದು ಕಷ್ಟಕರವಾಗಿತ್ತು. ಕೊಹ್ಲಿ ಹೇಳಿದರು. ನಿಮಗೆ ತಿಳಿದಿದೆ, ಅಭದ್ರತೆ ಬದಲಾವಣೆಯಾಗಲು ಬಿಡುವುದಿಲ್ಲ. ಅದಕ್ಕಾಗಿ, ನಾನು ನಿರ್ವಹಣೆಗೆ ಮತ್ತು ತಂಡಕ್ಕೆ ಮನ್ನಣೆ ನೀಡಬೇಕು. ಆದರೆ ಫಾರ್ಮ್ ಹೆಚ್ಚು ಕಾಲ ಉಳಿಯುವುದಿಲ್ಲ, ಆಗ, ಹೌದು, ಆ ಎರಡೂ ಜವಾಬ್ದಾರಿಗಳು ನಿಮ್ಮ ಮೇಲೆ ಭಾರವಾಗಲು ಪ್ರಾರಂಭಿಸುತ್ತವೆ. ಆದ್ದರಿಂದ, ಕಠಿಣವಾಗಿತ್ತು, ಎಂದು ಅವರು ಹೇಳಿದರು.

ಎಸ್.ಎಂ ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ | ಮುನ್ನಡೆದ ಏಕೈಕ ಆಟಗಾರ

ಟೆನಿಸ್: ಕ್ವಾರ್ಟರ್‌ಗೆ ಶಶಿಕುಮಾರ್

ಬೆಂಗಳೂರು: ಇಲ್ಲಿ ನಡೆಯುತ್ತಿರುವ ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಮುಕುಂದ್ ಶಶಿಕುಮಾರ್ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ ಏಕೈಕ ಭಾರತೀಯ ಆಟಗಾರರಾಗಿ ಹೊರಹೊಮ್ಮಿದರು.

ಇದೇ ವೇಳೆ ವೈಲ್ಡ್ ಕಾರ್ಡ್ ಆಟಗಾರ ಕ್ರೀಶ್ ತ್ಯಾಗಿ ಮತ್ತೊಮ್ಮೆ ಹೋರಾಟಮಯ ಪ್ರದರ್ಶನ ನೀಡಿದರೂ ಮೂರನೇ ಶ್ರೇಯಾಂಕಿತ ಬ್ರಿಟನ್‌ನ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಸೋಲನುಭವಿಸಿ ತಮ್ಮ ಅಭಿಯಾನಕ್ಕೆ ತೆರೆ ಎಳೆದರು. ಜಪಾನ್‌ನ ಅರ್ಹತಾ ಸುತ್ತಿನ ಆಟಗಾರ ತೈಯೊ ಯಮಾನಾಕಾ ವಿರುದ್ಧ ಮುಕುಂದ್ 6-4, 7-6 (1) ಅಂತರದಲ್ಲಿ ಗೆದ್ದು ಕೊನೆಯ ಎಂಟರ ಘಟ್ಟ ತಲುಪಿದರು. ಮೊದಲ ಸೆಟ್‌ನ 10ನೇ ಗೇಮ್‌ನಲ್ಲಿ ನಿರ್ಣಾಯಕ ಬ್ರೇಕ್ ಸಾಧಿಸಿದ ಮುಕುಂದ್ ಮುನ್ನಡೆ ಪಡೆದರು. ಎರಡನೇ ಸೆಟ್ ತೀವ್ರ ಪೈಪೋಟಿಯಿಂದ ಕೂಡಿದ್ದು, ಯಮಾನಾಕಾ ಬಲಿಷ್ಠ ಸರ್ವ್ ಮೂಲಕ ಒತ್ತಡ ತಂದರು.


ಒಂದು ಹಂತದಲ್ಲಿ ಸೆಟ್ ಪಾಯಿಂಟ್ ಎದುರಿಸಿದ್ದ ಮುಕುಂದ್ ಅದ್ಭುತ ಮರಳಾಟ ನೀಡಿ ಟೈಬ್ರೇಕ್‌ಗೆ ಪಂದ್ಯ ಕೊಂಡೊಯ್ದರು. ಬಳಿಕ ಟೈಬ್ರೇಕ್‌ನಲ್ಲಿ ಕೇವಲ ಒಂದು ಅಂಕ ಬಿಟ್ಟುಕೊಟ್ಟು 1 ಗಂಟೆ 46 ನಿಮಿಷಗಳ ಹೋರಾಟದಲ್ಲಿ ಜಯ ಸಾಧಿಸಿದರು. ಡಬಲ್ಸ್ ವಿಭಾಗದಲ್ಲೂ ಮುಕುಂದ್ ಉತ್ತಮ ಪ್ರದರ್ಶನ ನೀಡಿದರು. ಆದಿಲ್ ಕಲ್ಯಾಣಪುರ ಜೊತೆಗೂಡಿ ಡೊಮಿನಿಕ್ ಪಾಲನ್ ಮತ್ತು ದಿಗ್ವಿಜಯಪ್ರತಾಪ್ ಸಿಂಗ್ ಜೋಡಿಯನ್ನು 6-3, 7-5 ಅಂತರದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕ್ರಿಶ್‌ಗೆ ನಿರಾಸೆ: ಇನ್ನೊಂದೆಡೆ, ಬೆಂಗಳೂರು ಮೂಲದ ಕ್ರೀಶ್ ತ್ಯಾಗಿ ಮೂರನೇ ಶ್ರೇಯಾಂಕಿತ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಎರಡು ಗಂಟೆಗಳಿಗಿಂತ ಹೆಚ್ಚು ಕಾಲ ಕಠಿಣ ಹೋರಾಟ ನಡೆಸಿದರು. ಮೊದಲ ಸೆಟ್ 6-4 ಅಂತರದಲ್ಲಿ ಗೆದ್ದ ಕ್ರೀಶ್, ಎರಡನೇ ಸೆಟ್‌ನಲ್ಲೂ ಆರಂಭಿಕ ಮುನ್ನಡೆ ಪಡೆದಿದ್ದರು. ಆದರೆ ಅನುಭವದ ಆಟ ಪ್ರದರ್ಶಿಸಿದ ಸ್ಟುವರ್ಟ್ ಪಂದ್ಯವನ್ನು 4-6, 6-4, 6-3 ಅಂತರದಲ್ಲಿ ತಿರುಗಿಸಿಕೊಂಡರು. ಭಾರತದ ಸಿದ್ಧಾರ್ಥ್ ರಾವತ್ ಅಭಿಯಾನವೂ ಅಂತ್ಯಗೊಂಡಿತು. ಅವರು ಸರ್ಬಿಯಾದ ಆರನೇ ಶ್ರೇಯಾಂಕಿತ ಒಗ್ನೆನ್ ಮಿಲಿಕ್ ವಿರುದ್ಧ 6-3, 6-1 ಅಂತರದಲ್ಲಿ ಸೋತರು. ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ಕೀಗನ್ ಸ್ಮಿತ್ ವಿರುದ್ಧ ಅಚ್ಚರಿ ಜಯ ಸಾಧಿಸಿದ್ದ ಮನೀಶ್ ಸುರೇಶ್‌ಕುಮಾರ್ ಕೂಡ ಮಾಜಿ ವಿಶ್ವ ನಂ. 40 ಇಲ್ಯಾ ಇವಾಶ್ಕಾ ವಿರುದ್ಧ 1-6, 1-6 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5990

ಎಡದಿಂದ ಬಲಕ್ಕೆ
2.ವಾಚನ-ಲೋರಿ ಸೇರಿ ಕಣ್ಣೀರಾಯ್ತು (5)
6.ಪಾಪಿಗಳ ಲೋಕದ ಒಡೆಯ (2)
8.ಮಾನವಕುಲದ ಮೂಲಪುರುಷ (2)
9.ಅತಿಯಾದ ಕೌತುಕವಿದು (3)
10.ತಾತ್ಕಾಲಿಕ-ಕೂಡಲೆ ಬಂದು ಹೋಗುವಂಥಾದ್ದು (3)
11.ರಮಣನು ಏರಿ ಕುಳಿತ ವೃಕ್ಷ (2)
12.ತಿಂಡಿ ಕಡಿಯುವ ದಂತ ತಿರುಗಿದೆ (2)
14.ವಿವೇಚನಾ ಶಕ್ತಿ-ಅರಿವು ಇದು (5)
16.ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡ ಪಕ್ಷ (4)
17.ಚೂರುಚೂರಾಗಿರುವುದು ದ್ವಿರುಕ್ತಿಯಲ್ಲಿದೆ (4)

ಮೇಲಿನಿಂದ ಕೆಳಕ್ಕೆ
1.ಸಂಖ್ಯೆಯ ಕ್ರಮದಲ್ಲಿ ಮೂರನೆಯದು (3)
3.ಕೋಕಪಕ್ಷಿಯ ಮೊದಲು ಗಾಲಿಯಿದೆ (4)
4.ನೀರಲ್ಲಿ ಹುಟ್ಟುವ ಹೂವಿನಂಥಹ ಕಣ್ಣುಳ್ಳವನು (4)
5.ದಾಸನು ಶೇಖರಿಸಿಟ್ಟ ಸಾಮಾನು (3)
7.ಚುನಾವಣೆಯಲ್ಲಿ ತನ್ನ ಅಭಿಪ್ರಾಯ ತಿಳಿಸುವವನು (4)
8.ಮಮ-ಕಲ್ಲು ಒಳಗೊಂಡ ಮೃದುಬಟ್ಟೆ (4)
11.ಉಸುಕು ತುಂಬಿದ ವಿಶಾಲಪ್ರದೇಶ (4)
13.ಪಟ್ಟು ಹಿಡಿಯುವವನು-ಛಲ ಬಿಡದವನು (4)
14.ರೀತಿ-ಕ್ರಮವಿಲ್ಲಿ ತಲೆಕೆಳಗಾಗಿದೆ (3)
15.ಕೆಳಗಿನಿಂದ ಮೇಲೇರಿದ ಸಖಿ (3)

5989 ಉತ್ತರ

ಎಡದಿಂದ ಬಲಕ್ಕೆ:
1.ದೂರದರ್ಶಕಯಂತ್ರ
3.ಹರ 4.ಪಟ್ಟಿ
5.ಹಂದರ 7.ರಾಣಿವಾಸ
9.ಕಸಕಸೆ 11.ಅಡಕಲು
13.ಅಪಾದಿತ
15.ನಮೂದಿಸು
16.ಲಗಾಯಿಸು

ಮೇಲಿನಿಂದ ಕೆಳಕ್ಕೆ:
1.ದೂರವಾಣಿ 2.ಕರಪತ್ರ
5.ಹಂಸ 6.ಕರ
8.ವಾಹಕ 10.ಪಾಯಸ
11.ಅಡಮಾನ
12.ಲುಟಾಯಿಸು
13.ಆಪತ್ಕಾಲ 14.ತವಕಿಸು

ಕಿರುಸುದ್ದಿ

ಕಲ್ಲಡ್ಕ-ಚೆರ್ಕಳ ರಸ್ತೆಗೆ ಟೆಂಡರ್: 29.83 ಕೋ.ರೂ. ಕಾಮಗಾರಿಗೆ ಅಂಗೀಕಾರ

ಕಾಸರಗೋಡು: ಶಾಸಕರಾಗಿ ಆಯ್ಕೆಯಾದ ಕಲ್ಲಟ್ರ ಮಾಹಿನ್ ಹಾಜಿಯವರ ವಿನಂತಿ ಮೇರೆಗೆ ಸಿಎಂ ವಿ.ಡಿ.ಸತೀಶನ್ ನೇರವಾಗಿ ಮಧ್ಯಪ್ರವೇಶಿಸಿ ಕಲ್ಲಡ್ಕ – ಚೆರ್ಕಳ ರಸ್ತೆ ಅಭಿವೃದ್ಧಿಗೆ 29.83 ಕೋಟಿ ರೂ.ಗಳ ಟೆಂಡರ್ ಕ್ರಮ ಅಂಗೀಕರಿಸಲಾಗಿದೆ. ಈ ಮೊದಲು ಆಡಳಿತಾನುಮತಿ ಲಭಿಸಿಯೂ ತಾಂತ್ರಿಕ ಕಾರಣ ಹೇಳಿ ಕೈ ಬಿಡಲಿರುವ ಯತ್ನ ನಡೆಯುತ್ತಿದ್ದ ಮಧ್ಯೆ, ಮುಖ್ಯಮಂತ್ರಿಯ ಈ ಮಧ್ಯಪ್ರವೇಶದಿಂದ ಆನುಕೂಲ ಕ್ರಮ ಉಂಟಾಗಿದೆ. ಕಿ.ಮೀ.33/000, 52/190 ವರೆಗಿರುವ ಭಾಗದಲ್ಲಿ ಮೊದಲ ಹಂತದಲ್ಲಿ ಕಾಮಗಾರಿ ಪೂರ್ತಿಗೊಳಿಸಲಾಗಿತ್ತು. ಪ್ರಸ್ತುತ ರಸ್ತೆಯ ಬಿಸಿ ಕಾಮಗಾರಿಗೆ ಬೇಕಾಗಿ 29.83 ಕೋ.ರೂ.ಗಳ ಎಸ್ಟಿಮೇಟ್‌ಗೆ ಟೆಂಡರ್ ಕ್ರಮ ಪೂರ್ತಿಗೊಳಿಸಲಾಗಿದೆ. ಕಿಫ್‌ಬಿ ಸಿಇಒ ಮಿನಿ ಆ್ಯಂಟನಿ, ಕೆಆರ್‌ಎಫ್‌ಬಿ ಪ್ರಾಜೆಕ್ಟರ್ ಡೈರೆಕ್ಟರ್ ಅಶೋಕ್‌ಕುಮಾರ್ ಎಂಬವರ ನ್ನೊಂದಿಗೆ ಕಲ್ಲಟ್ರ ಮಾಹಿನ್ ಚರ್ಚೆ ನಡೆಸಿದರು. ಜಾಸ್ಮಿನ್ ಕನ್‌ಸ್ಟ್ರೇಶನ್ ಕಂಪೆನಿ ಕಾಮಗಾರಿ ವಹಿಸಿಕೊಂ ಡಿದೆ. ಈ ವೇಳೆ ಮಾಹಿನ್ ಕೇಳೋಟ್ ಜೊತೆಗಿದ್ದರು.

ಪೆರಾಜೆ ಕಣಜದ ಹುಳು ಕಡಿದು ವ್ಯಕ್ತಿ ಮೃತ್ಯು

ಸುಳ್ಯ: ಕಣಜದ ಹುಳು ಕಡಿತದು ವ್ಯಕ್ತಿಯೊರ್ವರು ಮೃತಪಟ್ಟ ಘಟನೆ ಪೆರಾಜೆ ಗ್ರಾಮದ ಹೊದ್ದೆಟ್ಟಿಯಲ್ಲಿ ನಡೆದಿದೆ. ಮೃತ ವ್ಯಕ್ತಿಯನ್ನು ಜಗದೀಶ (53) ಎಂದು ಗುರುತಿಸಲಾಗಿದ್ದು, ತಮ್ಮ ತೋಟದಲ್ಲಿ ಕೆಲಸ ನಿರ್ವಹಿಸುವಾಗ ಕಣಜದ ಹುಳು ದಾಳಿ ನಡೆಸಿತ್ತು. ಪ್ರಜ್ಞೆ ತಪ್ಪಿ ಬಿದ್ದಿದ್ದ ಅವರನ್ನು ಕೂಡಲೇ ಸುಳ್ಯ ಸರಕಾರಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಲಾಯಿತಾದರೂ ಅವರು ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟರು. ಮೃತರು ಪತ್ನಿ ಹಾಗೂ ಕುಟುಂಬಸ್ಥರನ್ನು ಅಗಲಿದ್ದಾರೆ.



ಗಂಟಲಲ್ಲಿ ಎದೆಹಾಲು ಸಿಲುಕಿದ ಶಂಕೆ: ಮೂರು ತಿಂಗಳ ಮಗು ಸಾವು

ಕಾಸರಗೋಡು: ಗಂಟಲಲ್ಲಿ ಎದೆಹಾಲು ಸಿಲುಕಿರುವುದಾಗಿ ಶಂಕಿಸಲಾಗುತ್ತಿರುವ ಮೂರು ತಿಂಗಳ ಗಂಡು ಮಗು ಸಾವನ್ನಪ್ಪಿದ ಘಟನೆ ನಡೆದಿದೆ. ನಗರದ ನೆಲ್ಲಿಕುಂಜೆ ಕಸಬಾ ತಾಯಲ್ ಹೌಸ್‌ನ ಶಾಜಹಾನ್ ಮತ್ತು ಆಯಿಷಾ ದಂಪತಿಯ ಮಗು ಮೃತಪಟ್ಟಿದೆ. ಈ ಮಗುವಿಗೆ ಮಂಗಳವಾರ ರಾತ್ರಿ ತಾಯಿ ಎದೆಹಾಲು ಉಣಿಸಿ ತೊಟ್ಟಿಲಲ್ಲಿ ಮಲಗಿಸಿದ್ದರೆನ್ನಲಾಗಿದೆ. ಬುಧವಾರ ಬೆಳಗ್ಗೆ ಎದ್ದು ನೋಡಿದಾಗ ಮಗು ಚಲನರಹಿತವಾಗಿರುವುದನ್ನು ಗಮನಿಸಿದ ಮನೆಯವರು ಮಗುವನ್ನು ತಕ್ಷಣ ನಗರದ ಖಾಸಗಿ ಆಸ್ಪತ್ರೆಗೆ ಸಾಗಿಸಿದ್ದರು. ವೈದ್ಯರು ಮಗುವಿನ ಆರೋಗ್ಯ ತಪಾಸಣೆ ನಡೆಸಿದಾಗ ಮಗು ಮೃತಪಟ್ಟಿರುವುದನ್ನು ದೃಢಪಡಿಸಿರುವುದಾಗಿ ಪೊಲೀಸರು ತಿಳಿಸಿದರು. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಮಗುವಿನ ಸಾವಿನ ನಿಖರ ಮಾಹಿತಿ ಲಭಿಸಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಹಟ್ಟಿಯಿಂದ ಕರುವನ್ನು ಕಚ್ಚಿಕೊಂಡು ಹೋಗಿ ಕೊಂದು ತಿಂದ ಚಿರತೆ

ಕಾಸರಗೋಡು: ಮಡಿಕ್ಕೈ ಪಂಚಾಯತ್‌ನ ವೆಳ್ಳುಡದಲ್ಲಿ ಚಿರತೆ ಪ್ರತ್ಯಕ್ಷಗೊಂಡಿದೆ. ಹಟ್ಟಿಗೆ ನುಗ್ಗಿದ ಚಿರತೆ ಕರುವನ್ನು ಕಚ್ಚಿಕೊಂಡು ಹೋಗಿ ಕೊಂದು ತಿಂದಿದೆ. ಮಡಿಕ್ಕೈ ಪಂಚಾಯತ್‌ನ ಹೈನುಗಾರ ಸುರೇಶ್‌ರ ಹಟ್ಟಿಯಿಂದ ಚಿರತೆ ಕರುವನ್ನು ಕಚ್ಚಿಕೊಂಡು ಹೋಗಿದೆ. ಹಟ್ಟಿಯಲ್ಲಿ ಸುಮಾರು 40ರಷ್ಟು ದನಗಳಿವೆ. ಎಂದಿನಂತೆ ಮಂಗಳವಾರ ರಾತ್ರಿ 7 ಗಂಟೆಯ ವೇಳೆ ದನಗಳಿಗೆ ಮೇವು ನೀಡಲು ಸುರೇಶ್ ಹಟ್ಟಿಗೆ ತಲುಪಿದಾಗ ಕರು ನಾಪತ್ತೆಯಾದ ಬಗ್ಗೆ ತಿಳಿದುಬಂದಿದೆ. ಹುಡಕಾಡಿದರೂ ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ರಾತ್ರಿಯಾದ ಕಾರಣ ಹೆಚ್ಚು ಹುಡುಕಾಟ ನಡೆಸಿರಲಿಲ್ಲ. ಬುಧವಾರ ಬೆಳಗ್ಗೆ ವ್ಯಾಪಕ ಹುಡುಕಾಟ ನಡೆಸಿದಾಗ ಸಮೀಪದ ಕಾಡಿನಲ್ಲಿ ಕರುವಿನ ಅವಶಿಷ್ಟಗಳು ಕಂಡುಬಂದಿದೆ. ಕರುವನ್ನು ಕಚ್ಚಿ ಎಳೆದೊಯ್ದು ದಾರಿಯಲ್ಲೇ ಸಾಗಿಸಿದಾಗ ಕಳೇಬರ ಪತ್ತೆಯಾಗಿದೆ. ಮಾಹಿತಿ ತಿಳಿದು ಹಲವಾರು ಮಂದಿ ಸ್ಥಳಕ್ಕೆ ತಲುಪಿದ್ದಾರೆ. ಮೂರು ತಿಂಗಳ ಹಿಂದೆ ಈ ಪ್ರದೇಶದಲ್ಲಿ ಚಿರತೆ ಪ್ರತ್ಯಕ್ಷಗೊಂಡಿತ್ತೆಂದು ಹೇಳಲಾಗುತ್ತಿದೆ.

ರಾಜಾರೋಶವಾಗಿ ಅಕ್ರಮ ಮರಳು ದಂಧೆ | ಉಡುಪಿ ಜಿಲ್ಲಾಧಿಕಾರಿಗಳ ನಿರ್ಲಕ್ಷ್ಯಕ್ಕೆ ಲೋಕಾಯುಕ್ತ ಚಾಟಿ

ತನಿಖೆಗೆ ಹೈ-ಪ್ರೊಫೈಲ್ ಸಮಿತಿ ರಚನೆ

ಉಡುಪಿ: ಜಿಲ್ಲೆಯಲ್ಲಿ ರಾಜಾರೋಷವಾಗಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉಡುಪಿ ಜಿಲ್ಲಾಧಿಕಾರಿಗಳ ತೀವ್ರ ನಿರ್ಲಕ್ಷ್ಯದ ಧೋರಣೆಗೆ ಕರ್ನಾಟಕ ಲೋಕಾಯುಕ್ತರು ಭಾರೀ ಚಾಟಿ ಬೀಸಿದ್ದಾರೆ.

ದಂಧೆಯ ಗಂಭೀರತೆಯನ್ನು ಪರಿಗಣಿಸಿ ವರದಿ ಸಲ್ಲಿಸುವಂತೆ ಈ ಹಿಂದೆ ಸ್ಪಷ್ಟ ನಿರ್ದೇಶನ ನೀಡಲಾಗಿದ್ದರೂ, ಜಿಲ್ಲಾಧಿಕಾರಿಯವರು ಯಾವುದೇ ವರದಿ ಸಲ್ಲಿಸದ ನಡೆಗೆ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೇ20ರಂದುನಡೆದಪ್ರಕರಣದವಿಚಾರಣೆಗೂ ಜಿಲ್ಲಾಧಿಕಾರಿಯವರು ಆಡಳಿತಾತ್ಮಕ ಕಾರಣಗಳನ್ನು ನೀಡಿ ಗೈರಾಗಿದ್ದು, ಅವರ ಪರವಾಗಿ ಹಿರಿಯ ಭೂವಿಜ್ಞಾನಿ ವಿಂಧ್ಯಾ ಅವರು ಹಾಜರಾಗಿದ್ದರು. ಈ ಬೇಜವಾಬ್ದಾರಿತನಕ್ಕೆ ಕಿಡಿಕಾರಿರುವ ಲೋಕಾಯುಕ್ತರು, 'ರಾಜ್ಯದ ಹಲವು ಭಾಗಗಳಲ್ಲಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆಯು ಅತ್ಯಂತ ದೊಡ್ಡ ದಂಧೆ ಮತ್ತು ಹಗರಣವಾಗಿದೆ. ಪರಿಸರ ಮತ್ತು ನೈಸರ್ಗಿಕ ಹಿತಾಸಕ್ತಿಗಳನ್ನು ಗಾಳಿಗೆ ತೂರಿ ಬೃಹತ್ ಪ್ರಮಾಣದಲ್ಲಿ ಮರಳು ಲೂಟಿ ಮಾಡಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಪರವಾನಗಿದಾರರೊಂದಿಗೆ ಶಾಮೀಲಾಗದ ಹೊರತು ಇಂತಹ ಘೋರ ಅಕ್ರಮಗಳು ಸಾಧ್ಯವೇ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಜಿಪಿಎಸ್ ಇಲ್ಲದೆ ಲೂಟಿ; ಮೂಕಪ್ರೇಕ್ಷಕಿಯಾದ ಜಿಲ್ಲಾಡಳಿತ

ಲೋಕಾಯುಕ್ತ ಪೊಲೀಸರು ಏ. 27 ರಂದು ಸಲ್ಲಿಸಿರುವ ಸ್ಥಳ ಪರಿಶೀಲನಾ ವರದಿಯು ಜಿಲ್ಲಾಡಳಿತದ ವೈಫಲ್ಯವನ್ನು ಸಂಪೂರ್ಣವಾಗಿ ಬಯಲು ಮಾಡಿದೆ. ಅನುಮತಿಸಲಾದ ಗಡಿಯನ್ನು ಮೀರಿ, ನದಿಯ ಪಾತ್ರವನ್ನು ಆಳವಾಗಿ ಅಗೆದು ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿದೆ. ನಿಯಮದ ಪ್ರಕಾರ ನೀರಿನ ಬಲೂನ್‌ಗಳ ಮೂಲಕ ಗಡಿ ಗುರುತಿಸಬೇಕಿದ್ದರೂ, ಅದಕ್ಕಿಂತ 300 ಮೀಟರ್‌ಗೂ ಅಧಿಕ ದೂರದ ವ್ಯಾಪ್ತಿಯಲ್ಲಿ ದೋಣಿಗಳ ಮೂಲಕ ಮರಳು ಎತ್ತಲಾಗುತ್ತಿದೆ. ನದಿಯ ದಂಡೆಯಿಂದ ಕೇವಲ 10 ಅಡಿ ದೂರದಲ್ಲೇ ಮರಳು ಅಗೆಯಲಾಗುತ್ತಿದ್ದರೂ ಜಿಲ್ಲಾಧಿಕಾರಿಯಾಗಲಿ ಅಥವಾ ಗಣಿ ಇಲಾಖೆಯಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಮರಳು ಸಾಗಿಸುವ ದೋಣಿಗಳಿಗೆ ಜಿಪಿಎಸ್ ಅಳವಡಿಸದೆ, ಯಾವೊಬ್ಬ ಅಧಿಕಾರಿಯೂ ಇದರ ಮೇಲ್ವಿಚಾರಣೆ ನಡೆಸದೆ ದಂಧೆಕೋರರಿಗೆ ಮುಕ್ತ ಅವಕಾಶ ಮಾಡಿಕೊಡಲಾಗಿದೆ. ನದಿಯ ಹರಿವಿನಲ್ಲಿ ನೈಸರ್ಗಿಕವಾಗಿ ರೂಪುಗೊಂಡ ದ್ವೀಪಗಳನ್ನೂ ಸಹ ಗುರಿಯಾಗಿಸಿಕೊಂಡು ನಾಶಪಡಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಡಿಸಿಗೆ ವಿವರಣೆಗೆ ಆದೇಶ; ತಜ್ಞರ ಜಂಟಿ ಸಮಿತಿ ಸ್ಥಳಕ್ಕೆ

ಸದ್ಯಕ್ಕೆ ಜಿಲ್ಲಾಡಳಿತವಾಗಲಿ ಅಥವಾ ಗಣಿ ಇಲಾಖೆಯಾಗಲಿ ಯಾವುದೇ ತಡೆಗಟ್ಟುವ ಅಥವಾ ದಂಡನಾತ್ಮಕ ಕ್ರಮಗಳನ್ನು ಕೈಗೊಳ್ಳದಿರುವುದು ಸ್ಪಷ್ಟವಾಗಿದ್ದು, ಲೋಕಾಯುಕ್ತ ಪೊಲೀಸರ ವರದಿಯನ್ನು ಸ್ವೀಕರಿಸಿದ ನಂತರ ಮುಂದಿನ ವಿಚಾರಣೆಯ ದಿನಾಂಕದಂದು ಜಿಲ್ಲಾಧಿಕಾರಿ ಮತ್ತು ಹಿರಿಯ ಭೂವಿಜ್ಞಾನಿ ಇಬ್ಬರೂ ತಮ್ಮ ಲಿಖಿತ ವಿವರಣೆಯನ್ನು ಸಲ್ಲಿಸಬೇಕೆಂದು ಲೋಕಾಯುಕ್ತರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಈ ವ್ಯವಸ್ಥಿತ ಹಗರಣ ದಿಂದಾಗಿ ಸರ್ಕಾರಿ ಖಜಾನೆಗೆ ಆಗಿರುವ ಆರ್ಥಿಕ ನಷ್ಟದ ಪ್ರಮಾಣ ಹಾಗೂ ಪರಿಸರಕ್ಕೆ ಉಂಟಾಗಿರುವ ಹಾನಿಯನ್ನು ಅಂದಾಜು ಮಾಡಲು ಲೋಕಾಯುಕ್ತರು ಉನ್ನತ ಮಟ್ಟದ ತಜ್ಞರ ಜಂಟಿ ಸಮಿತಿಯೊಂದನ್ನು ರಚಿಸಿದ್ದಾರೆ. ಈ ವಿಶೇಷ ಸಮಿತಿಯಲ್ಲಿ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪರಿಸರ ವಿಭಾಗ ಮತ್ತು ಭೂ ವಿಜ್ಞಾನ ವಿಭಾಗದ ಮುಖ್ಯಸ್ಥರು, ಕುಂದಾಪುರದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿಯ ಉಡುಪಿ ಜಿಲ್ಲಾ ಹಿರಿಯ ಪರಿಸರ ಅಧಿಕಾರಿ, ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್, ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಉಡುಪಿ ಲೋಕಾಯುಕ್ತದ ಪೊಲೀಸ್ ಉಪಾಧೀಕ್ಷಕರು ತನಿಖಾ ತಂಡದ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ. ಸಮಿತಿಯು ಮೇ 21ರಂದೇ ಸ್ಥಳಕ್ಕೆ ಜಂಟಿ ಭೇಟಿ ನೀಡಲಿದ್ದು, ಪ್ರತಿಯೊಬ್ಬ ತಜ್ಞರು ತಮ್ಮ ವಿಸ್ತೃತ ವರದಿಯನ್ನು ಜೂನ್ 16ರ ಒಳಗಾಗಿ ಸಲ್ಲಿಸಬೇಕಾಗಿದೆ. ಈ ಆದೇಶದ ಪ್ರತಿಯನ್ನು ಬೆಂಗಳೂರಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೂ ರವಾನಿಸಲಾಗಿದ್ದು, ಮುಂದಿನ ವಿಚಾರಣೆಯನ್ನು ಜೂನ್ 20ಕ್ಕೆ ನಿಗದಿಪಡಿಸಲಾಗಿದೆ.

» ಪ್ರತಿಯೊಬ್ಬ ತಜ್ಞರು ತಮ್ಮ ವಿಸ್ತೃತ ವರದಿಯನ್ನು ಜೂನ್ 16 ರ ಒಳಗಾಗಿ ಸಲ್ಲಿಸಬೇಕಾಗಿದೆ.

ಆನ್‌ಲೈನ್‌ನಲ್ಲಿ ಮಾರಾಟಕ್ಕೆ ವ್ಯಾಪಾರಿಗಳ ವಿರೋಧ

ಹಲವೆಡೆ ಔಷಧಿ ಅಂಗಡಿ ಬಂದ್

ಮಂಗಳೂರು/ ಉಡುಪಿ/ ಮಡಿಕೇರಿ: ಆನ್‌ಲೈನ್‌ನಲ್ಲಿ ಔಷಧ ಮಾರಾಟ ವಿರೋಧಿಸಿ ಔಷಧ ವ್ಯಾಪಾರಿಗಳ ಸಂಘ ನೀಡಿರುವ ಕರೆಯಂತೆ ಮಂಗಳೂರು, ಉಡುಪಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬುಧವಾರ ಪ್ರಮುಖ ಔಷಧ ಮಳಿಗೆಗಳು ಬಂದ್ ಆಗಿದ್ದವು.

ಮಂಗಳೂರು ನಗರದ ಪ್ರಮುಖ ಔಷಧ ಮಳಿಗೆಗಳಾದ ರಾಧಾ ಮೆಡಿಕಲ್ಸ್, ಗಣೇಶ ಮೆಡಿಕಲ್ಸ್, ಸಿಟಿ ಡ್ರಗ್ ಹೌಸ್, ಮೆಡ್ ಕೇರ್ ಮೆಡಿಕಲ್ಸ್ ಸೇರಿದಂತೆ ಹಲವು ಮಳಿಗೆಗಳು ಬಾಗಿಲು ಮುಚ್ಚಿದ್ದವು.

ಮಂಗಳವಾರ ರಾತ್ರಿ 12ರಿಂದ ಬುಧವಾರ ರಾತ್ರಿ 12ರವರೆಗೆ ಔಷಧ ಅಂಗಡಿಗಳನ್ನು ಬಂದ್ ಮಾಡುವಂತೆ ಅಖಿಲ ಭಾರತ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್ ಅಸೋಸಿಯೇಷನ್ ದೇಶವ್ಯಾಪಿ ಬಂದ್‌ಗೆ ಕರೆ ನೀಡಿದ್ದವು.

ಮೆಡಿಕಲ್ ಶಾಪ್ ಬಂದ್‌ಗೆ ದಕ್ಷಿಣ ಕನ್ನಡ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘ ಬೆಂಬಲ ನೀಡಿತ್ತು. ಅದರಂತೆ ನಗರದ ಮೆಡಿಕಲ್ ಶಾಪ್‌ಗಳನ್ನು ಬಂದ್ ಮಾಡಲಾಗಿತ್ತು.



ಅಪೊಲೊ ಫಾರ್ಮಸಿ, ಮೆಡ್ ಪ್ಲಸ್, ಪ್ರಧಾನಮಂತ್ರಿ ಜನೌಷಧ ಕೇಂದ್ರಗಳು ತೆರೆದಿದ್ದು, ಈ ಔಷಧ ಮಳಿಗೆಗಳನ್ನು ಜನರು ಹುಡುಕಿಕೊಂಡು ಬರುತ್ತಿರುವುದು ಕಂಡುಬಂತು. ಆಸ್ಪತ್ರೆಗಳ ಫಾರ್ಮಸಿಗಳೂ ಬಂದ್‌ನಲ್ಲಿ ಭಾಗವಹಿಸಿರಲಿಲ್ಲ.

ಉಡುಪಿಯಲ್ಲಿ

ಉಡುಪಿ ಜಿಲ್ಲೆಯಾದ್ಯಂತ ಬುಧವಾರ ನೂರಾರು ಫಾರ್ಮಸಿಗಳು ಬಂದ್ ಆಚರಿಸಿದವು. ಈ ಬಂದ್‌ಗೆ ಉಡುಪಿ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘ ಈಗಾಗಲೇ ಬೆಂಬಲ ಸೂಚಿಸಿವೆ. ಅದರಂತೆ ಮೇ 19ರ ರಾತ್ರಿ 12 ಗಂಟೆಯಿಂದ ಮೇ 20ರ ರಾತ್ರಿ 12 ಗಂಟೆಯವರೆಗೆ ಉಡುಪಿ ಜಿಲ್ಲಾ ಹೋಲ್‌ಸೇಲ್ ವ್ಯಾಪಾರಸ್ಥರು ಹಾಗೂ ಸರ್ಜಿಕಲ್ ವ್ಯಾಪಾರಸ್ಥರು ತಮ್ಮ ಸಂಸ್ಥೆಗಳನ್ನು ಬಂದ್ ಮಾಡಿದ್ದಾರೆ.

ಆದರೆ ಅಪೋಲೋ ಫಾರ್ಮಸಿ, ಮೆಡ್‌ಪ್ಲಸ್ ಮೆಡಿಕಲ್‌ಗಳು, ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳು, ಜಿಲ್ಲಾಸ್ಪತ್ರೆಯ ಮೆಡಿಕಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದ್ದವು.

ಕುಂದಾಪುರದಲ್ಲಿ ಮನವಿ ಸಲ್ಲಿಕೆ



ಕುಂದಾಪುರದಲ್ಲೂ ಬಹುತೇಕ ಮೆಡಿಕಲ್ ಅಂಗಡಿಗಳುಮುಚ್ಚಿಬೆಂಬಲವ್ಯಕ್ತಪಡಿಸಿವೆ. ಇದರಿಂದ ಸಾರ್ವಜನಿಕರಿಗೆ ಕೆಲ ಅಗತ್ಯದ ಔಷಧಿಗಳು ಸಿಗದೇ, ಸ್ವಲ್ಪಮಟ್ಟಿಗೆ ತೊಂದರೆ ಅನುಭವಿಸುವಂತಾಯಿತು. ಆದರೆ ಕೆಲ ಆಸ್ಪತ್ರೆಗಳ ಬಳಿಯ ಮೆಡಿಕಲ್ ಅಂಗಡಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ತೆರೆದಿದ್ದು, ಅನುಕೂಲವಾಗಿತ್ತು.

ಮನವಿ ಸಲ್ಲಿಕೆ

ಅಖಿಲ ಭಾರತ ಔಷಧಿ ವ್ಯಾಪಾರಿಗಳ ಸಂಘಟನೆ ನಿರ್ದೇಶನದಂತೆ ಉಡುಪಿ ಜಿಲ್ಲಾ ವ್ಯಾಪಾರಸ್ಥರ ಸಂಘದ ಸೂಚನೆಯಂತೆ ಸಂಘದ ಗೌರವಾಧ್ಯಕ್ಷ ಹಲ್ಸನಾಡ್ ಸದಾಶಿವ್ ರಾವ್ ನೇತೃತ್ವದಲ್ಲಿ ಕುಂದಾಪುರದಲ್ಲಿ ಉಪತಹಶಿಲ್ದಾರ್ ಪ್ರಕಾಶ್ ಪೂಜಾರಿ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ದಿನಕರ್ ಶೆಟ್ಟಿ, ರಾಮಚಂದ್ರ ಶೆಟ್ಟಿ, ಕರುಣಾಕರ ಹೆಗಡೆ, ಮಾರ್ಕೋಡು ಸುಧೀರ್ ಹೆಗಡೆ, ಗಿರೀಶ್ ಹಲ್ಸನಾಡ್, ಮೀನಾ ಸುರೇಶ್, ನಟರಾಜ, ನೂತನ್ ಪ್ರಸನ್ನ, ಕಪಿಲ ಕೃಷ್ಣ ರಾಘವೇಂದ್ರ ಹೆಬ್ಬಾರ್, ಹರೀಶ, ಉದಯ ಭಂಡಾರ್ಕರ್, ಗಣೇಶ್ ಬೆಟ್ಟಿನ್, ಕಾರ್ತಿಕೇಯ ಹಲ್ಸನಾಡ್ ಉಪಸ್ಥಿತರಿದ್ದರು.

ಕೊಡಗಿನಾದ್ಯಂತ ಔಷಧಿ ಅಂಗಡಿಗಳ ಬಂದ್ ಯಶಸ್ವಿ

ಮಡಿಕೇರಿ:- ಕೊಡಗಿನಲ್ಲಿ ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಕೊಡಗು ಜಿಲ್ಲೆಯಾದ್ಯಂತ 200 ಕ್ಕೂ ಅಧಿಕ ಔಷಧಿ ಅಂಗಡಿಗಳು ಬುಧವಾರ ವ್ಯಾಪಾರ ಸ್ಥಗಿತಗೊಳಿಸಿದ್ದವು. ಬಂದ್‌ಗೆ ಸಹಕಾರ ನೀಡಿದ ಗ್ರಾಹಕರಿಗೆ ಸಂಘದ ವತಿಯಿಂದ ಧನ್ಯವಾದ ಸಲ್ಲಿಸುವುದಾಗಿ ಸಂಘದ ಜಿಲ್ಲಾಧ್ಯಕ್ಷ ಅಂಬೆಕಲ್ ಜೀವನ್ ಕುಶಾಲಪ್ಪ ತಿಳಿಸಿದ್ದಾರೆ. ಕೊಡಗು ಜಿಲ್ಲಾ ಔಷದಿ ವ್ಯಾಪಾರಸ್ಥರ ಸಂಘದ ವತಿಯಿಂದ ಜಿಲ್ಲಾಡಳಿತ ಧ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ ಹೆಚ್. ಹಾದಿಮನಿ ಸಂಘದಿಂದ ನೀಡಲಾದ ಮನವಿ ಪತ್ರವನ್ನು ಸ್ವೀಕರಿಸಿದರು. ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಜೀವನ್ ಕುಶಾಲಪ್ಪ, ಜಂಟಿ ಕಾರ್ಯದರ್ಶಿ ವಸಂತ್ ಕುಮಾರ್, ಉಪಾಧ್ಯಕ್ಷ ಎ.ಕೆ. ವಿನೋದ್, ಖಜಾಂಜಿ ಪ್ರಸಾದ್ ಗೌಡ ಹಾಜರಿದ್ದರು. ಸೂಕ್ತ ವೈದ್ಯಕೀಯ ಸಮಾಲೋಚನೆ ಇಲ್ಲದೇ ಆನ್‌ಲೈನ್ ಮೂಲಕ ಔಷಧಿಗಳನ್ನು ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಆನ್‌ಲೈನ್ ಔಷಧಿ ವಹಿವಾಟಿನಿಂದ ದೇಶವ್ಯಾಪಿ ಸಣ್ಣ ಔಷಧಿ ವ್ಯಾಪಾರಸ್ಥರೂ ಸಮಸ್ಯೆಗೆ ಸಿಲುಕಿದ್ದಾರೆ. ಈ ಹಿನ್ನಲೆಯಲ್ಲಿ ಔಷಧಿಗಳ ಅಕ್ರಮ ಆನ್‌ಲೈನ್ ಮಾರಾಟಕ್ಕೆ ಕಡಿವಾಣ ಹಾಕಲೇಬೇಕು ಎಂದು ಮನವಿಯಲ್ಲಿ ಪ್ರಧಾನಿಯವರನ್ನು ಒತ್ತಾಯಿಸಲಾಗಿದೆ.

ಕಾಸರಗೋಡು ಉಕ್ಕಿನಡ್ಕದ ವೈದ್ಯಕೀಯ ಕಾಲೇಜ್

ಮೂಲಭೂತ ಸೌಲಭ್ಯಗಳ ಅಳವಡಿಕೆಗೆ ಮೊದಲ ಆದ್ಯತೆ: ಕೇರಳ ಸಿಎಂ ಭರವಸೆ

ಕಾಸರಗೋಡು: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಮೆಡಿಕಲ್ ಕಾಲೇಜಿನಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಅಳವಡಿಸಲಾಗುವುದು. ಅಲ್ಲದೆ ಕಾಲೇಜು ಕಟ್ಟಡಗಳನ್ನು ಸಂಪೂರ್ಣ ಸುಸಜ್ಜಿತಗೊಳಿಸಲು ಮೊದಲ ಆದ್ಯತೆ ನೀಡಲಾಗುವುದು ಎಂದು ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಭರವಸೆ ನೀಡಿದ್ದಾರೆ.



ತಿರುವನಂತಪುರಕ್ಕೆ ತೆರಳಿದ್ದ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಅವರ ನಿಯೋಗಕ್ಕೆ ಮುಖ್ಯಮಂತ್ರಿ ಈ ಆಶ್ವಾಸನೆ ನೀಡಿದರು. ಕಾಸರಗೋಡು ಜಿಲ್ಲೆಯ ಅಭಿವೃದ್ಧಿ ಕ್ಷೇತ್ರಗಳಲ್ಲಿನ ನ್ಯೂನತೆಗಳು ಮತ್ತು ಅಗತ್ಯತೆಗಳನ್ನು ಮುಖ್ಯಮಂತ್ರಿ ಮತ್ತು ಸಚಿವ ಪಿ.ಕೆ. ಕುಂಞಾಲಿಕುಟ್ಟಿ ಅವರ ಗಮನಕ್ಕೆ ತರಲಾಯಿತು.

ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾಕ್ಷೇತ್ರಗಳಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕು. ಅಲ್ಲದೆ ಜನಪರ ಯೋಜನೆಗಳಿಗೆ ಆದ್ಯತೆ ನೀಡಬೇಕು. ಕೃಷಿ, ಕೈಗಾರಿಕೆ, ಹೈನುಗಾರಿಕೆ, ಪ್ರವಾಸೋದ್ಯಮ, ಮೀನುಗಾರಿಕೆ ಮತ್ತು ಇನ್ನಿತರ ವಲಯಗಳ ಸಮಗ್ರ ಪ್ರಗತಿಗೆ ರೂಪುರೇಷೆ ಸಿದ್ಧಪಡಿಸಬೇಕು ಎಂದು ಕಾಸರಗೋಡು ಶಾಸಕರ ನಿಯೋಗವು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ತಿರುವನಂತಪುರಕ್ಕೆ ತೆರಳಿದ್ದ ನಿಯೋಗದಲ್ಲಿ ಕಾಸರಗೋಡಿನ ಮಾಜಿ ಶಾಸಕ ಎನ್.ಎ.ನೆಲ್ಲಿಕುನ್ನು, ವಕೀಲ ಎ.ಗೋವಿಂದನ್ ನಾಯರ್, ಮಾಹಿನ್ ಕೇಳೋಟ್, ಎಂ.ಎ.ಎಚ್.ಮಹಮೂದ್, ಅನ್ವರ್ ಕೋಳಿಯಡ್ಕಂ, ಸಿದ್ದೀಕ್ ಪಳ್ಳಿಪುಳ ಮುಂತಾದವರು ಹಾಜರಿದ್ದರು.

ಪುತ್ತೂರು ನಗರ ಠಾಣೆ ಪೊಲೀಸರಿಗೆ ವಿಹಿಂಪ ಮನವಿ

ಅಕ್ರಮ ಗೋ ಸಾಗಾಣಿಕೆ ತಡೆಗಟ್ಟಿ

ಪುತ್ತೂರು: ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವಂಶಗಳ ಅಕ್ರಮ ಸಾಗಾಣಿಕೆ ಮತ್ತು ಗೋವಂಶ ಹತ್ಯೆ ತಡೆಗಟ್ಟುವ ಕುರಿತು ವಿಶ್ವ ಹಿಂದೂ ಪರಿಷದ್ ಬಜರಂಗದಳ ಪುತ್ತೂರು ಜಿಲ್ಲೆ ವತಿಯಿಂದ ಪುತ್ತೂರು ನಗರ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಯಿತು.

ಮುಂಬರಲಿರುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಕಾನೂನುಬಾಹಿರವಾಗಿ ಗೋವಂಶದ ಸಾಗಾಣಿಕೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗೋವಂಶ ಬಲಿ (ಕುರ್ಬಾನಿ) ನಡೆಯುವ ಸಾಧ್ಯತೆಯಿದೆ. ಇದನ್ನು ತಡೆಗಟ್ಟಲು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020 ಮತ್ತು ಜಾನುವಾರು ಸಾಗಾಟ ನಿಯಮಾವಳಿ 2021 ಅನ್ವಯ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷದ್ ಬಜರಂಗದಳ ಪುತ್ತೂರು ಜಿಲ್ಲೆಯ ವತಿಯಿಂದ ಬುಧವಾರ ಪುತ್ತೂರು ನಗರ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಯಿತು.



ಈ ಸಂದರ್ಭ ವಿಶ್ವ ಹಿಂದೂ ಪರಿಷದ್ ಪುತ್ತೂರು ಜಿಲ್ಲಾ ಅಧ್ಯಕ್ಷ ಡಾ. ಕೃಷ್ಣಪ್ರಸನ್ನ, ಜಿಲ್ಲಾ ಕಾರ್ಯದರ್ಶಿ ನವೀನ್ ನೆರಿಯ, ಜಿಲ್ಲಾ ಕೋಶಾಧಿಕಾರಿ ಮಾಧವ ಪೂಜಾರಿ, ಜಿಲ್ಲಾ ಉಪಾಧ್ಯಕ್ಷ ಸತೀಶ್ ಬಿ.ಎಸ್., ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಧರ್ ತೆಂಕಿಲ, ಜಿಲ್ಲಾ ಸತ್ಸಂಗ ಪ್ರಮುಖ್ ರವಿಕುಮಾರ್ ಕೆಯ್ಯೂರು, ಸಹ ಸತ್ಸಂಗ ಪ್ರಮುಖ್ ರಾಜರಾಮ್ ಐತಾಳ್, ಜಿಲ್ಲಾ ಸೇವಾ ಪ್ರಮುಖ್ ಸೀತಾರಾಮ ಮಾಣಿ, ಬಜರಂಗದಳ ಸಹ ಸಂಯೋಜಕ್ ದಿನೇಶ್ ಚಾರ್ಮಾಡಿ, ಸಂತೋಷ್ ಉಪ್ಪಿನಂಗಡಿ ಉಪಸ್ಥಿತರಿದ್ದರು.

» ಕಾನೂನುಬಾಹಿರವಾಗಿ ಗೋವಂಶದ ಸಾಗಾಣಿಕೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗೋವಂಶ ಬಲಿ ನಡೆಯುವ ಸಾಧ್ಯತೆಯಿದೆ.

» ಜಾನುವಾರು ಸಾಗಾಟ ನಿಯಮಾವಳಿ 2021 ಅನ್ವಯ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು

ಸಂಕಷ್ಟ ಸೃಷ್ಟಿಸಿದೆ ಇ ಸ್ವತ್ತು | ಬಡವರ ಸೂರಿನ 94ಸಿ ನಿವೇಶನದಾರರಿಗೆ ನೈನ್ ಲೆವೆನ್ ಖಾತೆ ಸಿಗದೇ ಎಲ್ಲೆಡೆ ಪರದಾಟ

ಅರ್ಜಿದಾರರು ಕಚೇರಿಗೆ ನಿತ್ಯ 'ಬಂದ ಪುಟ್ಟ ಹೋದ ಪುಟ್ಟ'

ಮಿಥುನ್ ಕರ್ಲಪ್ಪಾಡಿ

ಸುಳ್ಯ: ರಾಜ್ಯ ಸರಕಾರ ಸ್ಥಳೀಯ ಸರಕಾರವೆಂದೆ ಕರೆಯಲ್ಪಡುವ ಗ್ರಾಮ ಪಂಚಾಯತ್ ಗಳಲ್ಲಿ ಸರ್ವ ಸೇವೆಗಳು ಸಿಗಬೇಕು ಎಂದು ಈ ಸ್ವತ್ತು ಎಂಬ ತಂತ್ರಾಂಶ ಬಳಸಿಕೊಂಡು ಆನ್‌ಲೈನ್ ಮಾಡಿದ ಬಳಿಕ ಇದೀಗ ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಸೃಷ್ಟಿಯಾಗಿದ್ದು ಇದೀಗ ಬಡವರ ಸೂರಿನ 94 ಸಿ ನಿವೇಶನದಾರರಿಗೆ ನೈನ್ ಲೆವೆನ್ ಖಾತೆ ಸಿಗದೇ ಪರದಾಡುವಂತಾಗಿದೆ.

ಹೌದು, ರಾಜ್ಯಾದ್ಯಂತ ಈ ಸ್ವತ್ತು ಮೂಲಕ ಸರ್ವ ಸೇವೆಗಳನ್ನು ಗ್ರಾಮ ಪಂಚಾಯತ್, ಗ್ರಾಮವನ್ ಹಾಗೂ ಕರ್ನಾಟಕ ವನ್‌ಗಳಲ್ಲಿ ಸರ್ವ ಸೇವೆಗಳು ಪಾರದರ್ಶಕತೆಗಾಗಿ ನೀಡಲಾಗಿದ್ದು, ಇದೀಗ ತಿಂಗಳುಗಳಿಂದ ಸರಕಾರದಿಂದ ಪಡೆದ ತಮ್ಮ ನಿವೇಶನ ಸ್ಥಳವಾದ 94 ಸಿ ಖಾತೆಗೆ ಗ್ರಹಣ ಬಡಿದಿದ್ದು ಅರ್ಜಿ ಸಲ್ಲಿಕೆಯೇ ಸಂಪೂರ್ಣ ವ್ಯತ್ಯಯವಾಗಿದೆ. ಅರ್ಜಿ ಸಲ್ಲಿಕೆಗೆ ದಾಖಲೆಗಳನ್ನು ಸಿದ್ಧಪಡಿಸಿದ ಬಳಿಕ ಗ್ರಾಮ ವನ್, ಕರ್ನಾಟಕ ವನ್ ಅಥವಾ ಗ್ರಾಮ ಪಂಚಾಯತ್‌ಗೆ ತೆರಳಿ ಅರ್ಜಿ ಸಲ್ಲಿಕೆ ಪ್ರಾರಂಭವಾದಾಗ ಉದ್ಭವವಾಗುತ್ತಿದೆ ವಿದ್ಯುತ್ ಮೀಟರ್ ನಂಬರ್ ಸಮಸ್ಯೆ.



ಅರ್ಜಿ ಸಲ್ಲಿಕೆಯ ವೇಳೆಯಲ್ಲಿ ಸರಕಾರ ಸೂಚಿಸಿದಂತೆ ಈ ಕೆವೈಸಿ, ಹಕ್ಕುಪತ್ರ, ಮನೆ ವಿಸ್ತೀರ್ಣ ಮಾಹಿತಿ ಅದರ ಜೊತೆಗೆ 2004ರ ಹಿಂದಿನ ಋಣಭಾರ ಪತ್ರ ಹಾಗೂ ಅರ್ಜಿ ಸಲ್ಲಿಕೆಯ 15 ದಿನಗಳ ಹಿಂದಿನ ಋಣಭಾರ ಪತ್ರ, ಭಾವಚಿತ್ರ, ಪಹಣಿ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ 6 ಸಂಖ್ಯೆಗಳುಳ್ಳ ಮೀಟರ್ ನಂಬರ್ ಇದ್ದು, ಇದೀಗ ಸಿದ್ದಪಡಿಸಲಾದ ತಂತ್ರಾಂಶದಲ್ಲಿ 10 ನಂಬರ್‌ಗಳು ಕಡ್ಡಾಯವಾಗಿ ನೀಡುತ್ತಿರುವ ಹಿನ್ನೆಲೆಯಲ್ಲಿ ಇದೀಗ ಸರಕಾರದಿಂದ ಪಡೆದ 94 ಸಿ ನಿವೇಶನದಾರರು ಕಂಗೆಡುವಂತೆ ಮಾಡಿದೆ. ಇದೀಗ ಈ ಸ್ವತ್ತು ತಂತ್ರಾಂಶ ಬಡವರನ್ನು ಕಂಗೆಡುವಂತೆ ಮಾಡಿದೆ.

ಸುಧಾರಿಸದ ತಂತ್ರಾಂಶ

ಈ ಬಗ್ಗೆ ಗ್ರಾಮ ವನ್ ಹಾಗೂ ಕರ್ನಾಟಕ ವನ್ ಸಿಬ್ಬಂದಿಗಳಲ್ಲಿ ವಿಚಾರಿಸಿದಾಗ, ನಾವು ಈ ಕುರಿತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದ್ದು ಅವರಿಂದಲೂ ಸರಿಯಾದ ಉತ್ತರಗಳು ಸಿಗದೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಲಾಗಿದೆ ಎಂಬ ಉತ್ತರಗಳು ಬರುತ್ತಿದೆ. ಈ ಕುರಿತು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ ಸಮಸ್ಯೆ ಪರಿಹಾರ ಮಾಡಬೇಕು ಜೊತೆಗೆ ನಮ್ಮ ಕಛೇರಿಗಳಲ್ಲಿ ಸರಿಸುಮಾರು 15ರಷ್ಟು ಅರ್ಜಿಗಳು ಬಂದಿದ್ದು ಬಡವರು ಪ್ರತಿನಿತ್ಯ ಬಂದು ವಿಚಾರಿಸಿ ಸಪ್ಪೆ ಮೋರೆಯಲ್ಲಿ ತೆರಳುತ್ತಿದ್ದಾರೆ ಎಂದು ಸಿಬ್ಬಂದಿಗಳ ಮಾತು.

ನಮಗೆ ಅವಕಾಶವಿಲ್ಲ

ಈ ಹಿಂದೆ ನಮ್ಮ ಗ್ರಾ. ಪಂ.ಗಳಲ್ಲಿಯೇ ನೀಡಲು ಅವಕಾಶವಿತ್ತು. ಆದರೆ ಇದೀಗ ನಮಗೆ ಅವಕಾಶವಿಲ್ಲ. ಈಗ ಸರಕಾರ ಹಕ್ಕುಪತ್ರಗಳ ಪ್ರತಿಯೊಂದನ್ನು ಕೂಡ ನೀಡಲು ಅಸಾಧ್ಯವಾಗಿದ್ದು ಸರಕಾರ ತಹಶೀಲ್ದಾರ್ ಲಾಗಿನ್‌ಗೆ ಹಾಕಿ ಅಲ್ಲಿಂದ ನೀಡುವಂತೆ ಸಿದ್ದಪಡಿಸಲಾಗುತ್ತಿದೆ ಎಂದು ಸುಳ್ಯ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಣಾಧಿಕಾರಿ ರಾಜಣ್ಣ ತಿಳಿಸಿದ್ದಾರೆ.

ಎಷ್ಟು ಅಲೆದಾಡಬೇಕು?

ನಾನು ನಿರಂತರವಾಗಿ 8 ತಿಂಗಳುಗಳಿಂದ ಅಲೆದಾಡುತ್ತಿದ್ದು, ನನಗೆ ಕಂಪ್ಯೂಟರ್ ತೆಗೆದುಕೊಳ್ಳುತ್ತಿಲ್ಲ. ಈ ವಾರ ಸರಿಯಾಗುತ್ತೆ ಎಂಬ ಉತ್ತರವನ್ನು ಸಿಬ್ಬಂದಿಗಳು ನೀಡುತ್ತಾರೆ. ಜನಪ್ರತಿನಿಧಿಗಳಲ್ಲಿ ಹೇಳಿದಾಗ ಸಂಬಂಧಪಟ್ಟವರಲ್ಲಿ ಮಾತನಾಡಿದ್ದೇನೆ ಎಂದು ಹೇಳುವುದಲ್ಲದೇ ಈವರೆಗೆ ಯಾವುದೇ ರೀತಿಯ ಪ್ರಗತಿ ಕಂಡಿಲ್ಲ. ಇನ್ನು ಎಷ್ಟು ದಿನಗಳ ಕಾಲ ಅಲೆದಾಡಬೇಕು ಎಂದು ತಿಳಿಯುತ್ತಿಲ್ಲ ಎಂದು ಟಿ.ವಿ ರವಿ ವಿಷ್ಣುನಗರ ಅಜ್ಜಾವರ ಹೇಳುತ್ತಾರೆ.


ಈ ಪರಿಯ ಶಿಕ್ಷೆ ಯಾಕೆ?

ಅವಿದ್ಯಾವಂತರು ಬಡವರು ಹಲವಾರು ವರ್ಷಗಳಿಂದ ಸರಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿ ವಾಸ್ತವ್ಯವಾಗಿದ್ದು ಆ ಬಳಿಕ ರಾಜ್ಯ ಸರಕಾರ ಸರಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿದವರಿಗೆ ಅಡಿ ಸ್ಥಳ ನೀಡುವ ಬಗ್ಗೆ ಚಿಂತಿಸಿ ಆ ಬಳಿಕ ಗ್ರಾಮೀಣ ಭಾಗದಲದಲ್ಲಿ 94 ಸಿ ಹಾಗೂ ನಗರ ವ್ಯಾಪ್ತಿಯಲ್ಲಿ 94 ಸಿಸಿ ಎಂಬ ಕಾಯ್ದೆಯನ್ನು ಜಾರಿಗೆ ತಂದು ನೆರವಾಗಿತ್ತು. ಆದರೆ, ಆ ಬಳಿಕ ದಿನಗಳೆದಂತೆ ಇದರಲ್ಲಿ ಸಮಸ್ಯೆಗಳು ಉದ್ಭವಿಸಿ ಇದೀಗ ವಿದ್ಯುತ್ ಬಿಲ್ ಸಂಖ್ಯೆಯಲ್ಲಿನ ಕೊರತೆ ಇಡೀ ಗ್ರಾಮೀಣ ಜನರಿಗೆ ಶಿಕ್ಷೆಯಾಗಿ ಮಾರ್ಪಡಾಗಿದ್ದು ಬಡವರ ಕಣ್ಣೀರು ಒರೆಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ತಕ್ಷಣವೇ ತಂತ್ರಾಂಶದಲ್ಲಿನ ಬದಲಾವಣೆಯನ್ನು ತಂದು ಕಣ್ಣೀರು ಒರೆಸಬೇಕಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 21, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಆನ್‌ಲೈನ್ ಔಷಧ ಮಾರಾಟ ಮಳಿಗೆ ಬಂದ್ ಮಾಡಿ ಮೆಡಿಕಲ್ ಸ್ಟೋರ್‌ಗಳ ಆಕ್ರೋಶ!



ಆನ್‌ಲೈನ್‌ನಲ್ಲಿ ಔಷಧ ಮಾರಾಟ ವಿರೋಧಿಸಿ ಔಷಧ ವ್ಯಾಪಾರಿಗಳ ಸಂಘ ಬುಧವಾರ ನೀಡಿದ್ದ ದೇಶದಾದ್ಯಂತದ ಮೆಡಿಕಲ್ ಸ್ಟೋರ್ ಬಂದ್ ಕರೆಗೆ ಕರಾವಳಿಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಲವೆಡೆಗಳಲ್ಲಿ ಮೆಡಿಕಲ್‌ಸ್ಟೋರ್‌ಗಳು ತೆರೆದಿದ್ದರೆ, ಮಂಗಳೂರು, ಉಡುಪಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಪ್ರಮುಖ ಔಷಧ ಮಳಿಗೆಗಳು ಬೆಂಬಲ ಘೋಷಿಸಿ ವ್ಯಾಪಾರ ಸ್ಥಗಿತಗೊಳಿಸಿದ್ದವು.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
32° 26°	32° 27°

ಕರಾವಳಿಯಲ್ಲಿ ಕುಕ್ಕುಟಕ್ಕೆ ಭರ್ಜರಿ ಬೇಡಿಕೆ

ಈಗ ನಾಟಿ @ 600!

ಪತ್ತನಾಜೆಯ ಆಚರಣೆಗೆ ಎಲ್ಲೆಡೆ ಸಿದ್ಧತೆ

ಪುತ್ತೂರು: ತುಳುನಾಡಿನಲ್ಲಿ ಪತ್ತನಾಜೆ ಆಚರಣೆಗೆ ದಿನಗಣನೆ ಆರಂಭವಾಗಿರುವ ಬೆನ್ನಿಗೇ ಈಗ ಎಲ್ಲೆಡೆ 'ನಾಟಿ ಕೋಳಿ'ಗೆ ಭರ್ಜರಿ ಬೇಡಿಕೆ ಕಂಡುಬರುತ್ತಿದೆ.

ಕೆ.ಜಿ.ಗೆ ರೇಟು ರೂ. 600ರ ಸನಿಹ

ಪ್ರಸ್ತುತ ಸಾದಾ ಊರಿನ ಕೋಳಿ ಕಿಲೋಗೆ ರೂಪ್ಯಾ 600 ಸನಿಹದಲ್ಲಿ ಮಾರಾಟವಾಗುತ್ತಿದ್ದರೆ, ಮಂಡ್ಯ, ಮೈಸೂರು ಭಾಗ, ತಮಿಳುನಾಡು ಕಡೆಗಳಿಂದ ಆಮದು ಆಗುವ ಹೈಬ್ರೀಡ್ ನಾಟಿ ಕೋಳಿಗಳು ಈಗ ಕಿಲೋ ಒಂದಕ್ಕೆ ರೂ. 300ರಿಂದ ರೂ. 400 ತನಕ ಮಾರಾಟವಾಗುತ್ತಿದೆ. ಶುದ್ಧ ನಾಟಿ ಕೋಳಿಗೆ ದರ ಹೆಚ್ಚು ಇರುವ ಕಾರಣ ಆಮದು ಕೋಳಿ ಈಗ ಎಲ್ಲೆಡೆ ಹೆಚ್ಚು ಬೇಡಿಕೆ ಪಡೆದುಕೊಂಡಿವೆ.

ಪತ್ತನಾಜೆ ಆಚರಣೆಗೆ ನಾಟಿಕೋಳಿ

ತುಳುನಾಡಿನ ನಂಬಿಕೆ, ಆಚರಣೆಗೆ ಪೂರಕವಾಗಿ 'ಪತ್ತನಾಜೆ'ಯ ಆಚರಣೆಯ ಅಗೇಲು, ತಂಬಿಲಗಳು ಮೇ 25 ರಂದು ನಡೆಯಲಿವೆ. ಪತ್ತನಾಜೆ ಅಥವಾ ಹತ್ತನಾವದಿ ದಿನ ತುಳುನಾಡಿನಲ್ಲಿ ದೈವಾರಾಧನೆಗೆ ಪೂರಕ ಬನಗಳಲ್ಲಿ ದೈವಗಳಿಗೆ ಕೋಳಿ ಬಲಿ ಕೊಡುವುದು, ಎಳನೀರು, ಹೊದ್ಲು ಅರಶಿನ ಪರಿಕರ ಇಟ್ಟು ದೈವಗಳಿಗೆ ಪ್ರಾರ್ಥನೆ ಸಲ್ಲಿಸುವ ಆಚರಣೆಯಿದೆ. ಈ ದಿನ ಗುಳಿಗ, ಭೈರವ ಮೊದಲಾದ ದೈವಗಳಿಗೆ ಭಕ್ತರು ವಿವಿಧ »ಪುಟ 6



ನಾಟಿ ಕೋಳಿಗೇಕೆ ಇಷ್ಟೊಂದು ಬೇಡಿಕೆ?

ನಾಟಿ ಕೋಳಿ ಮಾಂಸ ಹೆಚ್ಚು ರುಚಿಕರ ಎಂದು ಪರಿಗಣಿಸಲ್ಪಟ್ಟಿದೆ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಅಲ್ಲಲ್ಲಿ ವಿರಳವಾಗಿರುವ ಈ ನಾಟಿ ಕೋಳಿ ಖರೀದಿಸಲು ಎಲ್ಲಾ ಸಮಯದಲ್ಲೂ ಬೇಡಿಕೆ ಇದ್ದರೂ 'ಪತ್ತನಾಜೆ' ಸಮಯದಲ್ಲಿ ವಿಪರೀತ ಬೇಡಿಕೆ ಇರುತ್ತದೆ.

ಸಂಪೂರ್ಣ ಬಿಳಿ ಗರಿಯ ಕೋಳಿ ಆಗುವುದಿಲ್ಲ

ದೈವಗಳಿಗೆ ಬಲಿ ಕೊಡುವ ಸಂದರ್ಭದಲ್ಲಿ ಹುಂಜವನ್ನೇ ಬಲಿ ಕೊಡಬೇಕು, ಸಂಪೂರ್ಣ ಬಿಳಿ ಗರಿಗಳನು ಹೊಂದಿರುವ ಕೋಳಿಯನ್ನು ಬಲಿ ಕೊಡಬಾರದು ಎಂಬ ನಂಬಿಕೆ ತುಳುನಾಡಿನಲ್ಲಿದೆ. ಈ ಕಾರಣದಿಂದ ಒಂದು ಗರಿಯಾದರೂ ಬೇರೆ ಬಣ್ಣವನ್ನು ಹೊಂದಿರುವ ಕೋಳಿಯನ್ನೇ ಆಯ್ದುಕೊಳ್ಳುತ್ತಾರೆ.

ಪತ್ತನಾಜೆ ಸಂದರ್ಭ ಹೇಳಿದ ರೇಟು ಸಿಗುತ್ತೆ

ಹತ್ತನಾವದಿಯ ಸಂದರ್ಭದಲ್ಲಿ ನಾಟಿ ಕೋಳಿ ಸಾಕಾಣೆದಾರರು ಹೇಳಿದ ಬೆಲೆ ಲಭಿಸುತ್ತದೆ. ಆದರೆ, ಅಂಕದ ಕೋಳಿಗಳಿಗೆ ಈ ಕೆ.ಜಿ. ಲೆಕ್ಕದ ದರ ಲಗಾವು ಆಗುವುದಿಲ್ಲ, ಬದಲಾಗಿ ಕೋಳಿಯೊಂದರ ಆದರ ಜಾತಿಯನ್ನು ಅವಲಂಬಿಸಿ ರೂ.1ರಿಂದ 10 ಸಾವಿರ ಮೇಲ್ಪಟ್ಟು ಬೆಲೆ ಬಾಳುವುದೂ ಇದೆ. ಪುತ್ತೂರು ನಗರದ ಪಡೀಲ್ ಸೇರಿದಂತೆ 5-6 ಕಡೆಗಳಲ್ಲಿ ಸೀಸನ್ ಅವಧಿಗೆ ನಾಟಿ ಕೋಳಿ ಫಾರ್ಮ್ ನಲ್ಲಿ ಕ್ಯೂ ಆರಂಭಗೊಳ್ಳುತ್ತದೆ. ನಾಟಿ ಕೋಳಿಗೆ ಪರ್ಯಾಯವಾಗಿ ಗಿರಿರಾಜ ಲಭ್ಯವಾಗುತ್ತಿದ್ದರೂ ಈಗ ಹೈಬ್ರೀಡ್ ನಾಟಿ ಕೋಳಿಗಳಿಗೆ ಹೆಚ್ಚು ಬೇಡಿಕೆ ಇದೆ.

ಮೀನುಗಾರಿಕೆಗೆ 2 ತಿಂಗಳುಗಳ ರಜೆ

ಇನ್ನು 11 ದಿನಗಳಲ್ಲಿ ಕಡಲ ಒಡಲಿಗೆ ಬೀಗ

ಯಾಂತ್ರೀಕೃತ ಬೋಟ್‌ಗೆ ನಿಷೇಧ

ಮಂಗಳೂರು: ಮಳೆಗಾಲದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಯಾಂತ್ರೀಕೃತ ಮೀನುಗಾರಿಕೆ ಚಟುವಟಿಕೆಗಳ ಮೇಲೆ 61 ದಿನಗಳ ನಿಷೇಧ ಹೇರಲಾಗುತ್ತಿದೆ. ಇದೇ ಜೂ.1ರಿಂದ ಜು.31ರವರೆಗೆ ಈ ನಿಷೇಧ ಜಾರಿಯಲ್ಲಿರಲಿದ್ದು, ಜಿಲ್ಲಾಧಿಕಾರಿಗಳು ಈ ಕುರಿತು ಆದೇಶ ಹೊರಡಿಸಿದ್ದಾರೆ.

ಯಾವ ಯಾವ ಭಾಗದಲ್ಲಿ ನಿಷೇಧ?

ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಬರುವ 12 ನಾಟಿಕಲ್ ಮೈಲ್ ಕಡಲ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ ಈ ನಿಷೇಧ ಅನ್ವಯವಾಗಲಿದೆ.

ಯಾವುದಕ್ಕೆಲ್ಲಾ ಇದೆ ನಿಷೇಧ?

ಈ ಅವಧಿಯಲ್ಲಿ ಎಲ್ಲಾ ಯಾಂತ್ರೀಕೃತ ದೋಣಿಗಳು, ಹತ್ತು ಅಶ್ವಶಕ್ತಿಗಿಂತ ಹೆಚ್ಚು ಸಾಮರ್ಥ್ಯದ ಮೋಟಾರೀಕೃತ ದೋಣಿಗಳಲ್ಲಿ ಮೀನುಗಾರಿಕೆ, ಯಾವುದೇ ಬಲೆ, ಸಾಧನ ಬಳಸಿ ಮೀನುಗಾರಿಕೆ ನಡೆಸುವುದಕ್ಕೆ ಸಂಪೂರ್ಣ ನಿಷೇಧವಿದೆ.

ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ

ಆಡಳಿತದ ಮೀನುಗಾರಿಕೆ ನಿಷೇಧ ಆದೇಶ ಉಲ್ಲಂಘಿಸುವ ಮೀನುಗಾರರು ಹಾಗೂ ಬೋಟ್ ಮಾಲೀಕರ ವಿರುದ್ಧ ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆ- 1986ರ ಅಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.



ಏಕೆ ಈ ನಿಷೇಧ?

ಮಳೆಗಾಲದಲ್ಲಿ ಮೀನುಗಳ ಸಂತಾನೋತ್ಪತ್ತಿ ಪ್ರಕ್ರಿಯೆ ನಡೆಯುವ ಹಿನ್ನೆಲೆಯಲ್ಲಿ ಪ್ರತೀ ವರ್ಷ ಮೀನುಗಾರಿಕೆ ನಿಷೇಧ ಜಾರಿಗೊಳಿಸಲಾಗುತ್ತದೆ. ಸಮುದ್ರ ಜೀವಿಗಳ ಸಂರಕ್ಷಣೆ ಮತ್ತು ಮೀನು ಸಂಪತ್ತಿನ ವೃದ್ಧಿಗಾಗಿ ಈ ಕ್ರಮವನ್ನು ಅತ್ಯಂತ ಮಹತ್ವದಂತೆ ಪರಿಗಣಿಸಲಾಗುತ್ತದೆ.

ಸುತ್ತಮುತ್ತ

ಕಾಸರಗೋಡು ಜಿಲ್ಲೆ: ಪ್ಲಸ್ ವನ್ ತರಗತಿಗೆ 14,300 ಸೀಟುಗಳು

ಕಾಸರಗೋಡು: ಜಿಲ್ಲೆಯಲ್ಲಿ 2026-27ನೇ ಶೈಕ್ಷಣಿಕ ವರ್ಷದಲ್ಲಿ ಪ್ಲಸ್ ವನ್ ತರಗತಿಗೆ 14,300 ಸೀಟುಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಸರಕಾರಿ ಶಾಲೆಗಳಲ್ಲಿ 3,650 ಮತ್ತು ಪರಿಶಿಷ್ಟ ಜಾತಿ - ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯ ಆಶ್ರಯದಲ್ಲಿ ಕಾರ್ಯವೆಸಗುತ್ತಿರುವ ಮೋಡೆಲ್ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ತಲಾ 100 ಮತ್ತು ಅನುದಾನಿತ ಶಾಲೆಗಳಲ್ಲಿ 2000 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 14,300 ಪ್ಲಸ್ ವನ್ ಸೀಟುಗಳಿವೆ.

ರಾಜ್ಯದಲ್ಲಿ ಒಟ್ಟು 3,61,044 ಪ್ಲಸ್ ವನ್ ಸೀಟುಗಳಿವೆ. ಸರಕಾರಿ ವಲಯದ ಶಾಲೆಗಳಲ್ಲಿ 1,41,200, ಅನುದಾನಿತ ಶಾಲೆಗಳಲ್ಲಿ 1,65,150, ಎಂಆರ್‌ಎಸ್‌ನಲ್ಲಿ 1,429 ಮತ್ತು ಅನನುದಾನಿತ ಶಾಲೆಗಳಲ್ಲಿ 53,265 ಸೀಟುಗಳು ಒಳಗೊಂಡಿವೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 4,10,456 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಐದು ದಿನದ ಕಾಲ ಕಡಲಿಗೆ ಇಳಿಯದಂತೆ ಮೀನುಗಾರರಿಗೆ ಮುನ್ನೆಚ್ಚರಿಕೆ ರವಾನೆ

ಕರಾವಳಿಯಲ್ಲಿ ಗುಡುಗು, ಮಿಂಚು, ಗಾಳಿ ಮಳೆ?

ಮಂಗಳೂರು/ ಉಡುಪಿ: ಕರಾವಳಿ ಭಾಗದಲ್ಲಿ ಮುಂಗಾರು ಪೂರ್ವ ಮಳೆಯ ಅಬ್ಬರ ಮುಂದುವರಿದಿದ್ದು, ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಾದ್ಯಂತ ಮುಂದಿನ ಐದು ದಿನ ಗುಡುಗು, ಮಿಂಚು ಸಹಿತ ಗಾಳಿ ಮಳೆ ಮುಂದುವರಿಯಲಿದೆ.

ಕೆಲವೆಡೆ ಬಿರುಗಾಳಿ, ಸಾಧಾರಣ ಮಳೆ

ಮೇ 20 ರಿಂದ ಮೇ 22ರ ವರೆಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಗುಡುಗು ಮತ್ತು ಮಿಂಚಿನೊಂದಿಗೆ ಗಂಟೆಗೆ 30 ರಿಂದ 40 ಕಿಲೋ ಮೀಟರ್ ವೇಗದಲ್ಲಿ ಬಲವಾದ ಬಿರುಗಾಳಿ ಬೀಸಲಿದ್ದು, ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ತದನಂತರ ಮೇ 23 ಮತ್ತು 24 ರಂದು ಕೂಡ ಮಳೆಯ ತೀವ್ರತೆ ಮುಂದುವರಿಯಲಿದ್ದು, ಕರಾವಳಿಯ ಹಲವೆಡೆ ಗುಡುಗು, ಮಿಂಚಿನ ಆರ್ಭಟ ಇರಲಿದೆ ಎಂದು ಇಲಾಖೆ ತಿಳಿಸಿದೆ.



ಮೀನುಗಾರರು ಏನು ಮಾಡಬೇಕು?

ಈಗಾಗಲೇ ಸಮುದ್ರಕ್ಕೆ ಇಳಿದಿರುವ ಮೀನುಗಾರರು ತಕ್ಷಣವೇ ಸುರಕ್ಷಿತವಾಗಿ ದಡಕ್ಕೆ ಮರಳುವಂತೆ ಹವಾಮಾನ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಜೊತೆಗೆ ಇಲಾಖೆ ನೀಡುವ ಎಲ್ಲಾ ಅಧಿಕೃತ ಸಲಹೆಗಳನ್ನು ಪಾಲಿಸುವಂತೆ ಅಧಿಕಾರಿಗಳು ಮೀನುಗಾರರಿಗೆ ತಿಳಿಸಿದ್ದಾರೆ. ಕರ್ನಾಟಕ, ಕೇರಳ, ಗೋವಾ, ಮಹಾರಾಷ್ಟ್ರಗಳಿಗೂ ಈ ಎಚ್ಚರಿಕೆ ಸಂದೇಶ ರವಾನಿಸಲಾಗಿದೆ

ಗಂಟೆಗೆ 60 ಕಿ.ಮೀ. ವೇಗದ ಭಾರೀ ಬಿರುಗಾಳಿ

ಅರಬ್ಬಿ ಸಮುದ್ರದ ಕರ್ನಾಟಕ ಕರಾವಳಿ ತೀರದುದ್ದಕ್ಕೂ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ, ಕೆಲವೊಮ್ಮೆ ಗಂಟೆಗೆ 60 ಕಿ.ಮೀ. ವೇಗದ ಭಾರೀ ಬಿರುಗಾಳಿಯೊಂದಿಗೆ ಪ್ರತಿಕೂಲ ವಾತಾವರಣ ಉಂಟಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಮೇ 25ರವರೆಗೆ (ಸೋಮವಾರ) ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಮತ್ತು ಜಾಗರೂಕರಾಗಿರುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಹೊಂಡದಲ್ಲಿ ಸಿಲುಕಿ ಫಜೀತಿಪಟ್ಟ ಲಾರಿ



ಮಂಗಳೂರಿನ ಕರಂಗಲ್ಪಾಡಿ ಬಳಿ ಕಾಮಗಾರಿಗಾಗಿ ರಸ್ತೆ ಅಗೆದು ಮಣ್ಣು ತುಂಬಿಸಲಾಗಿದ್ದು, ಈ ದಾರಿಯಲ್ಲಿ ತೆರಳುತ್ತಿದ್ದ ಸರಕು ಸಾಗಾಟ ಮಿನಿಲಾರಿ ಈ ಹೊಂಡದಲ್ಲಿ ಸಿಲುಕಿ ಫಜೀತಿಪಟ್ಟ ಘಟನೆ ಬುಧವಾರ ನಡೆದಿದೆ.

ಪ್ರವಾಸೋದ್ಯಮ ಆದಾಯ ಹೆಚ್ಚಿಸುವ ಯೋಜನೆಗೆ ಮುಂದಾಗಬೇಕಿದೆ ಆಡಳಿತ | ಇತಿಹಾಸದ ಪುಟ ಸೇರಿದ ದೋಣಿ ಸೇವೆಗೆ ಬೇಕಿದೆ ಮರುಜೀವ

ಚಂದ್ರಗಿರಿ ನದಿ ಚಂದ ಇನ್ನಷ್ಟು ಹೆಚ್ಚಿಸಲು ನೀರಿಗೆ ಇಳಿಯಬೇಕಿದೆ ಪ್ರವಾಸಿ ಬೋಟ್

ಸಂಗಮ ವಿಶೇಷ

ಕಾಸರಗೋಡು: ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಕೈಬೀಸಿ ಕರೆಯುವ ಜಿಲ್ಲೆಯ ಪ್ರಮುಖ ಜಲಮೂಲ 'ಚಂದ್ರಗಿರಿ ನದಿ'ಯಲ್ಲಿ ಈಗ ಪ್ರವಾಸಿಗರಿಗೆ ಬೋಟ್ ಸರ್ವೀಸ್ ಆರಂಭಿಸಲು ಬೇಡಿಕೆ ವ್ಯಾಪಕಗೊಂಡಿದೆ. ಈ ಮೂಲಕ ಚಂದ್ರಗಿರಿ ನದಿತೀರದ ಪ್ರವಾಸೋದ್ಯಮ ಇನ್ನಷ್ಟು ಅಭಿವೃದ್ಧಿಪಡಿಸಬೇಕು ಎಂಬ ವ್ಯಾಪಕ ಕೂಗು ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.

ಆಕರ್ಷಣೆ ಇನ್ನಷ್ಟು ಹೆಚ್ಚಿಸಬಹುದು

ಕಿಲೋ ಮೀಟರ್‌ಗಟ್ಟಲೆ ವಿಸ್ತರಿಸಿರುವ ಚಂದ್ರಗಿರಿ ನದಿಯ ಪ್ರಾಕೃತಿಕ ಸೌಂದರ್ಯ ಇನ್ನಷ್ಟು ಆಕರ್ಷಕವಾಗಿಸಲು ಇಲ್ಲಿ ಅವಕಾಶವಿದ್ದು, ಬೋಟ್ ಯಾತ್ರೆ ಇದಕ್ಕೆ ಪೂರಕವಾಗಲಿದೆ. ಇಲ್ಲಿ ನದಿತೀರದಲ್ಲಿ ಖಾಸಗಿ ವ್ಯಕ್ತಿಗಳ ಸ್ಥಳವಿದ್ದು, ಅಗತ್ಯದಷ್ಟು ಜಾಗ ಪಡೆದು ಬೋಟ್ ಪ್ರವಾಸೋದ್ಯಮ ಅನುಷ್ಠಾನಕ್ಕೆ ತರಬಹುದಾಗಿದೆ. ಈ ನಿಟ್ಟಿನಲ್ಲಿ ಈಗ ಜಿಲ್ಲಾಡಳಿತ, ನಗರ ಸಭಾ ಆಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಪ್ರವಾಸೋದ್ಯಮ ಇಲಾಖೆಗಳು ಶೀಘ್ರವಾಗಿಯೇ ಸಮರ್ಪಕ ನಿರ್ಧಾರ ಕೈಗೊಳ್ಳಬೇಕಾಗಿದೆ. ಈ ಮೂಲಕ ಭಾರೀ ಆದಾಯ ಮಾರ್ಗವನ್ನೂ ಕಂಡುಕೊಳ್ಳಬಹುದು.

ಇಲ್ಲಿ ದೋಣಿಯ ಮೂಲಕ ತೆರಳುತ್ತಿದ್ದರು

ಚಂದ್ರಗಿರಿ ಸೇತುವೆಯು ನಿರ್ಮಾಣವಾಗುವುದಕ್ಕಿಂತ ಮೊದಲು ಇಲ್ಲಿ ಚೆಮ್ನಾಡಿಗೆ ತೆರಳಬೇಕಾದರೆ ಕಾಸರಗೋಡು ನಗರದ ಟೌನ್ ಹಾಲ್‌ನ ಕೆಳಗಿನ ಭಾಗದ ಹೊಳೆಯಲ್ಲಿ ದೋಣಿಯ ಮೂಲಕ ಜನರು ಸಂಚರಿಸುತ್ತಿದ್ದರು. ಚೆಮ್ನಾಡು ನಿವಾಸಿಗಳಿಗೆ ಕಾಸರಗೋಡಿಗೆ ಆಗಮಿಸಬೇಕಾದರೂ ದೋಣಿಯ ಅಗತ್ಯವಿತ್ತು. ಈ ರೀತಿ ಹಲವಾರು ದೋಣಿಗಳು ಚಂದ್ರಗಿರಿ ನದಿಯಲ್ಲಿ ಸರ್ವೀಸ್ ನಡೆಸುತ್ತಿದ್ದವು. ಈ ಮೂಲಕ ಅನೇಕ ಮಂದಿ ಬದುಕಿನ ದಾರಿಯನ್ನು ಕಂಡುಕೊಂಡಿದ್ದರು. ಚಂದ್ರಗಿರಿ ಹೊಳೆಗೆ ಸೇತುವೆ ನಿರ್ಮಾಣಗೊಂಡ ನಂತರ ದೋಣಿಗಳೆಲ್ಲಾ ಇತಿಹಾಸದ ಪುಟಗಳನ್ನು ಸೇರಿಹೋದವು.

ಕಾಸರಗೋಡು ಜಿಲ್ಲೆ, ನಗರ ಅಭಿವೃದ್ಧಿಗೆ ಪೂರಕ

ಇನ್ನು ಮುಂದಾದರೂ ಪ್ರವಾಸಿ ಬೋಟ್‌ಗಳಿಗೆ ಚಂದ್ರಗಿರಿ ನದಿಯಲ್ಲಿ ಸರ್ವೀಸ್ ನಡೆಸಲು ಅವಕಾಶ ಕಲ್ಪಿಸಿದರೆ ಕಾಸರಗೋಡು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಅಪಾರ ಆದಾಯ ಲಭಿಸಬಹುದು. ಅಲ್ಲದೆ ನಗರದ ಸಮಗ್ರ ಅಭಿವೃದ್ಧಿಗೂ ಬೋಟ್ ಪ್ರವಾಸೋದ್ಯಮ ಪೂರಕವಾಗಬಹುದು ಎಂದು ನಿರೀಕ್ಷಿಸಲಾಗಿದೆ.





ನದಿ ಬದಿಯಲ್ಲಿ ಕಾಂಡ್ಲಾವನ, ಅಪೂರ್ವ ಪಕ್ಷಿ ಸಂಕುಲಗಳು!


ಚಂದ್ರಗಿರಿ ನದಿ ಬದಿಯಲ್ಲಿ ದೊಡ್ಡ ಹಾಗೂ ಸಣ್ಣ ಕಾಂಡ್ಲಾವನಗಳು, ಅಪೂರ್ವ ಪಕ್ಷಿ ಸಂಕುಲಗಳಿವೆ. ಇವು ಇಲ್ಲಿನ ಸೌಂದರ್ಯಕ್ಕೆ ಇನ್ನಷ್ಟು ಮೆರುಗು ನೀಡುತ್ತಿವೆ. ಜೊತೆಗೆ ಪ್ರಕೃತಿ ರಮಣೀಯ ದೃಶ್ಯಗಳಿವೆ. ಆಲಪ್ಪುಳದಲ್ಲಿ ಇರುವಂತೆಯೇ ದೊಡ್ಡ ಸುರಕ್ಷಿತ ಬೋಟ್‌ಗಳನ್ನು ಪ್ರವಾಸೋದ್ಯಮ ವಲಯಕ್ಕೆ ಖರೀದಿಸಿ ಸೇವೆ ಒದಗಿಸಿದರೆ ದೇಶ ವಿದೇಶಗಳಿಂದಲೂ ಹಲವಾರು ಪ್ರವಾಸಿಗರನ್ನು ಚಂದ್ರಗಿರಿ ಹೊಳೆ ತೀರಕ್ಕೆ ಆಕರ್ಷಿಸಬಹುದು.

- **ಬೋಟ್ ಪ್ರವಾಸೋದ್ಯಮಕ್ಕೆ ಇಲ್ಲಿ ಹೆಚ್ಚುತ್ತಿದೆ ಸಾರ್ವಜನಿಕರ ಒತ್ತಾಯ**
- **ಆದಾಯದ ಮೂಲ ಹೆಚ್ಚಿಸಲು ಬೋಟ್ ಸರ್ವೀಸ್ ಇಲ್ಲಿ ಸಹಕಾರಿ**
- **ಪ್ರವಾಸಿಗರ ಆಕರ್ಷಣೆ ಜೊತೆಗೆ ಸ್ಥಳೀಯರಿಗೂ ಉದ್ಯೋಗ ಸಾಧ್ಯ**
- **ಶೀಘ್ರ ಸೂಕ್ತ ನಿರ್ಧಾರ ಕೈಗೊಳ್ಳಲು ಜಿಲ್ಲಾಡಳಿತ, ಇಲಾಖೆಗಳಿಗೆ ಆಗ್ರಹ**

ಸುತ್ತಮುತ್ತ

ಮರುಮೌಲ್ಯಮಾಪನ: ಇಂದ್ರಪ್ರಸ್ಥದ ಸಂಜನ್ ರಾವ್‌ಗೆ 5ನೇ ರ್‍ಯಾಂಕ್

ಉಪ್ಪಿನಂಗಡಿ: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನದಲ್ಲಿ ಇಂದ್ರಪ್ರಸ್ಥ ವಿದ್ಯಾಲಯದ ಹಲವು ವಿದ್ಯಾರ್ಥಿಗಳಿಗೆ ಹೆಚ್ಚು



ಅಂಕ ಲಭಿಸಿದ್ದು, ರಾಜ್ಯಕ್ಕೆ 5 ನೇ ಸ್ಥಾನವೂ ಲಭಿಸಿದಂತಾಗಿದೆ.

ವಿದ್ಯಾರ್ಥಿ ಪಿ. ಸಂಜನ್ ರಾವ್‌ಗೆ ಇಂಗ್ಲೀಷ್ ವಿಷಯದಲ್ಲಿ 4 ಅಂಕ ಲಭಿಸಿ 100 ಪೂರ್ಣ ಅಂಕ ಪಡೆದಿದ್ದು ಒಟ್ಟು ಅಂಕ 621ಕ್ಕೆ ಏರಿಕೆಯಾಗಿ ಶಾಲೆಗೆ ಹಾಗೂ ತಾಲೂಕಿಗೆ ದ್ವಿತೀಯ ಸ್ಥಾನ, ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾನೆ. ಇದರೊಂದಿಗೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಇಂದ್ರಪ್ರಸ್ಥ ವಿದ್ಯಾಲಯವು ರಾಜ್ಯ ಮಟ್ಟದ 4 ಮತ್ತು 5 ನೇ ಸ್ಥಾನವನ್ನು ತನ್ನದಾಗಿಸಿದ ಹಿರಿಮೆ ಪಡೆದಂತಾಗಿದೆ. ಅನುಷ್ಕಾ ಜೈನ್ ಕನ್ನಡದಲ್ಲಿ 1 ಅಂಕ ಏರಿಕೆಯಾಗಿ 125 ಪೂರ್ಣ ಅಂಕ ಪಡೆದು, ಒಟ್ಟು ಅಂಕ 611 ಪಡೆದಿದ್ದಾರೆ. ಅಕ್ಷ ಬಿ ಗಣಿತದಲ್ಲಿ 4 ಹೆಚ್ಚುವರಿ ಅಂಕ ಲಭಿಸಿ ಒಟ್ಟು ಅಂಕ 599ಕ್ಕೆ ಏರಿಕೆಯಾಗಿದೆ. ಕವೀಶ್ ಬಿ. ಕೆ ವಿಜ್ಞಾನದಲ್ಲಿ 3 ಅಂಕ ಹೆಚ್ಚಳವಾಗಿ ಒಟ್ಟು ಅಂಕ 585ಅಂಕ ಪಡೆದಿದ್ದಾರೆ. ಕೌಶಲ್ ಎ. ವಿಜ್ಞಾನದಲ್ಲಿ 2 ಹೆಚ್ಚುವರಿ ಅಂಕ ಪಡೆದು ಒಟ್ಟು ಅಂಕ 570 ಗಳಿಸಿದ್ದಾರೆ. ಲಾಸ್ಯ ಸಮಾಜ ವಿಜ್ಞಾನದಲ್ಲಿ 5 ಅಂಕ ಹೆಚ್ಚುವರಿಯಾಗಿ ಒಟ್ಟು 535 ಅಂಕದೊಂದಿಗೆ ಉನ್ನತ ಶ್ರೇಣಿ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.

ಕೊಂಪದವು ದೈವಸ್ಥಾನದಲ್ಲಿ ನೇಮ

ಕೈಕಂಬ: ಮುಚ್ಚೂರು ಸಮೀಪದ ಕೊಂಪದವಿನ ಬೊಟ್ಟಾಲಿಯಲ್ಲಿನ ಕರ್ನಾಟಕ ಧಾರ್ಮಿಕ ಮತ್ತು



ದತ್ತಿ ಇಲಾಖೆಗೆ ಸೇರಿದ ಪುರಾತನ ಶ್ರೀ ಧೂಮಾವತಿ, ದೈವಸ್ಥಾನದಲ್ಲಿ ಅರಸು ಉಳ್ಳಾಯ, ಧೂಮಾವತಿ, ವ್ಯಾಘ್ರ ಚಾಮುಂಡಿ, ರಕ್ತೇಶ್ವರಿ ಹಾಗೂ ಪರಿವಾರ ದೈವಗಳ ವಾರ್ಷಿಕ ನೇಮ ಮಿಜಾರು ಮುರಳೀಧರ ತಂತ್ರಿಗಳ ಮಾರ್ಗದರ್ಶನದಲ್ಲಿ ಭಾನುವಾರ ಜರಗಿತು. ಅಂದು ಬೆಳಿಗ್ಗೆ 8ಕ್ಕೆ ಕೊಂಪದವು ಗುತ್ತುವಿನಿಂದ ಅಲಂಕೃತ ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ದೈವದ ಭಂಡಾರ ಬಂದ ಬಳಿಕ 11ಕ್ಕೆ ಅರಸು ಉಳ್ಳಾಯ ದೈವದ ನೇಮದ ಬಳಿಕ ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ಸಂಜೆಯಿಂದ ದೈವಗಳ ನೇಮ ನಡೆಯಿತು. ಸೋಮವಾರ ಬೆಳಿಗ್ಗೆ ದೈವಗಳ ಭಂಡಾರ ಕೊಂಪದವು ಗುತ್ತಿಗೆ ತರಲಾಯಿತು. ಮಂಗಳೂರು ನಗರ ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು. ಕೊಂಪದವು ಗುತ್ತಿನ ಯಜಮಾನ ಬಾಲಕೃಷ್ಣ ಶೆಟ್ಟಿ, ದೈವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುರೇಂದ್ರ ಕಾವ, ಸಮಿತಿಯ ಸದಸ್ಯರು, ದೊಂಪದಬಲಿ ಸೇವಾ ಸಮಿತಿಯ ಅಧ್ಯಕ್ಷ ದೇವಪ್ಪ ಶೆಟ್ಟಿ, ಪದಾಧಿಕಾರಿಗಳು ಇದ್ದರು.

ಮೇ 25ಕ್ಕೆ ಪ್ರತಿಭಟನೆ

ವಿಟ್ಲ: ಬಂಟ್ವಾಳ ತಾಲೂಕು ಆಡಳಿತದಲ್ಲಿ ನ್ಯಾಯವಂಚಿತ ಕಡತಗಳು ನಾಪತ್ತೆಯಾಗುತ್ತಿದೆ. ಕಡತಗಳ ವಾರಸುದಾರರು ಹಾಗೂ ದಲಿತ ಸೇವಾ ಸಮಿತಿ ವತಿಯಿಂದ ಈ ಬಗ್ಗೆ ಮೇ 25ರಂದು ಬಂಟ್ವಾಳ ಕಂದಾಯ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಯಲಿದೆ. ಸೂಕ್ತ ಪರಿಹಾರ ಲಭಿಸದೇ ಹೋದಲ್ಲಿ ಅಹೋರಾತ್ರಿ ಧರಣಿ ನಡೆಯಲಿದೆ ಎಂದು ದಲಿತ ಸೇವಾ ಸಮಿತಿ ಸ್ಥಾಪಕಾಧ್ಯಕ್ಷ ಬಿ. ಕೆ. ಸೇಸಪ್ಪ ಬೆದ್ರಕಾಡು ಹೇಳಿದರು. ಎಸ್. ಸಿ., ಎಸ್. ಟಿ. ಇಲಾಖೆ ಸೇರಿ ವಿವಿಧ ಉದ್ದೇಶಕ್ಕೆ ಕಾಯ್ದಿರಿಸಿದ ಜಮೀನುಗಳ ಸುಮಾರು 10ಕ್ಕೂ ಅಧಿಕ ಕಡತಗಳು ಕಾಣೆಯಾಗಿರುವ ಬಗ್ಗೆ ಮಂಗಳೂರು ಸಹಾಯಕ ಆಯುಕ್ತರಿಗೆ, ಜಿಲ್ಲಾ ಎಸ್‌ಸಿ, ಎಸ್‌ಟಿ ಇಲಾಖೆಗೂ ಮನವಿ ನೀಡಲಾಗಿದೆ. ಪತ್ರ ವ್ಯವಹಾರ ಆದರೂ ಕಡತ ಪತ್ತೆಯಾಗಿಲ್ಲ, ಬಡವರ ಪ್ಲಾಟಿಂಗ್ ಸರಿಯಾಗಿ ನಡೆಯುತ್ತಿಲ್ಲ, ಕಡತ ಕಳೆದುಕೊಂಡವರು ಪ್ರತಿಭಟನೆಯಲ್ಲಿ ಭಾಗವಹಿಸಿ ಮನವಿ ನೀಡಲು ಅವಕಾಶವಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಘದ ಜಿಲ್ಲಾಧ್ಯಕ್ಷ ಗೋಪಾಲ ಕೆ. ನೇರಳಕಟ್ಟೆ, ಸೋಮಪ್ಪ ಸುರುಳಿಮೂಲೆ, ಕಡತದ ವಾರಸೂದಾರರಾದ ಶೀನ ಕೆದಿಲ, ಗೋವಿಂದ ನಾಯ್ಕ ಕುಂಡಡ್ಕ ಉಪಸ್ಥಿತರಿದ್ದರು.

ಹಕ್ಕುಪತ್ರ ನೀಡಲು ಪುತ್ತೂರು ಶಾಸಕರ ಅಡ್ಡಿ ಆರೋಪ | ಪ್ರತಿಭಟನೆಗೆ ಮತ್ತಷ್ಟು ಬಿಜೆಪಿ ನಾಯಕರ ಬೆಂಬಲ

ಮೂರನೇ ದಿನಕ್ಕೆ ಕಾಲಿಟ್ಟ ಬಂಟ್ವಾಳದ ಅಹೋರಾತ್ರಿ ಧರಣಿ

ಬಂಟ್ವಾಳ: ಕಳೆದ ಹಲವು ವರ್ಷದಿಂದ ವಾಸದ ಮನೆಗೆ ಹಕ್ಕುಪತ್ರ ನೀಡದೆ ಅಲೆದಾಡಿಸಲಾಗುತ್ತಿದೆ ಎಂದು ಆರೋಪಿಸಿ ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಪುಣಚ ಗ್ರಾಮದ 3ನೇ ವಾರ್ಡ್‌ನ ದೇವಿನಗರದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದ ಮೂರು ಮನೆಯ ಸದಸ್ಯರು ಹಾಗೂ ಸಂಬಂಧಿಕರು ಬಂಟ್ವಾಳ ತಾಲೂಕು ಕಚೇರಿ ಮುಂಭಾಗ ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆ 3ನೇ ದಿನಕ್ಕೆ ಕಾಲಿಟ್ಟಿದ್ದು, ಬುಧವಾರ ತೀವ್ರ ರೂಪ ಪಡೆಯಿತು.

ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಾಜಿ ಶಾಸಕ ಸಂಜೀವ ಮಠಂದೂರು ಸಹಿತ ನೂರಾರು ಮಂದಿ ಕಾರ್ಯಕರ್ತರು ಫಲಾನುಭವಿಗಳಿಗೆ ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಈ ಸಂದರ್ಭ ಶಾಸಕ ಅಶೋಕ್ ಕುಮಾರ್ ರೈ, ಅಧಿಕಾರಿಗಳು, ಸರಕಾರದ ಧೋರಣೆಯನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು.

ದಲಿತ ವಿರೋಧಿ ನಡೆ

ಇದೇ ವೇಳೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಬಡು ಕುಟುಂಬಗಳಿಗೆ ನ್ಯಾಯಯುತವಾಗಿ ಸಿಗಬೇಕಾದ ಮನೆಯ ಹಕ್ಕುಪತ್ರಗಳನ್ನು ನೀಡದೆ ಸತಾಯಿಸುತ್ತಿರುವ ಪುತ್ತೂರು ಶಾಸಕ ಅಶೋಕ್ ರೈ ಮತ್ತು ದಲಿತ ವಿರೋಧಿ ನಡೆಯನ್ನು



ಖಂಡಿಸಿದರಲ್ಲದೆ, ನ್ಯಾಯ ಸಿಗುವವರೆಗೆ ಕುಟುಂಬದ ಜೊತೆ ಬಿಜೆಪಿ ನಿಲ್ಲಲಿದೆ ಎಂದು ಭರವಸೆ ನೀಡಿದರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಮೂರು ವರ್ಷದ ಸಂಭ್ರಮಾಚರಣೆಯಲ್ಲಿರುವ ಸಂದರ್ಭದಲ್ಲಿಯೇ ಆಡಳಿತ ಸೌಧದ ಮುಂದೆ ಪರಿಶಿಷ್ಟ ಪಂಗಡದ ಬಂಧುಗಳು ಹಕ್ಕುಪತ್ರಕ್ಕಾಗಿ ಧರಣಿ ಕುಳಿತುಕೊಳ್ಳುವಂತಹ ದಯನೀಯ ಸ್ಥಿತಿಗೆ ಬಂದಿರುವುದು ಅತ್ಯಂತ ನಾಚಿಕೇಡಿನ ಸಂಗತಿಯಾಗಿದೆ ಎಂದರು.

ರಾಜ್ಯದಲ್ಲಿ ಸುಳ್ಳು ಹೇಳಿ ಆಡಳಿತಕ್ಕೆ ಬಂದ ಕಾಂಗ್ರೆಸ್ ಸರಕಾರದ ಮೇಲೆ ಯಾವ ನಂಬಿಕೆಯು ಉಳಿದಿಲ್ಲ, ಬಿಜೆಪಿ ಯಾವತ್ತಿದ್ದೂ ಬಡವರ ಪರವಾಗಿ, ಅಂಬೇಡ್ಕರ್ ತತ್ವ ಆದರ್ಶಗಳಿಗೆ ಬದ್ಧವಾಗಿ ಕೆಲಸ ಮಾಡುತ್ತಿದೆ.ಕೆಟ್ಟ ಕಾಂಗ್ರೆಸ್ ಸರಕಾರದ ಅಂತ್ಯದ ದಿನಗಳು ಪ್ರಾರಂಭವಾಗಿದೆ ಎಂದು ತಿಳಿಸಿದರು.

ಧರಣಿಯ ನೇತೃತ್ವವನ್ನು ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಗಿರಿಧರ್ ನಾಯ್ಕ ವಹಿಸಿದ್ದರು.

ಹಲವು ನಾಯಕರ ಸಾಥ್

ಈ ಸಂದರ್ಭ ಪುತ್ತೂರು ಮಾಜಿ ಶಾಸಕ ಕೆ.ಸಂಜೀವ ಮಠಂದೂರು, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಪಕ್ಷದ ಮುಖಂಡರಾದ ವಿಕಾಸ್ ಪುತ್ತೂರು, ಆರ್. ಚೆನ್ನಪ್ಪ ಕೋಟ್ಯಾನ್, ಸುಲೋಚನಾ ಜಿ.ಕೆ. ಭಟ್, ದಯಾನಂದ ಶೆಟ್ಟಿ ಉಜಿರೆಮಾರ್, ಪ್ರಸನ್ನ ಕುಮಾರ್ ಮಾರ್ತ, ಮುರಳೀಕೃಷ್ಣ ಹಸಂತಡ್ಕ

ಹಕ್ಕುಪತ್ರ ಭಿಕ್ಷೆಯಲ್ಲ ಹಕ್ಕು: ಸಂದೇಶ್ ಶೆಟ್ಟಿ



ಅರ್ಹ ಬಡ ಕುಟುಂಬಗಳಿಗೆ ಹಕ್ಕುಪತ್ರ ಒದಗಿಸುವುದು ಜವಾಬ್ದಾರಿಯುತ ಆಡಳಿತದ ಕರ್ತವ್ಯ. ನೊಂದ ಕುಟುಂಬಗಳು ಸರ್ಕಾರದಿಂದ ಭಿಕ್ಷೆ ಕೇಳುತ್ತಿಲ್ಲ, ತಮ್ಮ ಹಕ್ಕನ್ನು ಕೇಳುತ್ತಿದ್ದಾರೆ ಎಂದು ದ.ಕ.ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸಂದೇಶ್ ಶೆಟ್ಟಿ ಆರೆಬೆಟ್ಟು ಅಧಿಕಾರಿಗಳ ವಿರುದ್ಧ ಕಿಡಿಕಾರಿದ್ದಾರೆ. ಹಲವು ವರ್ಷದಿಂದ ಹಕ್ಕುಪತ್ರಕ್ಕಾಗಿ ಅಲೆದಾಟ ನಡೆಸುತ್ತಿರುವ ಕುಟುಂಬಗಳಿಗೆ ಹಕ್ಕುಪತ್ರ ನೀಡದೆ ಸತಾಯಿಸುತ್ತಿರುವುದು ರಾಜ್ಯ ಸರ್ಕಾರ ಎಷ್ಟು ನಿರ್ಲಕ್ಷ್ಯ ವಹಿಸುತ್ತಿದೆ ಎಂಬುದನ್ನು ಬಿಂಬಿಸುತ್ತದೆ. ನೊಂದ ಕುಟುಂಬಗಳಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿ ಯಲಿದೆ ಎಂದು ಸಂದೇಶ್ ಶೆಟ್ಟಿ ಎಚ್ಚರಿಸಿದ್ದಾರೆ.

ಬೂಡಿಯಾರ್ ರಾಧಾಕೃಷ್ಣ ರೈ, ಚನಿಲ ತಿಮ್ಮಪ್ಪ ಶೆಟ್ಟಿ, ಪುರುಷೋತ್ತಮ ಗೌಡ ಮುಂಗ್ಲಿಮನೆ, ನಾಗೇಶ್ ಟಿ.ಎಸ್., ಪುನೀತ್ ಮಾಡತ್ತಾರ್, ಹರೀಶ್ ಬಿಜತ್ರೆ, ಸ್ವರ್ಣಲತಾ ಹೆಗ್ಡೆ, ಗೌರಿ ಬನ್ನೂರು, ಯಶೋಧಾ, ಪಿ.ಬಿ. ಶಿವಕುಮಾರ್, ಜಗದೀಶ್ ಆಳ್ವ ಕುವೆತ್ತಬೈಲು, ಪ್ರೇಮಾನಂದ ಶೆಟ್ಟಿ, ರಾಮದಾಸ್ ಬಂಟ್ವಾಳ, ಮಾಧವ ಮಾವೆ, ಶಿವಪ್ರಸಾದ್ ಶೆಟ್ಟಿ, ಸುದರ್ಶನ ಬಜ, ದಿನೇಶ್ ಅಮ್ಟೂರು, ಎ. ಗೋವಿಂದ ಪ್ರಭು, ದೇವಪ್ಪ ಪೂಜಾರಿ, ಮಂಜುಳಾ ರಾವ್, ಸುಮಿತ್ರಾ, ಹರೀಶ್ ಪಡು, ಯಶೋಧರ ಕರ್ಬೆಟ್ಟು, ಪುರುಷೋತ್ತಮ ಸಾಲಿಯಾನ್ ನರಿಕೊಂಬು, ದಯಾನಂದ ತೊಕ್ಕೊಟ್ಟು, ಮಹೇಶ್, ಪ್ರಭಾಕರ ಪ್ರಭು ಮತ್ತಿತರರು ಭಾಗವಹಿಸಿದ್ದರು. ಮೇ 18ಕ್ಕೆ 3 ಕುಟುಂಬಗಳಿಗೆ ಹಕ್ಕುಪತ್ರ ಕೊಡುವುದಾಗಿ ತಹಶೀಲ್ದಾರ್ ಮಂಜುನಾಥ್ ತಿಳಿಸಿದ ಹಿನ್ನೆಲೆಯಲ್ಲಿ ಬಂಟ್ವಾಳ ಮಿನಿವಿಧಾನ ಸೌಧದ ಕಚೇರಿಗೆ ಆಗಮಿಸಿದ ಕುಟುಂಬಕ್ಕೆ ನಿರಾಶೆ ಉಂಟಾಯಿತು. ಪುತ್ತೂರಿನಲ್ಲಿ ಕಾರ್ಯಕ್ರಮದ ಮೂಲಕ ಹಕ್ಕುಪತ್ರ ನೀಡುವುದಾಗಿ ಶಾಸಕ ಅಶೋಕ್ ರೈ ಸೂಚಿಸಿದಂತೆ ತಹಶೀಲ್ದಾರ್ ಅವರು ಹಕ್ಕುಪತ್ರ ನೀಡದೆ ತಡೆ ಹಿಡಿದಿದ್ದರು. ಇದರಿಂದ ಕುಟುಂಬಕ್ಕೆ ಹಕ್ಕುಪತ್ರ ಸಿಕ್ಕಿಲ್ಲ, ಈ ನಿಟ್ಟಿನಲ್ಲಿ ಬಂಟ್ವಾಳ ಮಿನಿವಿಧಾನ ಸೌಧದ ಮುಂಭಾಗದಲ್ಲಿ ಅಹೋರಾತ್ರಿ ಧರಣಿ ಕುಳಿತಿದ್ದಾರೆ.

ಬಹುಕಾಲದ ಕನಸಿನ ಯೋಜನೆ 'ಸೌಹಾರ್ದ ಸೇತುವೆ' ಪೂರ್ಣದತ್ತ

ಶೀಘ್ರ ಲೋಕಾರ್ಪಣೆ: ರಮಾನಾಥ ರೈ ವಿಶ್ವಾಸ

ಬಂಟ್ವಾಳ: ತನ್ನ ಬಹುಕಾಲದ ಕನಸಿನ ಯೋಜನೆಯಲ್ಲೊಂದಾದ ಕಡೇಶಿವಾಲಯದಿಂದ, ಅಜಿಲಮೊಗರು ಗ್ರಾಮವನ್ನು ಸಂಪರ್ಕಿಸುವ 'ಸೌಹಾರ್ದ ಸೇತುವೆ'ಯ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರವಾಗಿ ಲೋಕಾರ್ಪಣೆಯಾಗಲಿದೆ ಎಂದು ಮಾಜಿ ಸಚಿವ ಬಿ.ರಮಾನಾಥ ರೈ ತಿಳಿಸಿದ್ದಾರೆ.

ಬುಧವಾರ ಸೌಹಾರ್ದ ಸೇತುವೆ ಕಾಮಗಾರಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಡೇಶಿವಾಲಯ ಮತ್ತು ಅಜಿಲಮೊಗರು ಮಧ್ಯೆ ಸಂಪರ್ಕ ಸೇತುವೆಯು ಬಹುಕಾಲದ ಬೇಡಿಕೆಯಾಗಿದ್ದು, ಸುಮಾರು 20 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ ಎಂದರು.

ಈ ಸೌಹಾರ್ದ ಸೇತುವೆ ಎರಡು ಧಾರ್ಮಿಕ ಶ್ರದ್ಧಾ ಕೇಂದ್ರಗಳ ನಡುವೆ ಪ್ರಮುಖ ಸಂಪರ್ಕ ಕೊಂಡಿ. ಅಲ್ಲದೇ ತಾಲೂಕಿನ ನಾವೂರು, ಮಣಿನಾಲ್ಕೂರು, ಸರಪಾಡಿ, ಕಡೇಶ್ವಾಲ್ಯ, ಬುಡೋಳಿ, ಬರಿಮಾರು ಹಾಗೂ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಮತ್ತು ಬೆಳ್ತಂಗಡಿ ತಾಲೂಕಿನ ತೆಕ್ಕಾರು, ಬಾರ್ಯ, ತಣ್ಣೀರುಪಂತ ಮತ್ತಿತರ ಪ್ರದೇಶಗಳಿಗೆ ತ್ವರಿತವಾಗಿ



> ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರೇ ಸೇತುವೆ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಿದ್ದರು. ಬಳಿಕ ನಾನಾ ಕಾರಣಗಳಿಂದ ಕಾಮಗಾರಿ ಕುಂಠಿತಗೊಂಡಿತ್ತು. ಆ ಬಳಿಕ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಡಿಸಿ ಹಾಗೂ ಸಂಬಂಧಿಸಿದ ಇಲಾಖಾ ಇಂಜಿನಿಯರ್‌ಗಳಿಗೆ ಒತ್ತಡ ಹೇರಿದ ಹಿನ್ನಲೆ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ.
> • ಬಿ.ರಮಾನಾಥ ರೈ

ತೆರಳಲು ಅನುಕೂಲವಾಗಲಿದೆ. ಈ ಹಿಂದೆ ಸಿದ್ದರಾಮಯ್ಯ ಸಿಎಂ ಆಗಿದ್ದಾಗ 5 ಸಾವಿರ ಕೋಟಿಗಿಂತಲೂ ಮಿಕ್ಕಿ ಅನುದಾನ ತಂದು ಬಂಟ್ವಾಳ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೇನೆ ಎಂದರು.

ಬೀಜ ಮತ್ತು ಸಾವಯವ ಪ್ರಮಾಣೀಕರಣ ಸಂಸ್ಥೆಯ ಅಧ್ಯಕ್ಷೆ ಲಾವಣ್ಯ ಬಲ್ಲಾಳ್, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್, ಪ್ರಮುಖರಾದ ಸುದೀಪ್ ಕುಮಾರ್ ಶೆಟ್ಟಿ, ಪದ್ಮಶೇಖರ್ ಜೈನ್, ಅಬ್ಬಾಸ್ ಆಲಿ, ಸಂಪತ್ ಕುಮಾರ್ ಶೆಟ್ಟಿ, ಶಿವಪ್ಪ ಪೂಜಾರಿ ಹಟ್ಟತಡ್ಕ, ಕಾಂಚಲಾಕ್ಷಿ, ಪೂವಪ್ಪ ಪೂಜಾರಿ, ಚೆರಿಮೋನು, ಸುರೇಶ್ ಜೋರಾ, ಆದಂ ಕುಂಜ್ಞಿ, ಸಾದಿಕ್, ಅಬ್ದುಲ್ ರಜಾಕ್, ಸಂಜೀವ ಪೂಜಾರಿ ಮತ್ತಿತರರಿದ್ದರು.

ಪುತ್ತೂರಿನಲ್ಲಿ ವಿಹಿಂಪ, ಬಜರಂಗದಳ ಪ್ರಮುಖರಿಂದ ಆಗ್ರಹ

ಸರ್ಕಾರ ಗೋ ಹತ್ಯೆ ತಡೆಗೆ ಸೂಕ್ತ ಕ್ರಮ ಕೈಗೊಳ್ಳಲಿ

ಪುತ್ತೂರು: ಪೊಲೀಸ್ ಇಲಾಖೆಯು ಅಕ್ರಮ ಗೋಸಾಗಾಟ, ಹತ್ಯೆಯನ್ನು ತಡೆಯುವ ಜತೆಗೆ ಗೋಹತ್ಯೆ ಮಾಡಿದ ಸ್ಥಳ, ಕಟ್ಟಡವನ್ನು ಮುಟ್ಟುಗೋಲು ಹಾಕುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ವಿಶ್ವ ಹಿಂದೂ ಪರಿಷತ್, ಬಜರಂಗದಳ ಆಗ್ರಹಿಸಿದೆ.

ಬುಧವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಹಿಂಪ ಪುತ್ತೂರು ಜಿಲ್ಲಾಧ್ಯಕ್ಷ ಡಾ. ಕೃಷ್ಣಪ್ರಸನ್ನ ಮಾತನಾಡಿ, ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾನೂನು ಇದ್ದರೂ ಅಕ್ರಮ ಗೋಸಾಗಾಟ, ಹತ್ಯೆ ನಿರಂತರವಾಗಿ ನಡೆಯುತ್ತಿದೆ. ಮುಂದೆ ಹಬ್ಬದ ಸಂದರ್ಭ ಹೆಚ್ಚಿನ ಗೋಸಾಗಾಟ ನಡೆಯುವುದರಿಂದ ಪೊಲೀಸ್ ಇಲಾಖೆ ಮೇ 28ರ ವರೆಗೆ ವಿಶೇಷ ಬಂದೋಬಸ್ತ್ ಮಾಡುವ ಜತೆಗೆ ಚೆಕ್ ಪೋಸ್ಟ್‌ಗಳಲ್ಲಿ ಗೋ ಸಾಗಾಟದ ಕುರಿತು ವಿಶೇಷ ನಿಗಾ ಇರಿಸಬೇಕು. ಹೆಚ್ಚಿನ ಪೊಲೀಸ್ ಪಡೆಯನ್ನು ಬಳಸುವ ಜತೆಗೆ ಆರೋಪಿಗಳ ಪತ್ತೆಗೆ ಶ್ವಾನದಳ, ಆಧುನಿಕ ತಂತ್ರಜ್ಞಾನ ಬಳಸಬೇಕು ಎಂದರು.

ಬಿಎನ್‌ಎಸ್ ಸೆಕ್ಷನ್ 40ರ ಪ್ರಕಾರ ಆರೋಪಿಗಳನ್ನು ಸಾರ್ವಜನಿಕರೇ



> ರಾಜ್ಯ ಸರಕಾರವು ಅಲ್ಪಸಂಖ್ಯಾತರ ಓಲೈಕೆಗಾಗಿ ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡುವ ಕುರಿತು ಆದೇಶ ಮಾಡಿದ್ದು ಈ ಆದೇಶವನ್ನು ಕೂಡಲೇ ಹಿಂಪಡೆಯಬೇಕು.
> • ಕೃಷ್ಣಪ್ರಸನ್ನ

ಹಿಡಿದು 6 ಗಂಟೆಯೊಳಗೆ ಪೊಲೀಸರಿಗೆ ಹಸ್ತಾಂತರಿಸಲು ಅವಕಾಶವಿದ್ದು, ಇದರ ಕುರಿತು ಪೊಲೀಸರು ಜನರಲ್ಲಿ ಜಾಗೃತಿ ಮೂಡಿಸಬೇಕು. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆ ಗೋಸಾಗಾಟ, ಹತ್ಯೆ ತಡೆಯದೇ ಇದ್ದರೆ ವಿಹಿಂಪ ಹೋರಾಟ ಕೈಗೆತ್ತಿಕೊಳ್ಳಬೇಕಾಗುತ್ತದೆ ಎಂದರು.

ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸೇರಿದಂತೆ ಹಲವು ಸಮಸ್ಯೆಗಳಿದ್ದರೂ, ಅವುಗಳನ್ನು ಸರಿ ಮಾಡದೆ ಹಿಜಾಬ್ ವಿಚಾರ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಯಲ್ಲಿದ್ದರೂ ಹಿಜಾಬ್ ಬಗ್ಗೆ ಆದೇಶ ನೀಡಿದೆ. ಕಾಂಗ್ರೆಸ್‌ನ ಓಲೈಕೆಯ ರಾಜಕಾರಣಕ್ಕೆ ಶಿಕ್ಷಣ ಇಲಾಖೆಯನ್ನು ಬಳಸಿಕೊಂಡಿದೆ. ಇದು ಶಾಲಾ–ಕಾಲೇಜುಗಳಲ್ಲಿ ಹಿಂದೂ–ಮುಸ್ಲಿಂ ಎಂಬ ವಿವಾದ ಸೃಷ್ಟಿಸಬಹುದು. ಹಿಜಾಬ್‌ಗೆ ಅವಕಾಶ ನೀಡಿದಾಗ ಹಿಂದೂಗಳು ಕೇಸರಿ ಶಲ್ಯವನ್ನು ಧರಿಸುವುದಕ್ಕೆ ಅವಕಾಶ ಕೇಳಲಿದ್ದು, ಮುಂದೆ ಅದು ಗೊಂದಲಕ್ಕೆ ಕಾರಣವಾಗುವ ಆತಂಕವೂ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಹಿಂಪ ಜಿಲ್ಲಾ ಕಾರ್ಯದರ್ಶಿ ನವೀನ್ ನೆರಿಯ, ಕೋಶಾಧಿಕಾರಿ ಮಾಧವ ಪೂಜಾರಿ, ಸಹ ಕಾರ್ಯದರ್ಶಿ ಶ್ರೀಧರ್ ತೆಂಕಿಲ, ಸಹ ಸಂಯೋಜಕ ದಿನೇಶ್ ಚಾರ್ಮಾಡಿ, ಸಂತೋಷ್ ಉಪ್ಪಿನಂಗಡಿ ಇದ್ದರು.

ತ್ರೋಬಾಲ್ ಪಂದ್ಯಾಟ: 21ನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿದ ಆಳ್ವಾಸ್ ತಂಡ



ಮೂಡುಬಿದಿರೆ: ಮಂಗಳೂರು ವಿವಿ ಕ್ಯಾಂಪಸ್‌ನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಮಹಿಳೆಯರ ತ್ರೋಬಾಲ್ ಪಂದ್ಯಾಟದಲ್ಲಿ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿಯರು ಅದ್ಭುತ ಪ್ರದರ್ಶನ ನೀಡಿ 21ನೇ ಬಾರಿ ಚಾಂಪಿಯನ್ ಕಿರೀಟವನ್ನು ಮುಡಿಗೇರಿಸಿಕೊಂಡು, ಪೂರ್ಣಪ್ರಜ್ಞಾ ರೋಲಿಂಗ್ ಟ್ರೋಫಿಯನ್ನು ತನ್ನದಾಗಿಸಿಕೊಂಡರು.

ರೋಚಕ ಹಣಾಹಣಿ

ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಡಂತ್ಯಾರ್‌ನ ಸೇಕ್ರೆಡ್ ಹಾರ್ಟ್ ಕಾಲೇಜಿನ ತಂಡವನ್ನು ಆಳ್ವಾಸ್ ತಂಡವು 25–10 ಹಾಗೂ 25–12 ಅಂಕಗಳ ನೇರ ಸೆಟ್‌ನಲ್ಲಿ ಮಣಿಸಿತು.

ಸೆಮಿಫೈನಲ್‌ನಲ್ಲಿ ಹಂಪನಕಟ್ಟೆಯ ವಿಶ್ವವಿದ್ಯಾಲಯ ಕಾಲೇಜಿನ ವಿರುದ್ಧ 25–18 ಹಾಗೂ 25–12 ಅಂಕಗಳ ಅಂತರದಲ್ಲಿ ಭರ್ಜರಿ ಜಯ ಸಾಧಿಸಿತು. ಅಂತಿಮ ಫೈನಲ್ ಹಣಾಹಣಿಯಲ್ಲಿ ಮಂಗಳೂರು ವಿಶ್ವವಿದ್ಯಾಲಯ ಕ್ಯಾಂಪಸ್ ತಂಡವನ್ನು 25–18 ಮತ್ತು 25–16 ಅಂಕಗಳ ನೇರ ಸೆಟ್‌ನಿಂದ ಸೋಲಿಸಿ ಆಳ್ವಾಸ್ ಚಾಂಪಿಯನ್‌ಶಿಪ್ ಕಿರೀಟವನ್ನು 18ನೇ ಬಾರಿ ತನ್ನದಾಗಿಸಿಕೊಂಡಿತು. ವಿಜೇತ ತಂಡವನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಅಭಿನಂದಿಸಿದ್ದಾರೆ.

ಐವರ್ನಾಡು: ನೂತನ ರಬ್ಬರ್ ಸಮೂಹ ಸಂಸ್ಕರಣಾ ಘಟಕ ಉದ್ಘಾಟನೆ



ಸುಳ್ಯ: ಐವರ್ನಾಡು ರಬ್ಬರ್ ಬೆಳೆಗಾರರ ಸಂಘದ ವತಿಯಿಂದ ಐವರ್ನಾಡು ಗ್ರಾಮದ ನಿಡುಬೆಯಲ್ಲಿ ನೂತನವಾಗಿ ನಿರ್ಮಾಣವಾದ ಸಮೂಹ ಸಂಸ್ಕರಣಾ ಘಟಕದ ಉದ್ಘಾಟನೆಯು ಬುಧವಾರ ನಡೆಯಿತು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ನೂತನ ಸಮೂಹ ಸಂಸ್ಕರಣಾ ಘಟಕವನ್ನು ಉದ್ಘಾಟಿಸಿ, ಶುಭ ಹಾರೈಸಿದರು.

ಕೊಟ್ಟಾಯಂ ರಬ್ಬರ್ ಮಂಡಳಿಯ ಜಂಟಿ ನಿರ್ದೇಶಕ ಆರ್ಮುಗಂ ಫಲಕ ಅನಾವರಣಗೊಳಿಸಿದರು. ಐವರ್ನಾಡು ರಬ್ಬರ್ ಬೆಳೆಗಾರರ ಸಂಘದ ಅಧ್ಯಕ್ಷ ರಾಜಾರಾಮ ರಾವ್ ಉದ್ದಂಪಾಡಿ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಗುಣಮಟ್ಟ ನಿಯಂತ್ರಣ ಅಧಿಕಾರಿ ಬಿಜು ಎಂ.ಎನ್., ಕೊಟ್ಟಾಯಂ ರಬ್ಬರ್ ಮಂಡಳಿ ಸಹಾಯಕ ಇಂಜಿನಿಯರ್ (ಸಿವಿಲ್) ಆರೀಫ್ ಹುಸೇನ್ ಕೆ., ರಬ್ಬರ್ ಬೋರ್ಡ್ ಪುತ್ತೂರು ಅಭಿವೃದ್ಧಿ ಅಧಿಕಾರಿ ಗೋಪ್ ಕುಮಾರ್, ಪುತ್ತೂರು ರಬ್ಬರ್ ಮಂಡಳಿ ಸಹಾಯಕ ಅಭಿವೃದ್ಧಿ ಅಧಿಕಾರಿ ಟೋನಿ ಮೈಕಲ್, ಸುಳ್ಯ ಕ್ಷೇತ್ರಾಧಿಕಾರಿ ಪವಿತ್ರಾ, ಗುತ್ತಿಗಾರು ರಬ್ಬರ್ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘದ ಅಧ್ಯಕ್ಷ ನಿತ್ಯಾನಂದ ಮುಂಡೋಡಿ, ಐವರ್ನಾಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಎನ್. ಮನ್ಮಥ ಇದ್ದರು. ರಬ್ಬರು ಬೆಳೆಗಾರರ ಸಂಘದ ಉಪಾಧ್ಯಕ್ಷ ರಾಧಾಕೃಷ್ಣ ಎಂ.ಎಚ್., ನಿರ್ದೇಶಕ ಜಯಂತ್ ಬಿ., ದೇವಿದಾಸ್ ಕೆ.ವಿ. ಪರ್ಲಿಕಜೆ, ಪ್ರೇಮಾನಂದ ಪಿ.ಬಿ., ಸಿಬ್ಬಂದಿಗಳಾದ ಧನಂಜಯ, ಭಾಸ್ಕರ ಕೆ. ಮತ್ತಿತರರಿದ್ದರು. ಬಾಲಚಂದ್ರ ಪಲ್ಲತ್ತಡ್ಕ ಪ್ರಾರ್ಥಿಸಿದರು. ರಬ್ಬರು ಬೆಳೆಗಾರರ ಸಂಘದ ಕೋಶಾಧಿಕಾರಿ ಶ್ರೀನಿವಾಸ ಮಡ್ತಿಲ ಸ್ವಾಗತಿಸಿ, ನಿರ್ದೇಶಕ ಪ್ರವೀಣ್ ಪವಿತ್ರಮಜಲು ವಂದಿಸಿದರು. ಮುರಳೀಕೃಷ್ಣ ಪಾಲೆಪ್ಪಾಡಿ ನಿರ್ವಹಿಸಿದರು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಯಕ್ಷಗಾನ ಮಂಡಳಿಯ ಆರು ಮೇಳಗಳಿಂದ ಮಳೆಯ ಕಾರಣ ಸೇವಾಕರ್ತರು ಕಟೀಲು ದೇವಳದ ರಥಬೀದಿ ಹಾಗೂ ಇಲ್ಲಿನ ಸುತ್ತಮುತ್ತಲಿನ ಪರಿಸರದ ಸಭಾಂಗಣದಲ್ಲಿ ಬುಧವಾರ ಯಕ್ಷಗಾನ ಸೇವೆಯಾಟ ನಡೆಸಿದರು.

ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಮಾಜದ ಯಶಸ್ವೀ ಸಮಾವೇಶ, 'ಸೇವಾ ದ್ರುಮ್' ಪ್ರಶಸ್ತಿ ಪ್ರದಾನ

ಹೆಣ್ಮಕ್ಕಳಿಗೂ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲು ಪ್ರವೀಣ್ ದರ್ಭೆ ಮನವಿ

ಬಂಟ್ವಾಳ: ಗಂಡು ಸಂತಾನವಿಲ್ಲದ ಕುಟುಂಬಗಳಲ್ಲಿ ಕೆಲವು ಧಾರ್ಮಿಕ ವಿಧಿ ವಿಧಾನಗಳನ್ನು ನಿರ್ವಹಿಸಲು ಹೆಣ್ಣು ಮಕ್ಕಳಿಗೂ ಅವಕಾಶ ನೀಡುವ ಕುರಿತಂತೆ ಸಮಾಜ ಮತ್ತು ಪುರೋಹಿತ ವರ್ಗ ಚಿಂತಿಸಬೇಕು ಎಂಬುದಾಗಿ ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ದ.ಕ. ಜಿಲ್ಲಾ ಸಂಘ (ರಿ) ಅಧ್ಯಕ್ಷ ಪ್ರವೀಣ್ ದರ್ಭೆಯವರು ಮನವಿ ಮಾಡಿದ್ದಾರೆ.

ಗಂಡಸರಿಲ್ಲದ ಕುಟುಂಬದ ಮಹಿಳೆಯರು ಕೆಲವೊಮ್ಮೆ ಕೌಟುಂಬಿಕ ಧಾರ್ಮಿಕ ವಿಧಿಗಳನ್ನು ಪೂರೈಸಲು ಕುಟುಂಬಕ್ಕೆ ಸಂಬಂಧಿಸಿದ ದೂರದ ಬಂಧುಗಳನ್ನು ಅರಸಿಕೊಂಡು ಹೋಗಬೇಕಾಗುತ್ತದೆ. ಇಂತಹ ಕಷ್ಟ ತಪ್ಪಿಸಲು ಅವರೇ ಧಾರ್ಮಿಕ ವಿಧಿ ನಿರ್ವಹಿಸುವಂತಹ ವ್ಯವಸ್ಥೆ ರೂಪಿಸುವುದು ಅಗತ್ಯ ಎಂದು ಅವರು ಬಿ.ಸಿ.ರೋಡಿನ ಸ್ಪರ್ಶ ಕಲಾಮಂದಿರದಲ್ಲಿ



ನಡೆದ ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಮಾಜದ 'ಸಮಾವೇಶ–2026'ರಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ಅಭಿಪ್ರಾಯಿಸಿದರು.

ಸಮಾವೇಶದಲ್ಲಿ ಆರೆಸ್ಸೆಸ್ ಅಖಿಲ ಭಾರತೀಯ ಕಾರ್ಯಕಾರಿಣಿಯ ಆಮಂತ್ರಿತ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಸದ್ಬೋಧ ಚಿಂತನೆ ಮಂಡಿಸಿದರು.

ಯಾವುದೇ ಬಿಕ್ಕಟ್ಟು ಎದುರಿಸಲು ಮತ್ತು ಪ್ರಗತಿ ಸಾಧಿಸಲು ಸಮಾಜದಲ್ಲಿ ಒಗ್ಗಟ್ಟು ಮುಖ್ಯ. ನಮ್ಮ ಸಮಾಜದಲ್ಲಿ ಒಗ್ಗಟ್ಟಿನ ಕೊರತೆಯಿದ್ದು, ಅದನ್ನು ನೀಗಬೇಕು ಎಂಬುದಾಗಿ ಕಾರ್ಯಕ್ರಮ ಉದ್ಘಾಟಿಸಿದ ಜವಾಹರಲಾಲ್ ನೆಹರು ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ. ಮಾಧವ ಪ್ರಭು ಬೆಳಗಾವಿ ನುಡಿದರು.

ಗಿರ್‌ಗಾಂ ಗೌಡ್ ಬ್ರಾಹ್ಮಣ ಸಭಾದ ಅಧ್ಯಕ್ಷ ಮನೀಶ್ ದಾಭೋಳ್ಕರ್ ಸಮಾರಂಭದ ಗೌರವ ಅತಿಥಿಯಾಗಿದ್ದು, ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

> ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಹಿಂದಿನಿಂದಲೂ ಉನ್ನತ ಸ್ಥಾನವಿತ್ತು. ಮಹಿಳೆಯರು ಅವಕಾಶಕ್ಕಾಗಿ ಕಾಯದೇ ಬಂದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.
> • ಕಜಂಪಾಡಿ ಸುಬ್ರಹ್ಮಣ್ಯ ಭಟ್

'ಸೇವಾ ದ್ರುಮ್' ಪ್ರಶಸ್ತಿ ಪ್ರದಾನ

ಸಮಾಜದ ಪುರೋಹಿತರಾದ ಶ್ರೀ ನಿತ್ಯಾನಂದ ಭಟ್, ಶ್ರೀ ಪ್ರಶಾಂತ್ ಭಟ್ ಕಟ್ಟಣಿಗೆ, ಶ್ರೀ ಸುರೇಂದ್ರ ಭಟ್ ಅವರ ವೇದ ಘೋಷದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ನಾರಾಯಣ ನಾಯಕ್ ಕಿನ್ನಾಜೆ ಮತ್ತು ಡಾ.ಕೆ. ಪ್ರೇಮಚಂದ್ರ ಶೆಣೈ ಯೆಯ್ಯಾಡಿ ಅವರಿಗೆ 'ಸೇವಾ ದ್ರುಮ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ಪುರೋಹಿತ ಶ್ರೀ ಭವಾನಿ ಶಂಕರ್ ಉಪಸ್ಥಿತಿಯಲ್ಲಿ ಶಿಕ್ಷಣದಲ್ಲಿ ಉತ್ತಮ ಸಾಧನೆ ತೋರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಶ್ರೀ ಆರೋಗ್ಯ ನಿಧಿ ಯೋಜನೆ ಯನ್ವಯ ಮೂವರಿಗೆ ನೆರವು ವಿತರಿಸಲಾಯಿತು.

ಬಳಿಕ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಅಶೋಕ್ ಕೋಡಿಕಂಡ, ಶಾಂತಾರಾಮ ಪ್ರಭು ಮುಚ್ಚಿಳ್ಕೋಡಿ ಮತ್ತು ಸಂಘದ ಪದಾಧಿಕಾರಿಗಳು ಸ್ವಾಗತ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

ಸುತ್ತ ಮುತ್ತ

ಇಂದು ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ತಾಲೂಕು ಇದರ ವತಿಯಿಂದ ಪುಸ್ತಕ ಪ್ರಾಧಿಕಾರ ಇದರ ಮನೆಗೊಂದು ಗ್ರಂಥಾಲಯ ವಿನೂತನ ಕಾರ್ಯಕ್ರಮ ಉಡುಪಿಯ ಟೆಂಪಲ್ ಇನ್ ಹೋಂಸ್ಟೇಯಲ್ಲಿ ಇದೇ ಬರುವ ಮೇ 21ರಂದು ಸಂಜೆ 5ಕ್ಕೆ ಉದ್ಘಾಟನೆಗೊಳ್ಳಲಿದೆ. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಡಾ. ಮಾನಸ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಭಾಧ್ಯಕ್ಷತೆಯನ್ನು ಕಸಾಪ ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್ ಪಿ ವಹಿಸಲಿದ್ದಾರೆ. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಪೂರ್ಣಿಮಾ ಹಾಗೂ ಡಾ. ಶಿವರಾಮ ಕಾರಂತ ಟ್ರಸ್ಟ್ ಅಧ್ಯಕ್ಷ ಡಾ. ಗಣನಾಥ ಎಕ್ಕಾರ್ ಹಾಗೂ ಅಪ್ನಾ ಹಾಲಿಡೇಸ್ ಇದರ ಆಡಳಿತ ನಿರ್ದೇಶಕ ನಾಗರಾಜ್ ಹೆಬ್ಬಾರ್ ಉಪಸ್ಥಿತರಿರುತ್ತಾರೆ. ಇದೇ ಸಮಯ ಸಂದರ್ಭದಲ್ಲಿ ಪುಸ್ತಕ ಮನೆಗಳ ಭೇಟಿ ಕಾರ್ಯಕ್ರಮವಿರುತ್ತದೆ ಎಂದು ಕ ಸಾ ಪ ಉಡುಪಿ ತಾಲೂಕು ಗೌರವ ಕಾರ್ಯದರ್ಶಿ ಜನಾರ್ದನ ಕೊಡವೂರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಕ್ಷೇತ್ರ ಕಾನಂಗಿ ಸಂಸ್ಥಾಪಕ ಶ್ರೀಗುರೂಜಿ ಅವರ ಆರಾಧನೋತ್ಸವ

ಕಾರ್ಕಳ: ಕಾರ್ಕಳ ಹಿರ್ಗಾನದ ಶ್ರೀಕ್ಷೇತ್ರ ಕಾನಂಗಿ ಶ್ರೀಶ್ರೀನಿವಾಸ ದೇವಸ್ಥಾನದ ಸಂಸ್ಥಾಪಕರಾದ ಪೂಜ್ಯ ಶ್ರೀಗುರೂಜಿ ಅವರ ಎಂಟನೇ ವರ್ಷದ ಆರಾಧನೋತ್ಸವ ಮೇ 24ರಂದು ಶ್ರೀಕ್ಷೇತ್ರದಲ್ಲಿ ಜರುಗಲಿದೆ. ಬೆಳಿಗ್ಗೆ 10ರಿಂದ ವೃಂದಾವನದಲ್ಲಿ ಶ್ರೀದೇವರಿಗೆ ಪಂಚಾಮೃತಾಭಿಷೇಕ ಸಹಿತ ಷೋಡಶೋಪಚಾರ ಪೂಜೆ, ವಿಷ್ಣುಯಾಗ,ಭಜನೆ, ಮಹಾಮಂಗಳಾರತಿ, ಸಮಾರಾಧನೆ ಸಂಪನ್ನಗೊಳ್ಳಲಿದೆ. ಶ್ರೀಕ್ಷೇತ್ರದ ಭಕ್ತಾಭಿಮಾನಿಗಳು ಆಗಮಿಸಿ ಶ್ರೀಮುಡಿಗಂಧಪ್ರಸಾದ ಸ್ವೀಕರಿಸಬೇಕಾಗಿ ಶ್ರೀಗುರೂಜಿಯವರ ಶಿಷ್ಯವೃಂದದ ಪರವಾಗಿ ಕ್ಷೇತ್ರದ ಪ್ರಧಾನ ಅರ್ಚಕರಾದ ವೇದಮೂರ್ತಿ ಶ್ರೀಕಾಂತ್ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಆಲಂಕಾರು ಸಿಎ ಬ್ಯಾಂಕ್ ಹಳೆನೇರಂಕಿ ಶಾಖೆ ಲೋಕಾರ್ಪಣೆ

ಆಲಂಕಾರು: ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಆಲಂಕಾರು ಇದರ ಹಳೆನೇರಂಕಿ ನೂತನ ಶಾಖಾ ಕಚೇರಿಯು ಇಂದು ಲೋಕಾರ್ಪಣೆಗೊಳ್ಳಲಿದೆ. ಬೆಳಗ್ಗೆ 9.30ಕ್ಕೆ ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್(ಎಸ್‌ಸಿಡಿಸಿಸಿ)ನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ದೀಪ ಪ್ರಜ್ವಲನೆಗೊಳಿಸಿ ನೂತನ ಶಾಖಾ ಕಚೇರಿಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತದ ಆಡಳಿತ ಮಂಡಳಿಯ ಅಧ್ಯಕ್ಷ ರಮೇಶ್ ಭಟ್ ಉಪ್ಪಂಗಳ ತಿಳಿಸಿದ್ದಾರೆ. ಈ ಸಂದರ್ಭ ಆಡಳಿತ ಮಂಡಳಿಯ ಉಪಾಧ್ಯಕ್ಷ ದಯಾನಂದ ರೈ ಮನವಳಿಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನೋಹರ ಪ್ರಕಾಶ್ ಡಿ. ಉಪಸ್ಥಿತರಿದ್ದರು.

ಪಡುಪಣಂಬೂರು ಗ್ರಾ.ಪಂ. ವಿಶೇಷ ಗ್ರಾಮಸಭೆ ಇಂದು

ಮುಲ್ಕಿ: ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮುಂಗಾರು ಮಳೆ ಹಾಗೂ ವಿಪತ್ತು ನಿರ್ವಹಣೆ ಕುರಿತು ವಿಶೇಷ ಗ್ರಾಮ ಸಭೆಯು ಜೂ.21ರಂದು ಮಧ್ಯಾಹ್ನ 3 ಗಂಟೆಗೆ ಪಡುಪಣಂಬೂರು ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ. ಸಭೆಯಲ್ಲಿ ಮುಂಗಾರು ಮಳೆ ಹಿನ್ನೆಲೆ ವಿಪತ್ತು ನಿರ್ವಹಣೆ, ನರೇಗಾ ಯೋಜನೆಯ ಉದ್ಯೋಗ ಚೀಟಿಗಳನ್ನು ಪರಿಶೀಲಿಸಿ ಅರ್ಹ ಉದ್ಯೋಗ ಚೀಟಿ ಇ-ಕೈವೈಸಿ, ಉದ್ಯೋಗ ಚೀಟಿ ರದ್ದು ಪಡಿಸುವ ಚರ್ಚೆ ನಡೆಯಲಿದೆ ಎಂದು ಆಡಳಿತಾಧಿಕಾರಿ ಪ್ರಕಟಣೆ ತಿಳಿಸಿದೆ.

ಮೇ 24: ಮಹಾಸಭೆ

ಮುಲ್ಕಿ: ಪಡುಪಣಂಬೂರು ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ವಾಚನಾಲಯ ಮತ್ತು ಯುವಕ ಮಂಡಲ ಹಾಗೂ ಮಹಿಳಾ ವೇದಿಕೆಯ 64ನೇ ವಾರ್ಷಿಕ ಮಹಾಸಭೆ ಮತ್ತು ಪುಸ್ತಕ ಹಾಗೂ ಪರಿಕರ ವಿತರಣೆ ಮೇ 24ರಂದು ಬೆಳಿಗ್ಗೆ ಗಂಟೆ 9.30ರಿಂದ ವಾಚನಾಲಯದ ಅಧ್ಯಕ್ಷ ಹರಿಪ್ರಸಾದ್ ಕೊಲ್ನಾಡು ಅಧ್ಯಕ್ಷತೆಯಲ್ಲಿ ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದ ಶ್ರೀ ವೀರಭದ್ರ ಸಭಾಭವನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂಡುಬಿದಿರೆ ಹೆರಿಟೇಜ್ ಮ್ಯಾಪ್, ಜಲಮೂಲಗಳ ಕುರಿತ ಇಂಟಾಕ್ ಕೃತಿಯ ಲೋಕಾರ್ಪಣೆ

ಸಣ್ಣ ಪಟ್ಟಣಗಳ ವೈವಿಧ್ಯತೆಯ ದಾಖಲೀಕರಣ ಅಗತ್ಯ: ಬಸು

ಮೂಡುಬಿದಿರೆ: ಗ್ರಾಮಗಳ ಬಳಿಕ ಇದೀಗ ಸಣ್ಣ ಪಟ್ಟಣಗಳ ವೈವಿಧ್ಯತೆ, ಪರಂಪರೆಯನ್ನು ದಾಖಲಿಸಿಕೊಂಡು ಕಾಪಿಡಬೇಕಾದ ಅನಿವಾರ್ಯತೆ ಎದುರಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಜಲ ಮೂಲಗಳ ಕಲುಷಿತಗೊಳ್ಳುತ್ತಿವೆ. ಇದು ಮುಂದಿನ ದಿನಗಳಲ್ಲಿ ಗಂಭೀರ ಸಮಸ್ಯೆಯಾಗಲಿದ್ದು ನಮ್ಮೆಲ್ಲರಿಗೂ ಪ್ರಸ್ತುತ ಎಚ್ಚರಿಕೆಯ ಕರೆಗಂಟೆಯಾಗಿದೆ ಎಂದು ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಇಂಟಾಕ್) ಮಂಗಳೂರು ಘಟಕದ ಸಂಚಾಲಕ ಸುಭಾಶ್ಚಂದ್ರ ಬಸು ಹೇಳಿದರು.

ಅವರು ರೋಟರಿ ಕ್ಲಬ್ ಮೂಡುಬಿದಿರೆ ಸಹಯೋಗದಲ್ಲಿ ಸಮ್ಮಿಲನ್ ಸಭಾಂಗಣದಲ್ಲಿ ಸೋಮವಾರ ಸಂಜೆ ಇಂಟಾಕ್ ರೂಪಿಸಿದ ಮೂಡುಬಿದಿರೆ ಹೆರಿಟೇಜ್ ಮ್ಯಾಪ್ ಹಾಗೂ ಟ್ರೆಡಿಶನಲ್ ವಾಟರ್ ಸಿಸ್ಟಮ್ಸ್ ಆಫ್ ಮೂಡುಬಿದಿರೆ ಕೃತಿಯ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನ ಬಳಿಕ ಎರಡನೆಯದಾಗಿ ಮೂಡುಬಿದಿರೆಯ ಹೆರಿಟೇಜ್ ಮ್ಯಾಪ್ ರೂಪಿಸಲಾಗಿದೆ. ಶೀಘ್ರದಲ್ಲೇ ಕಾರ್ಕಳದ ಹೆರಿಟೇಜ್ ಮ್ಯಾಪ್ ಬಿಡುಗಡೆಗೂ ಸಿದ್ಧತೆ ನಡೆದಿದೆ ಎಂದರು.

ಸಹಕಾರ ಅಗತ್ಯ

ಊರಿನ ಸಾಂಸ್ಕೃತಿಕ, ಪಾರಂಪರಿಕ ವಿಶೇಷತೆಗಳ ದಾಖಲೀಕರಣ, ಕೃತಿ ಪ್ರಕಟಣೆ, ಅಧ್ಯಯನ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗೆ ಸ್ವಯಂ ಸೇವಕರು, ಸದಸ್ಯ, ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಥಿಕವಾಗಿಯೂ ಸ್ಪಂದಿಸುವವರ ಅಗತ್ಯವಿದೆ ಎಂದವರು ಹೇಳಿದರು.

ರೋಟರಿ ಅಧ್ಯಕ್ಷ ನಾಗರಾಜ್ ಹೆಗ್ಡೆ ಹೆರಿಟೇಜ್ ಮ್ಯಾಪ್ ಹಾಗೂ ಕೃತಿಯ ಲೋಕಾರ್ಪಣೆ ನೆರವೇರಿಸಿದರು. ಊರಿನ ಪಾರಂಪರಿಕ ವಿಶೇಷತೆ, ಅಗತ್ಯತೆಯ ಕುರಿತು ಕೃತಿ, ಅಧ್ಯಯನ ವರದಿಗಳನ್ನು ಕಟ್ಟಿಕೊಟ್ಟಿರುವ ಸಂಸ್ಥೆಗೆ ಜನತೆಯ ಪರವಾಗಿ ಅವರು ಕೃತಜ್ಞತೆ ಅರ್ಪಿಸಿದರು.

ಗೌರವಾರ್ಪಣೆ

ರೋಟರಿ ವತಿಯಿಂದ ಸುಭಾಶ್ಚಂದ್ರ ಬಸು ಅವರನ್ನು ಗೌರವಿಸಲಾಯಿತು. ರೋಟರಿ ಚ್ಯಾರಿಟೇಬಲ್ ಟ್ರಸ್ಟ್ ಸಹಕಾರದೊಂದಿಗೆ ಜರಗಿದ ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ಪಿ.ಕೆ. ಥೋಮಸ್, ರೋಟರಿ ಕಾರ್ಯದರ್ಶಿ ಪವನ್ ಪೈ ಇಂಟಾಕ್ ಬಳಗದ ಶರ್ವಾಣಿ ಭಟ್, ಮುರಳಿ, ನೇಮಿರಾಜ್ ಶೆಟ್ಟಿ ರಾಜೇಂದ್ರ ಕೇದಿಗೆ, ಹರೀಶ್ ಕೊಡಿಯಾಲ್ ಬೈಲ್, ರೇಷ್ಮಾ ಶೆಟ್ಟಿ ರೋಟರಿ ಕಾರ್ಯದರ್ಶಿ ಪವನ್ ಪೈ ಉಪಸ್ಥಿತರಿದ್ದರು.

ದೇಶದೆಲ್ಲೆಡೆ ಇಂಟಾಕ್‌ನ 230 ಶಾಖೆ ಸಕ್ರಿಯ

ದಿಲ್ಲಿ ಮೂಲದ ಸರಕಾರೇತರ ಸಂಸ್ಥೆಯಾಗಿರುವ ಇಂಟಾಕ್ ಭಾರತೀಯ ಪರಂಪರೆಯ ಕುರಿತು ಜನರಿಗೆ ಅರಿವು, ಜಾಗೃತಿ ಮತ್ತು ರಕ್ಷಣೆಯ ಕಾರ್ಯದಲ್ಲಿ 230ರಷ್ಟು ಶಾಖೆಗಳ ಮೂಲಕ ಸಕ್ರಿಯವಾಗಿದೆ ಎಂದು ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಡಾ. ಪುಂಡಿಕಾಯ್ ಗಣಪಯ್ಯ ಭಟ್ ತಿಳಿಸಿದರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಅವರು, ಮಂಗಳೂರಿನಲ್ಲಿ ಕಳೆದ ಹತ್ತು ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಇಂಟಾಕ್ ಇದೀಗ ಮೂಡುಬಿದಿರೆಯ ಪಾರಂಪರಿಕ ತಾಣಗಳು, ಜಲಮೂಲಗಳ ಕುರಿತ ಅಧ್ಯಯನ ವರದಿ ಜತೆಗೆ ವಿಶೇಷವಾಗಿ ಗೌರೀಕೆರೆಯ ಮಹತ್ವ ಅಭಿವೃದ್ಧಿ ಸಾಧ್ಯತೆಗಳ ಕುರಿತು ತಯಾರಿಸಿರುವ ವರದಿಗಳು ಉಪಯುಕ್ತ ಕೊಡುಗೆಗಳಾಗಿವೆ ಎಂದರು.

ಖಂಬದಕೋಣೆ ಸಹಕಾರಿ ಸಂಘ: ನಿವೃತ್ತ ಶಾಖೆಯ ವ್ಯವಸ್ಥಾಪಕರಿಗೆ ಬೀಳ್ಕೊಡುಗೆ



ಬೈಂದೂರು: ವೃತ್ತಿ ಬದುಕು ನಮ್ಮ ಜೀವನದ ಒಂದು ಭಾಗವೇ ಹೊರತು ಸಂಪೂರ್ಣವಲ್ಲ, ಹಾಗಿರುವಾಗ ನಿವೃತ್ತಿಯ ಭೂತ ನಮ್ಮ ಆತ್ಮವಿಶ್ವಾಸ, ಲವಲವಿಕೆ, ಪ್ರೀತಿ, ವಾತ್ಸಲ್ಯಗಳನ್ನು ಕಬಳಿಸಲು ಬಿಡಬಾರದು. ವೃತ್ತಿ ಬದುಕಿನ ಹೊರಗೂ ಮಾಡಲು ಬೇಕಾದಷ್ಟಿದೆ ಎನ್ನುವ ಗಟ್ಟಿತನ ತೋರಿದರೆ ನಿವೃತ್ತಿಯ ಕೊರಗು ನಮ್ಮನ್ನು ಆವರಿಸದು ಎಂದು ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಸ್. ಪ್ರಕಾಶ್ಚಂದ್ರ ಶೆಟ್ಟಿ ಹೇಳಿದರು.

ಉಪ್ಪುಂದ ರೈತಸಿರಿ ಸಭಾಂಗಣದಲ್ಲಿ ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘ ಉಪ್ಪುಂದ ಹಾಗೂ ರೈತಸಿರಿ-ರೈತ ಸೇವಾ ಒಕ್ಕೂಟ ಇವರ ಜಂಟಿ ಆಶ್ರಯದಲ್ಲಿ ಸಂಘದ ಸೇವಾ ನಿವೃತ್ತ ಕಂಬದಕೋಣೆ ಶಾಖಾ ವ್ಯವಸ್ಥಾಪಕ ಚಂದ್ರ ಬಿ. ನಾಗೂರು ಇವರ ಬೀಳ್ಕೊಡುಗೆ ಸಮಾರಂಭದಲ್ಲಿ ಸಂಘದ ಆಡಳಿತ ಮಂಡಳಿ, ಸಿಬ್ಬಂದಿಗಳು ಹಾಗೂ ನಿವೃತ ನೌಕರರ ಪರವಾಗಿ ಸನ್ಮಾನಿಸಿ ಮಾತನಾಡಿದರು. ಸಹಕಾರಿ ಕ್ಷೇತ್ರದಲ್ಲಿ ಚಂದ್ರ ಇವರು ಜನಸ್ನೇಹಿಯಾಗಿ ವೃತ್ತಿ ಜೀವನದಲ್ಲಿ ಸದಾ ನಗುಮೊಗದಿಂದ ಕಾರ್ಯನಿರ್ವಹಿಸಿದ್ದಾರೆ. ಇವರ ಮುಂದಿನ ನಿವೃತ್ತಿ ಜೀವನವು ಸುಖಕರವಾಗಿರಲಿ ಎಂದು ಹಾರೈಸಿದರು.

ನಿವೃತ್ತ ನೌಕರ ಕೆ. ಹಾವಳಿ ಬಿಲ್ಲವ, ಸಂಘದ ಕೃಷಿ ಸಹಾಯಕ ಈಶ್ವರ ನಾಯ್ಕ ಇವರು ಚಂದ್ರ ಬಿ ನಾಗೂರು ಇವರ ಆದರ್ಶಗಳು ಹಾಗೂ ಕರ್ತವ್ಯ ಪ್ರಜ್ಞೆ ಬಗ್ಗೆ ಮಾತನಾಡಿದರು.

ಬೈಂದೂರು ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಗಾಯತ್ರಿದೇವಿ, ಸಂಘದ ಉಪಾಧ್ಯಕ್ಷ ಮಂಜು ದೇವಾಡಿಗ, ನಿರ್ದೇಶಕರಾದ ಮೋಹನ ಪೂಜಾರಿ, ಈಶ್ವರ ಹಕ್ಲತೋಡು, ಗುರುರಾಜ ಹೆಬ್ಬಾರ, ರಾಜೇಶ ದೇವಾಡಿಗ, ರಂಜಿತಕುಮಾರ್ ಶೆಟ್ಟಿ, ಹೂವಾ ನಾಯ್ಕ, ಲೀಲಾ ಪೂಜಾರ್ತಿ ಉಪಸ್ಥಿತರಿದ್ದರು. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ವಿಷ್ಣು ಆರ್. ಪೈ ಕಾರ್ಯಕ್ರಮ ನಿರ್ವಹಿಸಿದರು, ಅರುಣ ಗಾಣಿಗ ನಿವೃತ್ತರ ಪರಿಚಯ ವಾಚಿಸಿದರು, ಚಂದಯ್ಯ ಶೆಟ್ಟಿ ವಂದಿಸಿದರು.

ನೆಲ್ಯಾಡಿ ಪಿಎಂ ಶ್ರೀ ಶಾಲೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಶಿಲಾನ್ಯಾಸ



ಉಪ್ಪಿನಂಗಡಿ: ವಜ್ರಮಹೋತ್ಸವದ ಸಂಭ್ರಮದಲ್ಲಿರುವ ನೆಲ್ಯಾಡಿ ಪಿಎಂ ಶ್ರೀ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಆರ್‌ಪಿಎಲ್‌ನ ಸಿಎಸ್‌ಆರ್ ಫಂಡ್‌ನ 10 ಲಕ್ಷ ರೂ. ಹಾಗೂ 75ರ ಆಚರಣಾ ಸಮಿತಿಯ ಸಹಕಾರದೊಂದಿಗೆ ನಿರ್ಮಾಣವಾಗಲಿರುವ ನೂತನ ಶೌಚಾಲಯಕ್ಕೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಮೇ 19ರಂದು ಶಿಲಾನ್ಯಾಸ ನೆರವೇರಿಸಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕಿ ಭಾಗೀರಥಿ ಮುರುಳ್ಯ ಅವರು, ಶಾಸಕರು ಹಾಗೂ ಸಂಸದರ ಶಿಫಾರಸ್ಸಿನ ಮೇರೆಗೆ ಎಂಆರ್‌ಪಿಎಲ್ ನಿಂದ ಶೌಚಾಲಯ ನಿರ್ಮಾಣಕ್ಕೆ ಶಾಲೆಗೆ 10 ಲಕ್ಷ ರೂ.ಅನುದಾನ ಬಂದಿದೆ. 75ರ ಆಚರಣಾ ಸಮಿತಿಯ 9.50 ಲಕ್ಷ ರೂ. ಸೇರಿಸಿಕೊಂಡು ಉತ್ತಮ ಮಾದರಿಯ ಶೌಚಾಲಯ ನಿರ್ಮಾಣ ಆಗಲಿ. ಮುಂದೆ ಇಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ತನಕವೂ ವಿದ್ಯಾಭ್ಯಾಸ ಸಿಗಬೇಕೆಂದು ಹೇಳಿದರು. ಎಸ್‌ಡಿಎಂಸಿ, ಶಿಕ್ಷಕರ ಜೊತೆ ಪೋಷಕರೂ ಕೈಜೋಡಿಸಿದಾಗ ಶಾಲೆಯ ಅಭಿವೃದ್ಧಿ ಸಾಧ್ಯವಿದೆ ಎಂದು ಹೇಳಿದರು.

75ರ ಆಚರಣಾ ಸಮಿತಿ ಕಾರ್ಯಾಧ್ಯಕ್ಷ ಬಾಲಕೃಷ್ಣ ಬಾಣಜಾಲು ಮಾತನಾಡಿ, ಶಾಲೆಗೆ 75ವರ್ಷ ಪೂರ್ಣಗೊಂಡಿದ್ದು 2 ಕೋಟಿ ರೂ. ವೆಚ್ಚದ ಅಭಿವೃದ್ಧಿ ಯೋಜನೆ ಹಾಕಿಕೊಂಡು ಕಾರ್ಯೋನ್ಮುಖರಾಗಿದ್ದೇವೆ. ಇದಕ್ಕೆ ಶಾಸಕರ ಸಹಕಾರವೂ ಬೇಕು ಎಂದು ಹೇಳಿದರು.

ಪೂರ್ವ ವಿದ್ಯಾರ್ಥಿ ಸಂಘದ ಅಧ್ಯಕ್ಷ ನೋಟರಿ, ನ್ಯಾಯವಾದಿ ಇಸ್ಮಾಯಿಲ್ ನೆಲ್ಯಾಡಿ, ಗ್ರಾ.ಪಂ. ಪಿಡಿಒ ಜಯರಾಜ್ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ದಿನಕರ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ನಸೀಮಾ ವೇದಿಕೆಯಲ್ಲಿದ್ದರು. ಮುಖ್ಯಶಿಕ್ಷಕ ಶ್ರೀಧರ್ ಸ್ವಾಗತಿಸಿ, ಶಿಕ್ಷಕಿ ರತಿಲತಾ ವಂದಿಸಿದರು. ಶಿಕ್ಷಕ ವಿಮಲ್ ಕುಮಾರ್ ನಿರೂಪಿಸಿದರು.

ಮಾಡಾವು ಶ್ರೀ ಶಂಕರ ವಸಂತ ವೇದ ಪಾಠಶಾಲೆಯ ಶಿಬಿರ ಸಮಾರೋಪ



ಪುತ್ತೂರು: ತಾಲೂಕಿನ ಕೆಯ್ಯೂರು ಗ್ರಾಮದ ಮಾಡಾವಿನಲ್ಲಿ ಶ್ರೀ ಶಂಕರ ವಸಂತ ವೇದ ಪಾಠಶಾಲೆ ಆಶ್ರಯದಲ್ಲಿ ನಡೆದ 4ನೇ ವರ್ಷದ ವಸಂತ ವೇದ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಸಭಾಧ್ಯಕ್ಷತೆಯನ್ನು ವೇದಮೂರ್ತಿ ಪ್ರಸನ್ನ ಕುಮಾರ ಭಟ್ ಆರ್ತ್ಯಾಡ್ಕ ವಹಿಸಿ, ನಮ್ಮ ಜೀವನದ ಸಂಸ್ಕಾರಕ್ಕೆ ವಸಂತ ವೇದ ಶಿಬಿರದ ಆವಶ್ಯಕತೆ ಇದೆ. ಈ ತರಬೇತಿ ಸೂಕ್ತ ಸಮಯದಲ್ಲಿ ಸಿಕ್ಕಿದಾಗ ಮೌಲ್ಯಯುತವಾಗಿ ಬೆಳಗಲು ಸಾಧ್ಯ ಎಂದರು.

ಮುಖ್ಯ ಅತಿಥಿಗಳಾಗಿ ನೆಕ್ರಾಜೆ ಶ್ರೀನಿವಾಸ ನಿಡ್ವಣ್ಣಾಯ ಶುಭ ಹಾರೈಸಿದರು. ಈ ವರ್ಷದ ವೇದ ಪಾಠ ಶಾಲೆಯ ಗೌರವ ಸನ್ಮಾನವನ್ನು ವೇದಮೂರ್ತಿ ಗೋಪಾಲಕೃಷ್ಣ ಭಟ್ ಎಲ್ಯಡ್ಕ ಸ್ವೀಕರಿದರು. ಶಿಬಿರದ ಸಂಚಾಲಕ ವೇದಮೂರ್ತಿ ಗಣೇಶ ಭಟ್ ಮಾಡಾವು ಕಾರ್ಯಕ್ರಮ ನಿರ್ವಹಿಸಿದರು.

ಮಹೇಶ ಎಲ್ಯಡ್ಕ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿದರು. ವೇದ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಶ್ರೀಹರಿ ಭಟ್ ಬೆಂಗಳೂರು, ಯೋಗ ತರಬೇತಿ ನಡೆಸಿದ ಪ್ರಸನ್ನ ಕುಮಾರ ಭಟ್ ಆರ್ತ್ಯಾಡ್ಕ ಪಾಕ ತಜ್ಞ ವೆಂಕಟರಾಜ ಉಪಾಧ್ಯಾಯ ಕಂಬಳಿಮೂಲೆ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ಮತ್ತು ಪೋಷಕರು ಅನಿಸಿಕೆ ಹಂಚಿಕೊಂಡರು. ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೇ 24: ಕೆರೆಕಾಡು ಸಾರ್ವಜನಿಕ ಹಿಂದು ರುದ್ರಭೂಮಿ ಲೋಕಾರ್ಪಣೆ

ಕಿನ್ನಿಗೋಳಿ: ಸಾರ್ವಜನಿಕ ಹಿಂದೂ ರುದ್ರ ಭೂಮಿ ಕೆರೆಕಾಡು ಇದರ ಆಶ್ರಯದಲ್ಲಿ ಪುನರ್ ನಿರ್ಮಾಣಗೊಂಡ ಸಾರ್ವಜನಿಕ ಹಿಂದೂ ರುದ್ರ ಭೂಮಿಯ ಲೋಕಾರ್ಪಣಾ ಕಾರ್ಯಕ್ರಮ ಮೇ 24ರಂದು ಬೆಳಿಗ್ಗೆ ನಡೆಯಲಿದೆ.

1998ರಲ್ಲಿ ನಿರ್ಮಾಣಗೊಂಡ ಈ ರುದ್ರಭೂಮಿ ವ್ಯವಸ್ಥಿತ ನಿರ್ವಹಣೆಯಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದಲೂ ಮೆಚ್ಚುಗೆಗೆ ಪಾತ್ರವಾಗಿತ್ತು.

ವಾರ್ಷಿಕ ಸರಾಸರಿ 60ರಷ್ಟು ಶವಗಳ ದಹನ ಕಾರ್ಯ ನಡೆಯುತ್ತಿರುವ ಈ ರುದ್ರಭೂಮಿಯನ್ನು ರೂಪಾಯಿ 35 ಲಕ್ಷ ವೆಚ್ಚದಲ್ಲಿಪುನರ್ ನಿರ್ಮಾಣಮಾಡಲಾಗಿದೆ. ಬಡವರಿಗೆ ಉಚಿತವಾಗಿಯೂ, ರಿಯಾಯಿತಿ ದರದಲ್ಲೂ ದಹನ ಮಾಡಿದ್ದೂ ಇದೆ. ಸಭಾ ಕಾರ್ಯಕ್ರಮ ಕೆರೆಕಾಡು ಶ್ರೀ ದುರ್ಗಾಪರಮೇಶ್ವರೀ ಸಭಾಭವನದಲ್ಲಿ ನಡೆಯಲಿದೆ. ದ.ಕ. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಉದ್ಘಾಟನೆ ಮಾಡಲಿದ್ದು, ಶಾಸಕ ಉಮಾನಾಥ ಕೋಟ್ಯಾನ್ ಪಾವಂಜೆ ನಾಗವೃಜ ಕ್ಷೇತ್ರದ ಆಡಳಿತ ಮೊಕ್ತೇಸರ ಶಶೀಂದ್ರ ಕುಮಟರ್, ಕಸಾಪದ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಗಿರೀಶ್ ಕುಮಾರ್ ಎಂ., ಪುನರೂರು ದೇವಸ್ಥಾನದ ಮೊಕ್ತೇಸರ ಪಟೇಲ್ ವಾಸುದೇವ ರಾವ್, ಕಿನ್ನಿಗೋಳಿ ಶ್ರೀ ಶಕ್ತಿದರ್ಶನ ಯೋಗಾಶ್ರಮದ ದೇವದಾಸ್ ರಾವ್, ಲೋಕಮುಖಿ ಟ್ರಸ್ಟ್ ಅಧ್ಯಕ್ಷ ಸೋಂದಾ ಭಾಸ್ಕರ ಭಟ್ ಕಟೀಲ್ ಮತ್ತಿತರರು ಭಾಗವಹಿಲಿಸಲಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಲಕ್ಷ್ಮಣ್ ಸಾಲ್ಯಾನ್ ಪುನರೂರು ತಿಳಿಸಿದ್ದಾರೆ.

ಪುನರ್ ನಿರ್ಮಾಣ ಕಾರ್ಯದಲ್ಲಿ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶಾಸಕ ಉಮಾನಾಥ ಕೋಟ್ಯಾನ್, ಮಾಜಿ ಸಂಸದ ನಳಿನ್ ಕುಮಾರ್, ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ, ವಿನೋದ್ ಎಸ್. ಸಾಲ್ಯಾನ್, ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ ತೋಕೂರು, ದಿ. ಸೌಭಾಗ್ಯವತೀ ಕೆರೆಕಾಡು ಅವರ ಸ್ಮರಣಾರ್ಥ ಅವರ ಆಪ್ತರು ಹೀಗೆ ಅನೇಕ ಮಂದಿ ಸಹಕಾರ ನೀಡಿದ್ದಾರೆ.

ಕೊರವಡಿ ಶಾಲಾ ಕಟ್ಟಡಕ್ಕೆ ಧರ್ಮಸ್ಥಳ ಅನುದಾನ: ಮಂಜೂರಾತಿ ಪತ್ರ ಹಸ್ತಾಂತರ



ಕೋಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕುಂದಾಪುರ ತಾಲೂಕಿನ ತೆಕ್ಕಟ್ಟೆ ವಲಯದ ಕುಂಭಾಶಿ ಬಿ ಕಾರ್ಯಕ್ಷೇತ್ರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊರವಾಡಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶಾಲಾ ಕಟ್ಟಡ ನಿರ್ಮಾಣ ಮಂಜೂರಾತಿ ಪತ್ರ ವಿತರಣೆ ಕಾರ್ಯಕ್ರಮ ಇತ್ತೀಚಿಗೆ ಜರಗಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕುಂದಾಪುರ ತಾಲೂಕಿನ ಯೋಜನಾಧಿಕಾರಿ ಸುಧೀರ್, ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಶ್ಯಾಮಲಾ ಟೀಚರ್ ರವರಿಗೆ ಮಂಜೂರಾತಿ ಪತ್ರವನ್ನು ಹಸ್ತಾಂತರಿಸಿದರು.

ಈ ವೇಳೆ ಜನ ಜಾಗೃತಿ ಸದಸ್ಯರಾದ ಸುಧಾಕರ್ ಶೆಟ್ಟಿ ತೆಕ್ಕಟ್ಟೆ ಹಾಗೂ ತೆಕ್ಕಟ್ಟೆ ವಲಯದ ಮೇಲ್ವಿಚಾರಕರಾದ ಹೇಮಲತಾ ಹಾಗೂ ಊರಿನ ಗಣ್ಯರಾದ ಎಂ ರಾಮ ಕಾಂಚನ್ ಕೊರವಡಿ ಹಾಗೂ ಶಿಕ್ಷಕರಾದ ಶೋಭಾ, ನೇತ್ರ ರಕ್ಷಿ, ಸುದೀಪ್, ಎಸ್ .ಡಿ. ಎಂ. ಸಿ ಉಪಾಧ್ಯಕ್ಷರಾದ ಸತ್ಯನಾರಾಯಣ, ಎಸ್ ಡಿ ಎಂ ಸಿ ಸದಸ್ಯರು,ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯ ಕುಂಭಾಶಿ ಬಿ ಒಕ್ಕೂಟದ ಪದಾಧಿಕಾರಿಗಳು ಉಪಸ್ಥಿತರಿದ್ದರು ಕಾರ್ಯಕ್ರಮವನ್ನು ಸ್ಥಳೀಯ ಒಕ್ಕೂಟದ ಸೇವಾ ಪ್ರತಿನಿಧಿ ಪ್ರೇಮಾ ವಿಜಯ್ ನಿರೂಪಿಸಿ, ಶಾಲಾ ಮುಖ್ಯ ಶಿಕ್ಷಕರಾದ ಶ್ಯಾಮಲಾ ಟೀಚರ್ ಸ್ವಾಗತಿಸಿ, ತೆಕ್ಕಟೆ ಬಿ ಕಾರ್ಯಕ್ಷೇತ್ರದ ಸೇವಾ

ಬಡಗಬೆಟ್ಟು ಕ್ರೆಡಿಟ್ ಸೊಸೈಟಿಯ ಕುಂದಾಪುರ ಶಾಖೆ ಉದ್ಘಾಟನೆ ನಾಳೆ

ಕುಂದಾಪುರ: ಪ್ರತಿಷ್ಠಿತ ಸಹಕಾರ ಸಂಸ್ಥೆಗಳಲ್ಲಿ ಒಂದಾದ ಬಡಗಬೆಟ್ಟು ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ಉಡುಪಿ ಇದರ ಕುಂದಾಪುರದ ಸಂಪೂರ್ಣ ಹವಾನಿಯಂತ್ರಿತ ಶಾಖೆ (12ನೇ ಶಾಖೆ) ಯ ಉದ್ಘಾಟನಾ ಸಮಾರಂಭ ಮೇ 22ರಂದು ಬೆಳಗ್ಗೆ 10.30 ಕ್ಕೆ ಕುಂದಾಪುರದ ಮುಖ್ಯ ರಸ್ತೆಯ ಪಾರಿಜಾತ ಹೋಟೆಲ್ ಬಳಿಯ ಶ್ರೀ ನಂದಿಕೇಶ್ವರ ಟವರ್ಸ್‌ನಲ್ಲಿ ನಡೆಯಲಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಮಾಹಿತಿ ನೀಡಿ, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಉದ್ಘಾಟಿಸಲಿದ್ದು, ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ, ಯಶ್‌ಪಾಲ್ ಸುವರ್ಣ, ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ, ಎಸ್ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಹೇಶ ಹೆಗ್ಡೆ ಮೊಳಹಳ್ಳಿ, ಜಿಲ್ಲಾ ಸಹಕಾರಿ ಉಪನಿಬಂಧಕಿ ಲಾವಣ್ಯ ಕೆ.ಆರ್., ಕುಂದಾಪುರ ಉಪವಿಭಾಗದ ಸಹಾಯಕ ನಿಬಂಧಕ ಸುಧೀರ್ ಕುಮಾರ್ ಜೆ. ಪಾಲ್ಗೊಳ್ಳುವರು ಎಂದರು.

107 ವರ್ಷಗಳ ಇತಿಹಾಸದ ಈ ಸಂಘವು 40 ವರ್ಷಗಳಿಂದೀಚೆಗೆ ಲಾಭದಾಯಕ ರೀತಿಯಲ್ಲಿ ಮುನ್ನಡೆಯುತ್ತಿದೆ. ಪ್ರಸ್ತುತ 23 ಸಾವಿರ ಸದಸ್ಯರಿದ್ದು 662 ಕೋ.ರೂ. ಠೇವಣಿ, 528 ಕೋ.ರೂ. ಸದಸ್ಯರ ಹೊರಬಾಕಿ ಸಾಲ ಹೊಂದಿದೆ. 113.24 ಕೋ.ರೂ. ನಿಧಿ, 284.07 ಕೋ.ರೂ. ಹೂಡಿಕೆ, 795 ಕೋ.ರೂ. ದುಡಿಯುವ ಬಂಡವಾಳ, 2025-26ನೇ ಸಾಲಿನಲ್ಲಿ 4,062.29 ಕೋ.ರೂ. ವಾರ್ಷಿಕ ವಹಿವಾಟು ನಡೆಸಿ, 18.13 ಕೋ. ರೂ. ಲಾಭ ಗಳಿಸಿದೆ. 11 ಶಾಖೆಗಳ ಪೈಕಿ 9 ಕಡೆ ಸ್ವಂತ ಕಟ್ಟಡವಿದ್ದು ಕುಂದಾಪುರದಲ್ಲಿ ಇದು ಮೊದಲ ಶಾಖೆಯಾಗಿದೆ. ಸಂಘವು ಪ್ರತಿ ವರ್ಷ 25 ಲಕ್ಷ ರೂ. ಹಣವನ್ನು ಶಿಕ್ಷಣ, ಆರೋಗ್ಯ, ಸಾಮಾಜಿಕ ಕೈಂಕರ್ಯಕ್ಕೆ ವಿನಿಯೋಗಿಸುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಜಾರ್ಜ್ ಸಾಮ್ಯುವೆಲ್, ಪ್ರಧಾನ ವ್ಯವಸ್ಥಾಪಕ ರಾಜೇಶ್ ವಿ. ಶೇರಿಗಾರ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಪ್ರವೀಣ್ ಕುಮಾರ್, ಕುಂದಾಪುರ ಶಾಖಾ ವ್ಯವಸ್ಥಾಪಕ ಸಮರ್ಥ್ ಶೆಟ್ಟಿ ಉಪಸ್ಥಿತರಿದ್ದರು.

ಕಡಂಗ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಡಿಕೇರಿ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ | ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಸ್ಥಾನ

ಕನ್ನಡ ಭಾಷೆ, ನಾಡು-ನುಡಿ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ, ಸ್ವಾಭಿಮಾನ ಇರಲಿ: ಬೋಪಯ್ಯ

ಮಡಿಕೇರಿ: ಕನ್ನಡ ಭಾಷೆ, ನಾಡು-ನುಡಿ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಮತ್ತು ಸ್ವಾಭಿಮಾನ ಇರಬೇಕು ಎಂದು ವಿಧಾನಸಭೆಯ ಮಾಜಿ ಸಭಾಧ್ಯಕ್ಷ ಕೆ.ಜಿ. ಬೋಪಯ್ಯ ಅವರು ತಿಳಿಸಿದ್ದಾರೆ.

ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕಡಂಗ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ವೇದಿಕೆಯಲ್ಲಿ ಬುಧವಾರ ನಡೆದ ತಾಲೂಕಿನ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಮೊದಲ ಸ್ಥಾನ. ಆದರೆ ವಾಸ್ತವ ಪರಿಸ್ಥಿತಿ ಹೇಗಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು ಎಂದರು.



ತಾತ್ಸಾರ ಸಲ್ಲದು

ಕನ್ನಡ ಭಾಷೆ ಬಗ್ಗೆ ತಾತ್ಸಾರ ಇರಬಾರದು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಚಿಂತಿಸಬೇಕಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಕನ್ನಡ ಭಾಷೆ, ನಾಡು-ನುಡಿ, ವಿಚಾರಧಾರೆಗಳು ಎಲ್ಲೆಡೆ ತಲುಪಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸಹಕಾರಿ ಎಂದರು.

ಯುವಜನರಿಗೆ ಪರಿಚಯ: ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಅವರು ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಕನ್ನಡದ ಜೊತೆಗೆ ಕೊಡವ, ಅರೆಭಾಷೆ ಸೇರಿದಂತೆ ಹಲವು ಭಾಷೆಗಳ ಬೆಳವಣಿಗೆಗೆ ಇಲ್ಲಿನ ಸ್ಥಳೀಯರು ಶ್ರಮಿಸಿದ್ದಾರೆ. ಅವರನ್ನು ಸದಾ ಸ್ಮರಿಸಬೇಕಿದ್ದು ಆ ನಿಟ್ಟಿನಲ್ಲಿ ಯುವಜನರಿಗೆ ಪರಿಚಯಿಸುವ ಕಾರ್ಯ ನಡೆಯುತ್ತಿದೆ ಎಂದರು.

ಕನ್ನಡ ಭಾಷೆಯಲ್ಲೇ ಅನುತ್ತೀರ್ಣ

ತಾಲೂಕು 12ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಐತಿಚಂಡ ರಮೇಶ್ ಉತ್ತಪ್ಪ ಅವರು ಮಾತನಾಡಿ, ಪ್ರಸಕ್ತ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ 19 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಇವರಲ್ಲಿ 18,678 ವಿದ್ಯಾರ್ಥಿಗಳು ಪ್ರಥಮ ಭಾಷೆ ಕನ್ನಡ ಭಾಷೆಯಲ್ಲಿಯೇ ಅನುತ್ತೀರ್ಣರಾಗಿರುವ ಬಗ್ಗೆ ಚಿಂತಿಸಬೇಕಿದೆ ಎಂದರು.

ನಡಿಕೇರಿಯಂಡ ಚಿಣ್ಣಪ್ಪ ಅವರು ಕರಡ ಗ್ರಾಮ, ತಾಲೂಕಿಗೆ, ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಅವರ ಹೆಸರಿನಲ್ಲಿ ವಸ್ತು ಸಂಗ್ರಹಾಲಯ ಆಗಬೇಕು ಎಂದು ಅವರು ಒತ್ತಾಯಿಸಿದರು.

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ತಾ.ಪಂ.ಇಒ ಶೇಖರ್ ಮಾತನಾಡಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಕುರಿತು ಕಳುಹಿಸಿದ್ದ ಸಂದೇಶವನ್ನು ಬಾಳೆಯಡ ದಿವ್ಯಾ ಮಂದಪ್ಪ ಅವರು ಓದಿದರು.

ಕಸಾಪ ತಾಲೂಕು ಮಾಜಿ ಅಧ್ಯಕ್ಷ ಅಂಬೆಕಲ್ಲು ನವೀನ್, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಮುನೀರ್ ಅಹಮದ್, ರೇವತಿ ರಮೇಶ್, ಕೋಶಾಧಿಕಾರಿ ಸಂಪತ್ ಕುಮಾರ್, ಸಂಘಟನಾ ಕಾರ್ಯದರ್ಶಿ ವಾಸು ರೈ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾದ ಎಸ್.ಡಿ.ವಿಜೇತ್ (ಸೋಮವಾರಪೇಟೆ) ರಾಜೇಶ್ ಪದ್ಮನಾಭ (ವಿರಾಜಪೇಟೆ) ಹೋಬಳಿ ಘಟಕಗಳ ಅಧ್ಯಕ್ಷರಾದ ನೆರವಂಡ ಉಮೇಶ್, ಈರಮಂಡ ಹರಿಣಿ ವಿಜಯ್, ಎ.ಲೋಕೇಶ್ ಕುಮಾರ್ ಇತರರು ಇದ್ದರು.

ಕೋಡಿರ ವಿನೋದ್ ನಾಣಯ್ಯ ಸ್ವಾಗತಿಸಿದರೆ, ಲಹರಿ ತಂಡದವರು ನಾಡಗೀತೆ ಮತ್ತು ರೈತಗೀತೆ ಹಾಡಿದರು. ಬಾಳೆಯಡ ದಿವ್ಯಾ ಮಂದಪ್ಪ ಮತ್ತು ಬಿದ್ದಂಡ ನಾಣಿ ದೇವಯ್ಯ ನಿರೂಪಿಸಿದರು. ಕಸಾಪ ತಾಲೂಕು ಘಟಕದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ವಂದಿಸಿದರು.

ಸುತ್ತ ಮುತ್ತ

ದ್ವಾರಕ ಸಂಸ್ಥೆಯಿಂದ ಹೊಲಿಗೆ ಯಂತ್ರ ವಿತರಣೆ



ಪುತ್ತೂರು: ದ್ವಾರಕ ಕಾರ್ಪೋರೇಶನ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಕೆಮ್ಮಿಂಜೆ ಗ್ರಾಮದ ಮರೀಲ್ ನಿವಾಸಿ ದೈಹಿಕವಾಗಿ ಶೇ.80ರಷ್ಟು ವಿಶೇಷಚೇತನರಾದ ನಾಗರಾಜ್ ಅವರಿಗೆ ಸ್ವಂತ ಉದ್ಯೋಗ ಮಾಡಿ ಜೀವನ ನಿರ್ವಹಣೆ ಮಾಡಲು ಹೊಲಿಗೆ ಯಂತ್ರವನ್ನು ವಿತರಣೆ ಮಾಡಲಾಯಿತು. ತಾಲೂಕು ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಕಲಚೇತನರ ಸೇವಾ ಕೇಂದ್ರ ಕಚೇರಿಯ ವಿಕಲಚೇತನರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ನವೀನ್ ಕುಮಾರ್ ಅವರ ಮನವಿಗೆ ಸ್ಪಂದಿಸಿ ಈ ನೆರವು ನೀಡಲಾಯಿತು. ನಾಗರಾಜ್ ಅವರ ಪತ್ನಿ ಸುಮಂಗಲ, ಪುತ್ತೂರು ದ್ವಾರಕ ಸಮೂಹ ಸಂಸ್ಥೆಗಳ ಅಧ್ಯಕ್ಷ ಗೋಪಾಲ ಕೃಷ್ಣ ಭಟ್, ದ್ವಾರಕ ಕಾರ್ಪೋರೇಶನ್ ಆಪರೇಷನ್ ಹೆಡ್ ದುರ್ಗಾ ಗಣೇಶ್, ದ್ವಾರಕ ಕಾರ್ಪೋರೇಶನ್ ಇನ್ವೆಂಟರಿ ಮ್ಯಾನೇಜರ್ ಮೋಹನ್ ಮೂರ್ತಿ ಎಂ.ಎನ್. ಇದ್ದರು.

ಕಳ್ಳತನ ಪ್ರಕರಣ: ಸಂಶಯಾಸ್ಪದ ವ್ಯಕ್ತಿ ಪತ್ತೆಗೆ ಪೊಲೀಸರಿಂದ ಬಲೆ

ಉಪ್ಪಿನಂಗಡಿ: ಕಳೆದ ಕೆಲ ದಿನಗಳಲ್ಲಿ ಉಪ್ಪಿನಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಕಳ್ಳತನ ಪ್ರಕರಣದಲ್ಲಿ ಕೇರಳ ರಾಜ್ಯದ ಕಣ್ಣೂರು ತಳಿಪರಂಬು



ನಿವಾಸಿಯಾಗಿರುವ ಮೂರು ಮತೀಯ ಹೆಸರನ್ನು ಹೊಂದಿರುವ ತಂಗಚ್ಚ ಆಲಿಯಾಸ್ ಮ್ಯಾಥ್ಯೂ ಆಲಿಯಾಸ್ ಬಶೀರ್ ಎಂಬಾತನು ಭಾಗಿಯಾಗಿರುವ ಸಂಶಯವಿದ್ದು, ಈತನ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ಉಪ್ಪಿನಂಗಡಿ ಠಾಣಾ ಪೊಲೀಸರಿಗೆ ನೀಡಬೇಕೆಂದು ವಿನಂತಿಸಲಾಗಿದೆ. ಆರೋಪಿಯ ಬಗ್ಗೆ ಈಗಾಗಲೇ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಜಾಮೀನು ರಹಿತ ದಸ್ತಗಿರಿ ವಾರೆಂಟ್ ಜಾರಿಯಾಗಲು ಬಾಕಿ ಇದ್ದು, ಉಪ್ಪಿನಂಗಡಿ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಕಳವು ಪ್ರಕರಣದಲ್ಲಿ ಈತನ ಭಾಗಿದಾರಿಕೆಯ ಸುಳಿವು ಪೊಲೀಸರಿಗೆ ಲಭಿಸಿದೆ. ಶಂಕಿತನ ಬಗ್ಗೆ ಮಾಹಿತಿ ಹೊಂದಿದ್ದವರು 9480805362 (ಉಪ್ಪಿನಂಗಡಿ ಠಾಣೆ), 9480805300 (ದ.ಕ ಜಿಲ್ಲಾ ಕಂಟ್ರೋಲ್ ರೂಮ್) ಅನ್ನು ಸಂಪರ್ಕಿಸಬಹುದೆಂದು ತಿಳಿಸಲಾಗಿದೆ.

ವಿಶ್ವ ಡೆಂಗ್ಯೂ ದಿನ: ಆರೋಗ್ಯ ಜಾಗೃತಿ

ಮುಲ್ಕಿ: ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶ್ರೀ ದೇವಿ ನರ್ಸಿಂಗ್ ಕಾಲೇಜಿನ ಸಹಯೋಗದೊಂದಿಗೆ ವಿಶ್ವ ಡೆಂಗ್ಯೂ ದಿನದ ಅಂಗವಾಗಿ ಕಾರ್ನಾಡ್ ಉಪಕೇಂದ್ರ ವ್ಯಾಪ್ತಿಯ ಲಿಂಗಪ್ಪಯ್ಯಕಾಡು ಕಾರ್ಯಕ್ಷೇತ್ರದಲ್ಲಿ ಡೆಂಗ್ಯೂ ಸೇರಿದಂತೆ ಸೊಳ್ಳೆಗಳಿಂದ ಹರಡುವ ವಿವಿಧ ಕಾಯಿಲೆಗಳ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಸೊಳ್ಳೆಗಳಿಂದ ಹರಡುವ ಡೆಂಗ್ಯೂ, ಮಲೇರಿಯಾ, ಚಿಕನ್ ಗುನ್ಯಾ, ಆನೆಕಾಲು ರೋಗ ಸೇರಿದಂತೆ ಕಾಯಿಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಆಡಳಿತ ಅನ್ಸಿಲ್ಲಾ ಪತ್ರವೋ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಂದೀಶ್, ರಕ್ಷಿತಾ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಪಿಎಚ್ ಸಿಒಗಳಾದ ಮಾರ್ಗರೆಟ್, ಮಂಜುಳಾ ಹಾಗೂ ಸುಮಾ ಉಪಸ್ಥಿತರಿದ್ದರು.

ಕೆಎಂಡಿಸಿ ಸಾಲ: ಒಟಿಎಸ್ ಮೂಲಕ ಬಡ್ಡಿ ಮನ್ನಾ

ಉಡುಪಿ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆರ್ಥಿಕ ವರ್ಷ 2013-14 ರಿಂದ 2018-19 ನೇ ಸಾಲಿನಲ್ಲಿ ಅರಿವು, ಶ್ರಮಶಕ್ತಿ, ಸ್ವಾವಲಂಬನಾ, ಎನ್.ಎಂ.ಎಫ್.ಡಿ.ಸಿ ನೇರ ಸಾಲ, ಮೈಕ್ರೋ ಕಿರುಸಾಲ, ಪಶುಸಂಗೋಪನಾ ಯೋಜನೆ ಮುಂತಾದ ವಿವಿಧ ಯೋಜನೆಗಳಡಿ ನೀಡಲಾಗಿರುವ ಸಾಲದ ಮೊತ್ತವನ್ನು ಪೂರ್ಣವಾಗಿ ಅಸಲು ಪಾವತಿಸುವ ಫಲಾನುಭವಿಗಳಿಗೆ ಸರ್ಕಾರದ ಆದೇಶದಂತೆ ಒಂದಾವರ್ತಿ ತೀರುವಳಿ ಯೋಜನೆ (ಒ.ಟಿ.ಎಸ್) ಮೂಲಕ ಬಡ್ಡಿಯನ್ನು ಮನ್ನಾ ಮಾಡಲಾಗುತ್ತದೆ. ಈ ಯೋಜನೆಯಡಿ ಫಲಾನುಭವಿಯು ಸಾಲದ ಖಾತೆಯಲ್ಲಿ ಬಾಕಿ ಉಳಿದಿರುವ ಮೊತ್ತದ ಶೇ.25 ರಷ್ಟು ಮೊತ್ತವನ್ನು ಪಾವತಿಸಿ, ಯೋಜನೆಯಡಿ ನೋಂದಾಯಿಸಿಕೊಂಡು 2026 ರ ಮೇ 1 ರಿಂದ ಜುಲೈ 31 ರವರೆಗೆ ಬಾಕಿ ಉಳಿದ ಪೂರ್ಣ ಮೊತ್ತವನ್ನು ಪಾವತಿಸಿ ಸರ್ಕಾರದ ಒಟಿಎಸ್ ಮೂಲಕ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು. ನಿಗದಿತ ಸಮಯದಲ್ಲಿ ಸಾಲವನ್ನು ಪಾವತಿಸದಿದ್ದಲ್ಲಿ ನಿಗಮದ ನಿಯಮಾವಳಿಯಂತೆ ಮರುಪಾವತಿಸಿದ ಮೊತ್ತವನ್ನು ಸಾಲದ ಖಾತೆಗೆ ಸರಿಹೊಂದಿಸಲಾಗುವುದು.

ಒ.ಟಿ.ಎಸ್ ಬಡ್ಡಿಯನ್ನು ಮನ್ನಾ ಯೋಜನೆ ಅಪೇಕ್ಷಿಸುವ ಫಲಾನುಭವಿಗಳು ನಿಗಮದ ವೆಬ್ ಸೈಟ್ https://kmdconline.karnataka.gov.in/Portal/ots-repayment ಮೂಲಕ ಅಥವಾ ನಿಗಮದ ಕಚೇರಿಯಾದ ಮೌಲಾನಾ ಆಜಾದ್ ಭವನ, 1ನೇ ಮಹಡಿ, ಪಶು ಚಿಕಿತ್ಸಾಲಯದ ಹತ್ತಿರ, ಅಲೆವೂರು ರಸ್ತೆ, ಶಿವಳ್ಳಿ, ಮಣಿಪಾಲ ಇಲ್ಲಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿ ದೂ.ಸಂ: 0820-2574990, 8277944231 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಪ್ರಕಟಣೆ ತಿಳಿಸಿದೆ.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ದ.ಕ. ಜಿಲ್ಲಾ ಜನಜಾಗೃತಿ ವೇದಿಕೆಯ ಸಭೆಯಲ್ಲಿ ಘೋಷಣೆ

180 ಶಾಲಾ, ಕಾಲೇಜುಗಳಲ್ಲಿ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮ

ಬಂಟ್ವಾಳ: ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ದಕ್ಷಿಣ ಕನ್ನಡ ಜಿಲ್ಲಾ ಜನಜಾಗೃತಿ ವೇದಿಕೆಯ ಸಭೆಯು ಬಂಟ್ವಾಳ ಯೋಜನಾ ಕಚೇರಿಯ ಉನ್ನತಿ ಸೌಧದಲ್ಲಿ ಬುಧವಾರ ಜರಗಿತು.

ಸಭೆಯ ಅಧ್ಯಕ್ಷತೆಯನ್ನು ಜನಜಾಗೃತಿ ವೇದಿಕೆ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಪದ್ಮನಾಭ ಶೆಟ್ಟಿ ವಹಿಸಿದ್ದರು.

ಜನಜಾಗೃತಿ ವೇದಿಕೆಯ ಮಾಜಿ ಅಧ್ಯಕ್ಷ ಎ.ಸಿ. ಭಂಡಾರಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಜನಜಾಗೃತಿ ವೇದಿಕೆಯ ನೂತನ ಜಿಲ್ಲಾ ಸಂಘಟನಾ ಅಧ್ಯಕ್ಷರಾಗಿ ರೋ. ಪ್ರಕಾಶ್ ಕಾರಂತ್ ನರಿಕೊಂಬು ಅವರು ಅವಿರೋಧವಾಗಿ ಆಯ್ಕೆಯಾದರು.

ವೇದಿಕೆಯ ರಾಜ್ಯ ಕಾರ್ಯದರ್ಶಿ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯಸ್ ಜನಜಾಗೃತಿ ವೇದಿಕೆಯ 2026-27 ನೇ ಸಾಲಿನ ಕ್ರಿಯಾ ಯೋಜನೆಗಳ ಅನುಷ್ಠಾನದ ಕುರಿತು ಮಾಹಿತಿ ನೀಡಿದರು. ವಾರ್ಷಿಕವಾಗಿ ಜಿಲ್ಲೆಯಲ್ಲಿ ಒಟ್ಟು 8 ಮದ್ಯವರ್ಜನ ಶಿಬಿರಗಳ ಆಯೋಜನೆ ಹಾಗೂ 180 ಶಾಲಾ ಕಾಲೇಜುಗಳಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಿಂದ




ವಿದ್ಯಾರ್ಥಿಗಳಿಗೆ ದುಶ್ಚಟಗಳ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಅಲ್ಲದೇ ಜನಜಾಗೃತಿ ವೇದಿಕೆಯು ಮುಂದಿನ ದಿನಗಳಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ರಂಗದ ಅಭಿವೃದ್ಧಿಗೆ ಹಲವು ಕಾರ್ಯಕ್ರಮ ರೂಪಿಸಲಿದೆ ಎಂದರು.

ವೇದಿಕೆ ಅಧ್ಯಕ್ಷರುಗಳಿಗೆ ಸನ್ಮಾನ

ಈ ಸಂದರ್ಭದಲ್ಲಿ ನೂತನವಾಗಿ ಆಯ್ಕೆಗೊಂಡ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷರನ್ನು ಹಾಗೂ 2025-26 ನೇ ಸಾಲಿನಲ್ಲಿ ವಿಶೇಷ ಸಾಧನೆ ಮಾಡಿದ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷರುಗಳನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಜನಜಾಗೃತಿ ವೇದಿಕೆಯ ಮಾಜಿ ಜಿಲ್ಲಾ ಅಧ್ಯಕ್ಷರುಗಳಾದ ಸಾಜ ರಾಧಾಕೃಷ್ಣ ಆಳ್ವ, ಮಹಮ್ಮದ್ ಇಸ್ಮಾಯಿಲ್, ಎನ್.ಎ ರಾಮಚಂದ್ರ, ಜಿಲ್ಲಾ ಉಪಾಧ್ಯಕ್ಷರಾದ ಶಾರದಾ ರೈ, ಉಪಸ್ಥಿತರಿದ್ದರು.

ಅಧ್ಯಕ್ಷರಾಗಿ ಪ್ರಕಾಶ್ ಕಾರಂತ್ ಆಯ್ಕೆ

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ದಕ್ಷಿಣ ಕನ್ನಡ ಜಿಲ್ಲಾ



ಜನಜಾಗೃತಿ ವೇದಿಕೆಯ ನೂತನ ಅಧ್ಯಕ್ಷರಾಗಿ ಪ್ರಕಾಶ್ ಕಾರಂತ್ ಆಯ್ಕೆಯಾಗಿದ್ದಾರೆ, ಇದೇ ಸಂದರ್ಭ ನಿಕಟಪೂರ್ವ ಅಧ್ಯಕ್ಷರಾದ ಪದ್ಮನಾಭ ಶೆಟ್ಟಿ, ರಾಜ್ಯ ಕಾರ್ಯದರ್ಶಿ ವಿವೇಕ್ ವಿನ್ಸೆಂಟ್ ಪಾಯಸ್ ರವರನ್ನು ವಿಶೇಷವಾಗಿ ಅಭಿನಂದಿಸಿ ಗೌರವಿಸಲಾಯಿತು.

ವೇದಿಕೆಯ ತಾಲೂಕುವಾರು ಅಧ್ಯಕ್ಷರುಗಳಾದ ಬೆಳ್ತಂಗಡಿಯ ಗಿರೀಶ್ ಕೆಎಸ್, ಮಂಗಳೂರಿನ ಸುಖಲತಾ ಶೆಟ್ಟಿ, ಮೂಡಬಿದ್ರೆಯ ವಾಸುದೇವ ನಾಯಕ್, ಬಂಟ್ವಾಳದ ರಾಜಾರಾಮ್ ಶೆಟ್ಟಿ, ಪುತ್ತೂರಿನ ಸತೀಶ್ ನಾಯ್ಕ, ಮಂಜೇಶ್ವರದ ಮಂಜುನಾಥ ಆಳ್ವಾ, ಕಾಸರಗೋಡಿನ ಜಯರಾಮ ಪಾತಾಳಿ, ಕಡಬದ ಇಂದುಶೇಖರ್ ಶೆಟ್ಟಿ, ಸುಳ್ಯದ ವೆಂಕಪ್ಪ ಗೌಡ, ಹಾಗೂ ತಾಲೂಕುವಾರು ನಿಕಟಪೂರ್ವ ಅಧ್ಯಕ್ಷರುಗಳಾದ ಕಾಸಿಂ ಮಲ್ಲಿಗೆ ಮನೆ, ಚಂದ್ರಶೇಖರ್ ಉಚ್ಚಿಲ, ಸುಭಾಷ್ ಚಂದ್ರ ಚೌಟ, ರೊನಾಲ್ಡ್ ಡಿಸೋಜ, ಲೋಕೇಶ್ ಹೆಗ್ಡೆ ಉರ್ಲಾಂಡಿ, ಜಯಪ್ರಕಾಶ್ ನಾರಾಯಣ್ ತೊಟ್ಟೆತೋಡಿ, ಅಖಿಲೇಶ್ ನಗುಮೊಗಂ, ಮಹೇಶ್ ಕೆ. ಸವಣೂರು, ಲೋಕನಾಥ ಅಮೆಚೂರು ಹಾಗೂ ಜಿಲ್ಲಾ ಸದಸ್ಯರುಗಳು ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಜನಜಾಗೃತಿ ವೇದಿಕೆಯ ಜಿಲ್ಲಾ ಕಾರ್ಯದರ್ಶಿ ನಿರ್ದೇಶಕರಾದ ದಿನೇಶ್ ಡಿ ಸ್ವಾಗತಿಸಿ, ಜಿಲ್ಲೆ ಎರಡರ ನಿರ್ದೇಶಕ ಬಾಬು ನಾಯ್ಕ್ ವರದಿ ವಾಚಿಸಿದರು. ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು.

ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ ವಾರ್ಷಿಕೋತ್ಸವ

ಅಶಕ್ತ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ

ಮುಲ್ಕಿ: ಸಮಾಜಮುಖಿ ಕಾರ್ಯಕ್ರಮಗಳಿಗೆ ಸಹೃದಯತೆ ಬೇಕು ಆರೋಗ್ಯ, ಸಹಾಯ ಹಸ್ತ ಸಹಿತ ಅನೇಕ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವ ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ ಕಾರ್ಯ ಅಭಿನಂದನೀಯ ಎಂದು ಕಿನ್ನಿಗೋಳಿ ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ ಹೇಳಿದರು.

ಅವರು ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ 5ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ ಮೇ 20 ಬುಧವಾರ ಹಳೆಯಂಗಡಿಯ ಹರಿ ಓಂ ಕಟ್ಟಡದ ಆವರಣದಲ್ಲಿ ಕಟೀಲು ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ಶಿವಾನಂದ ಪ್ರಭು ನೇತೃತ್ವದಲ್ಲಿ ಉಚಿತ ಆರೋಗ್ಯ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಅಶಕ್ತ ಮಹಿಳೆಯರಿಗೆ ಹೊಲಿಗೆ ಯಂತ್ರ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಶಿಬಿರವನ್ನು ದ.ಕ.ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕ ಎಚ್. ಎನ್ ರಮೇಶ್ ಉದ್ಘಾಟಿಸಿ, ಸೊಸೈಟಿಯ ಸಮಾಜಮುಖಿ ಕಾರ್ಯಕ್ರಮ ಅಭಿನಂದನೀಯವಾಗಿದ್ದು ನಿರಂತರವಾಗಿ ನಡೆಯಲಿ ಎಂದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು



ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬೆರ್ನಾರ್ಡ್ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಮಂಗಳೂರು ಹೋಟೆಲ್ ವುಡ್ ಸೈಡ್ ಮಹಾಪ್ರಬಂಧಕ ಎಚ್. ಭಾಸ್ಕರ್ ಸಾಲ್ಯಾನ್, ತಾ.ಪಂ. ಮಾಜಿ ಸದಸ್ಯ ಮನ್ಸೂರ್ ಸಾಗ್, ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್, ಮುಲ್ಕಿ ಪಟ್ಟಣ ಪಂಚಾಯತ್ ಮಾಜಿ ಉಪಾಧ್ಯಕ್ಷೆ ರಾಧಿಕ ಕೋಟ್ಯಾನ್, ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ವಸಂತ್ ಬೆರ್ನಾಡ್, ಉಪಾಧ್ಯಕ್ಷ ವಿಜಯ ಕುಮಾರ್ ಸನಿಲ್, ನಿರ್ದೇಶಕ ಉಮಾನಾಥ ಜೆ ಶೆಟ್ಟಿಗಾರ್, ಧನಂಜಯ ಮಟ್ಟು, ಗೌತಮ್ ಜೈನ್, ಗಣೇಶ್ ಪ್ರಸಾದ್ ದೇವಾಡಿಗ, ಜೈ ಕೃಷ್ಣ ಕೋಟ್ಯಾನ್, ಡಾ. ಶೆರಿಲ್ ಅಯೋನ, ರೇಖಾ ಶೆಟ್ಟಿ, ಹರೀಶ್ ಎನ್. ಪುತ್ರನ್, ನವೀನ್ ಸಾಲ್ಯಾನ್ ಪಂಜ, ಮೋಹನ್ ದಾಸ್, ಅನಿಲ್ ಪೂಜಾರಿ ಸಸಿಹಿತ್ಲು, ರಜಿಯಾ ಭಾನು, ಕರಿಯ ಕಾಡಿಗ ಮತ್ತಿತರರು ಉಪಸ್ಥಿತರಿದ್ದರು. ಶಿಬಿರದಲ್ಲಿ ತಜ್ಞ ವೈದ್ಯ ಡಾ. ನಿತ್ಯಾನಂದ ಚೌಟ, ಡಾ. ಸುಧೀಂದ್ರ ಕಾರ್ನಾಡ್, ಡಾ ಕೀರ್ತನ್ ರಾವ್, ಡಾ. ಉಣ್ಣಿ ಕೃಷ್ಣನ್ ನೈನಾರ್, ಡಾ. ಸಂಗೀತ ಭಟ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು ಕಟೀಲು ದುರ್ಗಾ ಸಂಜೀವಿನಿ ಆಸ್ಪತ್ರೆಯ ವೈದ್ಯಕೀಯ ಶಿಬಿರದ ಪ್ರಬಂಧಕ ನಿತೇಶ್ ಶೆಟ್ಟಿ ಎಕ್ಕಾರು ಮಾಹಿತಿ ನೀಡಿದರು. ಸ್ವಸಹಾಯ ಸಂಘಗಳ ಪ್ರೇರಕಿ ನೀತು ನಿರಂಜಲ ಪ್ರಾರ್ಥಿಸಿದರು. ಸೊಸೈಟಿ ಅಧ್ಯಕ್ಷ ವಸಂತ್ ಬೆರ್ನಾಡ್ ಸ್ವಾಗತಿಸಿ, ಸೊಸೈಟಿ ಸಿಇಓ ಸುದರ್ಶನ್ ವಂದಿಸಿದರು. ಶಾಖಾ ಪ್ರಬಂಧಕ ಅಭಿಷ್ಟ ಜೈನ್ ಮತ್ತು ಪ್ರಜ್ಞಶ್ರೀ ನಿರೂಪಿಸಿದರು.

ಶಿಬಿರದಲ್ಲಿ ಇಸಿಜಿ ಸೇವೆ, ಶುಗರ್ ಮತ್ತು ಬಿ ಪಿ ಪರೀಕ್ಷೆ, ಕನ್ನಡಕ ವಿತರಣೆ, ಕಣ್ಣಿನ ಶಸ್ತ್ರ ಚಿಕಿತ್ಸೆ, ಹಲ್ಲಿನ ತಪಾಸಣೆ ನಡೆಸಲಾಯಿತು. ಸುಮಾರು 300ಕ್ಕೂ ಮಿಕ್ಕಿ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಕೊಡಗು ವಿವಿ 'ಯುವ ವೈಭವ' ಉದ್ಘಾಟಿಸಿ ಶಾಸಕ ಮಂಥರ್ ಗೌಡ ಹೇಳಿಕೆ

ಕೊಡಗಿನಲ್ಲಿಯೇ ಉನ್ನತ ಶಿಕ್ಷಣಕ್ಕೆ ಸೂಕ್ತ ವ್ಯವಸ್ಥೆ

ಮಡಿಕೇರಿ: ವಿದ್ಯಾರ್ಥಿಗಳು ತರಗತಿಯ ಪಾಠಗಳಿಗೆ ಮಾತ್ರ ಸೀಮಿತವಾಗದೆ, ಸಂಗೀತ, ಕಲೆ, ನೃತ್ಯ ಸೇರಿದಂತೆ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಕೌಶಲ್ಯ, ಸಾಮರ್ಥ್ಯವನ್ನು ಪ್ರದರ್ಶಿಸಬೇಕು. ಸಾಂಸ್ಕೃತಿಕ ಸ್ಪರ್ಧೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ರಹದಾರಿ ಎಂದು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅಭಿಮತ ವ್ಯಕ್ತಪಡಿಸಿದರು.

ಕುಶಾಲನಗರ ಸಮೀಪದ ಚಿಕ್ಕ ಅಳುವಾರದ ಜ್ಞಾನಕಾವೇರಿ ಆವರಣದಲ್ಲಿ ಕೊಡಗು ವಿಶ್ವ ವಿದ್ಯಾಲಯದಿಂದ ಹಮ್ಮಿಕೊಂಡಿದ್ದ ಅಂತರ ಕಾಲೇಜು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉತ್ಸವ 'ಯುವ ವೈಭವ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಕೊಡಗು ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕೆ ಎಲ್ಲಾ ವ್ಯವಸ್ಥೆ ಇದೆ. ಆದರೂ ಎಲ್ಲಾ ಮಕ್ಕಳು ಉನ್ನತ ಶಿಕ್ಷಣಕ್ಕಾಗಿ ಬೇರೆ ಜಿಲ್ಲೆಯ ವಿಶ್ವವಿದ್ಯಾಲಯಗಳತ್ತ ಮುಖ ಮಾಡುತ್ತಿರುವುದು ಬೇಸರದ ಸಂಗತಿ. ನಮ್ಮ ಜಿಲ್ಲೆಯ ವಿಶ್ವವಿದ್ಯಾಲಯ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪಾಲಕರು, ಶಿಕ್ಷಕರು ಮಕ್ಕಳಿಗೆ ಇಲ್ಲಿಯೇ ಕಲಿಯಲು ಪ್ರೋತ್ಸಾಹ ನೀಡಿ ವಿವಿಯನ್ನು ಹೆಮ್ಮರವಾಗಿ ಬೆಳೆಸಬೇಕು. ಅದಕ್ಕಾಗಿ ವಿಶ್ವವಿದ್ಯಾಲಯವು ಈ ರೀತಿಯ ಸಾಂಸ್ಕೃತಿಕ, ಕ್ರೀಡಾ ಮತ್ತಿತರ ಕಾರ್ಯಕ್ರಮಗಳನ್ನು ಮಾಡುವ



ಮೂಲಕ ವಿದ್ಯಾರ್ಥಿಗಳನ್ನು ವಿವಿಯತ್ತ ಸೆಳೆಯಬೇಕು ಎಂದು ಸಲಹೆ ನೀಡಿದರು. ಗೌರವ ಅತಿಥಿಗಳಾಗಿದ್ದ ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತಾರಾನಾಥ್ ಟಿ. ಸಿ., ಕುಶಾಲನಗರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ವಿ. ಪಿ. ಶಶಿಧರ್ ಭಾಗವಹಿಸಿ ಮಾತನಾಡಿದರು.

ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಈ ವರ್ಷ ಆರಂಭವಾಗಿರುವ ಯುವ ವೈಭವ ಇನ್ನು ಮುಂದೆ ಪ್ರತಿ ವರ್ಷ ನಡೆಯುತ್ತದೆ ಎಂದರು. ಈ ಸಂದರ್ಭ ವಿವಿಯ ಘಟಕ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳ 500ಕ್ಕೂ ಅಧಿಕ ವಿದ್ಯಾರ್ಥಿಗಳು 17 ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಕೆಪಿಸಿಸಿ ಸದಸ್ಯ ನಟೇಶ್ ಗೌಡ, ಕೊಡಗು ವಿವಿಯ ಕುಲಸಚಿವ (ಮೌಲ್ಯಮಾಪನ) ಡಾ. ಸುರೇಶ್ ಎಂ, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕಿ ಪ್ರೊ.ಐ.ಕೆ ಮಂಜುಳಾ, ಎನ್ ಎಸ್ ಎಸ್ ಸಂಯೋಜಕಿ ಮತ್ತು ಐಕ್ಯೂಎಸಿ ನಿರ್ದೇಶಕಿ ಡಾ. ಗುಣಶ್ರೀ ಬಿ.ಎಸ್., ಕೊಡಗು ವಿವಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಮತ್ತಿತರರು ಇದ್ದರು. ಸಮಾಜಕಾರ್ಯ ವಿಭಾಗದ ಉಪನ್ಯಾಸಕ ಮತ್ತು ಅಂತರ ಕಾಲೇಜು ಯುವ ವೈಭವ ಉತ್ಸವದ ಸಂಯೋಜಕ ಮಂಜುನಾಥ್ ಗೌಡ ಸ್ವಾಗತಿಸಿ, ಕನ್ನಡ ವಿಭಾಗದ ಉಪನ್ಯಾಸಕ ಡಾ. ಜಮೀರ್ ಅಹಮದ್, ಕನ್ನಡ ವಿಭಾಗದ ವಿದ್ಯಾರ್ಥಿ ರಾಕೇಶ್ ಎನ್.ಪಿ. ಮತ್ತು ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಸನಿಗಾ ನಿರೂಪಿಸಿದರು. ಉಪನ್ಯಾಸಕ ಲೋಕೇಶ್ ಭರಣಿ ವಂದಿಸಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ



ಮಂಗಳೂರು: ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಸಂಸದರ ಕಚೇರಿಯಲ್ಲಿ ಮಂಗಳವಾರ ಸಾರ್ವಜನಿಕರ ಕುಂದು-ಕೊರತೆ ಆಲಿಸಿದರು.

ಅಹವಾಲು ಸಲ್ಲಿಕೆ

ಈ ವೇಳೆ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ತಮ್ಮ ಭಾಗದ ಸಮಸ್ಯೆ, ಬೇಡಿಕೆಗಳು ಮತ್ತು ಅಹವಾಲುಗಳನ್ನು ಸಂಸದರ ಗಮನಕ್ಕೆ ತಂದರು. ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದ ಸಂಸದರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಸಮಸ್ಯೆಗಳ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಇದಲ್ಲದೇ ಸಾರ್ವಜನಿಕ ಭೇಟಿ ವೇಳೆ ವಿವಿಧ ಇಲಾಖೆ ಸೇರಿದಂತೆ ಜಿಲ್ಲೆಯಲ್ಲಿ ನಡೆಯುತ್ತಿರುವ ಹಲವಾರು ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದ ಕೆಲವು ಸಮಸ್ಯೆ-ಬೇಡಿಕೆಗಳ ಬಗ್ಗೆಯೂ ಜನರು ಸಂಸದರ ಗಮನಕ್ಕೆ ತಂದರು.

ಸಾರ್ವಜನಿಕರ ಅಹವಾಲುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಂಸದರು, ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ದ.ಕ. ಯುವ ಜನತಾದಳದಿಂದ ದೇವೇಗೌಡರ ಹುಟ್ಟುಹಬ್ಬ ಆಚರಣೆ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಯುವ ಜನತಾದಳ ವತಿಯಿಂದ ಜಿಲ್ಲಾಧ್ಯಕ್ಷ ಅಕ್ಷಿತ್ ಸುವರ್ಣ ಅವರ ನೇತೃತ್ವದಲ್ಲಿ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್. ಡಿ. ದೇವೇಗೌಡ ಅವರ ಹುಟ್ಟುಹಬ್ಬ ನಗರದಲ್ಲಿರುವ ನಿರಾಶ್ರಿತರಿಗೆ ಊಟ ಹಂಚುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾ ಯುವ ಜನತಾದಳ ಅಧ್ಯಕ್ಷ ಅಕ್ಷಿತ್ ಸುವರ್ಣ, ಈ ದೇಶದ 11ನೇ ಪ್ರಧಾನಿಯಾಗಿ ಎಚ್. ಡಿ. ದೇವೇಗೌಡ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಮಾಡಿದ ಅಭಿವೃದ್ಧಿಯನ್ನು ನಾವು ನೆನಪಿಸಬೇಕಾಗುತ್ತದೆ. ಮಹಿಳಾ ಮೀಸಲಾತಿ, ಕಾಶ್ಮೀರ ಸಮಸ್ಯೆಗೆ ಪರಿಹಾರ, ರೈತರಿಗೆ ರಸಗೊಬ್ಬರ ಸಬ್ಸಿಡಿ, ಕಾವೇರಿ ನೀರಿನ ಸಮಸ್ಯೆ, ಮಹದಾಯಿ ಸಮಸ್ಯೆಯ ಹೋರಾಟ ಸ್ಮರಣೀಯ. ರೈತರ ಮೇಲೆ ಅರಿಗೆ ಇರುವ ಕಾಳಜಿ ಇಂದಿನ ರಾಜಕಾರಣಿಗಳಿಗೆ ಹಾಗೂ ಯುವಕರಿಗೆ ಮಾರ್ಗದರ್ಶನವಾಗಿದೆ. ಭಗವಂತ ಇನ್ನಷ್ಟು ಆಯಸ್ಸು, ಆರೋಗ್ಯ ನೀಡಿ ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಜೆಡಿಎಸ್ ದ.ಕ. ಜಿಲ್ಲಾ ಕಾರ್ಯಾಧ್ಯಕ್ಷ ವಸಂತ್ ಪೂಜಾರಿ ಶುಭ ಹಾರೈಸಿದರು. ಮೀನುಗಾರ ಘಟಕ ರಾಜ್ಯಾಧ್ಯಕ್ಷ ರತ್ನಾಕರ ಸುವರ್ಣ, ಯುವ ಜೆಡಿಎಸ್ ಮಂಗಳೂರು ಉತ್ತರ ವಿಧಾನಸಭಾ ಅಧ್ಯಕ್ಷ ರತೀಶ್ ಕರ್ಕೇರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಿತೇಶ್ ರೈ, ಮಂಗಳೂರು ದಕ್ಷಿಣ ಕ್ಷೇತ್ರ ಅಧ್ಯಕ್ಷ ಸತ್ತಾರ್ ಬಂದರು, ಜಿಲ್ಲಾ ಮುಖಂಡ ವಿನ್ಸೆಂಟ್ ಸುರತ್ಕಲ್, ಪುಷ್ಪರಾಜ್, ಭಾರತಿ, ಕನಕದಾಸ ಕುಳೂರು, ಚೂಡಾಮಣಿ, ಯುವ ಜೆಡಿಎಸ್ ಪದಾಧಿಕಾರಿಗಳಾದ ಸುಶಾಂತ್ ಪೂಜಾರಿ, ವಿಖ್ಯಾತ್, ಪ್ರೀತೇಶ್, ರಕ್ಷಿತ್, ವಿನಿತ್ ಪೂಜಾರಿ, ಆದರ್ಶ ಪೂಜಾರಿ ಉಪಸ್ಥಿತರಿದ್ದರು.



ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಉದ್ಯೋಗಿಯಾಗಿದ್ದ ಸುರೇಶ್ ಬಿ.ಕೆ. ಅವರ ಸಾವಿನ ಅಂಗವಾಗಿ ಸಂತಾಪ ಸೂಚಕ ಸಭೆಯು ಬ್ಯಾಂಕ್‌ನ ಕೇಂದ್ರ ಕಚೇರಿಯಾದ ಮವ್ವಾರಿನಲ್ಲಿ ಜರಗಿತು. ಬ್ಯಾಂಕ್‌ನ ಅಧ್ಯಕ್ಷ ಎಂ.ಸಂಜೀವ ಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಭೆಯಲ್ಲಿ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದು ಸಂತಾಪ ಸೂಚಿಸಿದರು.



ತೆಲಂಗಾಣ ರಾಜ್ಯ ಸರಕಾರದ ಸಾರಿಗೆ ಸಚಿವ ಪೊನ್ನಮ್ ಪ್ರಭಾಕರ ಅವರು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು. ಅವರನ್ನು ಶ್ರೀ ದೇವಳದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ಸ್ವಾಗತಿಸಿದರು. ಬಳಿಕ ಶ್ರೀ ದೇವಳಕ್ಕೆ ತೆರಳಿದ ಸಚಿವರು ಶ್ರೀ ದೇವರ ದರುಶನ ಮಾಡಿದರು.ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಸಚಿವರನು ಭೇಟಿಯಾಗಿ ಅವರನು ಗೌರವಿಸಿದರು. ಈ ಸಂದರ್ಭ ವ್ಯವಸ್ಥಾಪನಾ ಸಮಿತಿ ಸದಸ್ಯೆ ಲೀಲಾ ಮನಮೋಹನ್, ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್ ಎಸ್. ಉಪಸ್ಥಿತರಿದ್ದರು.

ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ರಿಯಾಯಿತಿ | ಆಸ್ಪತ್ರೆಯ ಮುಖ್ಯ ಆಡಳಿತ ಅಧಿಕಾರಿ ಡಾ. ಶಿವಾನಂದ ಪ್ರಭು ಮಾಹಿತಿ

ಕಟೀಲಿನ ದುರ್ಗಾ ಸಂಜೀವಿನಿ ಆಸ್ಪತ್ರೆಯಲ್ಲಿ 10,000 ಡಯಾಲಿಸಿಸ್ ಚಿಕಿತ್ಸೆ

ಕಟೀಲು: ಕಟೀಲಿನಲ್ಲಿರುವ ದುರ್ಗಾ ಸಂಜೀವಿನಿ ಮಣಿಪಾಲ್ ಆಸ್ಪತ್ರೆಯು ತನ್ನ ಡಯಾಲಿಸಿಸ್ ಘಟಕ ಆರಂಭವಾದ 2022ರ ಜನವರಿಯಿಂದ ಇಂದಿನವರೆಗೆ ಯಶಸ್ವಿಯಾಗಿ 10,000 ಡಯಾಲಿಸಿಸ್ ಚಿಕಿತ್ಸೆ ಪೂರ್ಣಗೊಳಿಸುವ ಮೂಲಕ ಮಹತ್ವದ ಆರೋಗ್ಯ ಸೇವಾ ಸಾಧನೆ ದಾಖಲಿಸಿದೆ.

ಈ ಸಂದರ್ಭ ಮಾತನಾಡಿದ ಕಟೀಲು ಕೆ.ಎಂ.ಸಿ. ಆಸ್ಪತ್ರೆಯ ಮುಖ್ಯ ಆಡಳಿತ ಅಧಿಕಾರಿ ಡಾ. ಶಿವಾನಂದ ಪ್ರಭು, 10,000 ಡಯಾಲಿಸಿಸ್ ಚಿಕಿತ್ಸೆಗಳು ಪೂರ್ಣಗೊಳ್ಳುವುದು ನಮ್ಮ ಪಾಲಿಗೆ ಕೇವಲ ಒಂದು ಸಂಖ್ಯೆ ಅಲ್ಲ, ಇದು ಸಾವಿರಾರು ಜೀವಗಳಿಗೆ ನೆರವಾದ ಹಾಗೂ ಸಂಕಷ್ಟದ ಸಮಯದಲ್ಲಿ ಕುಟುಂಬಗಳಿಗೆ ಬೆಂಬಲವಾದ ಮಹತ್ವದ ಸಾಧನೆ. ಗ್ರಾಮೀಣ ಭಾಗದ ಜನರು ದೂರ



ಪ್ರಯಾಣ ಮಾಡದೆ ಹಾಗೂ ಹೆಚ್ಚಿನ ವೆಚ್ಚ ಭರಿಸದೆ ಗುಣಮಟ್ಟದ ಚಿಕಿತ್ಸೆ ಪಡೆಯಬೇಕು ಎಂಬುದೇ ನಮ್ಮ ಸದಾ ಉದ್ದೇಶವಾಗಿದೆ ಎಂದು ಹೇಳಿದರು.

ಈ ಸಾಧನೆ ಗ್ರಾಮೀಣ ಹಾಗೂ ಹಿಂದುಳಿದ ಸಮುದಾಯಗಳಿಗೆ ಗುಣಮಟ್ಟದ ಮೂತ್ರಪಿಂಡ ಚಿಕಿತ್ಸೆಯನ್ನು ಸುಲಭ ಹಾಗೂ ಕೈಗೆಟುಕುವ ದರದಲ್ಲಿ ಒದಗಿಸುವ ಆಸ್ಪತ್ರೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ದೇಶದ ಹೆಸರಾಂತ ಧಾರ್ಮಿಕ ಕೇಂದ್ರ ಕಟೀಲು, ಆಧುನಿಕ ಡಯಾಲಿಸಿಸ್ ಸೇವೆಗಳನ್ನು ನೀಡುವ ವಿಶೇಷ ಡಯಾಲಿಸಿಸ್ ಘಟಕ ಹೊಂದಿರುವ ಭಾರತದ ಅತೀ ಸಣ್ಣ ಪಟ್ಟಣಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಜನಸಂಖ್ಯೆ ಹಾಗೂ ಭೌಗೋಳಿಕವಾಗಿ ಸಣ್ಣ ಪಟ್ಟಣವಾಗಿದ್ದರೂ, ಈ ಆಸ್ಪತ್ರೆ ಸುತ್ತಮುತ್ತಲಿನ ಗ್ರಾಮಗಳು ಹಾಗೂ ಸಮೀಪದ ಪ್ರದೇಶಗಳ ರೋಗಿಗಳಿಗೆ ಪ್ರಮುಖ ಗ್ರಾಮೀಣ ಡಯಾಲಿಸಿಸ್ ಕೇಂದ್ರವಾಗಿ ಬೆಳೆಯುತ್ತಿದೆ ಎಂದರು.

ಸಮಾಜದ ಎಲ್ಲ ವರ್ಗದ ಜನರಿಗೆ ಚಿಕಿತ್ಸೆಯನ್ನು ಕೈಗೆಟುಕುವಂತೆ ಮಾಡಲು ಕಟೀಲು ಕೆ.ಎಂ. ಸಿ.ಆಸ್ಪತ್ರೆ ಡಯಾಲಿಸಿಸ್ ಸೇವೆಯನ್ನು ಅತ್ಯಂತ ರಿಯಾಯತಿ ದರದಲ್ಲಿ ನೀಡುತ್ತಿದೆ. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಪ್ರತಿ ಡಯಾಲಿಸಿಸ್ ಚಿಕಿತ್ಸೆಗೆ ರೂ. 300 ಹಾಗೂ ಇತರ ರೋಗಿಗಳಿಗೆ ರೂ. 600 ಮಾತ್ರ ವಿಧಿಸಲಾಗುತ್ತಿದೆ. ಈ ರಿಯಾಯತಿ ಮಾದರಿಯನ್ನು ಸಿ ಎಸ್ ಆರ್ ಪಾಲುದಾರರು ಮತ್ತು ದಾನಿಗಳ ಉದಾರ ಸಹಕಾರದಿಂದ ಸಾಧ್ಯವಾಗಿಸಲಾಗಿದೆ.

ಈ ಡಯಾಲಿಸಿಸ್ ಘಟಕವು ಕನ್ಸಲ್ಟೆಂಟ್ ನೆಫ್ರಾಲಜಿಸ್ಟ್ ಡಾ. ಮಯೂರ್ ಪ್ರಭು ಅವರ ಪರಿಣತಿ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದರು. ಗ್ರಾಮೀಣ ಕರ್ನಾಟಕ ದಲ್ಲಿ ಕೈಗೆಟುಕುವ ದರದಲ್ಲಿ ಡಯಾಲಿಸಿಸ್ ಸೇವೆಗಳನ್ನು ಸಾಧ್ಯವಾಗಿಸಲು ಸಹಕರಿಸಿದ ಸಿಎಸ್‌ಆರ್ ಪಾಲುದಾರ ಆಲ್ ಕಾರ್ಗೋ ಸಂಸ್ಥೆಯ ಶಶಿಕಿರಣ್ ಶೆಟ್ಟಿ, ಸಂಜೀವಿನಿ ಚಾರಿಟೆಬಲ್ ಟ್ರಸ್ಟ್‌ನ ಡಾ. ಸುರೇಶ್ ಎಸ್. ರಾವ್, ಜಗದೀಶ್ ಹಾಗೂ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಂಸ್ಥೆಗಳಿಗೆ ಆಸ್ಪತ್ರೆ ಕೃತಜ್ಞತೆ ಸಲ್ಲಿಸಿದೆ. ಸ್ಥಳೀಯ ಪ್ರದೇಶದಲ್ಲಿ ಹೆಚ್ಚುತ್ತಿರುವ ಮೂತ್ರಪಿಂಡ ಚಿಕಿತ್ಸೆಯ ಬೇಡಿಕೆ ಗಮನದಲ್ಲಿಟ್ಟುಕೊಂಡು, ಆಸ್ಪತ್ರೆ ಮುಂದಿನ ತಿಂಗಳುಗಳಲ್ಲಿ ತನ್ನ ಡಯಾಲಿಸಿಸ್ ಘಟಕದ ಸಾಮರ್ಥ್ಯವನ್ನು 5 ಯಂತ್ರಗಳಿಂದ ಎಂಟು ಯಂತ್ರಗಳಿಗೆ ವಿಸ್ತರಿಸುವ ಯೋಜನೆ ಘೋಷಿಸಿದೆ.

ಸುತ್ತಮುತ್ತ

ಸಸಿ ನೆಟ್ಟು ಬೆಳೆಸುವ ಅಭಿಯಾನ: ಸಸಿಗಳ ವಿತರಣೆಗೆ ಸಿದ್ಧ

ಕಾಸರಗೋಡು: ರಾಜ್ಯ ಸರಕಾರದ ಒಂದು ಸಸಿ ನೆಟ್ಟು ಬೆಳೆಸುವ ಎಂಬ ಹೆಸರಿನ ಅಭಿಯಾನದ ಅಂಗವಾಗಿ ಮಳೆಗಾಲದಲ್ಲಿ ಸಸಿಗಳನ್ನು ಸಾಮೂಹಿಕ ಅರಣ್ಯೀಕರಣ ವಲಯದಲ್ಲಿ ಆಗತ್ಯದಷ್ಟು ಸಸಿಗಳನ್ನು ಈಗಾಗಲೇ ಉತ್ಪಾದಿಸಿ ವಿತರಣೆಗಾಗಿ ಸಿದ್ಧಪಡಿಸಲಾಗಿದೆ. ಹಸಿರು ಕೇರಳ ಮಿಷನ್ ಮೂಲಕ ಸಾಮೂಹಿಕ ಅರಣ್ಯೀಕರಣ ವಿಭಾಗ ಇಂತಹ ಸಸಿಗಳನ್ನು ನೆಟ್ಟು ಬೆಳೆಸಲು ತಯಾರಾಗುವ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು, ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಕೃಷಿಕರಿಗೆ ಈ ಸಸಿಗಳನ್ನು ಉಚಿತವಾಗಿ ವಿತರಿಸಲಾಗುವುದು. ಸಸಿಗಳು ಆಗತ್ಯವಿರುವವರು ಅದಕ್ಕಾಗಿ ಅರ್ಜಿ ಸಲ್ಲಿಸಬೇಕು. ಅದರಂತೆ ಮಂಜೂರು ಮಾಡಲಾಗುವ ಸಸಿಗಳನ್ನು ಬೇಳದಲ್ಲಿರುವ ಜಿಲ್ಲಾ ಪರ್ಮನೆಂಟ್ ನರ್ಸರಿ ಮೂಲಕ ವಿತರಿಸಲಾಗುವುದು. ಈ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ 9745309075 ಮೊಬೈಲ್ ನಂಬ್ರಕ್ಕೆ ಸಂಪರ್ಕಿಸಬಹುದು.

ಕೇರಳ ಸಿಎಂಗೆ ಅಭಿನಂದನೆ

ಮಂಜೇಶ್ವರ: ಕೇರಳ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವಿ.ಡಿ.ಸತೀಶನ್ ಅವರನ್ನು ಮಂಜೇಶ್ವರ ಯೂನಿಟ್ ಕೇರಳ ಸ್ಟೇಟ್ ಟೈಲರ್ಸ್ ಅಸೋಸಿಯೇಶನ್‌ನ ಅಧ್ಯಕ್ಷ, ಮಂಜೇಶ್ವರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗಣೇಶ್ ಪಾವೂರು ಅಭಿನಂದಿಸಿದ್ದಾರೆ. ಮುಖ್ಯಮಂತ್ರಿಗಳು ಕೇರಳದ ಅಭಿವೃದ್ಧಿಯ ಜೊತೆಗೆ ಮಂಜೇಶ್ವರದ ಪ್ರಗತಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಸಚಿವ ಸ್ಥಾನ ಕೈ ತಪ್ಪಿದ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರಿಗೆ ಅಭಿವೃದ್ಧಿ ಮಂಡಳಿಯಲ್ಲಿ ಸ್ಥಾನ ನೀಡಬೇಕು ಎಂದು ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಹೆಚ್ಚಿನ ಮತ ಪಡೆದು 2ನೇ ಬಾರಿ ಆಯ್ಕೆಯಾದ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರಿಗೆ ಗಣೇಶ್ ಪಾವೂರು ಅಭಿನಂದನೆ ಸಲ್ಲಿಸಿದ್ದಾರೆ.

ಅಡ್ವೋಕೇಟ್ ಜನರಲ್ ನೇಮಕ

ಕಾಸರಗೋಡು: ಕೇರಳದ ನೂತನ ಅಡ್ವೋಕೇಟ್ ಜನರಲ್ ಆಗಿ ರಾಜ್ಯ ಹೈಕೋರ್ಟ್‌ನ ಹಿರಿಯ ವಕೀಲರಾಗಿರುವ ಜಾಜು ಬಾಬು ಅವರನ್ನು ಸರಕಾರವು ನೇಮಿಸಿದೆ. ಜಾಜು ಬಾಬು ಅವರು ಈ ಹಿಂದೆ ದೀರ್ಘಕಾಲ ರಾಜ್ಯಪಾಲರ ಕಾನೂನು ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದರು. ಅವರು ಕೋಟ್ಟಾಯಂ ನಿವಾಸಿಯಾಗಿದ್ದಾರೆ. ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಈ ಹಿಂದೆ ವಕೀಲ ವೃತ್ತಿಯಲ್ಲಿದ್ದ ಸಂದರ್ಭ ಜಾಜು ಬಾಬು ಅವರು ಕೂಡಾ ವಕೀಲರಾಗಿ ಕಾರ್ಯ ನಿರ್ವಹಿಸಿದ್ದರು.

ಪ್ರಬಂಧ ಸ್ಪರ್ಧೆ ಫಲಿತಾಂಶ

ಮುಳ್ಳೇರಿಯ: ಬೆಳ್ಳೂರು ಬಂಟ ಮಹಿಳಾ ಸಂಘದ 20ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಪ್ರಬಂಧ ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಅದರಂತೆ ಪ್ರಥಮ ಬಹುಮಾನಕ್ಕೆ ಕುಂಬಳೆ ಕಂಚಿಕಟ್ಟೆಯ ಪುಣ್ಯವತಿ ರೈ ಆಯ್ಕೆಯಾಗಿದ್ದಾರೆ. ದ್ವಿತೀಯ ಬಹುಮಾನವನ್ನು ಸುಳ್ಯದ ಆಮರ ಪಡ್ನೂರುವಿನ ಕಾವಶ್ರೀ ಅಶ್ವಿನಿ ರೈ ಅವರ ಪ್ರಬಂಧ ಗಳಿಸಿದೆ. ತೃತೀಯ ಬಹುಮಾನವು ಇಚ್ಲಂಪಾಡಿ ಕಾರಿಂಜೆಯ ವಿನೋದಾ ಪ್ರಸಾದ್ ರೈ , ಸುಳ್ಯದ ಸುರಕ್ಷಾ ಪ್ರಸಾದ್ ರೈ ಪ್ರಬಂಧಕ್ಕೆ ಲಭಿಸಿದೆ.

ಮೇ 24: ಕಯ್ಯಾರಿನಲ್ಲಿ ಅಭಿನಂದನಾ ಸಭೆ

ಉಪ್ಪಳ: ದುರ್ಗಾ ಶಕ್ತಿ ಕುಣಿತ ಭಜನಾ ತಂಡ ಪರಂಬಳ ಕಯ್ಯಾರು ಇದರ ವತಿಯಿಂದ ಅಭಿನಂದನಾ ಸಭೆ ಪರಂಬಳ ಕಯ್ಯಾರು ಶ್ರೀ ಭಾರತ ಮಾತಾ ಸೇವಾ ಟ್ರಸ್ಟ್‌ನ ಸಭಾಂಗಣದಲ್ಲಿ ಮೇ 24ರಂದು ಬೆಳಗ್ಗೆ 9.30ರಿಂದ ನಡೆಯಲಿದೆ.

ಅಧ್ಯಕ್ಷತೆಯನ್ನು ದುರ್ಗಾ ಶಕ್ತಿ ಕುಣಿತ ಭಜನಾ ತಂಡದ ಗೌರವ ಮಾರ್ಗದರ್ಶಕಿ ರಮ್ಯಾ ಎನ್. ಸೀತಾಂಗೋಳಿ ವಹಿಸುವರು. ದಿಕ್ಸೂಚಿ ಭಾಷಣವನ್ನು ಗೀತಾ ಸಾಹಿತ್ಯ ಸಂಭ್ರಮದ ರೂವಾರಿ ವಿಠಲ ನಾಯಕ್ ಕಲ್ಲಡ್ಕ ನೆರವೇರಿಸುವರು. ಅತಿಥಿಗಳಾಗಿ ಕುಂಬಳೆ ಅಬಕಾರಿ ಅಧಿಕಾರಿ ಪ್ರಜಿತ್, ವಸುದೈವ ಭಜನಾ ಕುಟುಂಬ ಅಖಂಡ ಭಾರತ ಇದರ ಸದಸ್ಯ ರವಿ ಮಂಜನಾಡಿ, ಸಾಮಾಜಿಕ ಕಾರ್ಯಕರ್ತ ಲೋಕೇಶ್ ನೋಂಡ ಜೋಡುಕಲ್ಲು, ಪದ್ಮಶಾಲಿ ಸಮಾಜ ಸೇವಾ ಸಮಿತಿ ಪೈವಳಿಕೆ ಇದರ ಅಧ್ಯಕ್ಷ ಉಮೇಶ್ ಕುಂಡೇರಿ, ಭಜನಾ ಶಿಕ್ಷಕಿ ಸಂಧ್ಯಾ ಮಾತಾಜಿ, ಭಾರತ ಮಾತಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಗಿರೀಶ್ ಕುಮಾರ್ ಕಯ್ಯಾರು ಭಾಗವಹಿಸುವರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದ ಭಜನಾ ವಿದ್ಯಾರ್ಥಿಗಳನ್ನು ಮತ್ತು ಭಜನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳ ಅಭಿನಂದಿಸಲಾಗುವುದು.

ಮಳೆಗಾಲ ಸಮೀಪಿಸುತ್ತಿದ್ದರೂ ಜಿಲ್ಲೆಯಲ್ಲಿ ನಡೆಯದ ಚರಂಡಿ ಸ್ವಚ್ಛತಾ ಕಾರ್ಯ

ಸಾಂಕ್ರಾಮಿಕ ರೋಗಕ್ಕೆ ಆಹ್ವಾನ ನೀಡುತ್ತಿದೆ ಕಾಸರಗೋಡು ಜಿಲ್ಲೆ





ಕಾಸರಗೋಡು: ಮುಂದಿನ ಕೆಲವೇ ದಿನಗಳಲ್ಲಿ ಕಾಸರಗೋಡು ಜಿಲ್ಲೆಗೆ ಮುಂಗಾರು ಮಳೆ ಆಗಮಿಸಲಿದ್ದರೂ ಜಿಲ್ಲೆಯಲ್ಲಿ ಮಾತ್ರ ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯ ಸಮರ್ಪಕವಾಗಿ ನಡೆದೇ ಇಲ್ಲ. ಇದರಿಂದ ಈ ಬಾರಿ ಮಳೆಗಾಲದಲ್ಲಿ ಜಿಲ್ಲೆಯ ವಿವಿಧೆಡೆ ಅಪಾರ ಸಂಕಷ್ಟ ಎದುರಾಗುವ ಸಾಧ್ಯತೆ ಹೆಚ್ಚಿದೆ.

ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಚರಂಡಿ ಶುಚೀಕರಣ ಕಾರ್ಯ ಇನ್ನೂ ಆರಂಭಗೊಂಡಿಲ್ಲ, ಚರಂಡಿಯ ಹೂಳೆತ್ತುವ ಕಾಮಗಾರಿಯೂ ನಡೆಯದಿರುವುದರಿಂದ ಕಳೆದ ದಿನಗಳಲ್ಲಿ ಸುರಿದ ಒಂದೆರಡು ಮಳೆಗೆ ಚರಂಡಿ ನೀರು ರಸ್ತೆಯಲ್ಲೇ ಹರಿದು ಅವಾಂತರಕ್ಕೆ ಕಾರಣವಾಗಿದೆ. ಜೊತೆಗೆ ಕೆಲವೆಡೆಗಳಲ್ಲಿ ರಸ್ತೆಗಳು ಕೆಸರುಗದ್ದೆಗಳಾಗಿ ಮಾರ್ಪಟ್ಟಿವೆ.

ಹೆಚ್ಚುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯಗಳು

ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮಾತ್ರವಲ್ಲದೆ ಗ್ರಾಮೀಣ ರಸ್ತೆಗಳ ಆಸುಪಾಸುಗಳಲ್ಲೂ ಪ್ಲಾಸ್ಟಿಕ್ ರಾಶಿಗಳೇ ಬಿದ್ದುಕೊಂಡಿವೆ. ಮಣ್ಣಿನಲ್ಲಿ ನಶಿಸದ ಪ್ಲಾಸ್ಟಿಕ್ ತ್ಯಾಜ್ಯಗಳು ಪರಿಸರಕ್ಕೆ ಬಹುದೊಡ್ಡ ಭೀತಿ ಸೃಷ್ಟಿಸುತ್ತಿವೆ. ನಗರ, ಗ್ರಾಮೀಣ ಸೇರಿದಂತೆ ಇಡೀ ನಾಡನ್ನು ತ್ಯಾಜ್ಯಮುಕ್ತಗೊಳಿಸಲು ಸ್ಥಳೀಯಾಡಳಿತ ಸಂಸ್ಥೆಗಳ ಪ್ರತಿನಿಧಿಗಳು, ಹಸಿರು ಕ್ರಿಯಾ ಸೇನೆಯ ಸದಸ್ಯರು ಹೆಚ್ಚು ಜಾಗೃತಿಯಿಂದ ಕಾರ್ಯಾಚರಿಸುತ್ತಿರುವಾಗ ವ್ಯಾಪಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಅಲ್ಲದೆ ಸಾರ್ವಜನಿಕರು ಇನ್ನೂ ಈ ವಿಚಾರದಲ್ಲಿ ತಲೆಕೆಡಿಸಿಕೊಂಡಿಲ್ಲ, ಆದಕಾರಣವೇ ನಾಡಿನ ಎಲ್ಲೆಂದರಲ್ಲಿ ತ್ಯಾಜ್ಯ ರಾಶಿ ಗೋಚರಿಸುತ್ತಿರುವುದಾಗಿದೆ.

ಸ್ಥಳೀಯಾಡಳಿತ ಸಂಸ್ಥೆಗಳ ಅನುಷ್ಠಾನ ಪಡೆ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ತಪ್ಪಿತಸ್ಥರಿಂದ ಕೋಟ್ಯಂತರ ರೂ. ದಂಡ ವಸೂಲಿ ಮಾಡುತ್ತಿದ್ದರೂ ತ್ಯಾಜ್ಯ ಎಸೆಯುವುದು ಮಾತ್ರ ಕಡಿಮೆಯಾದಂತಿಲ್ಲ. ಕೇರಳಕ್ಕೆ ಮೇ 26ರಂದು ಮುಂಗಾರು ಮಾರುತವು ಕಾಲಿರಿಸಲಿದೆ ಎಂಬ ಕೇಂದ್ರ ಹವಾಮಾನ ಇಲಾಖೆ ಈಗಾಗಲೇ ಮಾಹಿತಿ ನೀಡಿದೆ. ಆದರೂ ಮಳೆಗಾಲ ಪೂರ್ವ ಸ್ವಚ್ಛತಾಕಾರ್ಯ ಜಿಲ್ಲೆಯಲ್ಲಿ ಸಮರ್ಪಕವಾಗಿ ನಡೆಯದಿರುವುದು ವಿಪರ್ಯಾಸವಾಗಿದೆ.

ಸಾಂಕ್ರಾಮಿಕ ರೋಗದ ಭೀತಿ

ಮಳೆಗಾಲದ ಮುನ್ನ ಚರಂಡಿಗಳ ಮತ್ತು ಮೋರಿ ಸಂಕಗಳ ಸ್ವಚ್ಛತೆ ನಡೆಯದಿದ್ದರೆ ಈ ಮಳೆಗಾಲವು ರೋಗವನ್ನು ಆಹ್ವಾನಿಸಲಿದೆ. ಈ ನಿಟ್ಟಿನಲ್ಲಿ ಸಾಂಕ್ರಾಮಿಕ ಜ್ವರ, ಇಲಿಜ್ವರ, ಚಿಕನ್‌ಗುನ್ಯಾ, ಡೆಂಗ್ಯೂ, ಮಲೇರಿಯ ಮೊದಲಾದ ರೋಗಗಳಿಂದ ಪಾರಾಗಲು ಮೊದಲೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾಗಿದೆ. ಸೊಳ್ಳೆಗಳ ನಾಶ, ಜಲಮೂಲಗಳ ಸ್ವಚ್ಛತೆ, ಚರಂಡಿಗಳ ಮಣ್ಣು ಸಹಿತ ಕೆಸರು ತೆರವುಗೊಳಿಸುವಿಕೆ, ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ಪರಿಸರ ಸ್ವಚ್ಛತೆ ಮುಂತಾದ ಕಾಮಗಾರಿ ಕೈಗೊಂಡು ಪೂರ್ಣಗೊಳಿಸುವಲ್ಲಿ ಸಂಬಂಧಪಟ್ಟ ಇಲಾಖೆಗಳು ಗಮನಹರಿಸಬೇಕಾಗಿವೆ.

ಆರೋಗ್ಯ ಸಮಸ್ಯೆಯ ಭೀತಿ

ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವ ಚಾಳಿ ದಿನ ಕಳೆದಂತೆ ಏರುತ್ತಲೇ ಹೋಗುತ್ತಿದೆ. ವಿವಿಧೆಡೆಗಳಲ್ಲಿ ತಂದು ಹಾಕುವ ಪ್ಲಾಸ್ಟಿಕ್ ಸಹಿತ ಇನ್ನಿತರ ತ್ಯಾಜ್ಯಗಳು ಚರಂಡಿಗಳಲ್ಲಿ, ಮೋರಿ ಸಂಕಗಳ ಅಡಿಭಾಗಗಳಲ್ಲಿ ತುಂಬಿ ನಿಂತಿರುವುದು ಕಂಡುಬರುತ್ತಿದೆ. ಈ ಹಿನ್ನೆಲೆ ಮಳೆಗಾಲದಲ್ಲಿ ಮಳೆನೀರು ಕಟ್ಟಿನಿಲ್ಲಲು ಮತ್ತು ಆರೋಗ್ಯ ಸಮಸ್ಯೆ ಸೃಷ್ಟಿಯಾಗಲು ಕಾರಣವಾಗುವ ಲಕ್ಷಣಗಳಿವೆ.

ರಸ್ತೆ ಬದಿಯಲ್ಲೇ ತುಂಬಿ ತುಳುಕುತ್ತಿವೆ ತ್ಯಾಜ್ಯ ರಾಶಿಗಳು!

ಕಾಸರಗೋಡು ಜಿಲ್ಲೆಯ ಬಹುತೇಕ ರಸ್ತೆಗಳ ಬದಿಗಳಲ್ಲಿ ಮಾಲಿನ್ಯ ರಾಶಿ ತುಂಬಿ ತುಳುಕು ತ್ತಿದೆ. ಈ ನಿಟ್ಟಿನಲ್ಲಿ ರಸ್ತೆಗಳಲ್ಲಿ ಪ್ರಯಾಣ ಮಾಡುವವರು ಮೂಗು ಮುಚ್ಚಿಕೊಂಡೇ ಸಾಗಬೇಕಾದ ಅನಿವಾರ್ಯತೆಯಿದೆ. ಆರೋಗ್ಯ ಇಲಾಖೆ ಮತ್ತು ಸ್ಥಳೀಯಾಡಳಿತ ಇಲಾಖೆಯು ಈ ಬಗ್ಗೆ ಗಮನಹರಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ತ್ಯಾಜ್ಯ ಎಸೆಯುವ ಪಿಡುಗು ಹೆಚ್ಚುತ್ತಲೇ ಹೋಗಬಹುದು. ಇದೊಂದು ಸಾಮಾಜಿಕ ಪಿಡುಗು ಆಗಿದ್ದು, ಸಾರ್ವಜನಿಕರು ಈ ಬಗ್ಗೆ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಬೇಕಾಗಿದೆ.

ಶ್ರೀಕಾಂತ್ ಕಾಸರಗೋಡುಗೆ ಕರ್ನಾಟಕ ಪತ್ರಕರ್ತರ ಸಂಘದ ವಿಶೇಷ ಪ್ರಶಸ್ತಿ ಪ್ರದಾನ



ಕಾಸರಗೋಡು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಿಶೇಷ ಪ್ರಶಸ್ತಿಯನ್ನು ಬಹುಮುಖ ಪ್ರತಿಭಾವಂತ ಛಾಯಾಗ್ರಾಹಕ ಶ್ರೀಕಾಂತ್ ಕಾಸರಗೋಡು ಅವರಿಗೆ ನೀಡಲಾಯಿತು.

ಕುಡಾಲುಮೇರ್ಕಳ ಸುಬ್ಬಯಕಟ್ಟೆ ಅನುದಾನಿತ ವಿದ್ಯಾಲಯದಲ್ಲಿ ನಡೆದ ದತ್ತಿನಿಧಿ ಪ್ರಶಸ್ತಿ ಪ್ರದಾನ ಮತ್ತು ಕನ್ನಡ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಹಸ್ತಾಂತರಿಸಲಾಯಿತು. ಕರ್ನಾಟಕ ಸರಕಾರದ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿಮರದ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯನಿರತ ಕನ್ನಡ ಪತ್ರಕರ್ತರ ಸಂಘದ ಕಾಸರಗೋಡು ಜಿಲ್ಲಾಧ್ಯಕ್ಷ ಎ.ಆರ್. ಸುಬ್ಬಯಕಟ್ಟೆ , ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಜಿ.ಪಂ. ಸದಸ್ಯ ಸೋಮಶೇಖರ, ಪ್ರದೀಪ್‌ಕುಮಾರ್ ಕಲ್ಕೂರ, ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೆಯುಡಬ್ಲ್ಯೂಜೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಉಳಿಯತ್ತಡ್ಕ ಮತ್ತಿತರರಿದ್ದರು.

ಜಿಲ್ಲಾ ಕೇಂದ್ರ ಫೊಟೊಗ್ರಾಫರ್ ಆಗಿ ಕರ್ತವ್ಯ ನಿರ್ವಹಣೆ

ಕನ್ನಡ ಮಲೆಯಾಳ ಪ್ರಮುಖ ಪತ್ರಿಕೆಗಳಿಗೆ ಛಾಯಾಚಿತ್ರಗಳನ್ನು ಸಕಾಲಿಕವಾಗಿ ಸುದೀರ್ಘ ಕಾಲದಿಂದ ಒದಗಿಸುತ್ತಾ ಬಂದಿರುವ ಶ್ರೀಕಾಂತ್ ಕಾಸರಗೋಡು ಅವರು ಕೇರಳ ಸರಕಾರದ ವಾರ್ತಾ ಇಲಾಖೆ ಕಾಸರಗೋಡು ಜಿಲ್ಲಾ ಕೇಂದ್ರ ಫೊಟೊಗ್ರಾಫರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾಸರಗೋಡು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸಂಚಾಲಕರಾಗಿದ್ದಾರೆ. ಆಲ್ ಕೇರಳ ಫೊಟೋಗ್ರಾಫರ್ಸ್ ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷರಾಗಿದ್ದು ಪ್ರಸ್ತುತ ಈಸ್ಟ್ ಯೂನಿಟ್‌ನ ಕೋಶಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಗೆ ಸಚಿವ ಸ್ಥಾನ ಸಿಗದಿರುವುದು ಖೇದಕರ: ಸುರೇಂದ್ರನ್

ಕಾಸರಗೋಡು: ಐಕ್ಯರಂಗ ಒಕ್ಕೂಟದ ನೂತನ ಸರಕಾರದಲ್ಲಿ ಕಾಸರಗೋಡು ಜಿಲ್ಲೆಗೆ ಸಚಿವ ಸ್ಥಾನವು ಸಿಗದಿರುವುದು ಖೇದಕರ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಜಿಲ್ಲೆಯ ಸಮಗ್ರವಾದ ಅಭಿವೃದ್ಧಿ ನಡೆಯಲು ಈ ಬಾರಿಯಾದರೂ ಜಿಲ್ಲೆಯ ಒಬ್ಬರಿಗೆ ಸಚಿವ ಸ್ಥಾನ ಲಭಿಸಬಹುದೆಂದು ನಾನು ಆಶಿಸಿದ್ದೆ ಎಂದು ಅವರು ಸೋಶಿಯಲ್ ಮೀಡಿಯಾದಲ್ಲಿ ಕಳುಹಿಸಿದ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಸಮಸ್ಯೆಗಳು ಹೆಚ್ಚಿವೆ

ಕೇರಳದ ಅತೀ ದೊಡ್ಡ ಹಿಂದುಳಿದ ಜಿಲ್ಲೆ ಕಾಸರಗೋಡು ಆಗಿದೆ. ಆರೋಗ್ಯ, ಶಿಕ್ಷಣ, ಕೃಷಿ, ಕೈಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ, ಪ್ರವಾಸೋದ್ಯಮ ಮೊದಲಾದ ವಲಯಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ಕಾಸರಗೋಡು ಜಿಲ್ಲೆಯಲ್ಲಿ ಅಪಾರ ಸಮಸ್ಯೆಗಳಿವೆ. ಅಭಿವೃದ್ಧಿ ಯೋಜನೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಜಾರಿಗೊಳಿಸಲಾಗುತ್ತಿಲ್ಲ ಎಂದು ಅವರು ಉಲ್ಲೇಖಿಸಿದ್ದಾರೆ.

ಸಚಿವ ಸ್ಥಾನ ಲಭಿಸಿಲ್ಲ

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಭಾರೀ ಬಹುಮತದೊಂದಿಗೆ ಗೆಲುವು ಸಾಧಿಸಿದ ಶಾಸಕ ಎ.ಕೆ.ಎಂ.ಅಶ್ರಫ್ ಅವರಿಗೆ ಸಚಿವ ಸ್ಥಾನ ಲಭಿಸದೇ ಇರುವುದು ಅತ್ಯಂತ ದುಃಖಕರ ವಿಷಯವಾಗಿದೆ. ರಾಜಕೀಯದಲ್ಲಿ ಎದುರಾಳಿಗಳು ಮಾತ್ರವೇ ಇದ್ದಾರೆ. ಆದರೆ ಶತ್ರುಗಳಿಲ್ಲ ಎಂಬ ನಂಬಿಕೆ ಇರಿಸಿಕೊಂಡವನು ನಾನು. ಮುಂದಿನ ದಿನಗಳಲ್ಲಿ ಬಿಜೆಪಿ ನಾಯಕತ್ವವು ಕೇರಳದಲ್ಲಿ ಇನ್ನಷ್ಟು ಜನಪರ ವಿಚಾರಗಳೊಂದಿಗೆ ಮುಂದೆ ಬರಲಿದೆ ಎಂದು ಕೆ.ಸುರೇಂದ್ರನ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

> **ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ**
>
> ಎಲ್ಲಾ ರಂಗಗಳಲ್ಲೂ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಈ ಹಿಂದಿನ ಎಲ್ಲಾ ರಾಜ್ಯ ಸರಕಾರಗಳು ನಿರ್ಲಕ್ಷ್ಯ ಧೋರಣೆ ಅನುಸರಿಸಿವೆ. ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳಿಗೆ ಜಿಲ್ಲೆಯ ಪ್ರಗತಿ ಬೇಕಾಗಿಲ್ಲ, ಅಂತಹ ನೀತಿ ಮುಂದೆಯೂ ನಡೆಯುವ ಸಾಧ್ಯತೆಯಿದೆ.
>
> ● ಕೆ.ಸುರೇಂದ್ರನ್

ಬಾಳಿಯೂರಿನ ಶ್ರೀ ಅಯ್ಯಪ್ಪ ಭಜನಾ ಮಂದಿರ: ಫೂಟ್ ಪಲ್ಸ್ ಥೆರಪಿ ಶಿಬಿರ



ಉಪ್ಪಳ: ಬಾಳಿಯೂರು ಶ್ರೀ ಅಯ್ಯಪ್ಪ ಭಜನಾ ಮಂದಿರದಲ್ಲಿ ಬೆಂಗಳೂರು ಮೂಲದ ಫೂಟ್ ಪಲ್ಸ್ ಥೆರಪಿ ತಂಡದ ವತಿಯಿಂದ ಉಚಿತ ಆರೋಗ್ಯ ಮಾಹಿತಿ ಹಾಗೂ ಥೆರಪಿ ಶಿಬಿರವು ಮೇ 10ರಂದು ಪ್ರಾರಂಭಗೊಂಡಿದ್ದು, ಕಾರ್ಯಕ್ರಮವನ್ನು ಮಂದಿರದ ಉಪಾಧ್ಯಕ್ಷರಾದ ಅರವಿಂದಕ್ಷ ಭಂಡಾರಿ ಉದ್ಘಾಟಿಸಿದರು.

ಮಂದಿರದ ಸಂಚಾಲಕ ಡಾ. ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅಧ್ಯಕ್ಷತೆ ವಹಿಸಿದ್ದರು. ಸೀತಾರಾಮ ಶೆಟ್ಟಿ ಶಿಬಿರದ ತರಬೇತಿ ನಡೆಸಿಕೊಟ್ಟರು. ಪ್ರಭಾಕರ್ ಸಾಲಿಯಾನ್ ಸ್ವಾಗತಿಸಿದರು.

ಮೇ 27ರವರೆಗೆ ಇರಲಿದೆ ಶಿಬಿರ

ಕಾರ್ಯಕ್ರಮದಲ್ಲಿ ಹಲವಾರು ಮಂದಿ ಭಾಗವಹಿಸಿದ್ದು, ಉಚಿತ ಫೂಟ್ ಪಲ್ಸ್ ಥೆರಪಿ ಶಿಬಿರವು ಮೇ 27ರ ವರೆಗೆ ನಡೆಯಲಿದೆ.

ಎಸ್ಸೆಸ್ಸೆಲ್ಸಿ: ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠಕ್ಕೆ ಶೇ.100 ಸಾಧನೆ

ಬದಿಯಡ್ಕ: 2025–26ನೇ ಸಾಲಿನ ಕೇರಳ ರಾಜ್ಯ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಂಡಿದ್ದು, ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠದ ಎಲ್ಲಾ 18 ಮಂದಿ ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅವರಲ್ಲಿ 3 ಮಂದಿ ವಿದ್ಯಾರ್ಥಿಗಳು ಎಲ್ಲಾ 10 ವಿಷಯಗಳಲ್ಲೂ 'ಎ' ಪ್ಲಸ್ ಅಂಕ ಪಡೆದು ಶಾಲೆಗೆ ಹಾಗೂ ಅವರ ಮನೆಗೆ ಕೀರ್ತಿ ತಂದಿದ್ದಾರೆ.



ವಿದ್ಯಾರ್ಥಿಗಳಾದ ಕೆ.ಅಕ್ಷಯ ವೆಂಕಟೇಶ್, ಶಾತೋದರಿ ಪಿ.ಎಂ., ವಿಷ್ಣುರಂಜನ್ ಸಿ.ಎಚ್. ಅವರು ಎಲ್ಲಾ 10 ವಿಷಯಗಳಲ್ಲೂ 'ಎ' ಪ್ಲಸ್ ಅಂಕ ದಾಖಲಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಆಡಳಿತ ಮಂಡಳಿ ಹಾಗೂ ರಕ್ಷಕ ಶಿಕ್ಷಕ ಸಂಘ ಅಭಿನಂದಿಸಿದೆ.

ನೂತನವಾಗಿ ನಿರ್ಮಾಣಗೊಂಡ ಕಯ್ಯಾರು ವಿಶ್ವಬ್ರಾಹ್ಮಣ ಸಮಾಜ ಭವನ ಲೋಕಾರ್ಪಣೆ



ಉಪ್ಪಳ: ವಿಶ್ವಕರ್ಮ ಸೇವಾ ಸಮಿತಿ ಕಯ್ಯಾರು ಇದರ ಆಶ್ರಯದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಕಯ್ಯಾರು ವಿಶ್ವಬ್ರಾಹ್ಮಣ ಸಮಾಜ ಭವನವನ್ನು ವಿವಿಧ ವೈದಿಕ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಹಿಂದಿನ ದಿನ ವಾಸ್ತುಹೋಮ ಹಾಗೂ ಇನ್ನಿತರ ಹವನಾದಿಗಳು ನಡೆದು ಈ ಶುಭ ಸಂದರ್ಭ ಆರೆಮಾದನಹಳ್ಳಿ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮಿಗಳು ಆಶೀರ್ವಚನ ನೀಡಿ ಶುಭಹಾರೈಸಿದರು.

ಶ್ರೀ ಸತ್ಯನಾರಾಯಣ ಪೂಜೆ

ಉದ್ಘಾಟನಾ ದಿನದಂದು ಭವನ ಪ್ರವೇಶ, ಗಣಪತಿ ಹೋಮ, ಶ್ರೀ ಸತ್ಯನಾರಾಯಣ ಪೂಜೆ ಸಂಪನ್ನಗೊಂಡಿತು. ನಂತರ ಸಭಾ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ರಮೇಶ ಆಚಾರ್ಯ ಅಂಬಿಕಾನ ದೀಪ ಬೆಳಗಿಸಿ ಉದ್ಘಾಟಿಸಿ ಶುಭಕೋರಿದರು.

ಮುಖ್ಯ ಅತಿಥಿಗಳಾಗಿ ಕೇಶವ ಆಚಾರ್ಯ ಮಂಗಳೂರು, ಯೋಗೀಶ ಆಚಾರ್ಯ ವರ್ಕಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಂಜೇಶ್ವರ ತಾಲೂಕು ಯೋಜನಾಧಿಕಾರಿ ಶಶಿಕಲಾ ಸುವರ್ಣ, ಪೈವಳಿಕೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್ ಭಾಗವಹಿಸಿ ಮಾತನಾಡಿದರು.

ವಸಂತ ಆಚಾರ್ಯ ಕಯ್ಯಾರು, ಉಮೇಶ ಆಚಾರ್ಯ ಪೈವಳಿಕೆ, ದೇವಪ್ಪ ಆಚಾರ್ಯ ಚಿಪ್ಪಾರು ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪ್ರಕೃತಿ ಕಯ್ಯಾರು ಪ್ರಾರ್ಥಿಸಿ, ಮಾಧವ ಆಚಾರ್ಯ ಬೇಕೂರು ಸ್ವಾಗತಿಸಿ, ದಿವ್ಯಾ ಶ್ರೀಕಾಂತ್ ಆಚಾರ್ಯ ಬೇಕೂರು ವಂದಿಸಿದರು. ಸುನೀಲ್ ಆಚಾರ್ಯ ಕಯ್ಯಾರು ಕಾರ್ಯಕ್ರಮ ನಿರೂಪಿಸಿದರು.

ಮೇ 23ರಿಂದ ಕಾಸರಗೋಡು ಶ್ರೀ ನಾಗರಾಜ, ನಾಗಕನ್ನಿಕಾ ಸನ್ನಿಧಿಯಲ್ಲಿ ಬ್ರಹ್ಮಕಲಶಾಭಿಷೇಕ

ಕಾಸರಗೋಡು: ಕಾಸರಗೋಡು ನಗರದ ಬ್ಯಾಂಕ್ ರಸ್ತೆಯಲ್ಲಿ ಮಠದ ಪೇಟೆಯಲ್ಲಿರುವ ಶ್ರೀ ನಾಗರಾಜ – ನಾಗಕನ್ನಿಕಾ ಸನ್ನಿಧಿಯಲ್ಲಿ ಬ್ರಹ್ಮಕಲಶಾಭಿಷೇಕ ಮೇ 23ರಿಂದ 25ರ ವರೆಗೆ ಜರಗಲಿದೆ. ಆ ಪ್ರಯುಕ್ತ ಮೇ 22ರಂದು ಸಂಜೆ 5 ಗಂಟೆಗೆ ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರದ ಪರಿಸರದಿಂದ ಹೊರೆಕಾಣಿಕೆ ಸಮರ್ಪಣೆ ನಡೆಯಲಿದೆ.



ಮೇ 23ರಂದು ಬೆಳಗ್ಗೆ 7.30ಕ್ಕೆ ಭಜನೆ, 8ಕ್ಕೆ ತಂತ್ರಿಗಳ ಆಗಮನ, 9ಕ್ಕೆ ಗಣಪತಿ ಹೋಮ, 10ಕ್ಕೆ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ಸಾಮೂಹಿಕ ಶನೈಶ್ವರ ಪೂಜೆ, 11.30ಕ್ಕೆ ಶುದ್ಧಿಕಲಶ, ಗುಳಿಗನಿಗೆ ತಂಬಿಲ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, 12.30ಕ್ಕೆ ಭಕ್ತಿಗಾನ ತರಂಗಿಣಿ, 1 ಗಂಟೆಗೆ ಅನ್ನಸಂತರ್ಪಣೆ, ಸಂಜೆ 5ರಿಂದ ಭಜನೆ, ರಾತ್ರಿ 8ಕ್ಕೆ ಬಾಲಗೋಕುಲ ಮಕ್ಕಳಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ.

ಮೇ 24ರಂದು ಬೆಳಿಗ್ಗೆ 7.30ರಿಂದ ಭಜನೆ, 9ಕ್ಕೆ ತಂತ್ರಿವರ್ಯ ಶ್ರೀ ಸುಖಾನಂದ ಭಟ್ ಮಂಜೇಶ್ವರ ಅವರ ನೇತೃತ್ವದಲ್ಲಿ ನವಗ್ರಹ ಹವನ, ವಾಸ್ತು ಹವನ, ಮಹಾ ಮೃತ್ಯುಂಜಯ ಹವನ, 11ಕ್ಕೆ ಪೂರ್ಣಾಹುತಿ, 11.30ಕ್ಕೆ ಮಹಾಪೂಜೆ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ನಡೆಯುವ ಧಾರ್ಮಿಕ ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ವಕೀಲ ಶಶಿಧರ ಆನೆಮಜಲ್ ಅಧ್ಯಕ್ಷತೆ ವಹಿಸುವರು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡುವರು. ತಂತ್ರಿವರ್ಯರಾದ ಬ್ರಹ್ಮಶ್ರೀ ಸುಖಾನಂದ ಭಟ್, ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಸಹಿತ ಹಲವರು ಉಪಸ್ಥಿತರಿರುವರು. ಆರೆಸ್ಸೆಸ್ ಮುಖಂಡ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮುಖ್ಯ ಭಾಷಣ ಮಾಡುವರು. ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, 1.30ರಿಂದ ಭಜನಾ ಸಂಕೀರ್ತನೆ, ಸಂಜೆ 5ರಿಂದ ಭಜನೆ, 8.30ರಿಂದ ಭಜನಾ ಸಂಕೀರ್ತನೆ ನಡೆಯಲಿದೆ.

ಮೇ 25ರಂದು ಬೆಳಿಗ್ಗೆ 7.30ರಿಂದ ಭಜನೆ, 11.35ಕ್ಕೆ ಶ್ರೀ ನಾಗರಾಜ – ನಾಗಕನ್ನಿಕಾ ದೇವರಿಗೆ ಬ್ರಹ್ಮಕಲಶಾಭಿಷೇಕ, ಆಶ್ಲೇಷಬಲಿ, 1 ರಾತ್ರಿ 7.30ಕ್ಕೆ ಕಾಸರಗೋಡು ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಸಂಘದವರಿಂದ 1 ಗಂಟೆಗೆ ಅನ್ನಸಂತರ್ಪಣೆ, 1.30ಕ್ಕೆ ಭಕ್ತಿ ರಸಮಂಜರಿ, ಸಂಜೆ 5ಕ್ಕೆ ಭಜನೆ, ಗೊಂಬೆಯಾಟ, 9ಕ್ಕೆ ನಾಟ್ಯವೃಂದ ಮಧೂರು ಇವರಿಂದ ಭರತನಾಟ್ಯ, 10ಕ್ಕೆ ಲಕ್ಕಿಡಿಪ್ ಕೂಪನ್ ಡ್ರಾ ನಡೆಯಲಿದೆ.

ಕೊಲ್ಲಂಗಾನ: ಬಹುಭಾಷಾ ಕವಿಗೋಷ್ಠಿ



ಕಾಸರಗೋಡು: ಪ್ರೊ.ಶ್ರೀನಾಥ್ ಕಾಸರಗೋಡು ಅವರ ಕೊಲ್ಲಂಗಾನ ಅನಂತಶ್ರೀ ಮನೆಯಲ್ಲಿ ಬಹುಭಾಷಾ ಕವಿಗೋಷ್ಠಿ ಜರಗಿತು. ಹಿರಿಯ ಪತ್ರಕರ್ತ, ಸಾಹಿತಿಗಳಾದ ಮಲಾರ್ ಜಯರಾಮ ರೈ ಉದ್ಘಾಟಿಸಿದರು.

ಲೇಖಕಿ ಅಶ್ವಿನಿ ಕೋಡಿಬೈಲು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಕವಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ, ವೆಂಕಟ್ ಭಟ್ ಎಡನೀರು, ಪ್ರೇಮಚಂದ್ರನ್ ಚೋಂಬಾಲ, ಬಾಲಕೃಷ್ಣ ಬೇರಿಕೆ, ಸುಂದರ ಬಾರಡ್ಕ, ಕೆ.ವಿ.ಕುಮಾರನ್, ಪ್ರಸನ್ನಕುಮಾರಿ ಮರ್ದಂಬೈಲು, ವನಜಾಕ್ಷಿ ಪಿ. ಚೆಂಬ್ರಕಾನ, ಕರುಣಾಕರನ್ ಅದ್ರುಗುಳಿ, ರವಿ ನಾಯ್ಕಾಪು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಅಖಿಲೇಶ್ ನಗುಮುಗಂ ಸ್ವಾಗತಿಸಿ, ಪ್ರೊ.ಶ್ರೀನಾಥ್ ಎ. ವಂದಿಸಿದರು. ಪತ್ರಕರ್ತ ಪುರುಷೋತ್ತಮ ಭಟ್ ನಿರೂಪಿಸಿದರು. ಬಳಿಕ ಭಜನಾ ಕಾರ್ಯಕ್ರಮ ರಾತ್ರಿ ಮಹಾಪೂಜೆ, ಶ್ರೀ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ ನಡೆಯಿತು. ಬಳಿಕ ಸಾಂಸ್ಕೃತಿಕ ಸಮ್ಮಿಲನ, ಸಮಾರೋಪ ಜರಗಿತು.

ಪೆರಡಾಲದಲ್ಲಿ ಹೊಸದುರ್ಗ ಹೈವ ಬ್ರಾಹ್ಮಣ ಸಭಾದ ವಸಂತ ವೇದಪಾಠ ಶಿಬಿರ ಸಮಾರೋಪ

ವೇದಗಳು ಕೇವಲ ಮಂತ್ರಗಳಲ್ಲ, ನಮ್ಮ ಬದುಕಿನ ದಾರಿದೀಪ

ಬದಿಯಡ್ಕ: ಕಾಸರಗೋಡು ಹೊಸದುರ್ಗ ಹೈವ ಬ್ರಾಹ್ಮಣ ಸಭಾದ ನೇತೃತ್ವದಲ್ಲಿ ಕಳೆದ ಅನೇಕ ವರ್ಷಗಳಿಂದ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನಡೆದು ಬರುತ್ತಿರುವ ವಸಂತ ವೇದಪಾಠ ಶಾಲೆಯ ಈ ವರ್ಷದ ಸಮಾರೋಪ ಬುಧವಾರ ಜರಗಿತು.

ಕಾಸರಗೋಡು ಹೊಸದುರ್ಗ ಹೈವ ಬ್ರಾಹ್ಮಣ ಸಭಾದ ಅಧ್ಯಕ್ಷ ವೈ.ಕೆ.ಗೋವಿಂದ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೊಸ ಪೀಳಿಗೆಗೆ ಸನಾತನ ಧರ್ಮದ ಸಂಸ್ಕಾರ, ವೇದಮಂತ್ರಗಳ ಉಚ್ಚಾರಣೆ , ಸಾಂಸ್ಕೃತಿಕ ಮೌಲ್ಯಗಳನ್ನು ಧಾರೆ ಎರೆಯುವ ಉದ್ದೇಶದಿಂದ ಅನಾದಿ ಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಈ ಶಿಬಿರವು ನಿರಂತರ ಮುಂದುವರಿಯಬೇಕು. ಇದಕ್ಕಾಗಿ ಸಮಾಜದ ಸರ್ವರ ಸಹಕಾರ ಅತೀ ಅಗತ್ಯ. ವೇದಗಳು ಕೇವಲ ಮಂತ್ರಗಳಲ್ಲ ಬದಲಾಗಿ ನಮ್ಮ ಬದುಕಿನ ದಾರಿದೀಪ. ಇಂದಿನ ಧಾವಂತದ ಯುಗದಲ್ಲಿ ಮಕ್ಕಳಿಗೆ ಇಂತಹ ಸಂಸ್ಕಾರ ನೀಡುವುದು ಅಗತ್ಯ ಎಂದರು.



ಸಂಸ್ಕೃತ ಫ್ರಮ್ ಹೋಮ್ ಸಂಸ್ಥೆ ಪ್ರಾಧ್ಯಾಪಕ ವಿನಾಯಕ ರಜತ ಭಟ್ ಮಡಿಪ್ಪು ಮಾತನಾಡಿದರು.

ನಿವೃತ್ತ ಅಧ್ಯಾಪಕ ಶ್ಯಾಮಪ್ರಸಾದ ಕುಳಮರ್ವ ಮಾತನಾಡಿ, ಆಧುನಿಕತೆಯೊಂದಿಗೆ ಬದುಕನ್ನು ಕಟ್ಟಿಕೊಳ್ಳುವ ಭರದಲ್ಲಿ ಅನಾದಿ ಕಾಲದಿಂದ ಬಂದ ಸಂಪ್ರದಾಯಗಳನ್ನು ಬಿಟ್ಟುಕೊಡಬಾರದು. ನಮ್ಮ ಪರಂಪರೆ ಮುಂದುವರಿಸಿಕೊಂಡು ಹೋಗಬೇಕು ಎಂದರು.

ವೇದ ಗುರುಗಳಾದ ವೆಂಕಟೇಶ್ವರ ಭಟ್ ಪಟ್ಟಾಜೆ, ಕಾರ್ಯದರ್ಶಿ ಶ್ಯಾಮಪ್ರಸಾದ ಕಬೆಕ್ಕೋಡು ಶುಭಹಾರೈಸಿದರು. ವೇ.ಮೂ. ಶಿವರಾಮ ಭಟ್ ಪೆರಡಾಲ ಪ್ರಸ್ತಾವನೆಗೈದರು. ವೇದಗುರುಗಳಾದ ಮುರಲೀಧರ ಶರ್ಮ ಅಳಕ್ಕೆ ವರದಿ ಮಂಡಿಸಿದರು. ಮುರಲೀಧರ ಶರ್ಮ ಅಳಕ್ಕೆ, ಜಯಂತ ಕೋಡಿಯಡ್ಕ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಡಾ. ನಾರಾಯಣ ಪ್ರದೀಪ ಪೆರ್ಮುಖ ವಂದಿಸಿದರು.

> **ಸಾರ್ಥಕತೆ ಪಡೆಯೋಣ**
>
> ತನ್ನ ದಿವ್ಯ ತೇಜಸ್ಸಿನ ಮೂಲಕ ಸಕಲ ಜೀವಜಾಲಗಳಿಗೆ ಬೆಳಕನ್ನು ನೀಡುವ ಸೂರ್ಯ ದೇವನ ನಿತ್ಯ ಆರಾಧನೆ ಮೂಲಕ ನಾವು ಜೀವನದಲ್ಲಿ ಬೆಳಗಲು ಸಾಧ್ಯವಿದೆ. ನಿತ್ಯ ನಿರಂತರ ಗಾಯತ್ರೀ ಮಂತ್ರೋಚ್ಚಾರಣೆಯಿಂದ ಮಾನವ ಜನ್ಮದಲ್ಲಿ ಸಾರ್ಥಕತೆ ಪಡೆಯೋಣ. ಹೋಗುವುದು ನಮ್ಮೆಲ್ಲರ ಕರ್ತವ್ಯ.
>
> ● ರಜತ ಭಟ್ ಮಡಿಪ್ಪು

ಎಸ್ಸೆಸ್ಸೆಲ್ಸಿ: ಮೊಗ್ರಾಲ್ ಪುತ್ತೂರು ಶಾಲೆ ಸಾಧನೆ



ಕಾಸರಗೋಡು: ಮೊಗ್ರಾಲ್ ಪುತ್ತೂರು ಸರಕಾರಿ ಹೈಯರ್ ಸೆಕೆಂಡರಿ ಶಾಲೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದು ಅತ್ಯುತ್ತಮ ಸಾಧನೆ ಮಾಡಿದೆ.

ಕಳೆದ ಹಲ ವರ್ಷಗಳಿಂದ ಈ ಶಾಲೆ ಕನ್ನಡ ಮಾಧ್ಯಮ ವಿಭಾಗ ಸತತವಾಗಿ ಶೇ.100 ಫಲಿತಾಂಶ ದಾಖಲಿಸುತ್ತಾ ಬಂದಿದ್ದು, ತನ್ನ ಹೆಮ್ಮೆಯ ಪರಂಪರೆಯನ್ನು ಮುಂದುವರಿಸಿದೆ.

ಶಾಲೆಗೆ ಕೀರ್ತಿ ತಂದಿದ್ದಾರೆ

ಈ ಬಾರಿಯ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿನಿ ವೈಷ್ಣವಿ ಎಂ. ಎಲ್ಲಾ ವಿಷಯಗಳಲ್ಲೂ 'ಎ' ಪ್ಲಸ್ ಗ್ರೇಡ್ ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಈ ಮಹೋನ್ನತ ಸಾಧನೆಗೆ ಶಾಲೆ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು , ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳು ಹಾರ್ದಿಕ ಅಭಿನಂದನೆ ಸಲ್ಲಿಸಿದ್ದಾರೆ.

ಸುತ್ತ ಮುತ್ತ

ಉಡುಪಿ ಜಿಲ್ಲಾ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಪದಾಧಿಕಾರಿಗಳ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ನೂತನ ಪದಾಧಿಕಾರಿಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ರುಡಾಲ್ಫ್ ಡಿಸೋಜ ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ.
ಉಪಾಧ್ಯಕ್ಷರಾಗಿ ಚಿರಂಜೀವಿ ಜೈನ್, ಮೈಕಲ್ ಡಿಸೋಜ, ಜೆರಾಲ್ಡ್ ಡಿಸೋಜ, ಬಿ. ಹೈದರ್, ಇಜಾಜ್ ಶರೀಫ್, ಪ್ರಧಾನ ಕಾರ್ಯದರ್ಶಿಗಳಾಗಿ ಮಹಮ್ಮದ್ ಅಪ್ಸರ್, ಶೇಕ್ ಆಸಿಫ್ ಕಟಪಾಡಿ, ಕಾರ್ಯದರ್ಶಿಗಳಾಗಿ ನೋಯೆಲ್ ಜೋಸೆಫ್ ವಾಜ್, ಡಾಲ್ಫಿ ವಿಕ್ಟರ್ ಲೂಯಿಸ್, ಅನಿಟಾ ಬೆಲಿಂಡ ಡಿಸೋಜ, ಖೈರುನ್ನೀಸಾ, ಜೋನ್ಸನ್ ಪೌಲ್ ಡಿಸೋಜ, ಕೋಶಾಧಿಕಾರಿಯಾಗಿ ಗ್ಲೇನ್ ಮೋನಿಸ್, ಕಾರ್ಯಕಾರಿಣಿ ಸದಸ್ಯರಾಗಿ ಮೆಲ್ವಿನ್ ಪೀಟರ್ ಕ್ರಾಸ್ತ, ರಾಕೇಶ್ ಕ್ರಾಸ್ತ, ಐಸನ್ ಡೈರಿಕ್ ಪಿರೇರಾ, ಉಪ್ಪನ್ ಬೆಟ್ಟು ನಾಗರಾಜ್, ಫಯಾಜ್ ಮೂಡುಬೆಟ್ಟು, ನವೀನ್ ಡಿಸೋಜಾ, ರಿಂಟೋ ತೆನಕರ, ಬ್ಲಾಂಚಾ ಕಾರ್ನಲಿಯೋ, ಜೈಸನ್ ಎಂ.ಡಿ., ಒವಿನ್ ಅನಿಲ್ ಡಿಸೋಜ, ಜೆರಾಲ್ಡ್ ಡಿಸಿಲ್ವಾ ಸುನೀತಾ ಡಿಸೋಜ, ನಾಜೀರ ಬೇಗಂ, ಅನಿತಾ ಮೋನಿಸ್, ಜೆಸಿಂತಾ ಮಾರ್ಗರೇಟ್ ಡಿಸೋಜ, ಸರೀನಾ ನಾನ್ಸಿ ಡಿ'ಅಲ್ಮೇಡಾ, ನೂರ್ ಜಹಾನ್ ಅವರನ್ನು ನಿಯುಕ್ತಿಗೊಳಿಸಲಾಗಿದೆ ಎಂದು ರುಡಾಲ್ಫ್ ಡಿಸೋಜ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಧ್ಯಾಪಕ ಪುನೀತ್ ಬೇಕಲ್‌ಗೆ ಪಿಎಚ್‌ಡಿ

ಶಿರ್ವ: ಬಂಟಕಲ್ಲುಶ್ರೀ ಮಧ್ವವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಪ್ರಾಧ್ಯಾಪಕ ಪುನೀತ್ ಬೇಕಲ್ ಇವರು



ಸೆಂಟ್ರಲ್ ಯುನಿವರ್ಸಿಟಿ ಆಫ್ ಕರ್ನಾಟಕ, ಕಲಬುರ್ಗಿ ಇಲ್ಲಿನ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಪ್ರೊಫೆಸರ್ ಡಾ.ಪ್ರಮೋದ್ ಕುಮಾರ್ ಇವರ ಮಾರ್ಗದರ್ಶನದಲ್ಲಿ ಮಂಡಿಸಿದ ಎನ್ ಎನರ್ಜಿ ಎಫಿಶಿಯೆಂಟ್ ಪ್ರೋಟೋಕಾಲ್ ಆ್ಯಂಡ್ ಪ್ರೋಬಬಿಲಿಸ್ಟಿಕ್ ಮಾಡೆಲಿಂಗ್ ಫಾರ್ ಕ್ರೊಸ್- ಡಿವೈಸ್ ಐಒಟಿ- ಬೇಸ್ಡ್ ವೈರ್‌ಲೆಸ್ ಸೆನ್ಸರ್ ನೆಟ್‌ವರ್ಕ್ಸ್ ಎಂಬ ಸಂಶೋಧನಾ ಪ್ರಬಂಧಕ್ಕೆ ಮಣಿಪಾಲ ವಿಶ್ವವಿದ್ಯಾನಿಲಯವು (ಮಾಹೆ) ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ವಿದ್ಯಾರ್ಥಿ ನಿಲಯ ಪ್ರವೇಶಾತಿಗೆ ಅವಕಾಶ

ಉಡುಪಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ -1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ.ವರ್ಗಗಳ ವಿದ್ಯಾರ್ಥಿಗಳಿಂದ ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸಹಾಯವಾಣಿ ಸ್ಥಾಪನೆ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಳೆ (ಮಾನ್ಸೂನ್) ಸಂದರ್ಭದಲ್ಲಿ ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು ಸಾರ್ವಜನಿಕರು ಯಾವುದೇ ತುರ್ತು ಸಂದರ್ಭದಲ್ಲಿ ನಗರಸಭಾ ಕಚೇರಿಯ ಸಹಾಯವಾಣಿ ದೂ: 0820-2520306 ಅನ್ನು ಸಂಪರ್ಕಿಸಿ, ದೂರನ್ನು ದಾಖಲಿಸಿ, ಪ್ರಸಕ್ತ ಸಾಲಿನ ಮುಂಗಾರು ಮಳೆ ಸಂದರ್ಭವನ್ನು ನಿರ್ವಹಿಸಲು ನಗರಸಭೆಯೊಂದಿಗೆ ಸಹಕರಿಸುವಂತೆ ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ನಾಟಿ @ 600!

ನಿವೇದನೆಗಳನ್ನು ಮಾಡಿ ಪ್ರಾರ್ಥಿಸುತ್ತಾರೆ, ಹರಕೆಗಳನ್ನು ಒಪ್ಪಿಸುತ್ತಾರೆ. ಹತ್ತನಾವದಿ ತನಕ ಭೂತ ಕೋಲ ನಡೆದು ಅನಂತರದಲ್ಲಿ ಗೆಜ್ಜೆ ಬಿಚ್ಚುವ ನಂಬಿಕೆ ಇರುವುದರಿಂದ ಹತ್ತನಾ ವಧಿಯವರೆಗೆ ಊರಿನ ಕೋಳಿಗಳಿಗೆ ವಿಪರೀತ ಬೇಡಿಕೆ ಇದೆ.
ಕರಾವಳಿ ಭಾಗದ (ಹತ್ತನಾವದಿ) ಆಚರಣೆಯಲ್ಲಿ ಹಲವು ರೀತಿಯ ವಿಶೇಷತೆಗಳಿವೆ. ಪತ್ತನಾಜೆಗೆ ದೈವಗಳಿಗೆ ಕೋಳಿ ಬಲಿ ನೀಡುವ ಸಂಪ್ರದಾಯ ಪ್ರಮುಖವಾಗಿರುವುದರಿಂದ ನಾಟಿ ಕೋಳಿಗೆ ವ್ಯಾಪಕ ಬೇಡಿಕೆಯೊಂದಿಗೆ ಬೆಲೆಯೂ ವಿಪರೀತ ಏರಿಕೆ ಕಾಣುತ್ತದೆ.

'ಸನ್ನತಿ' ಪತ್ರಿಕೆ ಸಂಚಿಕೆ ಬಿಡುಗಡೆ | ಉಡುಪಿ ಪತ್ರಿಕಾ ಭವನದಲ್ಲಿ ಪೌರಾಯುಕ್ತರೊಂದಿಗೆ ಸಂವಾದ

ನಗರದಲ್ಲಿ ಚರಂಡಿಗಳ ಸ್ವಚ್ಛತಾ ಕಾರ್ಯ ಶೇ.70 ಪೂರ್ಣ

ಉಡುಪಿ: ಉಡುಪಿಯ ಪತ್ರಕರ್ತರು ನಗರಸಭೆಯ ಅಭಿವೃದ್ಧಿ ಕಾರ್ಯಗಳನ್ನು ತಮ್ಮ ಮಾಧ್ಯಮಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಜೊತೆಗೆ, ಸಾರ್ವಜನಿಕರ ಬೇಡಿಕೆ ಹಾಗೂ ಸಮಸ್ಯೆಗಳನ್ನು ನಗರಸಭೆಯ ಗಮನಕ್ಕೆ ತರುವ ಮೂಲಕ ಅತ್ಯಂತ ಮಹತ್ತರವಾದ ಕೊಂಡಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಉಡುಪಿ ನಗರಸಭೆ ಪೌರಾಯುಕ್ತ ಹಂಗರಗಿ ಅವರು ಪ್ರಶಂಸಿಸಿದರು.
ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಬುಧವಾರ ಉಡುಪಿ ಪತ್ರಿಕಾ ಭವನದಲ್ಲಿ ಆಯೋಜಿಸಲಾಗಿದ್ದ 'ತಿಂಗಳ ಅಂಗಳ' ಸಂವಾದ ಕಾರ್ಯಕ್ರಮದಲ್ಲಿ ಸಂಘದ 'ಸನ್ನತಿ' ಪತ್ರಿಕೆಯ ಏಪ್ರಿಲ್ ತಿಂಗಳ ಸಂಚಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಸಂವಾದದಲ್ಲಿ ನಗರದ ಪ್ರಸ್ತುತ ಸಮಸ್ಯೆ, ಮುನ್ನೆಚ್ಚರಿಕಾ ಕ್ರಮಗಳ ಕುರಿತು ಪೌರಾಯುಕ್ತರು ಮಾಹಿತಿ ಹಂಚಿಕೊಂಡರು.

ಶೇ. 70ರಷ್ಟು ಚರಂಡಿ ಸ್ವಚ್ಛತೆ ಪೂರ್ಣ

ಮುಂಗಾರು ಮಳೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿಈಗಾಗಲೇ ವ್ಯಾಪಕ ಸಿದ್ಧತೆಕೈಗೊಳ್ಳಲಾಗಿದೆ.



ವಾರ್ಡ್‌ಗಳ ಚರಂಡಿ ಸ್ವಚ್ಛತಾ ಕಾರ್ಯ ಚುರುಕಿನಿಂದ ಸಾಗುತ್ತಿದ್ದು ಈಗಾಗಲೇ ಶೇ.70ರಷ್ಟು ಸ್ವಚ್ಛತೆ ಮುಗಿಸಲಾಗಿದೆ. ವಿಶೇಷವಾಗಿ ದೊಡ್ಡ ತೋಡುಗಳ ನಿರ್ವಹಣೆಗಾಗಿ 40 ಮಂದಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಇದಲ್ಲದೆ, ಮಳೆಗಾಲದಲ್ಲಿ ಅಪಾಯ ತಂದೊಡ್ಡಬಹುದಾದ ಮರಗಳ ತೆರವು ಕಾರ್ಯಾಚರಣೆ ನಡೆಸಲಾಗಿದ್ದು, ತುರ್ತು ಸಂದರ್ಭದಲ್ಲಿ ಬಿದ್ದ ಮರಗಳನ್ನು ತಕ್ಷಣ ವಿಲೇವಾರಿ ಮಾಡಲು ಅಗತ್ಯ ಕಾರ್ಮಿಕರು ಹಾಗೂ ಮಷಿನರಿಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ. ಸಾರ್ವಜನಿಕರು ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸಹಾಯವಾಣಿ ಸಂಪರ್ಕಿಸಬಹುದು ಎಂದರು.

ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿಲ್ಲ

ಕಳೆದ 5 ತಿಂಗಳುಗಳಿಂದ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿಲ್ಲ. ಸದ್ಯ ಬಜೆಯ ಸ್ವರ್ಣಾ ನದಿಯಲ್ಲಿ 2.4 ಮೀ. ನೀರಿದ್ದು ಜೂನ್ 30ರ ವರೆಗೂ ನಿರಂತರವಾಗಿ ನೀರು ಎತ್ತಲು ಸಾಧ್ಯವಿದೆ. ಈ ಹಿಂದೆ ಸ್ವರ್ಣಾ ನದಿಯಿಂದ ಮಾತ್ರ ನೀರು ಎತ್ತುತ್ತಿದ್ದೆವು. ಆದರೆ ಜನವರಿ 9ನೇ ತಾರೀಕಿನಿಂದ ಹಾಲಾಡಿಯಿಂದ ಮಣಿಪಾಲದ ಜಿಎಲ್‌ಎಸ್‌ಆರ್‌ಗೆ ಕೆನಲ್ ಮೂಲಕ ನೀರು ತರಲಾಗುತ್ತಿದೆ. ಮುಂದಿನ 2-3 ತಿಂಗಳುಗಳಿಗೆ ಆಗುವಷ್ಟು ನೀರಿನ ಲಭ್ಯತೆ ಇದೆ ಎಂದು ಭರವಸೆ ನೀಡಿದರು.
ವಾರಾಹಿ ಯೋಜನೆಯಡಿ ಜೂನ್‌ನಿಂದ ಡಿಸೆಂಬರ್‌ವರೆಗಿನ ಅವಧಿಗೆ ಭರತ್‌ಕಲ್ ಜಾಕ್ ವೆಲ್‌ನಿಂದ ನೀರು ತರಬೇಕಾಗಿದೆ. ಆದರೆ ಕಳೆದ 6 ತಿಂಗಳಿನಿಂದ ಭರತ್‌ಕಲ್‌ನಿಂದ ನೀರು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ, ಅಲ್ಲಿನ 10 ಮನೆಗಳ ರೈತರ ಜಮೀನು ಸಮಸ್ಯೆಯಿಂದಾಗಿ ಕಾಮಗಾರಿಗೆ ಅಡಚಣೆಯಾಗಿದೆ. ಈ ಯೋಜನೆಯಡಿ ಒಟ್ಟು 45 ಎಂಎಲ್‌ಡಿ ನೀರು ಎತ್ತಲಾಗುತ್ತಿದ್ದು, ಅದರಲ್ಲಿ 35 ಎಂಎಲ್‌ಡಿ ನಗರಸಭೆಗೆ ಬಳಕೆಯಾಗುತ್ತಿದೆ. ಉಳಿದ 10 ಎಂಎಲ್‌ಡಿ ನೀರನ್ನು 53 ಹಳ್ಳಿಗಳ ಪಂಚಾಯತ್‌ಗಳಿಗೆ ವಿತರಿಸಲಾಗುತ್ತಿದೆ. ಬಜೆಯಿಂದಲೂ 10 ಎಂಎಲ್‌ಡಿ ನೀರು ಸಿಗುತ್ತಿದೆ. ಈ ಯೋಜನೆ ಪೂರ್ಣವಾಗಿ ವಿಸ್ತರಣೆಯಾಗುವವರೆಗೂ ಸ್ವರ್ಣಾ ನದಿ ನೀರನ್ನೇ ಅವಲಂಬಿಸಬೇಕಾಗಿದೆ ಎಂದರು.
ಅಧ್ಯಕ್ಷತೆಯನ್ನು ಸಂಘದ ಜಿಲ್ಲಾಧ್ಯಕ್ಷ ಸುಬ್ರಹ್ಮಣ್ಯ ಜಿ.ಕುರ್ಯ ವಹಿಸಿದ್ದರು. ವಾರ್ತಾಧಿಕಾರಿ ಮಂಜುನಾಥ್, ಸಂಘದ ಕೋಶಾಧಿಕಾರಿ ಹರೀಶ್ ಕುಂದರ್ ಇದ್ದರು. ಪ್ರಧಾನಕಾರ್ಯದರ್ಶಿ ನಝೀರ್ ಪೊಲ್ಯ ಸ್ವಾಗತಿಸಿದರೆ, ರಹೀಂ ಉಜಿರೆ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

ಸೊಳ್ಳೆ ನಿಯಂತ್ರಣ

ಮಳೆಗಾಲದ ಆರಂಭದಲ್ಲಿ ಹರಡುವ ಮಲೇರಿಯಾ, ಡೆಂಗ್ಯೂ ಮುಂತಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಹಾಗೂ ಸೊಳ್ಳೆಗಳ ನಿಯಂತ್ರಣಕ್ಕಾಗಿ ನಗರಸಭೆ ವತಿಯಿಂದ ಫಾಗಿಂಗ್ ಮತ್ತು ಅಗತ್ಯ ಕೆಮಿಕಲ್‌ಗಳನ್ನು ಈಗಾಗಲೇ ಸಿದ್ಧಪಡಿಸಿಟ್ಟುಕೊಳ್ಳಲಾಗಿದೆ ಎಂದು ಪೌರಾಯುಕ್ತ ಹಂಗರಗಿ ತಿಳಿಸಿದರು. ವಾರ್ಡ್ ಮಟ್ಟದಲ್ಲಿ ಸಾರ್ವಜನಿಕ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ವಿರುದ್ಧ ಎನ್‌ಎಸ್‌ಯುಐ ಪ್ರತಿಭಟನೆ



ಕುಂದಾಪುರ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಇಂದು ಲಕ್ಷಾಂತರ ವಿದ್ಯಾರ್ಥಿಗಳ ಬದುಕು ಬೀದಿಗೆ ಬಂದಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಯಾಗಿಲ್ಲ, ಮಾರಾಟವಾಗಿದೆ. ಸಮಾಜದಲ್ಲಿ ಅತ್ಯಂತ ಗೌರವ ಕೊಡುವ ವೃತ್ತಿ ಇದ್ದರೆ ಅದು ಶಿಕ್ಷಕ ವೃತ್ತಿ. ಆದರೆ ಪ್ರಶ್ನೆ ಪತ್ರಿಕೆ ತಯಾರಿ ಮಾಡಿದ ಶಿಕ್ಷಕರೇ ಬಂಧನಕ್ಕೊಳಗಾಗಿರುವುದು ದುರಂತ. ಪ್ರಶ್ನೆ ಪತ್ರಿಕೆ ಮಾರಾಟದಲ್ಲಿ ಯಾರ್ಯಾರು ತೊಡಗಿಕೊಂಡಿದ್ದಾರೋ ಅವರೆಲ್ಲರ ವಿರುದ್ಧ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ ಆಗ್ರಹಿಸಿದರು.
ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ವೈಫಲ್ಯ ಖಂಡಿಸಿ, ಕುಂದಾಪುರದ ಶಾಸ್ತ್ರೀ ಸರ್ಕಲ್ ಬಳಿ ಎನ್‌ಎಸ್‌ಯುಐ ನೇತೃತ್ವದಲ್ಲಿ ಬುಧವಾರ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಅವರು ಮಾತನಾಡಿದರು.
ಕಾಂಗ್ರೆಸ್ ಮುಖಂಡ ದಿನೇಶ್ ಹೆಗ್ಡೆ ಮೊಳಹಳ್ಳಿ, ಜಿಲ್ಲಾ ಕಾಂಗ್ರೆಸ್ ವಕ್ತಾರ ವಿಕಾಸ್ ಹೆಗ್ಡೆ, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಸೌರಭ್ ಬಲ್ಲಾಳ್, ಕಾರ್ಯದರ್ಶಿ ಸುಮಂತ್ ಶೆಟ್ಟಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಸಯ್ಯದ್ ಫುರ್ಖಾನ್ ಯಾಸಿನ್, ತಾಲೂಕು ಅಧ್ಯಕ್ಷ ಸುಜನ್ ಶೆಟ್ಟಿ, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸುಧೀಶ್ ಶೆಟ್ಟಿ ಕರ್ಕಿ, ಶಮಂತ್ ಕುಂದಾಪುರ, ಅರ್ಜುನ್ ನಾಯರಿ, ಜಿಲ್ಲಾ ಪ್ರ.ಕಾರ್ಯದರ್ಶಿ ರಕ್ಷಿತ್ ಶೆಟ್ಟಿ, ಯುವ ಕಾಂಗ್ರೆಸ್ ಉಡುಪಿ ವಿಧಾನಸಭಾ ಅಧ್ಯಕ್ಷ ಸುದೇಶ್ ಶೆಟ್ಟಿ, ಯುವ ಕಾಂಗ್ರೆಸ್ ಮುಖಂಡರಾದ ಪ್ರಮೋದ್ ಪೂಜಾರಿ, ಅಭಿಜಿತ್ ಪೂಜಾರಿ, ದರ್ಶನ ಶೆಟ್ಟಿ, ಧನುಷ್ ಕಾಳಾವರ, ಸುಮುಖ್, ರಂಜಿತ್ ಬ್ರಹ್ಮಾವರ ಮತ್ತಿತರರಿದ್ದರು.

ಹೆದ್ದಾರಿ ತಡೆಗೆ ಯತ್ನ; ಬಂಧನ

ಇದೇ ವೇಳೆ ಪ್ರತಿಭಟನಾನಿರತ ಎನ್‌ಎಸ್‌ಯುಐ ಕಾರ್ಯಕರ್ತರು ಹೆದ್ದಾರಿ ತಡೆಗೆ ಯತ್ನಿಸಿದ್ದು, ಪೊಲೀಸರು ಬಂಧಿಸಿದರು. ವೃತ್ತ ನಿರೀಕ್ಷಕ ಜಯರಾಮ್ ಗೌಡ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಅಂಪಾರು ಗ್ರಾಮದಲ್ಲಿ ಯಕ್ಷಗಾನ ಪ್ರದರ್ಶನ ಸಂದರ್ಭ ಕಲಾವಿದರಿಗೆ ಸನ್ಮಾನ



ಕುಂದಾಪುರ: ಇಲ್ಲಿನ ಅಂಪಾರು ಗ್ರಾಮದ ಬಲಾಡಿ ಕಲ್ಲೋಡ್ಡಿ ಮನೆ ಕುಟುಂಬಸ್ಥರು ವರ್ತೆ ಪಂಜುರ್ಲಿ ಹಾಗೂ ಸಪರಿವಾರ ದೈವಸ್ಥಾನಗಳ ಮೂರನೇ ವರ್ಷದ ವರ್ಧಂತ್ಯೋತ್ಸವ ಪ್ರಯುಕ್ತ ಹಮ್ಮಿಕೊಂಡ ಶ್ರೀ ಪಂಜುರ್ಲಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಶ್ರೀ ಕ್ಷೇತ್ರ ಗೋಳಿಗರಡಿ ಇವರ ಯಕ್ಷಗಾನ ಪ್ರದರ್ಶನ ಸಂದರ್ಭ ಯಕ್ಷಗಾನ ಕಲಾವಿದರನ್ನು ಸನ್ಮಾನಿಸಲಾಯಿತು.
ಯಕ್ಷ ರಂಗದಲ್ಲಿ ಸುದೀರ್ಘ 50 ವರ್ಷಕ್ಕೂ ಮೇಲ್ಪಟ್ಟು ಕಲಾ ಸೇವೆಗೈದ ಹಿರಿಯ ಯಕ್ಷಗಾನ ಕಲಾವಿದರಾದ ಜಮದಗ್ನಿ ಶೀನ ನಾಯ್ಕ ಹಾಗೂ ಬೇಲ್ತೂರು ರಮೇಶ್ ಅವರನ್ನು ಸನ್ಮಾನಿಸಲಾಯಿತು.
ಬಲಾಡಿಯ ಶ್ರೀ ಸ್ವಾಮಿಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಪ್ರಭಾಕರ ಶೆಟ್ಟಿ, ಮೇಳದ ಯಜಮಾನರಾದ ವಿಠಲ ಪೂಜಾರಿ, ವರ್ತೆ ಪಂಜುರ್ಲಿ ದೈವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶಂಕರ ಎಸ್. ಕಾಂಚನ್, ಸದಸ್ಯರಾದ ಕೇಶವ ಕಾಂಚನ್, ಮಂಜುನಾಥ ಗುಡ್ರಿ, ವಿಜಯ ಕಾಂಚನ್, ರಾಘವೇಂದ್ರ ನೆಂಪು ಮತ್ತಿತರರು ಉಪಸ್ಥಿತರಿದ್ದರು. ಡಾ. ಬಿ. ಬಿ. ಹೆಗ್ಡೆ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ ಸನ್ಮಾನಿತರನ್ನು ಪರಿಚಯಿಸಿ, ಕಾರ್ಯಕ್ರಮ ನಿರ್ವಹಿಸಿದರು.

ಕೋಟ ಕೋಡಿತಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ 'ಸಾಹಿತ್ಯ ಪ್ರೇರಣೆ'



ಕೋಟ: ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬ್ರಹ್ಮಾವರ ತಾಲೂಕು ಘಟಕದ ವತಿಯಿಂದ ಕೋಡಿ ತಲೆ ಕೋಡಿಬೆಂಗ್ರೆ, ಸಾಸ್ತಾನ ಇಲ್ಲಿ ಪಂಚಶಕ್ತಿ ಸಂಘ ಇವರ 24ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಾಹಿತ್ಯ ಪ್ರೇರಣೆ ಸಾರ್ವಜನಿಕರಿಗಾಗಿ ನಡೆಯಿತು.
ಕಾರ್ಯಕ್ರಮವನ್ನು ಉದ್ಘಾಟಿಸಿದ ಪಂಚಶಕ್ತಿ ಸಂಘದ ಅಧ್ಯಕ್ಷ ಪ್ರವೀಣ್ ಖಾರ್ವಿ ಉದ್ಘಾಟಿಸಿದರು.
ಸಂಪನ್ಮೂಲ ವ್ಯಕ್ತಿಗಳಾದ ಕಸಾಪ ಜಿಲ್ಲಾಧ್ಯಕ್ಷ ಸುರೇಂದ್ರ ಅಡಿಗ ಅವರು ಸಾಹಿತ್ಯ ಪ್ರೇರಣೆಯ ಪ್ರಸ್ತಾವನೆ ಹಾಗೂ ಹಿರಿಯರಾದವರು ಮಕ್ಕಳ ಜೊತೆಯಲ್ಲಿ ಹೇಗೆ ಇರಬೇಕೆಂದು ವಿವರಿಸಿದರು.
ಕಸಾಪ ತಾಲೂಕು ಗೌರವ ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ ಇವರು ಸೋಲನ್ನು ಹೃದಯಕ್ಕೆ ಇಳಿಯಲು ಬಿಡಬಾರದು, ಗೆಲುವನ್ನು ತಲೆಗೆ ಏರಲು ಬಿಡಬಾರದು ಎನ್ನುತ್ತಾ ಸಾಧನೆಯ ದಾರಿಯನ್ನು ವಿವರಿಸಿದರು.
ಕಸಾಪ ತಾಲೂಕು ಅಧ್ಯಕ್ಷ ಗುಂಡ್ಮಿ ರಾಮಚಂದ್ರ ಐತಾಳ ಮಾತನಾಡಿ, ಸಂಸ್ಕೃತಿ ಆಧಾರಿತ ಶಿಕ್ಷಣ ಇಂದು ಅಗತ್ಯ ಎಂದು ಭಜನೆಯ ಮಹತ್ವವನ್ನು ವಿವರಿಸಿದರು. ಸಾಹಿತ್ಯ ಪರಿಷತ್‌ನ ಅಚ್ಯುತ ಪೂಜಾರಿ ಕನ್ನಡ ಗೀತೆಗಳು ಹಾಡಿದರು. ಯಕ್ಷೇಶ್ವರಿ ಭಜನಾ ಮಂಡಳಿಯ ಬಸವ ಖಾರ್ವಿ, ಮಣಿಪಾಲ ನರಸಿಂಹಮೂರ್ತಿ ಉಪಸ್ಥಿತರಿದ್ದರು. ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ಹೋಬಳಿಯ ಕಾರ್ಯದರ್ಶಿ ವಿಶ್ವನಾಥ ಖಾರ್ವಿ ವಂದಿಸಿದರು.

ಪುಲ್ಕೆರಿ ಫ್ರೆಂಡ್ಸ್ ಕ್ಲಬ್: ಆರೋಗ್ಯ, ಕಣ್ಣಿನ ತಪಾಸಣೆ, ರಕ್ತದಾನ ಶಿಬಿರ



ಕಾರ್ಕಳ: ಪುಲ್ಕೆರಿ ಫ್ರೆಂಡ್ಸ್ ಕ್ಲಬ್ ಇದರ 49 ನೇ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ, ರಕ್ತದಾನ ಶಿಬಿರ ನಡೆಯಿತು.
ಪುಲ್ಕೆರಿ ಫ್ರೆಂಡ್ಸ್ ಕ್ಲಬ್‌ನಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷರಾಗಿ ರೋಟರಿ ಕ್ಲಬ್ ನವೀನ್ ಶೆಟ್ಟಿ ಕಾರ್ಯಕ್ರಮ ದ ಉದ್ಘಾಟನೆಯನ್ನು ಭುವನೇಂದ್ರ ಕಾಲೇಜಿನ ಉಪನ್ಯಾಸಕರಾದ ನಂದಾಕಿಶೋರ್ ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಖ್ಯಾತ ಚಾರ್ಟೆಡ್ ಅಕೌಂಟ್ ಹರೀಶ್ ರಾವ್, ತಾಲೂಕಿನ ವೈದ್ಯಾಧಿಕಾರಿ ಡಾ. ಸಂದೀಪ್ ಕುಡ್ವ ಅಜ್ಜರಕಾಡು ಆಸ್ಪತ್ರೆ ಯ ರಕ್ತ ನಿಧಿಯ ವೈದ್ಯಾಧಿಕಾರಿ ಡಾ. ವೀಣಾ, ಕಾಮತ್ ಕಣ್ಣಿನ ಆಸ್ಪತ್ರೆಯ ಲೋಕೇಶ್ ಹಾಗೂ ಇಕ್ಬಾಲ್ ಉಪಸ್ಥಿತರಿದ್ದರು. ಸುಮಾರು 30ಕ್ಕೂ ಮಿಕ್ಕಿ ಯೂನಿಟ್ ರಕ್ತದಾನ, 150ಕ್ಕೂ ಮಿಕ್ಕಿ ಜನ ಉಚಿತ ಆರೋಗ್ಯ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು. ಕ್ಲಬ್ ಅಧ್ಯಕ್ಷರಾದ ಸುನೀಲ್ ಕೆ.ಆರ್. ಸ್ವಾಗತಿಸಿದರು, ಪ್ರಧಾನ ಕಾರ್ಯದರ್ಶಿ ಅತೀಕ್ ವಂದಿಸಿದರು. ಕ್ಲಬ್‌ನ ಸಂಚಾಲಕರಾದ ಸುನೀಲ್ ಕೋಟ್ಯಾನ್ ನಿರೂಪಿಸಿದರು. ಸದಸ್ಯರಾದ ಅಬ್ದುಲ್ಲ, ಮಂಜುನಾಥ ಪಾಟೀಲ್, ಅಮೀರ್, ಧರ್ಮೇಂದ್ರ, ಅನಿಲ್ ಇದ್ದರು.

ಕೋಟ ಪಡುಕರೆ ಪ್ರಥಮ ದರ್ಜೆ ಕಾಲೇಜು ವಾರ್ಷಿಕೋತ್ಸವ, ಗಣಕಯಂತ್ರ ಹಸ್ತಾಂತರ



ಕೋಟ: ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಜೀವನ ಎಂಬುವುದು ಮಹತ್ತರವಾದ ಘಟ್ಟ. ಈ ಆರಂಭಿಕ ಶೈಕ್ಷಣಿಕ ದಿನಗಳನ್ನು ನೈಜವಾಗಿ ಸದ್ಬಳಕೆ ಮಾಡಿಕೊಳ್ಳಿ ಎಂದು ಕೋಟದ ಶೈಕ್ಷಣಿಕ ಪ್ರೋತ್ಸಾಹಕ, ಉದ್ಯಮಿ ಆನಂದ್ ಸಿ. ಕುಂದರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.
ಕೋಟ-ಪಡುಕರೆ ಲಕ್ಷ್ಮೀ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇದರ 2025-26ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ತಮ್ಮ ಗೀತಾನಂದ ಫೌಂಡೇಶನ್ ವತಿಯಿಂದ ಕೊಡಮಾಡಿದ ವಿದ್ಯಾನಿಧಿಯನ್ನು ಹಸ್ತಾಂತರಿಸಿ ಅವರು ಮಾತನಾಡಿದರು.
ಉನ್ನತ ಶ್ರೇಣಿಯಲ್ಲಿ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಗೀತಾನಂದ ಫೌಂಡೇಶನ್ ವತಿಯಿಂದ ವಿದ್ಯಾನಿಧಿಯನ್ನು ಹಸ್ತಾಂತರಿಸಲಾಯಿತು. ಉಪನ್ಯಾಸಕಿ ಡಾ. ಸುನಿತಾ ವಿ., ಸುಬ್ರಹ್ಮಣ್ಯ ಅವರ ವತಿಯಿಂದ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಹಸ್ತಾಂತರಿಸಲಾಯಿತು. ಇದೇ ವೇಳೆ ಕರ್ಣಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿ ಉಡುಪಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರಮೇಶ್ ವೈದ್ಯ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗದ ತೆಂಕನಿಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಮಾಜಕಾರ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಮತಾ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ರಮೇಶ್ ಆಚಾರ್, ಐಕ್ಯೂಎಸಿ ಸಂಚಾಲಕ ಪ್ರೊ. ಸುಬ್ರಹ್ಮಣ್ಯ, ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷ ಸುರೇಶ್ ಪೂಜಾರಿ ಹಾಗೂ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪ್ರಸಾದ್ ಬಿಲ್ಲವ, ದೈಹಿಕ ಶಿಕ್ಷಕ ರಾಮಚಂದ್ರ ಭಟ್, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಪ್ರೀತಿ, ಸಾಗರ್, ಸುಪ್ರಿತಾ, ಸೃಷ್ಟಿ ಚಂದನ್, ಸಾಂಸ್ಕೃತಿಕ ಕಾರ್ಯದರ್ಶಿ ಶ್ರದ್ಧಾ ಆಕಾಶ್ ಇದ್ದರು. ಪ್ರಾಂಶುಪಾಲ ಪ್ರೊ. ರಾಜೇಂದ್ರ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು, ಪ್ರೊ. ಶಂಕರ ನಾಯ್ಕ ಬಿ. ಸ್ವಾಗತಿಸಿದರು. ಉಪನ್ಯಾಸಕಿ ಸೌಮ್ಯ ವಂದಿಸಿದರು. ಅಕ್ಷಿಷಾ ಆಲ್ಫಿಯಾ ಕಾರ್ಯಕ್ರಮ ನಿರೂಪಿಸಿದರು.

ಅಂಬಾಗಿಲು ದೇಗುಲ: ಅಷ್ಟೋತ್ತರ ಶತನಾರಿಕೇಳ ಅಷ್ಟದ್ರವ್ಯ ಗಣಯಾಗ

ಬೈಂದೂರು: ಉಪ್ಪುಂದ ಅಂಬಾಗಿಲು ಶ್ರೀ ಅಶ್ವತ್ಥ ನಾರಾಯಣ ಮೂಡುಗಣಪತಿ ದೇವಸ್ಥಾನದಲ್ಲಿ ಪುರುಷೋತ್ತಮ (ಅಧಿಕ) ಮಾಸದ ಅಧಿಕ ಜೇಷ್ಠ ಚತುರ್ಥಿಯ ಅಂಗವಾಗಿ ಬುಧವಾರ ಪರ್ಯಾಯ ಅರ್ಚಕ ಅವಧಾನಿ ಗಣೇಶ ಬಾಬು ಭಟ್ ನೇತೃತ್ವದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ಸಾನಿಧ್ಯ ಅಭಿವೃದ್ಧಿ ಹಾಗೂ ಲೋಕಕಲ್ಯಾಣಾರ್ಥವಾಗಿ ಅಷ್ಟೋತ್ತರ ಶತನಾರಿಕೇಳ ಅಷ್ಟದ್ರವ್ಯ ಗಣಯಾಗ ಹಾಗೂ ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.



ಸಂಜೆ ಭಜನಾ ಸಂಕೀರ್ತನೆ ರಾತ್ರಿ ವಿಶೇಷಾಲಂಕಾರ ಮಹಾರಂಗಪೂಜೆ ಮತ್ತು ರಜತ ತೊಟ್ಟಿಲೋತ್ಸವ ಜರುಗಿತು. ಪರ್ಯಾಯ ಅರ್ಚಕ ಯು. ರಾಜೀವ ಭಟ್, ಅಶ್ವತ್ಥ ನಾರಾಯಣ ಮೂಡುಗಣಪತಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರು, ಕಾರ್ಯದರ್ಶಿ, ಸದಸ್ಯರು ಇದ್ದರು.

ಬಹುಮಾನ ಹಣ ಮಂಜೂರು: ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಉಡುಪಿ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಪಿಯುಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ, ಮೆಡಿಕಲ್ ಇಂಜಿನಿಯರಿಂಗ್ ಮುಂತಾದ ವೃತ್ತಿಪರ ಕೋರ್ಸುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಬಹುಮಾನ ಹಣವನ್ನು ಮಂಜೂರು ಮಾಡುವ ಸಲುವಾಗಿ ಅರ್ಹ ವಿದ್ಯಾರ್ಥಿಗಳಿಂದ ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಒಂದು ವಾರದ ಒಳಗೆ ಅರ್ಜಿಯನ್ನು ಹಾಗೂ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿ, ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ರಜತಾದ್ರಿ, ಮಣಿಪಾಲ ಇವರಿಗೆ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ದೂ. ಸಂಖ್ಯೆ: 0820-2574892 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಚಾರಣಾಧೀನ ಕೈದಿಗಳಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ | ನ್ಯಾ. ಕಿರಣ್ ಗಂಗಣ್ಣವರ್ ಸಲಹೆ

ಕೌಶಲದ ಅವಕಾಶ ಬಳಸಿಕೊಂಡು ಹೊಸ ಜೀವನ ಕಟ್ಟಿಕೊಳ್ಳಿ

ಬ್ರಹ್ಮಾವರ: ಇಂದು ಸ್ವ- ಉದ್ಯೋಗದ ಮೂಲಕ ಸ್ವಾವಲಂಬಿ ಬದುಕನ್ನು ರೂಪಿಸಲು ರುಡ್‌ಸೆಟ್ ಸಂಸ್ಥೆಯ ಕಾರ್ಯ ಶ್ಲಾಘನೀಯ. ಹಾಗಾಗಿ ಮುಂದಿನ ಬದುಕಿನಲ್ಲಿ ಕೌಶಲ್ಯದ ಅವಕಾಶಗಳನ್ನು ಜೀವನದಲ್ಲಿ ಬಳಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಕಿರಣ್ ಗಂಗಣ್ಣವರ್ ಹೇಳಿದ್ದಾರೆ.
ಉಡುಪಿ ಜಿ.ಪಂ., ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಜಿಲ್ಲಾ ಕಾರಾಗೃಹ ಹಿರಿಯಡ್ಕ ಮತ್ತು ರುಡ್‌ಸೆಟ್ ಸಂಸ್ಥೆ ಬ್ರಹ್ಮಾವರ ಆಶ್ರಯದಲ್ಲಿ ಆರು ದಿನಗಳ ಕಾಲ ನಡೆಯುವ ಉಡುಪಿ ಜಿಲ್ಲೆಯ ಕಾರಾಗೃಹದ ವಿಚಾರಣಾಧೀನ ಕೈದಿಗಳಿಗೆ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ



ಅವರು ಮಾತನಾಡುತಿದ್ದರು.
ಇಂದು ಉದ್ದಿಮೆಯನ್ನು ಮಾಡಲು ಕೌಶಲ್ಯಗಳ ಕೊರತೆ ತುಂಬಾ ಇದೆ. ಆ ನಿಟ್ಟಿನಲ್ಲಿ ಸಿಸಿ ಟಿವಿ ರಿಪೇರಿ ಮತ್ತು ಸರ್ವೀಸ್ ಸಂಬಂಧಿಸಿದ ಕೌಶಲ್ಯಗಳ ತರಬೇತಿಗಳನ್ನು ನಿಮ್ಮ ಬಳಿಯೇ ಬಂದು ರುಡ್ ಸೆಟ್ ಸಂಸ್ಥೆ ಕೊಡುತ್ತಿದೆ. ಹಾಗಾಗಿ ನಿಮ್ಮ ಬದುಕನ್ನು ಪರಿವರ್ತನೆ ಮಾಡಿ ಇಲ್ಲಿಂದ ಬಿಡುಗಡೆಯಾಗಿ ಹೋದ ಮೇಲೆ ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.
ಉಡುಪಿ ಜಿಲ್ಲಾ ಕಾರಾಗೃಹ ಅಧೀಕ್ಷಕ ಜಯಕುಮಾರ ಡಿ.ಚವ್ಹಾಣ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯ ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ ಹರೀಶ ಜಿ., ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಅರುಣ್ ಬಿ., ರುಡ್‌ಸೆಟ್ ನಿರ್ದೇಶಕ ಡಾ. ಬೊಮ್ಮಯ್ಯ ಎಂ. ಮಾತನಾಡಿದರು. ಹಿರಿಯ ಉಪನ್ಯಾಸಕ ಸಂತೋಷ್ ಶೆಟ್ಟಿ ನಿರೂಪಿಸಿ, ಕಾರಾಗೃಹದ ಸಿಬ್ಬಂದಿ ರೇಷ್ಮಾ ನಾಯಕ್ ಸ್ವಾಗತಿಸಿದರು. ಹಿರಿಯ ಕಚೇರಿ ಸಹಾಯಕ ರವಿ ವಂದಿಸಿದರು.

ಯಶಸ್ವಿ ಉದ್ಯಮಿಯಾಗಿ

ಈ ಒಂದು ತರಬೇತಿಯಲ್ಲಿ ಸಿಗುವಂತಹ ಕೌಶಲ್ಯಗಳನ್ನು ಉಪಯೋಗಿಸಿಕೊಂಡು ಯಶಸ್ವಿ ಉದ್ಯಮಿಯಾಗಬೇಕು. ಆ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬದುಕಿ.

● ಜಯಕುಮಾರ ಡಿ.ಚವ್ಹಾಣ್, ಜಿಲ್ಲಾ ಕಾರಾಗೃಹ ಅಧೀಕ್ಷಕ, ಉಡುಪಿ

ದ್ಯುತಿ ಪರ್ವ ಯಕ್ಷ ಟ್ರಸ್ಟ್‌ನ 'ಸ್ಪಂದನೆ, ಸಹಕಾರ, ಸಹಾಯ

ಮೇ 23ಕ್ಕೆ ಕೋಟೇಶ್ವರದಲ್ಲಿ ಒಡ್ಡೋಲಗ

ಕುಂದಾಪುರ: ದ್ಯುತಿ ಪರ್ವ ಯಕ್ಷ ಟ್ರಸ್ಟ್ ಕುಂದಾಪುರದ ವತಿಯಿಂದ ಒಡ್ಡೋಲಗ - ಸ್ಪಂದನೆ - ಸಹಕಾರ- ಸಹಾಯ ಅನ್ನುವ ಕಾರ್ಯಕ್ರಮ ಮೇ 23ರ ಸಂಜೆ 6 ರಿಂದ ಕೋಟೇಶ್ವರದ ಸಹನಾ ಕನ್ವೆನ್ಶನ್ ಸೆಂಟರ್‌ನಲ್ಲಿ ನಡೆಯಲಿದೆ.
ಬುಧವಾರ ಪತ್ರಿಕಾಗೋಷ್ಠಿಯಲ್ಲಿ ದ್ಯುತಿ ಪರ್ವ ಯಕ್ಷ ಟ್ರಸ್ಟ್ ಅಧ್ಯಕ್ಷ ರಂಜಿತ್ ಕುಮಾರ್ ಶೆಟ್ಟಿ ವಕ್ವಾಡಿ ಮಾಹಿತಿ ನೀಡಿ, ಸಂಜೆ 5ರಿಂದ ಭಜನೆ, ಕೀರ್ತನೆ, ದೇವರ ಸ್ಮರಣೆ, ಸಂಜೆ 6ಕ್ಕೆ ಹವ್ಯಾಸಿ ಕಲಾವಿದರಿಂದ ಸುರನದಿಸುತ ಯಕ್ಷಗಾನ, ಸಂಜೆ 8ರಿಂದ ಸಭಾ ಕಾರ್ಯಕ್ರಮ ಆರಂಭಗೊಳ್ಳಲಿದೆ. ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಧರ್ಮದರ್ಶಿ ಎಚ್. ಬಾಲಚಂದ್ರ ಭಟ್ ಉದ್ಘಾಟಿಸಲಿದ್ದು, ಕೊಲ್ಲೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಕೆರಾಡಿ ಚಂದ್ರಶೇಖರ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಕಿರಣ್ ಕುಮಾರ್ ಕೊಡ್ಗಿ, ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಪ್ರಬಂಧಕ ರಮೇಶ್ ವೈದ್ಯ, ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಸಾಧಕರಿಗೆ ಯಕ್ಷ ಗೌರವ

ಇದೇ ವೇಳೆ ಸಾಧಕರಿಗೆ ಯಕ್ಷ ಗೌರವ ಪ್ರದಾನ, ಸಾಧಕ ಸಂಘಟನಾ ಗೌರವ ಪ್ರದಾನ ಮತ್ತು ಯಕ್ಷ ಪುರಸ್ಕಾರದಡಿ ಕಲಾವಿದರಿಗೆ ನೆರವು ನೀಡಲಾಗುವುದು. ಬಳಿಕ ರಾತ್ರಿ 9 ರಿಂದ ಬಡಗುತಿಟ್ಟಿನ ಕಲಾವಿದರಿಂದ ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದರು.
ಸುದ್ದಿಗೋಷ್ಠಿಯಲ್ಲಿ ದ್ಯುತಿ ಪರ್ವ ಯಕ್ಷ ಟ್ರಸ್ಟ್ ನಿರ್ದೇಶಕ ರವಿರಾಜ ಶೆಟ್ಟಿ, ಸದಸ್ಯರಾದ ಉದಯ ಶೆಟ್ಟಿ ಪಡುಕೆರೆ, ಕಂಡ್ಲೂರು ಸುಧಾಕರ ಆಚಾರ್ಯ ಉಪಸ್ಥಿತಿದ್ದರು.